ಬುಡಕಟ್ಟು ಜನಪದ ಶಿಲ್ಪಕಲೆ

ವಿಶೇಷ ಘಟಕ ಯೋಜನೆಯಡಿ 2015-16ನೇ ಸಾಲಿನ
ಫೆಲೋಶಿಪ್‌ಗಾಗಿ ಸಿದ್ಧಪಡಿಸಿದ ಪ್ರಬಂಧ





ಸಂಶೋಧನಾಕಾರರು:
ಸಿ. ಕೆ. ಮಹೇಶ್

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

ಬುಡಕಟ್ಟು ಜನಪದ ಶಿಲ್ಪಕಲೆ

ವಿಶೇಷ ಘಟಕ ಯೋಜನೆಯಡಿ 2015–16ನೇ ಸಾಲಿನ ಫೆಲೋಶಿಪ್‌ಗಾಗಿ ಸಲ್ಲಿಸುತ್ತಿರುವ ಪ್ರಬಂಧ

ಸಂಶೋಧಕರು

ಶ್ರೀ ಸಿ.ಕೆ. ಮಹೇಶ್

ಶಿಲ್ಪ ಕಲಾವಿದರು

ಮಾರ್ಗದರ್ಶಕರು

ಡಾ|| ಶಿವಾನಂದ ಬಂಟನೂರು

ಅಧ್ಯಾಪಕರು, ದೃಶ್ಯಕಲಾ ವಿಭಾಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಮತ್ತು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು

ಕೃತಜ್ಞತೆಗಳು

ಶಿಲ್ಪಕಲಾವಿದ ನನಗೆ ಬುಡಕಟ್ಟು ಜನಪದ ಶಿಲ್ಪಕಲೆ ವಿಚಾರವಾಗಿ ಅಧ್ಯಯನಕ್ಕೆ ಆಯ್ಕೆಮಾಡಿ, ಪ್ರೇರೇಪಿಸಿದವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಿರಿಯ ಅಧಿಕಾರಿಗಳಾದ ಶ್ರೀ ಕೆ.ಎ. ದಯಾನಂದ್‌ರವರು I.A.S. (ರಾಜ್ಯ ನಿರ್ದೇಶಕರು), ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ರವರು (ಜಂಟಿ ನಿರ್ದೇಶಕರು), ಶ್ರೀ ಅಶೋಕ್ ಎನ್. ಛಲವಾಧಿ (ಜಂಟಿ ನಿರ್ದೇಶಕರು) ಹಾಗೂ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಮಹದೇವಪ್ಪ, ಶ್ರೀ ಶಂಬುಲಿಂಗಪ್ಪ ಮತ್ತು ಶ್ರೀಮತಿ ಇಂದ್ರಮ್ಮ ಹೆಚ್.ವಿ. (ರಿಜಿಸ್ಟ್ರರ್‌ರವರು) ರವರು ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಇವರುಗಳು.

ನನ್ನನ್ನು ಪ್ರಾಥಮಿಕ ಶಾಲಾ ಹಂತದಿಂದಲೂ ಒಬ್ಬ ವಿದ್ಯಾವಂತನನ್ನಾಗಿ ಮಾಡಿದ ಶ್ರೀ ಮುಡಲಯ್ಯ (ಶಿಕ್ಷಕರು), ಶಿಲ್ಪಕಲಾ ತರಬೇತಿ ನೀಡಿದ ಶ್ರೀ ಮಹದೇವ (ಕೆನರಾ ಬ್ಯಾಂಕ್ ಮ್ಯಾನೇಜರ್) ತರಬೇತಿ ಶಿಕ್ಷಕರಾದ ಶ್ರೀ ಗಣೇಶ್‌ರವರಿಗೆ, ನನ್ನ ತಂದೆ – ತಾಯಿಯವರಿಗೆ ಹಾಗೂ ಈ ಕೃತಿ ಮಾರ್ಗದರ್ಶಕರಾದ ಶ್ರೀ ಶಿವಾನಂದ ಬಂಟನೂರು ಇವರುಗಳಿಗೆ ಈ ಒಂದು ಅಪರೂಪದ ಪ್ರಬಂಧವನ್ನು ಅರ್ಪಿಸುತ್ತಿದ್ದೇನೆ.

ಬುಡಕಟ್ಟು ಜನಪದ ಶಿಲ್ಪಕಲೆ ವಿಚಾರವಾಗಿ ಹಲವಾರು ಬುಡಕಟ್ಟು ಕಾಡಿನ ಹಾಡಿಗಳಿಗೆ ಬೇಟಿಕೊಡಬೇಕಾಗಿ ಬಂದಾಗ ನನ್ನ ಜೊತೆ ಸಂಪೂರ್ಣವಾಗಿ ದಾರಿಯುದ್ದಕ್ಕೂ ಹೆಜ್ಜೆಗಳನ್ನು ಸವೆಸಿದ ನನ್ನ ಗೆಳೆಯ ಶ್ರೀ ಎಸ್. ಪೃಥ್ವಿರಾಜ್, ಬಿಳಿಗಿರಿರಂಗ ಬೆಟ್ಟದ ಸೋಲಿಗರ ಶ್ರೀ ಮಹದೇವರವರು, ಹೆಚ್.ಡಿ. ಕೋಟೆಯ ಶ್ರೀ ಸೋಮೇಶ್ ಶಿಕ್ಷಕರು, ಗೋಣಿಕೊಪ್ಪ ಹಿರಿಯ ವ್ಯಕ್ತಿ ಶ್ರೀ ರಾಚಯ್ಯ ಮತ್ತು ಈ ಪುಸ್ತಕವನ್ನು ಡಿ.ಟಿ.ಪಿ ಮತ್ತು ಫೋಟೋಗಳನ್ನು ವಿನ್ಯಾಸಗೊಳಿಸಿದ ವಿದ್ಯಾ ಸೈಬರ್ ಸೆಂಟರ್ ಮತ್ತು ಮುಖ ಪುಟ ವಿನ್ಯಾಸಗೊಳಿಸಿದ ಚಿತ್ರಕಲಾವಿದ ಶ್ರೀ ವಿರೂಪಾಕ್ಷರವರಿಗೆ ನನ್ನ ಕೃತಘ್ನತೆಗಳನ್ನು ಹೇಳಲು ಬಯಸುತ್ತೇನೆ.

ಗ್ರಂಥ ಋಣ

1) ಮಾನಸ ಗಂಗೋತ್ರಿ ಮೈಸೂರು, ಪ್ರಥಮ ಬಿ.ಎ. ಇತಿಹಾಸ ಪುಸ್ತಕ.

2) ಟಿ.ವಿ.9 ಕನ್ನಡ ದೂರದರ್ಶನ ವಾಹಿನಿ ಸ್ಪೆಷಲ್ ರಿಪೋರ್ಟ್

3) ಪಬ್ಲಿಕ್ ಟಿ.ವಿ. ದೂರದರ್ಶನ ವಾಹಿನಿ ದೇವರ ದರ್ಶನ.

4) ಪ್ರಾಚ್ಯ ಜಾನಪದ ಪುಸ್ತಕ (ಡಾ॥ ಪಿ. ಗೋವಿಂದರಾಜು)

5) ಕನ್ನಡ ಪ್ರಭ ದಿನಪತ್ರಿಕೆ.

6) Clay modelling Craft ಪುಸ್ತಕ. (ಲೇ॥ ಪ್ರೋ. ಕೃಷ್ಣೇಗೌಡರು)

7) ಸೋಮಶೈಲ ದರ್ಶನ ಪುಸ್ತಕ (ವಿದ್ವಾನ್ ಎಂ. ಮಲ್ಲಣ್ಣ)

ಸಂಶೋಧಕರ ಪರಿಚಯ

ದಿನಾಂಕ 22-07-1999 ರಂದು ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಿರುಗಾವಲು ಹೋಬಳಿ, ಚಿಕ್ಕಮುಲಗೂಡು ಗ್ರಾಮದ ಪರಿಶಿಷ್ಠ ಜಾತಿಯ ಸಾಮಾನ್ಯ ಬಡಕುಟುಂಬದ ವ್ಯಕ್ತಿಯಾಗಿರುತ್ತೇನೆ. ತಂದೆ ಲೇ॥ ಕುಂಡುಮಾದಯ್ಯ ಮತ್ತು ತಾಯಿ ಚಿಕ್ಕತಾಯಮ್ಮನ ಮಗನಾಗಿ ಹುಟ್ಟಿ, ಬಾಲ್ಯದ ವಿದ್ಯಾಭ್ಯಾಸವನ್ನು ಚಿಕ್ಕಮುಲಗೂಡು ಗ್ರಾಮದಲ್ಲಿಯಾಗಿದ್ದು ಪ್ರೌಢಶಿಕ್ಷಣ ಮತ್ತು ತತ್ಸಮಾನ ಮಂಡ್ಯ ತಾಲ್ಲೂಕು ಮಂಗಲ ಗ್ರಾಮದಲ್ಲಿ ಆಯಿತು.

ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮಂಡ್ಯ ನಗರದ ಸರ್ಕಾರಿ ಬಾಲಕರ ಕಾಲೇಜು ಮಂಡ್ಯ ಶಿಲ್ಪಕಲಾ ತರಬೇತಿಯನ್ನು ಶ್ರೀ ಕೆ.ಪಿ.ಜೆ. ಪ್ರಭು ಕರಕುಶಲ ತರಬೇತಿ ಸಂಸ್ಥೆ, ಜೋಗರ ದೊಡ್ಡಿ (ಕೆನರಾಬ್ಯಾಂಕ್), ವೃತ್ತಿ ಶಿಕ್ಷಕನಾಗಿ ತಮಿಳುನಾಡಿನ ಮೈರಾಡ/ಪ್ಲಾನ್ ಸಂಸ್ಥೆ, ಕಾನ್‌ಕಾರ್ಡ್ ಇಂಟರ್ ನ್ಯಾಷನಲ್ ಸ್ಕೂಲ್ ಮಂಡ್ಯ, ಐಶ್ವರ್ಯ ಇಂಟರ್ ನ್ಯಾಷನಲ್ ಸ್ಕೂಲ್ ಮದ್ದೂರ್, ಡ್ಯಾಪೊಡೈಲ್ಸ್ ಇಂಟರ್ ನ್ಯಾಷನಲ್ ಸ್ಕೂಲ್ ಮಂಡ್ಯ ಹಾಗೂ 200ಕ್ಕೂ ಹೆಚ್ಚು ಬೇಸಿಗೆ ಶಿಬಿರಗಳಲ್ಲಿ ಶಿಲ್ಪಕಲಾ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಪ್ರಕೃತಿ ಟೆರ್‍ರಾಕೋಟಾ ಕಲಾ ಕೇಂದ್ರ, ಮಂಡ್ಯದಲ್ಲಿ ಪ್ರಾರಂಭಿಸಿದ್ದು 1000ಕ್ಕೂ ಹೆಚ್ಚು ಮಣ್ಣಿನ ಶಿಲ್ಪಕಲಾಕೃತಿಗಳನ್ನು ತಿಳಿದಿರುತ್ತೇನೆ. ಜಿಲ್ಲಾ, ರಾಜ್ಯ, ಅಂತರ್ ರಾಷ್ಟ್ರೀಯ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಿದ್ದು, ನೆಹರು ಯುವ ಕೇಂದ್ರ, ಕನ್ನಡ ಸಂಸ್ಕೃತಿ ಇಲಾಖೆಯವರ ಕಲಾ ಶಿಬಿರಗಳಲ್ಲಿ ಭಾಗವಹಿಸಿದ್ದು 2 ಏಕವ್ಯಕ್ತಿ ಶಿಲ್ಪಕಲಾ ಪ್ರದರ್ಶನ ನಡೆಸಿರುತ್ತೇನೆ. 2006 ಜಿಲ್ಲಾ ಸುವರ್ಣ ರಾಜ್ಯೋತ್ಸವ ಪ್ರಶಸ್ತಿಗೆ ಪಾತ್ರನಾಗಿ ಪ್ರಸ್ತುತ ಶಿಲ್ಪಕಲಾ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದು ಮಂಡ್ಯ ಸಾಂಸ್ಕೃತಿಕ ಕಲಾ ಸಂಸ್ಥೆ ಅಧ್ಯಕ್ಷರಾಗಿ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿರುತ್ತೇನೆ.

ಅನುಬಂಧಗಳು

1) ಗ್ರಂಥ ಋಣ/ವಕ್ತೃಗಳು

2) ಛಾಯಚಿತ್ರಗಳು

3) ಅರ್ಪಣೆ

ಪರಿವಿಡಿ

ಬುಡಕಟ್ಟು ಜನರ ಜನಪದ ಶಿಲ್ಪಕಲೆ

ಪರಿಚಯ:

ಜನಪದ ಉಗಮ ಜನರ ಪಥವಾಗಿದೆ. ಅಲೆಮಾರಿಯಂತೆ, ಒಂದು ಕಡೆ ನೆಲೆ ಇಲ್ಲದೆ ಆಹಾರ ಮತ್ತು ರಕ್ಷಣೆಗೆಂದು ಅಲೆಯುತ್ತಿದ್ದರು, ಆದರೆ ಇವರಿಗೆ ಸರಿ ಎನ್ನಿಸುವ ಅನುಕೂಲಕರ ವಾತಾವರಣ ಸಿಕ್ಕಿದಾಗ ಸ್ವಲ್ಪ ಹೆಚ್ಚು ದಿನ ಉಳಿಯಲು ಮನಸ್ಸುಮಾಡಿ, ವಾಸದ ತಳಹದಿಯನ್ನು ಪ್ರಾರಂಭಿಸಿದರು. ಇದು ಇವರಿಗೆ ಸರಿ ಎನ್ನಿಸತೊಡಗಿದಾಗ ತನ್ನ ಜೊತೆಯಲ್ಲಿ ನಾಲ್ಕಾರು ದಿಕ್ಕುಗಳಲ್ಲಿ ಅಲೆಯುತ್ತಿವವರು ಒಂದು ಕಡೆ ನೆಲೆ ನಿಂತರು. ಬುಡಕಟ್ಟು ಮತ್ತು Tribe ಎಂಬ ಪದಗಳ ನಿಷ್ಪತ್ತಿ ಹುಡುಕುತ್ತಾ ಅನೇಕ ಚರ್ಚೆಗಳು ನಡೆದಿವೆ. ಆದರೆ ಭಾರತದ ಅದಿಮ ಮತ್ತು ದುಡಿವ ಸಮಾಜಗಳನ್ನು ಹೆಸರಿಸಿದರು.

ಬುಡಕಟ್ಟು ಜನಪದ ಶಿಲ್ಪಕಲೆ ಅರಿಯಲು ಹೊರಟರೆ (ಪ್ರಯತ್ನಿಸಿದರೆ) ನಾವು ಜನಪದ (ಜನರ ಪಥ)ವನ್ನು ಅರಿಯಲೇಬೇಕಾಗುತ್ತದೆ. ಭೂಮಿಯ ಮೇಲೆ ಸಾವಿರ ಜೀವ ಪ್ರಭೇದಗಳನ್ನು ನೋಡುತ್ತಿವೆ. ಎಲ್ಲಾ ಸಹಾ ಮಣ್ಣನ್ನೇ ಅವಲಂಬಿಸಿರುತ್ತದೆ. ಈ ಭೂಮಿಯ ಮೇಲೆ ನೀರು, ಗಾಳಿ, ಬೆಳಕು ಎಲ್ಲಾ ಜೀವಿಗಳಿಗೂ ಒಂದು ರೀತಿಯ ಸಿಗುತ್ತಿದ್ದರೂ ಅವುಗಳ ಆಕಾರ ಅಂದ ಚಲನೆ ಉಪಯೋಗ ಬೇರೆ ಬೇರೆಯಾಗಿರುತ್ತದೆ. ಆದರೆ ಈ ಭೂಮಿಯ ಮೇಲೆ ಎಲ್ಲಾ ಜೀವಿಗಳು ತನ್ನ ಮಡಿಲಿನ ಮಕ್ಕಳೆಂದು ಕಾಪಾಡುತ್ತಿರುವುದು ಈ ಒಂದು ಬೃಹದಾಕಾರ ಮಣ್ಣಿನ ಉಂಡೇಯೆ. ಭೂಮಿ ಮೇಲೆ ಗಿಡ ಮರಗಳು ಬೀಜದಿಂದ ಮೊಳಕೆ ಹೊಡೆದ ಕ್ಷಣದಿಂದ ಭೂಮಿ ಸಾರಾಂಶ ಹೀರಿ ತನ್ನ ವಿಕಾಸವನ್ನು ಕಂಡು ಕೊಳ್ಳವು ಹಾಗೆ ವಿವಿಧ ಬಣ್ಣ ರುಚಿ, ಹೂವು ಅಂದ ಚಂದ ಅಡಗಿಸಿಕೊಳ್ಳುತ್ತವೆ.

ಮನುಷ್ಯರು ತನ್ನ ಸೃಷ್ಠಿ ಕ್ಷಣದಿಂದ ತನ್ನ ವಿಕಾಸವನ್ನು ಪ್ರಾರಂಭಿಸಿದರು. **"ತಲೆ ಅರಳಬೇಕಾದರೆ ತಲೆಯಲ್ಲಿ ಕಲೆ ಅರಳಬೇಕು"** ಎಂಬ ಅನುಭವದ ಮಾತಿನಂತೆ ಹುಟ್ಟಿದ ಕ್ಷಣದಿಂದ ವಿವೇಚನಾ ಪ್ರವೃತ್ತಿ ರೂಢಿಯಾಯಿತು. ತನ್ನೆಲ್ಲಾ ಹಸಿವುಗಾಗಿ (ಮಾನ್ಯರೇ ಈ ಲೇಖನದಲ್ಲಿ ಹಸಿವು ಎಂಬ ಪದ ವಿಶಾಲ ಅರ್ಥ ತುಂಬಿರುತ್ತೇನೆ) ಆಹಾರ, ತನ್ನ ರಕ್ಷಣೆಯ ಅನುಕೂಲಗಳ ಮಾಡಿಕೊಳ್ಳತೊಡಗಿದರು.

ನೀರನ್ನು ಕುಡಿಯಲು ಹಳ್ಳ ಕೊಳ್ಳಗಳನ್ನೇ ಅವಲಂಬಿಸಬೇಕಾಗಿ ಬಂದಾಗ ಆತನ ವಿವೇಚನೆ ಬಂದು ತನ್ನ ಅಂಗೈಯಲ್ಲಿ ನೀರನ್ನು ಕುಡಿಯುತ್ತಾನೆ, ತುಂಬಿ ಇಟ್ಟುಕೊಳ್ಳುವುದು ಗೊತ್ತಿರುವುದಿಲ್ಲ. ಅದೇ ಅಳ್ಳ ಪಕ್ಕದಲ್ಲಿ ಇದ್ದ ಅಂಟು ಮಣ್ಣನ್ನು ತೆಗೆದುಕೊಂಡು ತನ್ನ ಅಂಗೈಯ ಮಾದರಿಯ ಬಟ್ಟಲು ತಯಾರಿಸಿಕೊಂಡು ನೀರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ತರಲು ಪ್ರಯತ್ನಿಸುತ್ತಾರೆ. ಈ ಹಂತದಿಂದಲೇ ಬುಡಕಟ್ಟು ಜನರಲ್ಲು ಆಕೃತಿ ರಚನೆ ಮಾಡುವುದು ಸೃಷ್ಟಿಯಾಯಿತು. ಇಂತಹ ಒಂದು ವಿಭಿನ್ನ ವಿವೇಚನೆ ವಿವಿಧ ಆಕಾರಗಳನ್ನು ಮಾಡುವಂತೆ ಪ್ರೇರಣೆಯಾಯಿತು. ಈ ಒಂದೊಂದು ಆಕಾರ ಬೇರೆ ಬೇರೆ ಉಪಯೋಗ ಬಳಸಲು ಪ್ರಯತ್ನಿಸ ತೊಡಗಿದ. ಈ ಸಂದರ್ಭದಲ್ಲೂ ಕಾಡಿನಲ್ಲಿ ಸಿಗುತ್ತಿದ ಹಣ್ಣು ಹಂಪಲು ಗೆಡ್ಡೆ

ಗೆಣಸುಗಳನ್ನು ತುಂಡು ಮಾಡಿಕೊಳ್ಳಲು ಕಲ್ಲುಗಳನ್ನು ಉಪಯೋಗಿಸಲು ಪ್ರಯತ್ನಿಸಿದಾಗ ಅವುಗಳು ಸಿಗುವಂತಹ ಆಕಾರದಲ್ಲಿ ಅನುಕೂಲಕ್ಕೆ ತಕ್ಕಂತೆ ಬಳಸತೊಡಗಿದ. ಸೃಷ್ಟಿಕರ್ತನ ಲಯದಂತೆ ತನ್ನ ಅರಳಿದ ಭಾವನೆಗಳಿಗೆ ರೂಪಕೊಡಲು ಪ್ರಯತ್ನಿಸುತ್ತಾ ಸಾಮಾನ್ಯ ಮನುಷ್ಯನಿಗಿಂತ ಭಿನ್ನ ವಿಷಯಗಳನ್ನು ಹೇಳುವ ಕಥೆಯನ್ನು ಹೆಣೆಯುವ ಹಾಗೂ ಕಥೆಗೊಂದು ರೂಪ ಕೊಡಲು ಪ್ರಯತ್ನಿಸಿ, ತನ್ನ ಮುಗ್ಧ ಮನಸ್ಸಿನ ಭಾವನೆಗಳಿಂದ ಭಕ್ತಿ ಕಂಡುಕೊಳ್ಳುತ್ತಾರೆ. ಒಂದು ಕಲ್ಲಿಗೆ ಒಂದು ಆಕಾರ ಕೊಟ್ಟು ದೇವರೆಂದು ಪೂಜಿಸಲು ಪ್ರಾರಂಭಿಸಿದರು.

ಶಿಲಾಯುಗ ಕೊನೆ ಹಂತ (ನಿಯೋಲಿತಿಕ್ ಏಜ್)

ಜಾನ್ ಲಬಿಕ್ 1865ರಲ್ಲಿ ನಿಯೋಲಿತಿಕ್ ಏಜ್ ಎಂದು ಪದವನ್ನು ಮೊದಲ ಬಾರಿಗೆ ಬಳಸಿದ. ಆದಿ ಹಳೆ ಶಿಲಾಯುಗದ ಉಪಕರಣಗಳಿಗಿಂತ ಭಿನ್ನವಾದ ಉಪಕರಣಗಳನ್ನು ಕಲ್ಲು ಬಂಡೆಯ ಮೇಲೆ ತಿಕ್ಕಿ ಮೊಣಚು ಉಪಯೋಗಿಸಲು ಪ್ರಾರಂಭಿಸಿದರು. ಜತೆಯಲ್ಲಿ ಮಣ್ಣಿನ ಪಾತ್ರೆ ತಯಾರಿಕೆ ಮತ್ತು ಉಪಯೋಗವನ್ನು ಪ್ರಾರಂಭಿಸಿದರು. ತಮ್ಮ ನಿತ್ಯದ ಜೀವನಕ್ಕೆ ಕ್ರಮಬದ್ದೆಯ ಅರಿವು ಬರಲಾಯಿತ್ತು. ಇವರಿಗೆ ಅರಿವಿಲ್ಲದ ಯಾವುದೋ ಜಾನಪದ ಸಂಸ್ಕೃತಿ ಮೈಗೂಡಿಕೊಳ್ಳುತ್ತಾ ಶುರುವಾಯಿತು.

ಆದರೆ ಸುಮಾರು 7–8 ದಶಕಗಳಿಂದ ಗೊಚರನ್ ಪ್ರಾಕ್ತನ ವಿದ್ವಾಂಸರು ತಾಂತ್ರಿಕ ಲಕ್ಷಣಗಳಿಗಿಂತಲೂ ಸಾಂಸ್ಕೃತಿಕ ಪದ್ಧತಿಯನ್ನು ಸೂಚಿಸುತ್ತದೆ ಎಂದು ಹೇಳಿದರು ಮತ್ತು ಆರ್ಥಿಕ ಮತ್ತು ಸಾಮಾಜಿಕ ಅಂಶಗಳ ಆಧಾರದ ಮೇಲೆ ನವಶಿಲಾಯುಗ ಸಂಸ್ಕೃತಿಯನ್ನು ಗುರುತಿಸುವುದು ಸೂಕ್ತ.

ಪ್ರಕೃತಿಯ ಅನುಕೂಲಕ್ಕೆ ತಕ್ಕಂತೆ ಬೇಸಾಯ ರೂಡಿಸಿಕೊಂಡು ತನ್ನ ಅಲೆಮಾರಿ ಜೀವನ ಬಿಟ್ಟು ಒಂದು ಕಡೆ ನೆಲೆನಿಂತು ವಾಸಿಸುವ ಬುಡಕಟ್ಟು ಜೀವನ ಪದ್ಧತಿ ಆರಂಭಿಸಿದರು. ಈ ಜೀವನಕ್ಕೊಂದು ಒಳ್ಳೆಯ ಸಂದರ್ಭ ಬಂದು ಗ್ರಾಮೀಣ ಜಾನಪದ ಜೀವನ ಮತ್ತು ವಸತಿ ನಿರ್ಮಿಸಿಕೊಳ್ಳಲು ಸಂಘ ಜೀವಿಯಾಗಿ ಬಾಳಲು ಪ್ರಾರಂಭಿಸುತ್ತಾರೆ.

ತನ್ನ ವಿವೇಚನೆಯ ಮೊಣಚುಮಾಡಿ ಮಣ್ಣಿನಿಂದ ತಯಾರು ಮಾಡಿಕೊಳ್ಳುತ್ತಿದ್ದ ಆಕಾರಗಳನ್ನು ಬೆಂಕಿಯಲ್ಲಿ ಕಾಯಿಸಿ ಗಟ್ಟಿ ಮತ್ತು ದೀರ್ಘಬಾಳಿಕೆ ಬರುವಂತೆ ಮಾಡಿ ಅವುಗಳನ್ನು ಆಹಾರ ಧಾನ್ಯ, ಕುಡಿಯುವ ನೀರು ತುಂಬಿಕೊಳ್ಳುವುದು, ತನ್ನ ವಾಸದ ಪಕ್ಕದಲ್ಲಿ ಬಿದಿರನ್ನು ಕಡಿದು ನಿತ್ಯ ಜೀವನ ಉಪಯೋಗಕ್ಕೆ ಬಳಸುವ ಸಂಸ್ಕೃತಿಯನ್ನು ರೂಢಿಸಿಕೊಂಡರು.

ನವ ಶಿಲಾಯುಗವನ್ನು ಆಹಾರೋತ್ಪಾದನಾ ಸಂಗ್ರಹ ಮತ್ತು ಮಾನವ ಪ್ರಗತಿ ಸಂಸ್ಕೃತಿ ಮೊದಲ ಹೆಜ್ಜೆ ಎಂದು ಹೇಳಬಹುದು. ಮನುಷ್ಯನ ಜಾನಪದ ಬದುಕು ಬುಡಕಟ್ಟು ಜೀವನ ಪಶ್ಚಿಮ ಏಷ್ಯಾದ ಇರಾಕ್ ಪ್ಯಾಲಸ್ಟೀನ್ ಮತ್ತು ಸಿರಿಯ ಪ್ರದೇಶಗಳು ಉತ್ತಮ ನಾಗರೀಕತೆಗೆ ನಾಂದಿಯಾಯಿತು.

ಕ್ರಮವಾಗಿ 4, 5, 6, 7ನೇ ಸಹಸ್ರಮಾನಗಳಲ್ಲೂ ಮೇಡಿಟರೇನಿಯನ್ ನವ ಶಿಲಾಯುಗ ಜಾನಪದ ಸಂಸ್ಕೃತಿ ಕುರುಹು ಕಾಣಬರುತ್ತವೆ. ಆದರೆ ಒಂದು ಸಂಘಟನಾ ಗ್ರಾಮೀಣ ಜೀವನ ಆರಂಭವಾಯಿತೆಂದು ಹೇಳುವುದು ಸ್ವಲ್ಪ ಕಷ್ಟವೆನಿಸುತ್ತದೆ.

5ನೇ ಸಹಸ್ರಮಾನ ಕೊನೆಯಲ್ಲಿ ಭಾರತ ವಾಯುವ್ಯ ಗಡಿಪ್ರದೇಶ ಆಫ್ಘಾನಿಸ್ತಾನ, ಬಲುಚಿಸ್ತಾನ, ಸಿಂಧ್ ಪ್ರದೇಶಗಳಲ್ಲೂ ಜಾನಪದ/ಬುಡಕಟ್ಟು ಜೀವನದ ಕುರುಹು ಕಂಡುಬಂದಿವೆ.

ಜಾನಪದ ಎಂದರೆ ನಾಡಿನ ಪ್ರಜ್ಞೆ, ನಾಡಿನ ಸಂಬಂಧಿಸಿದ, ಜನ ಸಾಮಾನ್ಯ ಜನಪದಕ್ಕೆ ಸಂಬಂಧಪಟ್ಟ ಅಧ್ಯಯನ

ಪ್ರ.ಶ. ಪೂ 3ನೇ ಸಹಸ್ರಮಾನದ ಕಾಲದಲ್ಲಿ ಕಾಶ್ಮೀರ ಪೂರ್ವ ಭಾರತ ಮತ್ತು ಕರ್ನಾಟಕ – ಆಂಧ್ರಪ್ರದೇಶಗಳು ಹಾಗೂ ಖಂಬತ್‌ಕೊಲ್ಲಿ (ಗುಜರಾತ್) ಪ್ರದೇಶ ಪ್ರ.ಶ.ಪೂ ಸು 7000 ವರ್ಷಗಳ ಹಿಂದೆಯೆ ನವಶಿಲಾಯುಗದಲ್ಲಿ ಬುಡಕಟ್ಟು ಜಾನಪದ ಸಂಸ್ಕೃತಿ ಹೆಜ್ಜೆಗಳು ಗುರುತಿಸಲಾಗಿದೆ.

ಪ್ರತಿ ಹೆಜ್ಜೆಯಲ್ಲಿ ವಿವೇಚನೆ ಮಾಡಲು ಪ್ರಯನ್ತಿಸುತ್ತಾ ತಾನೊಬ್ಬ ಪ್ರತ್ಯೇಕ ವ್ಯಕ್ತಿಯಾಗಿ ವಾಸಿಸುವುದು ಒಳಿತಲ್ಲ, ಹಾಡಿಯ ನಾಲ್ಕಾರು ಮಂದಿ ಕೂಡಿ ವಾಸಿಸಲು ಪ್ರಾರಂಭಿಸಿದ ಹಾಗೆಯೇ, ಪರಸ್ಪರ ಸಹಾಯ ಮನೋಭಾವನೆ ಬಂದು ಆಹಾರ ಹುಡುಕಲು ಗುಂಪಾಗಿ ಶಿಕಾರಿ ಮಾಡುವುದು, ಕಾಡಿನ ಇತರೆ ಭಯಾನಕ ಪ್ರಾಣಿಗಳಿಂದ ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳಲು ನಾವು ಗುಂಪಾಗಿ ನೆಲೆ ನಿಲ್ಲುವುದು ಸರಿಯೆಂದು ಮನಸ್ಸುಮಾಡಿದರು.

ಸಮೂಹ ಜೀವನದಿಂದ ಒಂದು ಕಡೆ ನೆಲೆ ನಿಂತಾದರು, ತಾವುಗಳು ವಾಸಿಸುವ ಸ್ಥಳ ಬೆಟ್ಟದ ಕಲ್ಲಿನ ಗುಹೆಗಳಾದವು. ಬಿಸಿಲು, ಮಳೆ, ಚಳಿ, ಸ್ವಲ್ಪ ರಕ್ಷಣೆ ಎನಿಸಿದರೂ ದೀರ್ಘಕಾಲದವರೆಗು ಒಳ್ಳೆಯದಲ್ಲ ಎಂದು ಕಾಡಿನಲ್ಲಿ ಸಿಗುವ ಮರ, ಸೊಪ್ಪು, ಹುಲ್ಲು, ಹೊದಿಕೆ ಮಾಡಿ ಸಣ್ಣ ಸಣ್ಣ ಗುಡಿಸಲು ನಿರ್ಮಿಸಿತೊಡಗಿದರು.

ಬುಡಕಟ್ಟು ಜನರು ತಳಮಟ್ಟದಿಂದ ಸುಧಾರಿಸಿಕೊಂಡು ಶಿಲಾಯುಧಗಳನ್ನು ತಯಾರುಮಾಡಿಕೊಂಡು ಗಟ್ಟಿ ವಸ್ತುಗಳನ್ನು ಕತ್ತರಿಸುವುದಕ್ಕೆ, ಪುಡಿಮಾಡುವುದಕ್ಕೆ ವಿವಿಧ ಆಕಾರದ ಕಲ್ಲಿನ ಆಯುಧ ಮಾಡಿ ಉಪಯೋಗಿಸಿದರು. ಮುಂದೆ ವಿವೇಚಿಸಿದಾಗ ಹಸೆ ಕಲ್ಲು, ಹೊಳಕಲ್ಲು, ರಾಗಿಬೀಸುವ ಕಲ್ಲು ಇವಿಷ್ಟು ಆಹಾರ ಧಾನ್ಯ ತಯಾರು ಮಾಡಿಕೊಳ್ಳಲು ಬಳಸಿದರೆ, ಅಲ್ಲಿ ಮನುಷ್ಯ ರೂಪಿಗೆ ಹೋಲಿಕೆಯಾಗುವ ಚಿಕ್ಕ ಚಿಕ್ಕ ಕಲ್ಲುಗಳನ್ನು ಗುರುತಿಸಿದ. ತನ್ನಲ್ಲಿದ್ದ ಶಿಲಾಯುದದಿಂದ ಸಣ್ಣಪುಟ್ಟ ಏಟು ಹೊಡೆದ ನೋಡಿದಾಗ ತನ್ನ ಶರೀರಕ್ಕೆ ಹೋಲಿಕೆ ಎಂಬ ಆಕೃತಿ ಬರಲಾಯಿತು. ಬುಡಕಟ್ಟು ಜನರ ಶಿಲ್ಪಕಲೆ ಇಲ್ಲಿಂದ ಒಂದೇ ಒಂದೇ ಹೆಜ್ಜೆ ಸುಧಾರಿಸಿಕೊಳ್ಳುತ್ತಾ ಬಂದಿದೆ.

ಈಗಲೂ 5–6ನೇ ಶತಮಾನದ ಆಕೃತಿಗಳನ್ನು ಗಮನಿಸಿದರೆ ಪೂರ್ಣವಾಗಿ ರೂಪಗೊಂಡಿರುವುದಿಲ್ಲ ಹಾಗೂ ಚಿಕ್ಕ ಮಣ್ಣಿನ ಪರಿಕರಗಳನ್ನು ತಯಾರಿಸಿದರು. ಬಾಳಿಕೆ, ಗಟ್ಟಿ ಇಲ್ಲವಾದವು, ಮಣ್ಣಿನ ಪರಿಕರಗಳನ್ನು

ಬೆಂಕಿಯಲ್ಲಿ ಕಾಯಿಸದಿದ್ದರೆ ಗಟ್ಟಿ ಇಲ್ಲವೆಂದು ತಿಳಿದು, ಮಣ್ಣಿನ ಪಾತ್ರೆ ಬಿಸಿಲಿನಲ್ಲಿ ಸುಟ್ಟಿ ಬಳಸಲು ಪ್ರಯತ್ನಿಸಿದರು. ದವಸ ಧಾನ್ಯ ಆಹಾರ ತಯಾರು ಮಾಡುವ ಮಡಿಕೆಗಳನ್ನು ಕಾಡಿನಲ್ಲಿ ತಯಾರುಮಾಡಿಕೊಳ್ಳಲು ತೊಡಗಿದರು. ಹೀಗೆ ಕಲ್ಲು, ಮಣ್ಣು, ಮರ ಇವುಗಳ ವಸ್ತುಗಳನ್ನು ಅರಿತ ಬುಡಕಟ್ಟು ಜನರು ಕಾಡಿನಲ್ಲಿ ತಮ್ಮವೊಟ್ಟಿಗೆ ಓಡಾಡುತ್ತಿದ್ದ ಕೇಲವು ಸಾಧುಪ್ರಾಣಿಗಳನ್ನು ಗುರುತಿಸಿದರು. ಅವುಗಳನ್ನು ಪಳಗಿಸಲು ಪ್ರಯತ್ನಿಸಿದರು. ಆಹಾರ ಹುಡುಕುವುದಕ್ಕೆ ಪ್ರಾಣಿಗಳ ಬಳಸುತ್ತಾ, ಸಣ್ಣ ಪುಟ್ಟ ಆಯುಧಗಳಿಂದ ಕೃಷಿಮಾಡಲು ಪ್ರಯತ್ನಿಸಿದರು. ಇದಕ್ಕಾಗಿ ಪ್ರಾಣಿಗಳನ್ನು ತನ್ನ ಸಹಾಯಕ್ಕೆಂದು ಬಳಸಲು ಪ್ರಾರಂಭಿಸಿದರು ನವ ಶಿಲಾಯುಗ ಬುಡಕಟ್ಟು ಜನರ ಶಿಲ್ಪಕಲೆಗೆ ಒಂದು ತಳಹದಿಯಾಯಿತು.

ಚಪ್ಪಟ್ಟೆಯಾಗಿ ದೊರೆಯುತ್ತಿದ್ದ ಕಲ್ಲುಗಳು ಒಗ್ಗೂಡಿಸಿ, ಜೋಪಡಿಗಳನ್ನು ನಿರ್ಮಿಸಿದ ತನ್ನ ಗುಹೆಯ ವಾಸಸ್ಥಾನ ರಕ್ಷಣೆ ಇಲ್ಲವೆಂದು ಸಮೂಹ ಜನರ ಸಹಾಯದಿಂದ ಕಲ್ಲಿನ ಜೋಪಡಿ ನಿರ್ಮಿಸತೊಡಗಿದ. ಈ ಜೋಪಡಿಳೇ ಶಿಲ್ಪಕಲಾಕೃತಿಗಳಾಗಿ ಕಾಣಬರುತ್ತವೆ.

ಈ ಸಮೂಹ ಜೀವನಕ್ಕೆ ತನ್ನ ಆಂತರ ಆತ್ಮದಲ್ಲಿ ಅಡಗಿದ ಭಕ್ತಿ, ವಿನಯಕ್ಕೆ ಪೂರಕವಾಗಿ ಹಿರಿಯ ವಿಶೇಷ ವ್ಯಕ್ತಿಯ ರೂಪಗಳ ಕಲ್ಲಿನಲ್ಲೂ, ಮಣ್ಣಿನಲ್ಲೂ ಮಾಡಿದರು. ಅವುಗಳ ಮುಂದೆ ತಮ್ಮ ಭಕ್ತಿ ಭಾವನೆಯನ್ನು ವ್ಯಕ್ತಪಡಿಸುತ್ತಾ ಅನಂತರ ಆತ್ಮದಲ್ಲೂ ದೇವರನ್ನು ಕಂಡುಕೊಂಡರು. ಹೀಗೊಂದು ದೀರ್ಘಕಾಲದ ಕ್ರಿಯಾಶೀಲ ವಿವೇಚನೆಯಿಂದ ಬುಡಕಟ್ಟು ಜನರಲ್ಲೂ ಶಿಲ್ಪಕಲೆ ಅನಾವರಣಗೊಳ್ಳುತ್ತಾ ಬಂದಿತ್ತು.

ನವಶಿಲಾಯುಗದಲ್ಲಿ ಸಮೂಹವನ್ನು ಒಪ್ಪಿಕೊಂಡ ಇವರಿಗೆ ವಿವಿದ ವೃತ್ತಿಗಳ ಕಲಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಹಾಗೆಯೆ ಕೃಷಿಯನ್ನು ಮಾಡಲು ಪ್ರಯತ್ನಿಸಿ ಕೃಷಿ ಸಲಕರಣೆ ತಯಾರುಮಾಡಿಕೊಳ್ಳುತ್ತಿದ್ದರು. ತಮ್ಮ ಸುತ್ತಮುತ್ತಲ ಪ್ರದೇಶಗಳಲ್ಲಿ ಬೀಜ ಬಿತ್ತುವುದು ಮಳೆಕಾಲ ಅನುಕೂಲಗಳ ಅರಿಯುವುದು, ಮಣ್ಣಿನ ಪರಿಕರ ತಯಾರಿಕೆ, ಕಲ್ಲಿನ ಮೂರ್ತಿ, ಲೋಹದ ಆಯುಧಗಳನ್ನು ಮಾಡಿಕೊಂಡರು.

ಪ್ರಾಗೈತಿಹಾಸಿಕ ಕಾಲದಲ್ಲಿ ಜನಪದ/ಬುಡಕಟ್ಟು ಶಿಲ್ಪಕಲೆಯಲ್ಲಿ ತಮ್ಮ ಜಾಣ್ಮೆ ಪ್ರದರ್ಶಿಸಿದರು. ಹೊಸದೊಂದು ನಾಗರೀಕತೆಗೆ ದಾರಿ ದೀಪವಾಯಿತು.

ಸುಮಾರು ಕ್ರಿ.ಪೂ 2500 – ಕ್ರಿ.ಪೂ 1500 ಅವಧಿಯಲ್ಲಿ ಹರಪ್ಪ – ಮೊಹೆಂಜೊದಾರಾ ಎಂದು ಸಿಂಧು ಕಣಿವೆ ನಾಗರೀಕತೆ ಪ್ರಾರಂಭಗೊಂಡಿತ್ತು. ಇದು ಪ್ರಾಚೀನ ಭಾರತ ಜಾನಪದ/ಬುಡಕಟ್ಟು ಶಿಲ್ಪಕಲೆ ಕೇಂದ್ರ ಬಿಂದುವಾಯಿತು. (ಹರಪ್ಪ ಈಗ ಪಾಕಿಸ್ತಾನಕ್ಕೆ ಸೇರಿದ ರಾವಿ ನದಿಯ ಎಡದಂಡೆಯಲ್ಲಿದೆ).

ಈ ನಾಗರೀಕತೆಯಲ್ಲಿ ಕ್ರಮಬದ್ಧವಾದ ಹಿಟ್ಟಿಗೆ ತಯಾರುಮಾಡಿದ್ದಾರೆ. ಈ ಹಿಟ್ಟಿಗೆಗಳು ಸಮತೂಕ, ಆಕಾರ, ಅಳತೆ ಇದ್ದು, ಇವುಗಳನ್ನು ಸುಟ್ಟ ದೀರ್ಘಕಾಲ ಬಾಳಿಕೆ ಜ್ಞಾನ, ಬುಡಕಟ್ಟು ಶಿಲ್ಪಕಲೆ ಸಂಸ್ಕೃತಿಯನ್ನು ತೋರಿಸುತ್ತದೆ. ಈ ನಾಗರೀಕತೆಯ ವಿಶೇಷವೆಂದರೆ ಸಮೂಹದಲ್ಲಿ ಸತ್ತವರನ್ನು ಹೂಳುತ್ತಿದ್ದರು. ಕಲಾತ್ಮಕ ವಸ್ತುಗಳ ತಯಾರುಮಾಡಿರುವುದು ದೊರೆತಿದ್ದು, ಚಿಕ್ಕಮೊಹರುಗಳು, ಮಾನವ ಪ್ರತಿಮೆಗಳು, ಅತ್ಯಂತ ನೈಜವಾಗಿರುವ ಪ್ರಾಣಿ ವಿಗ್ರಹಗಳು, ಮಣಿಗಳು, ತಾಮ್ರ ಹಾಗೂ ಕಂಚಿನ ಉಪಯೋಗ ಇವರಿಗೆ ಗೊತ್ತಿತ್ತು. ಆಯತಾಕಾರದ ಇವರ ಮೊಹರುಗಳು ಒಳಪದ ಕಲ್ಲಿನಂಥ ಮೆದು ಕಲ್ಲಿನಿಂದ ಮಾಡಲ್ಪಟ್ಟಿವೆ. ಇದರ ಮೇಲೆ ಬಸವ, ಎಮ್ಮೆ, ಮೇಕೆ, ಆನೆ ಮುಂತಾದ ಪ್ರಾಣಿಗಳ ಚಿತ್ರವಿದೆ. ಆದರೆ ಮೊಹರುಗಳ ಮೇಲಿರುವ ಚಿತ್ರಲಿಪಿಯನ್ನು ಓದಲು ಇಂದಿಗೂ ಸಾಧ್ಯವಾಗಿಲ್ಲ. ಈ ನಾಗರೀಕತೆಯ ಜನರು ಶಿವನನ್ನು ಆದಿಶಕ್ತಿಯನ್ನು ಭಕ್ತಿಯಿಂದ ಪೂಜಿಸುತ್ತಿದ್ದರು.

ಕ್ರಮಬದ್ಧವಾದ ಸ್ನಾನದ ಕೊಳ ಹಾಗೂ ಮನೆಯ ಉಪಯೋಗ ನೀರು ಹೊರಹೋಗಲು ಒಳಚರಂಡಿ ವ್ಯವಸ್ಥೆ ಕಲ್ಪನೆ ಇದ್ದು, ನೀರಿನ ಬಾವಿ, ಧ್ಯಾನದ ಉಗ್ರಾಣ, ಶಾಸನ ಫಲಕಗಳ ತಯಾರು ಮಾಡಿದ್ದಾರೆ. ವಸ್ತುಗಳ ತೂಕ ಪ್ರಮಾಣ ತಿಳಿಯಲು ತೂಕ ಬಟ್ಟುಗಳು ಈ ನಾಗರೀಕತೆಯ ಸಂಸ್ಕೃತಿ ಕಲೆಯನ್ನು ವ್ಯಕ್ತಪಡಿಸುತ್ತದೆ.

ಈಗಲೂ ಸಹ ಕರ್ನಾಟಕ ಪಶ್ಚಿಮ ಘಟ್ಟಗಳಲ್ಲಿ ನೆಲೆಯೂರಿದ್ದು ಹಂತ ಹಂತವಾಗಿ ಜೀವನ ಕ್ರಮವನ್ನು ಬದಲಾಯಿಸುತ್ತಿದ್ದಾರೆ. ಕೊಡಗು ಜಿಲ್ಲೆಯ ಸೋಮವಾರಪೇಟೆ, ವಿರಾಜಪೇಟೆ, ಕುಶಲನಗರ, ಹೆಗ್ಗಡದೇವನಕೋಟೆ (ಮೈಸೂರು), ಗುಂಡ್ಲುಪೇಟೆ, ಚಾಮರಾಜನಗರ, ಸೋಲಿಗರು, ಬಿಳಿಗಿರಿರಂಗಯ್ಯನಬೆಟ್ಟ, ಕೊರೆ, ದೇವದಡ್ಲು, ಬಾಳೆಹಡಲು, ದುಬಾರೇ, ತಿಥಿಮಥಿಕಾಡು, ಮಲೆಮಹದೇಶ್ವರಬೆಟ್ಟ ಇನ್ನೂ ಹೆಚ್ಚು ಸ್ಥಳಗಳಲ್ಲಿ ವಾಸಿಸುತ್ತಿದ್ದಾರೆ. ತಮಿಳುನಾಡಿನ ಧರ್ಮಪುಲಿ ಜಿಲ್ಲೆ ಹಂಚೇಹಟ್ಟಿ, ಪಾಪರ ಪಟ್ಟಿ, ತಮ್ಮದೊಂದು ಸಂಪ್ರದಾಯ ಮತ್ತು ಸಂಸ್ಕೃತಿಗಳನ್ನು ಮೈಗೂಡಿಸಿಕೊಂಡಿದ್ದಾರೆ.

ಅವರುಗಳು ಮಳೆಯಾಶ್ರಯದ ಕೃಷಿ ಚಟುವಟಿಕೆಯ ತೊಡಗಿಸಿಕೊಂಡಿರುವುದರಿಂದ, ವರ್ಷ ಪೂರ್ತಿಯಾಗಿ ಉದ್ಯೋಗವಕಾಶವಿರುವುದಿಲ್ಲ. ತಮ್ಮ ಬಿಡುವಿನ ವೇಳೆ ಹಾಳುಮಾಡದೇ ಹಾಡಿಯಲ್ಲಿ ಸಿಗುವ ಬಿದಿರು, ಮಣ್ಣು, ಕಲ್ಲು, ಹಂಚಿಹುಲ್ಲು, ರುದ್ರಾಕ್ಷಿಮಣಿ, ಕೊತ್ತಕಣ್ಣಿನ ಬಣ್ಣವನ್ನು ಹೊಂದುವ ಹುಲ್ಲಿನ ಮಣಿ ಇನ್ನು ಮುಂತಾದ ಕಾಡಿನ ನೈಸರ್ಗಿಕ ಸಿಗುವ ವಸ್ತುಗಳಿಂದ ಕಲಾತ್ಮಕ, ಅಲಂಕಾರಿಕ, ಮನೆಯ ಉಪಯೋಗಕ್ಕೆ ವಸ್ತುಗಳನ್ನು ಸರಳ ಸುಂದರವಾಗಿಮಾಡಿ, ಹೊಟ್ಟೆಪಾಡಿಗಾಗಿ ಅವುಗಳನ್ನು ಗ್ರಾಮೀಣ ಪ್ರದೇಶ ನಾಡಿನ ಜನರಿಗೆ ಆಹಾರ ಧಾನ್ಯ, ಸಾಂಬಾರು ಪದಾರ್ಥಗಳಿಗೆ ಮಾರಾಟ ಮಾಡುತ್ತಾರೆ.

ಆದಿವಾಸಿ ಜನರಿಗೆ ಹಣದ ಚಲಾವಣೆ ಗೊತ್ತಿರುವುದಿಲ್ಲ. ಆರೋಗ್ಯ ಸಮತೋಲನದಲ್ಲಿ ಇಟ್ಟುಕೊಳ್ಳಲಾರರು, ಕೈಯಲ್ಲಿ ಮುತ್ತು ಸಿಕ್ಕಿದರೂ ಸಹ ಅದರ ಅಂದಚೆಂದ ಮೌಲ್ಯ ತಿಳಿಯದೇ ಬಾಳು ನಡೆಸುತ್ತಾರೆ.

ಆದರೆ ಇವರಲ್ಲಿ ಮೋಸ ಮಾಡದ ಮೌಲ್ಯಯುತ ಮನಸ್ಸು ಇರುತ್ತದೆ. ಇಂದಿಗೂ ಶ್ರೀರಂಗಪಟ್ಟಣ ಮತ್ತು ಮೈಸೂರು ಅರಮನೆ ಹೀಗೆ ಪ್ರವಾಸಿ ತಾಣಗಳಲ್ಲಿ ಇವರು ತಯಾರು ಮಾಡಿದ ಕಲ್ಲಿನ ಲಿಂಗ, ಬಸವ, ಶಿವ ತಮ್ಮ ಮುಗ್ಧ ಮನಸ್ಸಿನಿಂದ ಕೆತ್ತನೆ ಮಾಡುತ್ತಿದ್ದಾರೆ. ಆದರೆ ಇವರಿಗೆ ಸರಿಯಾದ ತರಬೇತಿಯನ್ನು ಸರ್ಕಾರ ಮತ್ತು ಅರೆಸರ್ಕಾರಿ ಸಾಮಾಜಿಕ ಸಂಸ್ಥೆಗಳು ನೀಡಿದರೆ ಪೂರ್ಣ ಜ್ಞಾನದ ಅರಿವು ಬಂದು ಒಂದು ಶಿಲ್ಪಕಲೆಯನ್ನು ಇನ್ನಷ್ಟು ಚೆನ್ನಾಗಿ ಮಾಡುತ್ತಾರೆ.

ಹೀಗೆ ಕರ್ನಾಟಕ ಜಾನಪದ ಮತ್ತು ಬುಡಕಟ್ಟು ಜನಪದ ಶಿಲ್ಪಕಲೆಯಲ್ಲಿ ಆದಿವಾಸಿ ಜಾಣರಿಗೆ ಕಲ್ಪನೆಗೆ ತಾವುಗಳು ಕಾಡಿನಲ್ಲಿ ನೋಡುವಂತಹ ಗಿಡಮರ, ಪ್ರಾಣಿ ಚಿತ್ರಗಳನ್ನು, ಹಳ್ಳ-ಕೊಳ್ಳ, ಬೆಟ್ಟ-ಗುಡ್ಡ ಸರೋವರ ಹೀಗೆ ಪ್ರಕೃತಿ ಚಿತ್ರಗಳ ಶಿಲ್ಪಕಲೆಯಲ್ಲಿ ಅರಳಿಸಿರುವುದು ಕಲ್ಪನಾ ಬುದ್ಧಿವಂತಿಕೆ ವ್ಯಕ್ತಪಡಿಸುತ್ತದೆ.

ಜಾನಪದ ವಿಚಾರಕ್ಕೆ ಬಂದರೆ ಈ ಆದಿವಾಸಿಗಳು ಅನೇಕ ಕಲೆಗಳ ಸೃಷ್ಟಿಕರ್ತರಾಗಿದ್ದಾರೆ.

1. ಉಪಯೋಗ ಕಲೆ:

ಜೀವನಕ್ಕೆ ಉಪಯೋಗಕ್ಕೆ ಇವರು ಕಲೆಗಳು ಚಮ್ಮಾರ, ಕಮ್ಮಾರ, ಕುಂಬಾರ, ಬಡಗಿ, ಅಕ್ಕಸಾಲಿಗ, ನೆಯ್ಗೆ ಹೀಗೆ ಬೇರೆ ಬೇರೆ ವೃತ್ತಿಗಳ ಅವಲಂಬಿಸಿ ಆ ಒಂದು ವೃತ್ತಿಯನ್ನು ಒಂದು ಸಮೂಹ ರೂಢಿಸಿಕೊಳ್ಳುತ್ತಾ ಇವುಗಳ ವ್ಯಕ್ತಿಗಳ ಅನುಗುಣವಾಗಿ ಜಾತಿ ಹುಟ್ಟಿಕೊಳ್ಳುತ್ತಾ ಬಂದಿತ್ತು.

2. ಲಲಿತ ಕಲೆ:

ಕಾವ್ಯ, ಕಲೆ, ನೃತ್ಯಕಲೆ, ಸಂಗೀತ ಕಲೆ, ಚಿತ್ರಕಲೆ, ಮೂರ್ತಿಕಲೆ (ಶಿಲ್ಪಕಲೆ) ಮೇಲೆ ಹೇಳಿದಂತೆ ವೃತ್ತಿ ಬದುಕಿನಲ್ಲಿ, ಅವರುಗಳು ಜೀವನದ ಅನುಭವ ವ್ಯಕ್ತಪಡಿಸಲು ಹಾಡಿನ ಮೂಲಕ ಕಥೆಗಳನ್ನು ನೃತ್ಯ ಮತ್ತು ನಾಟಕ ಹೀಗೆ ಬಿಡುವಿನ ರಾತ್ರಿ ವೇಳೆಯಲ್ಲಿ ಈ ಸಂಪ್ರದಾಯ ಹುಟ್ಟಿಕೊಳ್ಳುತ್ತಾ ಜನರಿಂದ ಜನರಿಗೆ ಹರಡಿ ಜಾನಪದ ಕಲೆಯಾಗಿ ರೂಪುಗೊಂಡಿತ್ತು. ಅವರುಗಳ ಹಾಡಿಯಲ್ಲಿ ರಾತ್ರಿವೇಳೆಯಲ್ಲಿ ಭಯಾನಕ ಪ್ರಾಣಿಗಳ ದಾಳಿಯನ್ನು ಹೆದರಿಸಲು, ಬೆಂಕಿ ಹಾಕಿ ಅನುಭವಗಳನ್ನು ಹಾಡಿ ಹೇಳಲು, ಕಥೆ ಹೇಳುವುದು ಇದರಿಂದ ಖುಷಿ ಪಟ್ಟು ಅವರುಗಳ ಆಯಾಸವನ್ನು ಮರೆಯುತ್ತಿದ್ದರು.

ಇಂದಿಗೂ ನಮ್ಮ ಅನೇಕ ದೇವಾಲಯ ಮೂರ್ತಿ ಕಲೆಗಳು ಬುಡಕಟ್ಟು ಜನರ ಶಿಲ್ಪಕಲೆ ಅಲಂಕಾರಗಳನ್ನೆ ಹೊದಿಕೆ ಮಾಡಿಕೊಂಡಿವೆ. ಈ ಪ್ರಕಾರ ಆದಿವಾಸಿ ಮುಗ್ಧತೆ, ಸಾಹಸಗತೆ, ಜಾಣ್ಮೆ, ಪ್ರತಿಭೆ,

ಮುಂದಾಲೋಚನಾ ವಿಧಾನ ಎಲ್ಲನ್ನೂ ನೋಡಿದರೆ, ಮಣ್ಣಿನ ಶಿಲ್ಪಕಲೆ ಜನಪದ ಶೈಲಿಯಲ್ಲಿ ತಯಾರಾಗುತ್ತಿದೆ. ಮಣ್ಣಿನ ಶಿಲ್ಪಕಲೆಗೆ ಜಾನಪದವೇ ಅಲಂಕಾರವಾಗಿದೆ.

ಆಧುನಿಕ ಶಿಲ್ಪಶಾಸ್ತ್ರದಲ್ಲೂ ಅಳತೆ ಪ್ರಮಾಣ ಗಾತ್ರ ಇವುಗಳನಿಟ್ಟು ಶಿಲೆಗೆ ಒಂದು ರೂಪುಕೊಡುತ್ತವೆ. ಜನಪದ ಶೈಲಿಯನ್ನೇ ಅಲಂಕಾರವಾಗಿ ಬಳಸಿ ಆ ಮೂರ್ತಿಯ ಸೌಂದರ್ಯ ಹೆಚ್ಚಿಸುತ್ತವೆ. ಇದರಿಂದ ಶಿಲ್ಪಕಲೆಯೂ ಹೆಚ್ಚು ಹೆಚ್ಚು ಆಕರ್ಷಿತವಾಗುತ್ತದೆ. ಯಾವ ಕೆಲಸದಿಂದ ವಸ್ತುವು ಸೌಂದರ್ಯವಾಗಿ, ಕರ್ಣಾನಂದ, ನೇತ್ರಾನಂದ ಹಾಗೂ ಮನಸ್ಸು ಪೂರ್ಣಾನಂದ, ಪುಳಗಾಂಕಿತಗೊಳ್ಳುವುದೋ ಅಂತಹ ಸಂಜ್ಞೆಗಳನ್ನು ಕಲೆ ಎಂದು ಹೆಸರು.

ಇಂದಿಗೂ ಜಾನಪದ ನುಡಿಮುತ್ತು, ಹಾಡುಗಳು, ಕಥೆಗಳು, ಶಿಲ್ಪಕಲೆ, ಇತಿಹಾಸದ ಸತ್ಯ ಹೇಳುತ್ತವೆ.

ಪ್ರಾಚೀನ ಭಾರತದ ನಾಗರೀಕತೆ ಶಿಲ್ಪಕಲೆಯ ಸ್ಥಾನದೊಡ್ಡ ಸಾಧನೆ ಎನ್ನಬಹುದು. ಶಿಲ್ಪಕಲೆ ವೇದ ಪುರಾಣಗಳಿಗಿಂತ ಮೊದಲೆ ಅಸ್ತಿತ್ವದಲ್ಲಿತ್ತು ಎನ್ನುವುದಕ್ಕೆ ವೇದಗಳಲ್ಲಿ ಉಲ್ಲೇಖವಿದೆ. ಬುಡಕಟ್ಟು ಜನರು 34 ಔಧ್ಯಮಿಕ ಉಪಕರಣಗಳ ಇದ್ದವೆಂದು ಶ್ರೀಪದಂಜಲಿ ಮುನಿಗಳು ಹೇಳಿದ್ದಾರೆ.

1) ಏಕಲವ್ಯನಿಂದ ದ್ರೋಣಾಚಾರ್ಯ ಪ್ರತಿಮೆ ನಿರ್ಮಾಣ
2) ಭೀಮಸೇನನಿಂದ ಐರಾವತ ನಿರ್ಮಾಣ
3) ಭೀಮನ ಶೌರ್ಯವನ್ನು ಅರಿತ ಧೃತರಾಷ್ಟ್ರನು ಭೀಮನನ್ನು ಆಲಿಂಗನ ಮಾಡಬಹುದೆಂದು ಊಹಿಸಿದ ಕೃಷ್ಣನು ಗುಪ್ತವಾಗಿ ನಿರ್ಮಿಸಿದ ಭೀಮನ ಕಂಚಿನ ವಿಗ್ರಹ.
4) ಕೌರವರು ಪಾಂಡವರಿಗೆಂದು ಅರಗಿನ ಮನೆ ಮುಂತಾದ ವಿಚಾರ ಶಿಲ್ಪಕಲೆ ಮಹತ್ವ, ಇತಿಹಾಸ ತಿಳಿ ಹೇಳುತ್ತವೆ.

ಭೂ ಸಂಶೋಧಕರು ನೆಲವನ್ನು ಅಗೆದು ಕಂಡುಹಿಡಿದ ಹರಪ್ಪ, ಮೆಹಂಜೋದಾರೋ, ತಕ್ಷಶಿಲೆ, ನಲಂದ, ಅಜಂತ, ಯಲ್ಲೋರ, ಕೋನಾರ್ಕ್, ವಿಕ್ರಮ ಶಿಲೆ, ಬೌದ್ಧ ಸ್ತೂಪಗಳ ಶಿಲ್ಪಕಲೆ ಸರಳ ಜೀವನ ನಾಗರೀಕತೆ ಹೇಳುತ್ತದೆ.

ಇಂದಿಗೆ 2000 ವರ್ಷಗಳ ಹಿಂದೆ ಸಾಕಷ್ಟು ವೈವಿಧ್ಯಮಯ ಸುಂದರ ಮುಗ್ದ ಶಿಲ್ಪಕಲೆಯಲ್ಲಿ ತೊಡಗಿದ್ದರು. ಕಲಾಭರಿತ ಹೂದಾನಿ ದೇವಸ್ಥಾನಗಳ ಗೋಡೆ ಅಲಂಕಾರಕ್ಕೆ ಉಬ್ಬು ಶಿಲ್ಪಕಲೆ ತಯಾರಿಸುತ್ತಿದ್ದರು.

ಬುಡಕಟ್ಟು ಜನರು ನೈಸರ್ಗಿಕ ಆಹಾರ ಪದಾರ್ಥಗಳ ಸೇವಿಸುತ್ತಿದ್ದರು. ಅವರ ದೇಹ ಗಟ್ಟಿಮುಟ್ಟಾಗಿ, ಶ್ರಮವೇನಿಸುವ ಕೆಲಸ ಮಾಡುತ್ತಿದ್ದರು, ಸಾಹಸಮಹಿ ಆಗಿದ್ದರು. ಆದರೆ ಅವರ ಜಾಣ್ಮೆಯೂ ಸಹಾ ಅಸಾಧಾರಣವಾಗಿತ್ತು.

ಕ್ರಿ.ಪೂ. 1525ರಲ್ಲಿ ಚೀನಾ ರಾಜನಾಗಿದ್ದ ವ್ಹಾಂಗ್ಟ್ ಮತ್ತು ಯುಟಿಶಾನ್ ಶಿಲ್ಪಕಲೆಯ ನೈಪುಣ್ಯ ಅರಿತಿದ್ದರೂ ಆಕರ್ಷಕ ಶಿಲ್ಪಕಲೆ ರಚನೆಯಿಂದ ಜನರಲ್ಲಿ ಪ್ರಚಾರದಲ್ಲಿದ್ದರು. ಇಂದಿಗೂ ಚೀನಾ ಪ್ರಪಂಚದಲ್ಲಿ ಶಿಲ್ಪಕಲೆಯಲ್ಲಿ ಪ್ರಥಮ ಸ್ಥಾನದಲ್ಲಿದ್ದಾರೆ.

ಭಾರತವು ಬಹುಕಾಲ ಪರಕೀಯರ ಆಳ್ವಿಕೆ ಸಿಲುಕಿದ ಪರಿಣಾಮ ಜಾನಪದ/ಬುಡಕಟ್ಟು ಶಿಲ್ಪಕಲೆಗೆ ಮಾನ್ಯತೆ ದೊರೆಯಲಿಲ್ಲ. ಸಾಕಷ್ಟು ನಿರ್ಲಕ್ಷ್ಯಕ್ಕೆ ಒಳಪಟ್ಟಿತು. ಇದರಿಂದ ಆ ಕಾಲಕ್ಕೆ ಆದಿವಾಸಿಗಳು ಜೀವನ ಸ್ಥಿತಿ ಸುಧಾರಣೆಯಾಗಬೇಕಾಗಿತ್ತು. ಇಂದಿಗೂ ಅವರಿಗೆ ಅಕ್ಷರ ಜ್ಞಾನದ ಸೌಲಭ್ಯ ವಂಚಿತರಾಗಿ ಸಮಾಜದ ಮುಖ್ಯವಾಹಿನಿಗೆ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಆಗುತ್ತಿಲ್ಲ.

ಯುರೋಪೇತರ ಆದಿವಾಸಿಗಳಿಗೆ ಎತಿನಿಕ್ ಮತ್ತು ಟ್ರೈಬ್ ಎಂದು ವಿಂಗಡಿಸಲಾಯಿತು. ಸ್ವತಂತ್ರ ಭಾರತದಲ್ಲಿ ರಾಜಕೀಯ ಮತ್ತು ಆಡಳಿತಾತ್ಮಕ ಪರಿಭಾಷೆಯ ರೂಪುಗೊಂಡಿತ್ತು. ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡ ಎಂದು ಕರೆಯಲ್ಪಟ್ಟ ಸಮೂದಾಯಗಳು ಭಾರತ ಆಳಿದ ನಾಯಕರ ಕೈಯಲ್ಲಿ Scheduled cast and scheduled Tribes ಎಂದು ವರ್ಗೀಕರಿಸಿದರು. ಹೀಗೆ ಬುಡಕಟ್ಟು ಜನರನ್ನು ವಿಂಗಡಿಸಿದ ವಸಾಹತು ಆಡಳಿತ, ದೇಶದ ಆಡಳಿತ ಒಳಗೂ ಸೇರಿ ಕೊಂಡವು.

ಆಡಳಿತದ ಈ ಎರಡು ಪರಿಭಾಷಿಕಗಳಿಗೂ ಹೀಗೆ ಕರೆಯಲ್ಪಡುವ ಸಮುದಾಯಗಳಿಗೂ ಜನಾಂಗಿಕವಾಗಿ ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ತಾತ್ವಿಕವಾಗಿ ಯಾವ ಸಂಬಂಧವೂ ಇಲ್ಲ. ಕೆಲ ಸಮುದಾಯಗಳನ್ನು ಕೂಡ ಸಮಾಜದಿಂದ ಹೊರಗಿಡುವ ಕಾರಣಕ್ಕೆ ಪರಿಶಿಷ್ಠ ಎಂಬ ಪದ ಬಳಕೆಯಲ್ಲಿತ್ತು. ಎರಡು ಸಮುದಾಯದಲ್ಲಿ ಬುಡಕಟ್ಟು ಜನರಲ್ಲಿ ಶಿಲ್ಪಕಲೆ ಮೈಗೂಡಿಕೊಂಡಿದೆ. ಎಲ್ಲಾ ಕಲೆ ಜೀವಂತಿಕೆ ಇರುವುದು ಜನಪದದಿಂದ ಮಾತ್ರವೆನ್ನಬಹುದು. ಇವುಗಳ ರಚನೆಯಲ್ಲಿ ಪರಿಪೂರ್ಣ ಆಗಿರದಿದ್ದರೂ ಪರಿಪೂರ್ಣ ಜೀವ ಅನುಭವ, ಮುಂದಾಲೋಚನೆಗಳಿರುತ್ತದೆ. -

ಹೀಗೆ ಜನಪದ/ಬುಡಕಟ್ಟು ಶಿಲ್ಪಕಲೆ ದೇಶದ ಸಂಸ್ಕೃತಿ ದೊಡ್ಡ ಆಸ್ತಿ ಎನ್ನಬಹುದು. ಇನ್ನು ಹೆಚ್ಚು ಅಧ್ಯಯನ ಮಾಡಿದರೆ ಬುಡಕಟ್ಟು ಜನರ ಆಚಾರ, ವಿಚಾರ ಪ್ರತಿಭೆ, ಜಾಣ್ಮೆ, ಸಾಹಸಮಯ ವಿಚಾರಗಳ ಕಲೆ ಹಾಕಬಹುದು. ಸಮಾಜದ ಮುಖ್ಯವಾಹಿನಿಯಲ್ಲಿ ಇವರ ಶ್ರೇಷ್ಠತೆ ಗೌರವಿಸಬಹುದು. ಇವರುಗಳಲ್ಲಿ ಅಡಗಿರುವ ಸೂಕ್ಷ್ಮ ಪ್ರಜ್ಞೆಗೆ ರೂಪಕೊಟ್ಟರೆ ನಮ್ಮ ದೇಶಾದ ಶಿಲ್ಪಕಲೆ ಅತ್ತಿ ಎತ್ತರ ಸ್ಥಾನಕ್ಕೆ ನಿಲ್ಲುತ್ತದೆ. ಇವರುಗಳಲ್ಲಿ ಸಾಕಷ್ಟು ಪ್ರತಿಭಾಂತರಿದ್ದಾರೆ. ಅವರುಗಳನ್ನು ಗುರುತಿಸಿ, ಪ್ರೋತ್ಸಾಹಿಸುವುದಾದರೆ ಇಂದಿನ ಆಧುನಿಕ ನಾಡಿನ ಶಿಲ್ಪಕಲಾವಿದನು ಒಪ್ಪಿಕೊಳ್ಳಬೇಕಾಗುತ್ತದೆ. ಆದುದರಿಂದ ಬುಡಕಟ್ಟು ಜನರ ಜಾನಪದ ಶಿಲ್ಪಕಲೆ ಪ್ರೋತ್ಸಾಹಿಸಲು ಕೋರಿಕೊಳ್ಳುತ್ತೇನೆ.

ಈ ವಿಷಯ ನಮ್ಮೆಲ್ಲಾ ಸ್ನೇಹಿತರಿಗೆ ಪರಿಚಯ ಮಾಡಿಕೊಡಲು ತುಂಬಾ ಸಂತೋಷವಾಗುತ್ತದೆ. ಕರ್ನಾಟಕದ ಅನೇಕ ಬುಡಕಟ್ಟು ಜನರ ನೆಲೆಗಳಲ್ಲೂ ಜನಪದ ಶಿಲ್ಪಕಲೆ ಹುಡುಕಿದ ನನಗೆ ಅವರ ದಿನ

ನಿತ್ಯದ ಬದುಕಿಗೆ ಶಿಲ್ಪಕಲೆ ಕೂಡಿರುವುದು ಕಂಡು ಅವರನ್ನು ನಾನು ಈ ವಿಷಯವಾಗಿ ಮಾತನಾಡಿಸಿದರೆ ಪ್ರಕೃತಿಯಲ್ಲಿ ರೂಪಗೊಳ್ಳುವ ಒಂದು ಸಹಜ ಪ್ರಕೃತಿಯಂತೆ ತಿಳಿದುಕೊಂಡಿರುತ್ತಾರೆ. ಇವರ ಈ ಶಿಲ್ಪಕಲೆಯಲ್ಲಿ ಮುಂದಿನ ಪುಟಗಳಲ್ಲಿ ಬಲು ಸವಿಸ್ತರವಾಗಿ ಮತ್ತು ಭಾವ ಚಿತ್ರಗಳ ಸೆರೆ ಹಿಡಿದು ತರುತ್ತೇನೆ. ಹಾಗಾದರೆ ಈ ಸೊಗಸಾದ ಪುಟಗಳನ್ನು ಒಮ್ಮೆ ತೆರೆದು ನೋಡೋಣವೇ?

ಬುಡಕಟ್ಟು ಜನಪದ ಶಿಲ್ಪಕಲಾ ಅಧ್ಯಯನದ ಉದ್ದೇಶ

ಬುಡಕಟ್ಟು ಜನಪದ ಶಿಲ್ಪಕಲಾ ಅಧ್ಯಯನದಿಂದ ಆಗಬಹುದಾದ ಪ್ರಯೋಜನಗಳು, ಹಳೆ ಬೇರು ಹೊಸ ಚಿಗುರು ಇರುತ್ತಿರಲು ಮರ ಎಷ್ಟು ಚೆನ್ನಾಗಿ ಸೋಭಿಸುತ್ತದೋ ಹಾಗೆಯೇ ಇಂದಿನ ಆಧುನಿಕ ಯುಗದ ವಿಚಾರ ಮತ್ತು ಪ್ರಗತಿಗಾಗಿ ಬುಡಕಟ್ಟು ಶಿಲ್ಪಕಲಾ ಇತಿಹಾಸ ತಿಳಿದು ಮಾನವ ನಡೆದು ಬಂದ ದಾರಿ ಜೀವನ ರೂಡಿಸಿಕೊಂಡ ರೀತಿ ಹಾಗೂ ಪ್ರಪಂಚದ ಬೇರೆ ಜೀವಿಗಳಿಗಿಂತ ಪ್ರಜ್ಞಾವಂತ ಮಾನವನು ಸಂಘಜೀವಿಯಾಗಿ ಬಾಳಲು ಪ್ರಯತ್ನಿಸಿ ತಾನೊಬ್ಬ ಸಮಾಜ ಕಟ್ಟುವ, ನಿರ್ವಹಿಸುವ ವಿಧಾನ ಕಲಿತ.

ಮುಂದಿನ ತಲೆಮಾರಿಗೆ ಇತಿಹಾಸ ತಿಳಿಸುವ ಕೆಲಸವನ್ನು ಮಾಡಬೇಕಾಗಿದಿದ್ದು ನಮ್ಮೆಲ್ಲರ ಕರ್ತವ್ಯ. ಈಗಿನ ಶಿಲ್ಪಕಲಾ ವೈಭವಗಳನ್ನು ವಿವಿಧತೆಗಳನ್ನು ಕಾಣುವ ನಾವುಗಳು ಶಿಲ್ಪಕಲೆಗೆ ಜನಪದ ವಿಚಾರ, ವಿನ್ಯಾಸವೇ ಅಲಂಕಾರವಾಗಿದೆ. ಹಾಗೂ ನಮ್ಮ ಧರ್ಮ ಆಚರಣೆಗಳಿಗೆ ನಮ್ಮ ಹಿರಿಯರು ರೂಢಿಸಿಕೊಟ್ಟ ವಿಷಯಗಳೇ ನಮ್ಮ ಈಗಿನ ಶಿಲ್ಪಕಲಾಕೃತಿಗಳ ರಚನೆ ಮೂಲ ವಿಷಯ ಅಥವಾ ಒಳ ವಿಷಯವಾಗಿದೆ. ಈಗಿನ ಶಿಲ್ಪಕಲೆಯ ಎಲ್ಲಾ ಬೆಳವಣಿಗೆ ಎಲ್ಲರಿಗೂ ಬುಡಕಟ್ಟು ಜನಪದ ಶಿಲ್ಪಕಲೆ ವಿಷಯ ವಿಚಾರ ಪ್ರಜ್ಞಾವಂತನ್ನಾಗಿ ರೂಪಿಸುತ್ತದೆ.

ಬುಡಕಟ್ಟು ಜನರು ಪ್ರಕೃತಿ ಆರಾಧಕರಾಗಿದ್ದರು. ಸೂರ್ಯ, ಚಂದ್ರ, ಮಳೆರಾಯ, ಬಿಸಲ ಮಾರಮ್ಮ, ಸಸಿಗಳ ಮಾರಮ್ಮ ಎಂಬ ದೇವರುಗಳ ಮೂರ್ತಿಯಾಗಿ ಮಾಡಿಕೊಂಡು ಆರಾಧಿಸುತ್ತಾರೆ ಹಾಗೂ ಹಿಂದೂ ಹಬ್ಬಗಳಾದ ಸಂಕ್ರಾಂತಿ, ಗೌರಿ ಗಣೇಶ ಚತುರ್ಥಿ, ದೀಪಾವಳಿ, ಶಿವರಾತ್ರಿ, ಯುಗಾದಿ ಹಬ್ಬಗಳನ್ನು ಆಚರಿಸುತ್ತಾರೆಂತೆ. ಇವರ ವೈಜ್ಞಾನಿಕ ಆಚರಣೆ ಸತ್ಯಕ್ಕೆ ಮತ್ತು ಬದುಕಿಗೆ ಹತ್ತಿರವಾಗಿರುತ್ತದೆ. ನಿಷ್ಕಲ್ಮಶ ಆಚರಣೆಗಳು ಸೊಗಸಾಗಿ ಮೂಡಿಬರುತ್ತವೆ.

ಜನಪದ ಶಿಲ್ಪಕಲೆ ವಿಷಯ ಅಧ್ಯಾಯನಿಸುತ್ತಾ ಹೋದ ನಮಗೆ ಕೆಲವು ನೈಸರ್ಗಿಕ ಅಥವಾ ಶಿಲೆ ಸಹಜವಾಗಿಯೇ ಶಿಲ್ಪಕಲಾಕೃತಿ ರೂಪ ಪಡೆದುಕೊಂಡಿರುವುದು ಕಾಣಸಿಗುತ್ತದೆ. ಪ್ರಕೃತಿಯ ಈ ಒಂದು ಕೊಡುಗೆಯನ್ನು ಪ್ರಕೃತಿ ಶಿಲ್ಪಕಲಾ ಸಂಪತ್ತು ಎನ್ನಬಹುದು.

ಅನೇಕ ಶಿಲೆಗಳು ಪರ್ವತರೂಪ, ಪ್ರಾಣಿ, ಮನುಷ್ಯ ಹಾಗೆಯೇ ವಿವಿಧ ರೂಪಗಳನ್ನು ಸಂಯೋಜಿತ ಶಿಲ್ಪಕಲೆಯನ್ನು ಕಾಣಬಹುದು. ಇಂತಹ ವಿಶೇಷತೆಯುಳ್ಳ ಶಿಲೆಗಳ ಆಕೃತಿಗಳನ್ನು ಶಿಲ್ಪಕಲೆ ಹುಟ್ಟಲು ಕಾರಣವೆನ್ನಬಹುದು.

ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕು ದಾಂಡಲಿ ಎಂಬಲ್ಲಿ ಸಿಂಥೇರಿ ರಾಕ್ಸ್‌ಬ್ಯೂಟಿ ಎಂಬಂತೆ ತಮ್ಮ ಚಲುವನ್ನು ಸೊಬಿಸುತ್ತಿವೆ. ಯಾಣದ ಪರ್ವತ ಶ್ರೇಣಿಯ ಶಿಲೆ ಹೀಗೆ ಕರ್ನಾಟಕದ ಪರ್ವತ ಶ್ರೇಣಿಗಳಲ್ಲಿ ಇಂತಹ ಅತ್ಯಾಧ್ಭುತ ಶಿಲೆಗಳು ಶಿಲ್ಪಕಲಾಕೃತಿಗಳ ಕಾಣಸಿಗುತ್ತವೆ. ಮಾನವ ನಿರ್ಮಿತ ಶಿಲ್ಪಗಳೇ

ವಿಶೇಷತೆವುಳ್ಳವುಗಳೆಂದರೆ ಪ್ರಕೃತಿ ನಿರ್ಮಿತ ಶಿಲ್ಪಗಳ ಸಹಾ ಜನಪದ ಶಿಲ್ಪಕಲೆ ಅರಳುವುದಕ್ಕೆ ವ್ಯಕ್ತಿಯನ್ನು ತೊಡಗಿಸಿಕೊಳ್ಳುವುದಕ್ಕೆ ಕಲಾ ಪ್ರಜ್ಞೆಯನ್ನು ರೂಪಿಸುವುದಕ್ಕೆ ಸಹಕಾರಿಯೆನ್ನಬಹುದು.

ಮಂಡ್ಯ ಜಿಲ್ಲೆಯ ಶಿವನ ಸಮುದ್ರದ ಬರಚುಕ್ಕಿ ಎಂಬಲ್ಲಿ ಕಾವೇರಿ ನದಿಯ ನೀರು ಹರಿಯುವ ಸರಬಸಕ್ಕೆ ಬಂಡೆಕಲ್ಲು ಸವೆದು ಕಲಾತ್ಮಕ ರೂಪ ಮೈದಳೆದು ಕೊಂಡಿರುವುದು ಕಾಣಬಹುದು. ಹೀಗೆ ಬುಡಕಟ್ಟು ಜನರ ಶಿಲ್ಪಕಲಾ ಪ್ರಜ್ಞೆನೆಗೆ ಸ್ಪೂರ್ತಿದಾಯಕವಾಗಿವೆ ಎನ್ನಬಹುದು.

ಬುಡಕಟ್ಟು ಜನರ ವಿವಿಧ ಗುಂಪುಗಳು

1) ಆಡಿಯಾನ್
2) ಬರ್ದ್
3) ಬವಚ (ಬಮಚ)
4) ಬಿಲ್ಲ, ಬಿಲ್ಲ ಗರಸಿಯಾ, ದೋಲ ಬಿಲ್ಲ, ದುಂಗ್ರಿಬಿಲ್ಲ, ದುಂಗ್ರಿಗರಸಿಯಾ, ಮೆವಸಿಬಿಲ್ಲ, ರಾವಲ್
5) ಬಿಲ್ಲ, ತಪದಿ ಬಿಲ್ಲ, ಬಗಲಿಯಾ ಬಿಲ್ಲ, ಪರ್ವ, ವಸವ
6) ಚೆಂಚು, ಚೆಂಚವಾರ್
7) ಚೊದರ
8) ದುಬಲ, ತಲ್ವಾಯಿ, ಹಲ್ಪಡಿ
9) ಗಮಪ್, ಗಮಟೆ, ಗವಿಸ, ಮವಚಿ, ಪದ್ವಿ, ವಲ್ವಿ
10) ಗೊಂಡ, ವ್ಯಾಕೆಲ್ಪಡ, ರಾಜಗೊಂಡ
11) ಗೌಡಲು,
12) ಹಕ್ಕಿ ಹಕ್ಕಿ
13) ಹಸಲರೂ
14) ಹಿರೂಲರ್
15) ಹಿರೂಲಿಗ
16) ಜೇನುಕುರುಬ
17) ಗಿಡು ಗುರುಬ
18) ಕಮ್ಮರ (ಕಷಿಣ ಕನ್ನಡ, ಕೊಳ್ಳೆಗಾಲ, ಮೈಸೂರು ಜಿಲ್ಲೆ)
19) ಕನಿಯಾನ್, ಕನ್ಯಾನ
20) ಕತೋಡಿ, ಕಚ್ಕರಿ, ದೋರ್ ಈತೋಡಿ, ದೋರ್ ಕಲ್ಕರಿ, ತೋಡಿ ಸನ್ ಕವ್ಕರಿ ಕಟ್ಟುನಯಕನ್
21) ಕೊಕ್ಕನ, ಕೊಕ್ಕನಿ, ಕುಕ್ಕನ
22) ಕೊಲಿದೋರ್, ಚೊಕ್ರೆಕೊಲಿ, ಕೊಲಿಚ, ಕೊಲಿಗಾ
23) ಕೊಂಡ ಕಪ್ಸಾ
24) ಕೂರ್ಗ್
25) ಕೋಟ
26) ಕೋಯಾ, ಬಿನೆಕೊಯಾ, ರಾಜಕೊಯಾ

27) ಕುಡಿಯಾ, ಮೆಲಕುಡಿ

28) ಕುರುಬ (ಕೊಡಗು ಜಿಲ್ಲೆ)

29) ಕುರುಮಾನ್ಸ್

30) ಮಹಾ ಮಲಸಾರ್

31) ಮಲೈಕುಡಿ

32) ಮಲಸಾರ್

33) ಮಲಯ ಕುಂಡಿ

34) ಮಲೆರು

35) ಮರೆತ

36) ಮರತ (ಕೊಡಗು)

37) ಮರಾಚಿ (ದಕ್ಷಿಣ ಕನ್ನಡ)

38) ಮೇಡ, ಮೆಡರಿ, ಗೌರಿಗ, ಬುರುಡ, ಮೆಡರ

39) ನ್ಯಾಕ್ಡ ನಾಯಕ, ಚೊಲಿವಲ ನಾಯಕ, ಕಾಪಡಿಯಾ ನಾಯಕ, ಮೋಟ ನಾಯಕ, ನನನಾಯಕ, ನ್ಯಾಕನಾಯಕ, ಬೇಡ

40) ಬೇಡಾರ್ ಮತ್ತು ವಾಲ್ಮಿಕೀ

41) ಪಲ್ಲಿಯಾನ್

42) ಪನಿಯಾನ್

43) ಪರ್ಧಿ, ಅಡ್ವಿಚಿಚೂರ್, ಪಂಸೆ ಪರ್ಧಿ, ಹರಿನ, ಶಕ್ಕರ್ರಿ

44) ಪಟೆಲಿಯಾ

45) ರತ್ವಾ

46) ಸೋಲಿಗ

47) ಸೋಲಿಗರು

48) ತೋಡ

49) ವರ್ಲಿ

50) ವಿಟಲಿಯಾ, ಕೊಟಾವಲಿಯಾ, ಬರೊಡಿಯಾ

51) ಯೆರವ

52) ಸಿದ್ದಿ (ಉತ್ತರ ಕನ್ನಡ)

ಕೆಲವು ಬುಡಕಟ್ಟು ಗುಂಪುಗಳ ಉಪನಾಮಗಳಿಂದ ಕರೆಸಿಕೊಳ್ಳುತ್ತವೆ.

ಆದಿವಾಸಿ ಅಥವಾ ಬುಡಕಟ್ಟು ಸಮುದಾಯದ ಅರ್ಥ ಮತ್ತು ವ್ಯಾಖ್ಯೆ ಅರ್ಥ

ಟ್ರೈಬ್ಸ್ ಎಂಬ ಇಂಗ್ಲೀಷ್ ಪದವು ಲ್ಯಾಟಿನ್ ಭಾಷೆಯ ಟ್ರೈಬಸ್ ಎಂಬ ಪದದಿಂದ ಉತ್ಪತ್ತಿಯಾಗಿದೆ. ಈ ಪದದ ಅರ್ಥ ಪ್ರಾಚೀನ ರೋಮ್ ಜನತೆಯ ರಾಜಕೀಯ ಭಾಗ ಅಥವಾ ಆಡಳಿತ ಪ್ರಾಂತ ಅಥವಾ ಮಂಡಲಿ. ಕಾಲಗತಿಯಲ್ಲಿ ಈ ಪದವನ್ನು "ಸಮುದಾಯ ವಾಗಿ ರೂಪು ತಳೆಯುವ ಕುಟುಂಬಗಳ ಸಂಕಲನ" ಎಂಬುದಾಗಿ ಪಾಶ್ಚಿಮಾತ್ಯ ಮಾನವ ಶಾಸ್ತ್ರಜ್ಞರು ಹಾಗೂ ಸಮಾಜಶಾಸ್ತ್ರಜ್ಞರು ಅರ್ಥೈಸಿದ್ದಾರೆ.

ವ್ಯಾಖ್ಯೆಗಳು :

ಆದಿವಾಸಿಗಳು ಮತ್ತು ಆದಿವಾಸಿ ಸಮುದಾಯ ಎಂಬುದರ ಬಗ್ಗೆ ಮಾನವ ಶಾಸ್ತ್ರಜ್ಞರು ಹಾಗೂ ಸಮಾಜಶಾಸ್ತ್ರಜ್ಞರು ನಿಖರವಾದ ವ್ಯಾಖ್ಯೆಯೊಂದನ್ನು ನೀಡುವುದರಲ್ಲಿ ವಿಫಲರಾಗಿದ್ದಾರೆ. ಈ ಬಗ್ಗೆ ಅವರುಗಳಲ್ಲಿ ಸಹಮತವಿಲ್ಲ ಪ್ರತಿಯೊಬ್ಬರು ತಮ್ಮದೆ ಆದ ವ್ಯಾಖ್ಯನ ನೀಡುವ ಯತ್ನ ನಡೆಸಿದ್ದಾರೆ ಅಂತಹ ಒಂದೆರಡು ವ್ಯಾಖ್ಯೆಗಳನ್ನು ಉಲ್ಲೇಖಿಸಬಹುದಾಗಿದೆ.

ಬುಡಕಟ್ಟು ಶಬ್ಧದ ಅರ್ಥವನ್ನು ಅತೀ ಸರಳವಾಗಿ ತಿಳಿಸಿದ್ದಾರೆ. ಬುಡಕಟ್ಟು ಜನಾಂಗವೆಂದರೆ "ಸಾಮಾನ್ಯವಾಗಿ ನಾಗರೀಕರೆಂದು ಕರೆಯಿಸಿಕೊಳ್ಳುವವರಿಂದ ದೂರವಿದ್ದು ದಟ್ಟವಾದ ಅರಣ್ಯ, ಆಳವಾದ ಕಣಿವೆ, ಗುಡ್ಡಗಾಡು ಮುಂತಾದ ದುರ್ಗಮ ಪ್ರದೇಶದಲ್ಲಿ ವಾಸಿಸುವವರಿಗೆ ಆದಿವಾಸಿಗಳು ಎಂದು ಕರೆಯುತ್ತಾರೆ. ಇವರು ತಮ್ಮದೇ ಆದ ಭಿನ್ನ ಪ್ರತ್ಯೇಕವಾದ ಜೀವನ ಕ್ರಮವನ್ನು ರೂಡಿಸಿಕೊಂಡು ಬದುಕುತ್ತಾ ತಮ್ಮದೇ ಆದ ಸಾಂಸ್ಕೃತಿಕ ಮೌಲ್ಯಗಳನ್ನು ಇಂದಿನವರೆಗೂ ಜೀವಂತವಾಗಿ ಉಳಿಸಿಕೊಂಡು ಬಂದಿರುವ ಒಂದು ಗುಂಪಿನ ಅಥವಾ ಸಮುದಾಯದ ಜನರನ್ನು ಪ್ರಾಚೀನ ಜನಾಂಗಗಳು, ಅನಾಗರೀಕರು, ಪ್ರಾಚೀನ ಬುಡಕಟ್ಟುಗಳು, ಸರ್ವಚೇತನವಾದಿಗಳು ಅಥವಾ ಅನಿಮಿಸಟ್ಟ ಅರಣ್ಯ ವಾಸಿಗಳು, ಕಾಡುಜನರು, ಗಿರಿಜನರು ಮುಂತಾದ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ.

ಮೂಲತಃ ಷೆಡ್ಯೂಲ್ಡ್ ಟ್ರೈಬ್ಸ್ ಅಥವಾ ಪರಿಶಿಷ್ಟ ಪಂಗಡಗಳು ಎಂಬ ಪದವು ಆಡಳಿತಾತ್ಮಕ ಅನುಕೂಲತೆಗಾಗಿ ಸೃಷ್ಟಿಸಿರುವ ಪರಿಕಲ್ಪನೆಯಾಗಿದೆ. ಇದನ್ನು ೧೯೨೮ರ ಸೈಮನ್ ಕಮೀಷನ್ ಪ್ರಪ್ರಥಮವಾಗಿ ಪರಿಚಯಿಸಿದೆ. ಆದಿವಾಸಿಗಳನ್ನು 'ರಿಸ್ಲೆ' ಮತ್ತು 'ಎಲ್ವಿನ್' ಇವರು ಮೂಲ ನಿವಾಸಿಗಳು ಎಂದು ಕರೆದಿದ್ದಾರೆ. 'ಸರ್ ಬೈನ್' ರವರು "ಹಿಲ್ ಟ್ರೈಬ್ಸ್" ಎಂದು ಕರೆದಿದ್ದಾರೆ.

- **ಜೆ.ಪಿ ಗಿಲಿನ್ ಮತ್ತು ಜೆ.ಎಲ್ ಗಿಲಿನ್ ರವರ ಪ್ರಕಾರ :-**

"ಒಂದೇ ನೆಲೆಯಲ್ಲಿ ವಾಸಿಸುವ ಒಂದೇ ಭಾಷೆಯನ್ನು ಮತ್ತು ಒಂದೇ ಸಂಸ್ಕೃತಿಯನ್ನು ಹೊಂದಿರುವ ಸಮುದಾಯಗಳ ಸಮೂಹಕ್ಕೆ ಆದಿವಾಸಿ ಸಮಾಜ ಎನ್ನುತ್ತೇವೆ."

- **ಫೇರ್ ಚೇಲ್ಡ್ ರವರ ಪ್ರಕಾರ :-**

ಸಾಮಾನ್ಯವಾಗಿ ಅಸಂಖ್ಯಾತ ರಕ್ತ ಸಂಬಂದಿಗಳನ್ನು ತಂಡಗಳನ್ನು ಗ್ರಾಮಗಳನ್ನು ಅಥವಾ ಉಪಸಮೂಹಗಳನ್ನು ನಿಶ್ಚಿತ ಭೂ ಪ್ರದೇಶಗಳನ್ನು ತನ್ನದೇ ಆದ ಖಚಿತ ಭಾಷೆಗಳನ್ನು ವಿಶಿಷ್ಟವಾದ ಮತ್ತು ಸಮೈಕ್ಯವಾದ ಸಂಸ್ಕೃತಿಯನ್ನು ಮತ್ತು ಏಕರೂಪವಾದ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಯನ್ನು ಹೊಂದಿರುವ ಹೊರಗಿನವರೆಗೂ ನಮಗೂ ವ್ಯತ್ಯಾಸವಿದೆ ಎಂಬ ಭಾವನೆಯುಳ್ಳ ಸಾಮಾಜಿಕ ಸಮೂಹವನ್ನು ಆದಿವಾಸಿ ಸಮಾಜ ಎನ್ನುತ್ತೇವೆ.

- **ಡಾ.ಡಿ.ಎಸ್. ಮಜುಂದಾರ್ ರವರ ಪ್ರಕಾರ :-**

"ಒಂದೇ ನಾಮಾಂಕಿತವನ್ನು ಹೊಮದಿರುವ ಒಂದೇ ಭೂ ನೆಲೆಯಲ್ಲಿ ವಾಸಿಸುವ ಒಂದೇ ಭಾಷೆಯನ್ನಾಡುವ ಮತ್ತು ವಿವಾಹ, ಉದ್ಯೋಗಿಗಳಿಗೆ ಸಂಬಂದಿಸಿದಂತೆ ಒಂದೇ ಬಗೆಯ ವಿಧಿ ನಿಷೇದಗಳಿಗೆ ಬದ್ಧವಾದ ಕುಟುಂಬಗಳ ಸಮೂಹವನ್ನು ಆದಿವಾಸಿ ಸಮೂಹ" ಎಂದು ಕರೆಯುತ್ತೇವೆ. **ಡಾ ಹಟ್ಟನ್** ರವರು "ಪ್ರಿಮಿಟೀಚ್ ಟ್ರೆಬ್ಸ್" ಎಂದು ಕರೆದಿದ್ದಾರೆ ಠಕ್ಕರ ಬಾಪಾರವರು "ಆದಿ ಪ್ರಜಾ ಎಂದು ಕರೆದಿದ್ದಾರೆ ಡಾ. ಘುರ್ಯೇ ರವರು "ಹಿಂದುಳಿದ ಹಿಂದುಗಳು" ಎಂದು ಕರೆದಿದ್ದಾರೆ. ಆದಿವಾಸಿಗಳು ಯಾರು? ಆದಿವಾಸಿ ಪಂಗಡಗಳು ಎಂದರೇನು? ಎಂಬುದರ ಬಗ್ಗೆ ಅನೇಕ ಮಾನವ ಶಾಸ್ತ್ರಜ್ಞರು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯೆ ನೀಡಿದ್ದಾರೆ ಅವುಗಳು ಈ ಕೆಳಗಿನಂತಿವೆ.

- **W.H.R ಲೀವರ್ಸ್ ರವರ ಪ್ರಕಾರ :-**

"ಆದಿವಾಸಿಗಳು ಒಂದು ಸರಳ ಜನಾಂಗದ ಸದಸ್ಯರಾಗಿರುತ್ತಾರೆ. ಸಾಮಾನ್ಯವಾಗಿ ಒಂದೇ ಭಾಷೆಯನ್ನಾಡುತ್ತಾರೆ. ಒಂದೇ ಸಮಾಜವನ್ನು ರಚಿಸಿಕೊಂಡಿರುತ್ತಾರೆ. ಯುದ್ಧ ಮೊದಲಾದ ಸಂದಿಗ್ಧ ಪರಿಸ್ಥಿರಿಯಲ್ಲಿ ಎಲ್ಲಾರೂ ಒಗ್ಗೂಡುತ್ತಾರೆ"

- **ಬೋಗಾರ್ಡಸ್ ರವರ ಪ್ರಕಾರ :-**

"ರಕ್ಷಣೆಯ ಅವಶ್ಯಕತೆ, ರಕ್ತ ಸಂಬಂಧ, ಒಂದೇ ಧರ್ಮದ ನೆಲೆ, ಇವುಗಳ ಆಧಾರದ ಮೇಲೆ ಆದಿವಾಸಿ ಸಮುದಾಯವು ನಿಂತಿದೆ".

- **ಅಮೇರಿಕಾ ವಿಶ್ವಕೋಶ**

ಬುಡಕಟ್ಟು ಎಂದರೆ ನಾಡಿನ ಕಾನೂನಿಗಿಂತ ಭಿನ್ನವಾದ ಸಂಪ್ರದಾಯಗಳನ್ನು ಇಂದಿಗೂ ಪಾಲಿಸಿಕೊಂಡು ಬರುತ್ತಿರುವ ಜನರನ್ನು "ಬುಡಕಟ್ಟು" ಎಂಬುದಾಗಿ ತಿಳಿಸಿದ್ದಾರೆ.

ಒಟ್ಟಾರೆಯಾಗಿ ಆದಿವಾಸಿ ಎಂದರೆ ಒಬ್ಬರನ್ನೊಬ್ಬರು ಅವಲಂಬಿಸಿರುವ ಆರ್ಥಿಕವಾಗಿ ಹಿಂದುಳಿದಿರುವ ಅವರ ವೃತ್ತಿ ನಿಸರ್ಗದ ಸಂಪನ್ಮೂಲಗಳನ್ನು ಸಂರಕ್ಷಿಸುವ ಅವರ ಆರ್ಥಿಕ ಸ್ಥಿತಿ-ಗತಿಗಳನ್ನು ಮುಂದುವರಿಯದೇ ಇರುವ ಬೌಗೋಳಿಕವಾಗಿ ಬೇರೆಯಾಗಿರುವ ಒಂದೇ ಭಾಷೆಯನ್ನು ಹೊಂದಿರುವ ಒಂದೇ ರಾಜಕೀಯ ಸಂಸ್ಥೆಯನ್ನು ಹೊಂದಿರುವ ಮತ್ತು ಸಂಪ್ರದಾಯಗಳನ್ನು ಮುಂದುವರಿಸಲು ಇಚ್ಛಿಸಲು ಇರುವ ಜನಾಂಗಗಳು ಎಂಬರ್ಥವಾಗಿದೆ.

- **ಎಸ್.ಸಿ.ದುಬೆ ರವರ ಪ್ರಕಾರ**

ಆದಿವಾಸಿ ಸಮೂಹಾರು ವಿಶಾಲ ವ್ಯಾಪ್ತಿಯ ಸಾಂಸ್ಕೃತಿಕ ಲಕ್ಷಣಗಳನ್ನು ಸಾಮಾನ್ಯವಾಗಿ ಹಂಚಿಕೊಂಡಿರುವ ವಾಸ್ತವಿಕವಾದಿ ಇಲ್ಲವೇ ವಾಸ್ತವಿಕವೆಂದು ಪ್ರತೀತಿ ಇರುವ ವಂಶಾವಳಿಯನ್ನು ಹೊಂದಿದ್ದ ಮತ್ತು ಸಾಮೂಹಿಕ ಸಾರೂಪ್ಯವನ್ನು ಹೊಂದಿರುವ ಜನಾಂಗೀಯ ಇಲ್ಲವೇ ಮಾನವ ಬುಡಕಟ್ಟಾಗಿದೆ.

- **W.J. ಪೆರಿರವರ ಪ್ರಕಾರ**

"ಒಂದೇ ಸ್ಥಳದಲ್ಲಿ ನೆಲೆಸಿರುವ ಒಂದೇ ಭಾಷೆಯನ್ನಾಡುವ ಜನಸಮೂಹವನ್ನು ಆದಿವಾಸಿ ಸಮೂಹ ಎಂದು ಕರೆಯುತ್ತೇವೆ".

- **ಭಾರತದ ಇಂಪಿರಿಯಲೆ ಗೆಜೆಟಿಯರ ಪ್ರಕಾರ**

"ಒಂದೇ ನಾಮಾಂಕಿತವನ್ನು ಹೊಂದಿರುವ ಒಂದೇ ಭಾಷೆಯನ್ನು ಮಾತನಾಡುವ ಒಂದೇ ಸ್ಥಳದಲ್ಲಿ ವಾಸಮಾಡುವ ಅಥವಾ ವಾಸಿಸಲು ಉದ್ಯುಕ್ತವಾಗಿರುವ ಈ ಹಿಂದೆ ಒಳಪಂಗಡ ವಿವಾಹ ಪದ್ಧತಿಗೆ ಬದ್ದರಾಗಿದ್ದಿರಬಹುದಾದರೂ ಈಗ ಹಾಗಿಲ್ಲದ ಕುಟುಂಬಗಳ ಸಮೂಹವನ್ನು ಆದಿವಾಸಿ ಸಮಾಜ ಎನ್ನುತ್ತೇವೆ".

ಅಧ್ಯಯನ ವಿಧಾನ

ನಾವು ಯಾವುದೇ ವಿಷಯವನ್ನು ಅಧ್ಯಯನ ಮಾಡಬೇಕು ಎಂದಾಗ ಎರಡು ವಿಧಾನವನ್ನು ಬಳಸಿಕೊಳ್ಳಲಾಗುತ್ತದೆ ಅವು ಯಾವುವೆಂದರೆ

- ಅವಲೋಕನ
- ಸಂದರ್ಶನ

➢ ಅವಲೋಕನ

ಭೌತ ವಿಜ್ಞಾನಗಳ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿದಷ್ಟು ನಿಖರವಾಗಿ ಹಾಗೂ ನಿರ್ಧಿಷ್ಟವಾಗಿ ಸಮಾಜ ವಿಜ್ಞಾನಗಳ ಕ್ಷೇತ್ರದಲ್ಲಿ ಸಂಶೋಧನೆ ನಡೆಸಲಾಗದು. ಭೌತ ವಿಜ್ಞಾನಿಯು ತನ್ನ ಪ್ರಯೋಗಾಲಯದಲ್ಲಿ ನಿರ್ಜೀವ ವಸ್ತುಗಳನ್ನು ಬಳಸಿಕೊಂಡು ಪ್ರಯೋಗ ನಡೆಸಿ ಸಂಶೋದನೆಯ ಉದ್ದೇಶವನ್ನು ಸಾಕಾರಗೊಳಿಸಬಹುದು ಆದರೆ ಸಮಾಜ ವಿಜ್ಞಾನಗಳ ಕ್ಷೇತ್ರದಲ್ಲಿ ಸರಳವಾದುದ್ದಲ್ಲ. ಇಲ್ಲಿ ಇಡೀ ಸಮಾಜವೇ ಗೋಡೆಗಳಿಲ್ಲದ ಪ್ರಯೋಗಾಲಯದಂತಿದ್ದು ಇಲ್ಲಿ ವಾಸಿಸುವ ಮಾನವರೆಂಬ ಸಜೀವ ವಸ್ತುಗಳೊಡನೆ ಪ್ರಯೋಗಗಳನ್ನು ನಡೆಸಬೇಕಾಗುವುದು ಮಾಹಿತಿ ಸಂಗ್ರಹಣೆಗಾಗಿ ಬಳಸಿಕೊಳ್ಳುವ ತಂತ್ರ ಸಾಧನಗಳನ್ನು ಅವಲೋಕನವು ಒಂದಾಗಿದೆ. "ಅವಲೋಕನವು ಸಾಮಾಜಿಕ ಸಂಶೋದನೆಯಲ್ಲಿ ಮಾಹಿತಿ ಸಂಗ್ರಹಣೆಗಾಗಿ ಬಳಸಲಾಗುತ್ತಿರುವ ಮುಖ್ಯ ತಂತ್ರ ಸಾಧನಗಳಲ್ಲಿ ಒಂದು. ಸಂದರ್ಶನ ಬಳಕೆಯಲ್ಲಿ ಕಂಡುಬರಬಹುದಾದ ಕೆಲವು ಸಮಸ್ಯೆಗಳನ್ನು ಅವಲೋಕನದ ಮೂಲಕ ಅಥವಾ ಅವಲೋಕನದೊಂದಿಗೆ ಸಂದರ್ಶನ ವಿಧಾನವನ್ನು ಸಂಯೋಜಿಸುವುದರಿಂದ ಬಗೆಹರಿಸುವುದು ಸಾಧ್ಯ. ನಮ್ಮ ಪ್ರಾಪಂಚಿಕ ಜ್ಞಾನದ ಬಹು ಭಾಗವನ್ನು ನಾವು ಅವಲೋಕನದ ಮೂಲಕವೇ ಪಡೆದುಕೊಂಡಿರುವುದು ನಿರ್ವಿವಾದ. ಆದ್ದರಿಂದ ಅವಲೋಕನವನ್ನು ಭೌತ ವಿಜ್ಞಾನ ಹಾಗೂ ಸಮಾಜವಿಜ್ಞಾನಗಳೆರಡರಲ್ಲೂ ತನ್ನ ಮಹತ್ವವನ್ನು ಉಳಿಸಿಕೊಂಡಿದೆ. ಅವಲೋಕನ ಎಂಬ ಪದಕ್ಕೆ "ವ್ಯವಸ್ಥಿತ ವೀಕ್ಷಣೆ" ಅಥವಾ ಗಮನವಿಟ್ಟು ನೋಡುವುದು ಅಥವಾ ಉದ್ದೇಶಪೂರ್ವಕವಾಗಿ ಲಕ್ಷ್ಯವಿಟ್ಟು ಗಮನಿಸುವ ಕ್ರಿಯೆ.

➢ ಸಂದರ್ಶನ

ಸಂದರ್ಶನ ಎಂಬುದು ಸಾಮಾಜಿಕ ಸಂಶೋದನಾ ಕ್ಷೇತ್ರದಲ್ಲಿ ಮಾಹಿತಿಯನ್ನು ಸಂಗ್ರಹಿಸಲು ಪರಿಣಮಕಾರಿಯಾದ ಹಾಗೂ ಹೆಚ್ಚು ಯಶಸ್ವಿಯಾದ ವಿಧಾನವಾಗಿದೆ. ಸಂದರ್ಶನದಲ್ಲಿ ಸಂಭಾಷಣೆಯ ರೂಪದಲ್ಲಿ ಅಭಿಪ್ರಾಯ ಸಂಗ್ರಹಿಸುವ ಯತ್ನವಿರುತ್ತದೆ. ಸಂಭಾಷಣೆಯ ರೂಪದಲ್ಲಿ ಅಭಿಪ್ರಾಯ ಸಂಗ್ರಹಿಸುವ ಯತ್ನವಿರುತ್ತದೆ. ಸಂದರ್ಶನ ವಿಧಾನದಿಂದ ಲಭಿಸುವ ಫಲಿತಾಂಶವು ಸ್ಪಷ್ಟರೂಪದಲ್ಲಿದ್ದು ಸತ್ಯಕ್ಕೆ ಹೆಚ್ಚು ಸಮೀಪವಿರುತ್ತದೆ ಎನ್ನಲಾಗಿದೆ. ಇದೇ ಕಾರಣಕ್ಕಾಗಿ ಸಂದರ್ಶನವನ್ನು ಸಾಮಾಜಿಕ ಸಂಶೋದನೆಯ "ಅತ್ಯುತ್ಕೃಷ್ಟ ಉಪಕರಣ"ವೆಂದು ಕರೆಯುವುದುಂಟು. ಸಂದರ್ಶನ ಎಂಬುದು ಒಬ್ಬ ವ್ಯಕ್ತಿಯ ಅಭಿಪ್ರಾಯ ಪಡೆಯುವುದಕ್ಕೆ ಅಥವಾ ಯಾವುದೋ ಒಂದು ವಿಷಯದ ಬಗ್ಗೆ ಮಾಹಿತಿ ಸಂಗ್ರಹಣೆ ಸಂದರ್ಶನ ಎನಿಸಿಕೊಳ್ಳುತ್ತದೆ. ಮಾಹಿತಿ ಸಂಗ್ರಹಣೆಯ ದೃಷ್ಟಿಯಿಂದ ಒಬ್ಬಾತ ಇನ್ನೊಬ್ಬನೊಂದಿಗೆ ಮಾತನಾಡುವುದು ನಿರ್ಧಿಷ್ಟ ಉದ್ದೇಶವನ್ನಿಟ್ಟುಕೊಂಡು ಮೌಖಿಕವಾಗಿ ಸಂಭಾಷಣೆ ನಡೆಸುವುದು ಸಂದರ್ಶನವಾಗಿರುತ್ತದೆ.

ಕರ್ನಾಟಕದ ಭೌಗೋಳಿಕ ಲಕ್ಷಣಗಳು

ರಾಜ್ಯದ ಒಟ್ಟು ವಿಸ್ತೀರ್ಣವು ೧.೯೧.೭೯೧ ಚ.ಕಿ.ಮೀ ಗಳಷ್ಟಿದೆ ಇದು ದೇಶದ ಒಟ್ಟು ಭೌಗೋಳಿಕ ಪ್ರದೇಶದ ಶೇಕಡ ೫.೮೩ ರಷ್ಟಿದೆ. ಕರ್ನಾಟಕವು ಪಶ್ಚಿಮ ಕರಾವಳಿ ಪಶ್ಚಿಮ ಘಟ್ಟ ಅಥವಾ ಮಲೆನಾಡು, ಉತ್ತರ ಮೈದಾನಗಳೊಂದಿಗೆ ೪ ಸ್ವಾಭಾವಿಕವಾದ ಈ ನಾಲ್ಕು ಪ್ರದೇಶಗಳು ವಿಶಿಷ್ಟ ಲಕ್ಷಣಗಳನ್ನು ಒಲಗೊಂಡಿದೆ.

ಪಶ್ಚಿಮ ಘಟ್ಟ ಹಾಗೂ ಅರಬ್ಬಿಸಮುದ್ರಗಳ ನಡುವೆ ಚಾಚಿಕೊಂಡಿರುವ ಕರಾವಳಿ ಪ್ರದೇಶವು ಸರಾಸರಿ ಅಗಲ ೫೦–೬೦ ಉದ್ದ ೨೬೭ ಕಿ.ಮೀ. ಗಳಷ್ಟಿದೆ. ಈ ಪ್ರದೇಶದಲ್ಲಿ ವಾರ್ಷಿಕ ೬.೫೦೦ಮೀ ನಿಂದ ೩೦೦೦ ಮೀಗಳಷ್ಟು ಸಮೃದ್ಧವಾಗಿ ಮಳೆಯಾಗುತ್ತದೆ. ಈ ಭೂ ಭಾಗದಲ್ಲಿ ಪ್ರಮುಖವಾಗಿ ತೆಂಗು ಹಾಗೂ ಭತ್ತವನ್ನು ಅಧಿಕವಾಗಿ ಬೆಳೆಯಲಾಗುತ್ತದೆ.

ಪಶ್ಚಿಮ ಘಟ್ಟ ಮಲೆನಾಡು, ಚಿಕ್ಕಮಗಂಗಳೂರು, ಹಾಸನ, ಕೊಡಗು, ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳ ಘಟ್ಟದ ಮೇಲಿನ ಪ್ರದೇಶವನ್ನು ಒಳಗೊಂಡಿದೆ. ಇಲ್ಲಿ ವಾರ್ಷಿಕ ೧೦೦೦ ಮಿಲಿಮೀಟರ್ ನಿಂದ ೨೦೦೦ ಮಿಲಿಮೀಟರ್ ನಷ್ಟು ಮಳೆಯಾಗುತ್ತದೆ. ರಾಜ್ಯದ ಬಹುತೇಕ ದಟ್ಟವಾದ ಮಳೆ ಕಾಡುಗಳು ಈ ಪ್ರದೇಶದಲ್ಲಿಯೇ. ಇದು ಶ್ರೇಷ್ಟ ಮಟ್ಟದ ತೇಗ ರೋಸ್‌ವುಡ್ ಮರಗಳು ಮತ್ತು ಬಿದಿರು ಹಾಗೂ ವಾಣಿಜ್ಯ ಬೆಳೆಗಳಾದ ಕಾಫಿ, ಅಡಕೆ, ಮೆಣಸು, ಏಲಕ್ಕಿ, ರಬ್ಬರ್‌ಗಳಂತಹ ತೋಟಗಾರಿಕೆ ಬೆಳೆಗಳ ತಾಣವಾಗಿದೆ.

ಸಮುದ್ರ ಮಟ್ಟದಿಂದ ೩೦೦ ಮೀಗಳಿಂದ ೬೦೦ ಮೀಗಳಷ್ಟು ಎತ್ತರದಲ್ಲಿರುವ ಉತ್ತರ ಬಯಲು ಸೀಮೆಯ ದಕ್ಷಿಣ ಪ್ರಸ್ಥಭೂಮಿಯನ್ನು ಒಳಗೊಂಡಿದೆ. ಹತ್ತಿ ಬೆಳೆಗೆ ಬೇಕಾಗುವ ಕಪ್ಪು ಮಣ್ಣನ್ನು ಸಮೃದ್ಧವಾಗಿ ಹೊಂದಿದೆ. ಕೃಷ್ಣ ಹಾಗೂ ಅದರ ಉಪನದಿಗಳಾದ ಪಟ್ಟಭದ್ರ, ಮಲಪ್ರಭ, ತುಂಗಭದ್ರ, ಭೀಮ ಮತ್ತು ಕಾರಂಜಿ ನದಿಗಳು ಇಲ್ಲಿನ ಕೃಷಿಗೆ ಜೀವನ ಆಧಾರಗಳಾಗಿವೆ. ಮಳೆ ಕಡಿಮೆ ಇರುವ ಪ್ರದೇಶಗಳಲ್ಲಿ ಜೋಳ, ಹತ್ತಿ, ಎಣ್ಣೆ ಬೀಜಗಳು ಮತ್ತು ದ್ವಿದಳ ಧಾನ್ಯಗಳನ್ನು ನೀರಾವರಿ ಪ್ರದೇಶಗಳಲ್ಲಿ ಕಬ್ಬನ್ನು ಬೆಳೆಯಲಾಗುತ್ತದೆ.

ಮಾನವನ ಮಹಾವಲಸೆಯ ಹೆಜ್ಜೆಗುರುತು

ದಿನಾಂಕ 10-07-2016ರ ಭಾನುವಾರದಂದು ಕನ್ನಡ ಪ್ರಭ ದಿನ ಪತ್ರಿಕೆ ಓದುತ್ತಿದ್ದ ನನಗೆ ತುಂಬಾನೇ ಕುತೂಹಲ ಹುಟ್ಟಿಸುವ ಸುದ್ಧಿಯೊಂದು ಪ್ರಕಟಗೊಂಡಿತ್ತು. ಇದೊಂದು ಸಂಶೋಧನಾ ಕಲಾಕೃತಿಯಾಗಿ ಮಾನವ ಸೃಷ್ಠಿ ಮತ್ತು ವಲಸೆಯ ಹಾದಿಯನ್ನು ಹಿಡಿದು ಸಂಶೋಧಕ ಸ್ಪೆನ್ಸರ್ ವೆಲ್ಸ್‌ರವರು ಬಹುದೂರ ಸಾಗಿ ಬಂದಂತಹ ಪ್ರಪಂಚ ಒಂದು ಬಾರಿ ಆಶ್ಚರ್ಯ ಪಡುವಂತಾಗಿತ್ತು.

ವಿಶ್ವ ಭೂಪಟದಲ್ಲಿ ಮಾನವನನ್ನು ಸೃಷ್ಠಿಗೆ ಅವಕಾಶ ಮಾಡಿದ ಅನೇಕ ಸ್ಥಳಗಳು ಮಣ್ಣು ಮುಚ್ಚಿ ಮರೆಯಾದ ಸ್ಥಳಗಳನ್ನು ಹುಡುಕಿ ತೋರಿಸಿಕೊಟ್ಟು ಅದರಲ್ಲೂ ದಕ್ಷಿಣ ಭಾರತದ ತಮಿಳುನಾಡು ರಾಜ್ಯ ಜ್ಯೋತಿ ಮಾಣಿಕಾಮ್ ಗ್ರಾಮದ ವೀರುಮಾಂಡಿ ವಂಶಸ್ಥರು ಇಂದು ಭಾರತದಲ್ಲಿರುವ ಎಲ್ಲಾ ಜನರಿಗೂ 60000 ಗಳಿಂದಲೇ ಮೂಲ ಮನೆಗಿತ್ತು ಎಂಬುವುದು ಕುತೂಹಲ ಹುಟ್ಟಿಸಿದ ಈ ಕಲಾಕೃತಿಯನ್ನು ನಾನು ಅಧ್ಯಯನ ನಡೆಸುತ್ತಿದ್ದ ಬುಡಕಟ್ಟು ಜನರ ಜನಪದ ಶಿಲ್ಪಕಲೆಯಲ್ಲಿ ಅಧ್ಯಯನ ವರದಿಯಲ್ಲಿ ಒಂದು ವಿಶೇಷ ಮಾಹಿತಿಯುಳ್ಳ ಕಲಾಕೃತಿಯಾಗಿ ಸೇರಿಸಿಕೊಂಡಿದ್ದೇನೆ. ಮುಂದೆ ಇದರ ಸಂಪೂರ್ಣ ವಿವರಗಳನ್ನು ನಿಮ್ಮ ಮುಂದೆ ತೆರೆದಿಡುವ ಪ್ರಯತ್ನ ಮಾಡಿದ್ದೇನೆ.

ದಕ್ಷಿಣ ಭಾರತದಲ್ಲಿರುವವರು ದ್ರಾವಿಡರು, ಆರ್ಯರು ಎಲ್ಲಿಂದಲೋ ಬಂದವರು ಎಂಬ ವಾದಗಳನ್ನು ಕೇಳುತ್ತಲೇ ಬಂದ ನನಗೆ ಮನುಷ್ಯನ ವಿಕಾಸ, ಅವನ ಮೂಲದ ಬಗ್ಗೆ ಕುತೂಹಲ. ಇತ್ತೀಚೆಗೆ ಕತಾರ್‌ನಲ್ಲಿ ನಡೆದ ಸಂಶೋಧನೆಯೊಂದರ ಪ್ರಕಾರ ಅರಬ್ಬರ ಮೂಲವೂ ಆಫ್ರಿಕಾ ಎಂಬ ಸುದ್ಧಿ ಓದಿದೆ.

ನನಗೆ ಥಟ್ಟನೆ ನೆನಪಾಗಿದ್ದು ಮದುರೈನಿಂದ ಮೂವತ್ತು ಕಿ.ಮೀ. ದೂರದಲ್ಲಿರುವ ಜೋತಿರ್ ಮಾಣಿಕಮ್ ಗ್ರಾಮ. ಜೆರೆಮಿ ಜೆಫ್ ನಿರ್ದೇಶನದಲ್ಲಿ ಸಿದ್ಧವಾಗಿದ್ದ ಬಿಬಿಸಿಯ 'ದಿ ಸ್ಟೋರಿ ಆಫ್ ಇಂಡಿಯಾ'ದಲ್ಲಿ ದಿನ ಬಿಡುವು ಮಾಡಿಕೊಂಡು ಮದುರೈ ಬಸ್ ಹತ್ತಿಯೇ ಬಿಟ್ಟೆ.

ಜೋಥಿರ್‌ಮಾಣಿಕಮ್ ಪುಟ್ಟ ಊರು ಸುಮಾರು ನೂರೈವತ್ತು ಕುಟುಂಬಗಳಿರಬಹುದು. ನ್ಯಾಷನಲ್ ಜಿಯೋಗ್ರಫಿಯಲ್ಲಿ ಬಿಬಿಸಿಯ ಡಾಕ್ಯುಮೆಂಟ್ರಿಯಲ್ಲಿ ಗ್ರಾಮದ ಬಗ್ಗೆ ಸ್ವಲ್ಪ ಮಾಹಿತಿ ಸಿಕ್ಕಿತ್ತಾದರೂ ಅಲ್ಲಿಗೆ ತಲುಪುವ ದಾರಿ ತಿಳಿದಿರಲಿಲ್ಲ. ಗೂಗಲ್‌ನಲ್ಲಿ ಹೆಚ್ಚೇನು ಮಾಹಿತಿ ಸಿಕ್ಕಿರಲಿಲ್ಲ. ನನಗೆ ಇದ್ದ ಒಮ್ಮೇ ಒಂದು ಅವಕಾಶ ಈ ವಿಷಯವಾಗಿ ಅಧ್ಯಯನ ನಡೆಸಿದ ತಂಡದಲ್ಲಿದ್ದ ಕಾಮರಾಜ್ ವಿವಿಯ ಪ್ರೊಫೆಸರ್ ಬಾಲಕೃಷ್ಣನ್. ಪ್ರಕೃತಿಯ ಮಡಿಲಲ್ಲಿರುವ ಈ ವಿವಿಯ ಅಧ್ಯಯನವೇ ಜೋಥಿರ್ ಮಾಣಿಕಮ್ ಗ್ರಾಮವನ್ನು ವಿಶ್ವಭೂಪಟದಲ್ಲಿ ದಾಖಲಾಗುವಂತೆ ಮಾಡಿದ್ದು. ಮನುಷ್ಯ ಮೊತ್ತ ಮೊದಲ ಬಾರಿಗೆ ಮಹಾ ವಲಸೆಯನ್ನು ಕೈಗೊಂಡು ಅವನ ಹೆಜ್ಜೆಗಳು ಭಾರತವನ್ನು ಹಾದು ಹೋದವು ಎಂದು ಹೇಳುವುದಕ್ಕೆ ಸಿಕ್ಕುವ ಕುರುಹು ಇರುವುದು ಜೋಥಿರ್ ಮಾಣಿಕಮ್‌ನಲ್ಲಿಯೇ!

ಪ್ರೊಫೆಸರ್ ಕೆ. ಬಾಲಕೃಷ್ಣನ್ ಅವರ ಭೇಟಿಯಿಂದ ಸಿಕ್ಕ ವಿವರಗಳನ್ನು ಅನುಸರಿಸಿ ಗ್ರಾಮವನ್ನು ಹುಡುಕುತ್ತಾ ಹೊರಟೆ. ರಾಷ್ಟ್ರೀಯ ಹೆದ್ದಾರಿ 85ರಲ್ಲೇ ಹೋಗಿ, ಉಸಿಲಂಪಟ್ಟಿಯಿಂದ ಬಲಕ್ಕೆ ತಿರುಗಬೇಕು ಎಂದು ಬಾಲಕೃಷ್ಣನ್ ಹೇಳಿದ್ದರು. ಅದೇ ದಾರಿಯನ್ನು ಹುಡುಕಿ ಹೆದ್ದಾರಿಯಿಂದ ಬಲ ತಿರುವು ತೆಗೆದುಕೊಳ್ಳುವಲ್ಲಿ ರಸ್ತೆ ಬದಿಯ ವ್ಯಕ್ತಿಗೆ ಜೋಥಿರ್‌ಮಾಣಿಕಮ್ ಊರು ಎಲ್ಲಿದೆ ಎಂದು ಕೇಳಿದರೆ, ಆತನಿಗೆ ಊರ ಹೆಸರೇ ತಿಳಿದಿರಲಿಲ್ಲ! ಆತನೇಕೆ? ಅಲ್ಲಿ ಸುತ್ತ ಮುತ್ತಲಿನ ಜನರಿಗೂ ಗ್ರಾಮದ ಬಗ್ಗೆ ತಿಳಿದಿರಲಿಲ್ಲ. ಆದರೆ ಗೂಗಲ್‌ನಲ್ಲಿ ಹುಡುಕಿದಾಗ ಜೋಥಿರ್‌ಮಾಣಿಕಮ್ ಊರನ್ನು ತೋರಿಸುತ್ತದೆ! ಅದೇ ಗೂಗಲ್ ನೆರವಿನಿಂದ ನಾವು ಗ್ರಾಮವನ್ನು ಪ್ರವೇಶಿಸಿದೆವು. ಹೆಚ್ಚೇನೂ ಜನಸಂಖ್ಯೆ ಇಲ್ಲದ, ಹೆಚ್ಚು ಮನೆಗಳೂ ಇಲ್ಲದ ಗ್ರಾಮವದು. ಕುರಿಗಳ ಹಿಂಡನ್ನು ಮೇಯಿಸುತ್ತಿದ್ದ ವ್ಯಕ್ತಿ ಅದೇ ಜೋಥಿರ್‌ಮಾಣಿಕಮ್ ಎಂದು ಖಚಿತಪಡಿಸಿದ. ವೀರುಮಾಂಡಿ ಮನೆ ಎಲ್ಲಿದೆ ಎಂದು ಕೇಳಿದ ತಕ್ಷಣ ಬಸ್ಸು ನಿಲ್ದಾಣದ ಕಟ್ಟೆ ಮೇಲೆ ಕುಳಿತಿದ್ದ ವ್ಯಕ್ತಿಯು ಮನೆಯ ದಾರಿ ತೋರಿಸಿದ ವ್ಯಕ್ತಿಗೆ ಹೀಗೆ ಅಪರಿಚಿತರು ವೀರುಮಾಂಡಿಯನ್ನು ಹುಡುಕಿ ಬರುವುದು ಸಾಮಾನ್ಯ ವಿಷಯವಾಗಿತ್ತು. ಕಳೆದೊಂದು ದಶಕದಲ್ಲಿ ನಡೆದಿರುವ ಮಾನವಶಾಸ್ತ್ರ (ಆಂಥ್ರಪಾಲಜಿ) ಅಧ್ಯಯನದಲ್ಲಿ ಈ ಗ್ರಾಮದ ವ್ಯಕ್ತಿ ವೀರುಮಾಂಡಿ ಅತೀ ಮುಖ್ಯ ಕೊಂಡಿಯಾಗಿರುವುದೇ ಇದಕ್ಕೆ ಕಾರಣ. ಆತ ಭಾರತಕ್ಕೆ ವಲಸೆ ಬಂದ ಮೊದಲ ಮಾನವನ ವಂಶದ ಕುಡಿ. ಈ ಸತ್ಯದ ಬಹಿರಂಗವೇ ಆತನಿಗೆ ವಿಶ್ವಪ್ರಸಿದ್ಧಿಯನ್ನು ಕೊಟ್ಟಿದೆ ಮತ್ತು ವೈಜ್ಞಾನಿಕ ಅಧ್ಯಯನಗಳ ವಸ್ತುವಿಷಯವನಾಗಿಸಿದೆ.

ಕಾಮರಾಜ್ ವಿವಿಯಲ್ಲಿ ಜೀವಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ರಾಮಸ್ವಾಮಿ ಪಿಚ್ಚಪ್ಪನ್ ಮತ್ತು ಅವರ ಜೊತೆಗಾರರು ನಡೆಸಿರುವ ಜೀವವಿಜ್ಞಾನ ಮಾನವಶಾಸ್ತ್ರ ಅಧ್ಯಯನದ ವಸ್ತುವೂ ಈ ವೀರುಮಾಂಡಿ.

ಈ ವೀರುಮಾಂಡಿಯಲ್ಲಿರುವ ಜೆನೆಟಿಕ್ ಮಾರ್ಕರ್ ಎಂ130 ಮಾನವ ವಿಕಾಸ ಅಪೂರ್ವ ಅಧ್ಯಾಯವನ್ನು ಬಿಚ್ಚಿಡುತ್ತದೆ. ಮಧ್ಯ ಆಫ್ರಿಕಾದಿಂದ ಭಾರತಕ್ಕೆ ವಲಸೆ ಬಂದಿರುವ ಮೊದಲ ಮಾನವರು ಎಂ130 ಎಂದು ಕರೆಯಲಾಗಿರುವ ವೈ ಕ್ರೊಮೋಸೋಮ್ ಜೀನ್ (ವಂಶವಾಹಿ) ಹೊಂದಿದ್ದರು. ಈ ಜೀನ್ ಈಗಲೂ ತಮಿಳು ನಾಡಿನ ಮಧುರೈನ ಜೋಥಿರ್‌ಮಾಣಿಕಮ್ ಗ್ರಾಮದ ಜನರಲ್ಲಿ ಜೀವಂತವಾಗಿದೆ. ಆಫ್ರಿಕಾದಿಂದ ಹೊರಗೆ ಹೋದ ಮೊದಲ ಮಾನವರ ವಿವರವನ್ನು ಮತ್ತು ಹೇಗೆ ತಮಿಳಕಂ ಅಥವಾ ತಮಿಳು ಪ್ರಾಂತವು ಜಾಗತಿಕವಾಗಿ ಮಾನವರ ಪ್ರಸರಣಕ್ಕೆ ಮೂಲವಾಯಿತು ಎನ್ನುವುದನ್ನೂ ಎಂ 130 ವಿವರಿಸಿದೆ! ಈ ಎಂ130 ಜೆನೆಟಿಕ್ ಮಾರ್ಕರ್ ಹೊತ್ತು ತಿರುಗುತ್ತಿರುವ ವೀರುಮಾಂಡಿ ವಿಶ್ವದಾದ್ಯಂತ ಮಾನವಶಾಸ್ತ್ರ ಅಧ್ಯಯನಕಾರರು, ಪುರಾತತ್ವಜ್ಞರಿಗೆ ಬೇಕಾದ ವ್ಯಕ್ತಿಯಾಗಿದ್ದಾನೆ.

ಆಫ್ರಿಕಾದಿಂದ ಆಸ್ಟ್ರೇಲಿಯಾಗೆ ಹೋಗಬೇಕಾದ ಮುಲ ವಲಸಿಗರು ಕರಾವಳಿ ತೀರದ ಮೂಲಕ ಪ್ರಯಾಣ ಬೆಳೆಸುತ್ತಾ ಭಾರತಕ್ಕೆ ಬರುತ್ತಾರೆ. ಅದನ್ನು ಗುರುತಿಸಲು ಸಾಧ್ಯವಾಗಿದ್ದು ವೀರುಮಾಂಡಿ ಅವರ

ವೈ ಕ್ರೊಮೋಸೋಮ್‌ನಲ್ಲಿರುವ ಜೆನೆಟಿಕ್ ಮಾರ್ಕರ್ ಅಥವಾ ವಂಶವಾಹಿಯ ಗುರುತು ಎಂ 130ನಿಂದ. ರಕ್ತದಾನ ಮಾಡುವ ಅಭ್ಯಾಸವಿರುವ ವೀರುಮಾಂಡಿ ಯಾವುದೋ ಸಂಶೋಧನೆಗಾಗಿ ರಕ್ತದ ಮಾದರಿಗಳನ್ನು ಸಂಗ್ರಹಿಸುತ್ತಿದ್ದಾರೆ ಎನ್ನುವುದು ತಿಳಿದು ಸ್ವತಃ ಮುಂದೆ ಬಂದು ರಕ್ತ ನೀಡಿದ್ದರು. ಅವರ ಈ ಉದಾರ ಗುಣ ಅಳಿಸಿಹೋಗಿದ್ದ ಒಂದು ಪುರಾತನ ವಲಸೆ ಹಾದಿಯನ್ನು ಪತ್ತೆ ಮಾಡಲು ಸಾಧ್ಯವಾಗಿ ಮಾನವಶಾಸ್ತ್ರ ಅಧ್ಯಯನಕ್ಕೆ ಹೊಸ ದಿಕ್ಕನ್ನು ಕೊಟ್ಟಿತು. 60000 ವರ್ಷಗಳ ಹಿಂದೆ ಆಫ್ರಿಕಾದಿಂದ ಹೊರಟ ಆದಿಮಾನವರಲ್ಲಿದ್ದ ಈ ಜೆನೆಟಿಕ್ ಅಂಶ ವೀರುಮಾಂಡಿಯಲ್ಲಿ ಪತ್ತೆಯಾಗಿದ್ದು ಮಾನವ ಶಾಸ್ತ್ರಜ್ಞರಿಗೆ ಮೈನವಿರೇಳಿಸುವ ರೋಮಾಂಚನ ಉಂಟು ಮಾಡಿದ್ದು ಸುಳ್ಳಲ್ಲ. ಮಾನವ ವಿಕಾಸದ ಹಾದಿಯಲ್ಲಿ ಘಟಿಸಿದ ಬಹುದೊಡ್ಡ ವಲಸೆಯ ನಕ್ಷೆಯನ್ನು ಗುರುತಿಸಲು ಸಾಧ್ಯವಾಗಿದ್ದಷ್ಟೇ ಅಲ್ಲ ಇಂದಿನ ಮನುಷ್ಯನ ವಿಕಾಸದ ಹೆಜ್ಜೆಯ ಜಾಡು ಸಿಕ್ಕಿತು. ಆಫ್ರಿಕಾದಿಂದ ಹೊರಟ ವಲಸಿಗರಿಗೆ ಆಸ್ಟ್ರೇಲಿಯಾ ತಲುಪುವುದಕ್ಕೂ ಮುನ್ನ ಭಾರತ ಒಂದು ನಿಲ್ದಾಣವಾಗಿತ್ತು ಎನ್ನುವ ಸತ್ಯ ಬೆಳಕಿಗೆ ಬಂತು.

ರಾಮಸ್ವಾಮಿ ಪಿಚ್ಚಪ್ಪನ್ ಅಧ್ಯಯನದ ಬಳಿಕ ಮಾನವ ಜಿನೋಮ್‌ನ ಮೊದಲ ಕರಡನ್ನು ಬಿಡುಗಡೆ ಮಾಡಿದ ಸ್ವಲ್ಪ ದಿನಗಳಲ್ಲೇ ಅಂದರೆ 2002ರಲ್ಲಿ ಸ್ಪೆನ್ಸರ್ ವೆಲ್ಸ್ ವೀರುಮಾಂಡಿಯನ್ನು ಭೇಟಿಯಾಗಿದ್ದರು. ಅದಾದ ಬಳಿಕ ಮುಂದಿನ ತಲೆಮಾರಿನ ಪಾಳಿ ಸಿದ್ಧಪಡಿಸುವುದು (ಸೀಕ್ವೆನ್ಸಿಂಗ್) ಮತ್ತು ಇಡೀ ಜಿನೋಮ್ ವ್ಯಾಪ್ತಿಯ ಅಧ್ಯಯನವು, ಭಾರತೀಯ ಇತಿಹಾಸದ ಸಾಂಸ್ಕೃತಿಕ ಮತ್ತು ಭಾಷಾ ವೈವಿಧ್ಯತೆಯ ಮೂಲ ಬೇರಿನ ಕುರುಹುಗಳನ್ನು ಮುಂದಿಟ್ಟಿತು. ಇದರ ವ್ಯಾಪ್ತಿ ಮತ್ತು ಭಾರತದ ಕೊಂಡಿಯ ಬಗ್ಗೆ ಇನ್ನೂ ಸಾಕಷ್ಟು ಅಧ್ಯಯನ ಆಗಬೇಕಿದ್ದರೂ ಒಂದು ಮಹಾವಲಸೆಯ ಹಾದಿ ಸ್ಪಷ್ಟವಾಗಿ ವಿಶ್ವಭೂಪಟದಲ್ಲಿ ಗೋಚರವಾಯಿತು. ಎಲ್ಲಿಂದ ಬಂದವರು?: ವಂಶವಾಹಿನಿಯ ಅಧ್ಯಯನದಲ್ಲಿ ಕಂಡುಕೊಂಡ ಒಂದು ಸತ್ಯವೆಂದರೆ ಜಗತ್ತಿನಲ್ಲಿ ಈಗಿರುವ ಮಾನವರು ಆಫ್ರಿಕಾದಲ್ಲಿ 60,000 ವರ್ಷಗಳ ಹಿಂದೆ ಜೀವಂತವಾಗಿದ್ದ ಒಬ್ಬನೇ ವ್ಯಕ್ತಿಯ ತಲೆಮಾರು! ಕೇಳಲು ವಿಚಿತ್ರವೆನಿಸುತ್ತಿದೆಯೇ? ಎಷ್ಟೊಂದು ಧರ್ಮಗಳು, ಎಷ್ಟೊಂದು ಭಾಷೆಗಳು, ಎಷ್ಟೊಂದು ವಿದಧ ರಕ್ತದ ಗುಂಪುಗಳು ಆದರೆ ನಮ್ಮೆಲ್ಲರ ಮುತ್ತಜ್ಜ ಒಬ್ಬನೇ!

ತಮಿಳುನಾಡಿನ ಜನರಿಗೂ ಮತ್ತು ಆಸ್ಟ್ರೇಲಿಯದ ಜನರಿಗೂ ಒಬ್ಬನೇ ಪೂರ್ವಜ. ಹಾಗೆಂದು ಆತನೇ ಈಗಿನ ಎಲ್ಲಾ ಆಧುನಿಕ ಮಾನವರ ಪೂರ್ವಜ ಎಂದು ಹೇಳಲು ಸಾಧ್ಯವಿಲ್ಲ. ವಲಸೆಯ ಪರಿಣಾಮ ಆತನ ವೈ ಕ್ರೊಮೋಸೋಮ್ ಹೆಚ್ಚು ವೇಗವಾಗಿ ಹರಡಿದೆ ಮತ್ತು ತನ್ನ ಸಮಕಾಲೀನರಿಗಿಂತ ಹೆಚ್ಚು ದೃಢವಾಗಿ ಅಸ್ತಿತ್ವ ಉಳಿಸಿಕೊಂಡಿದೆ. ಆತನ ಸ್ಪರ್ಧಿಗಳೂ ಇನ್ನೂ ಹಲವು ಸಮಕಾಲೀನ ವಂಶವಾಹಿನಿಗಳನ್ನು ಈಗ ನೆಲೆಸಿರುವ ಜನರಿಗೆ ವರ್ಗಾಯಿಸಿರಬಹುದು. ಆದರೆ ಈಗಿನ ವೈ ಕ್ರೊಮೋಸೋಮ್ ಅಧ್ಯಯನ ನಮಗೆ ತಿಳಿಸುವ ಒಂದೇ ರಹಸ್ಯವೆಂದರೆ ನಮ್ಮ ಪೂರ್ವಜರು ಯಾವಾಗ ಮತ್ತು ಯಾವ ಹಾದಿಯಲ್ಲಿ ಆಫ್ರಿಕಾದಿಂದ ಮಹಾವಲಸೆ ಆರಂಭಿಸಿದ್ದರು ಎನ್ನುವುದು.

ವಂಶವಾಹಿ ತಜ್ಞ ಸ್ಪೆನ್ಸರ್‌ವೆಲ್ಸ್ ಅವರು ವೀರುಮಾಂಡಿ ಜೊನೋಮ್ ಸೇರಿದಂತೆ ಹಲವು ಜಿನೋಮ್‌ಗಳನ್ನು ಅಧ್ಯಯನ ಮಾಡಿ ಬರೆದ 'ಜರ್ನಿ ಆಫ್ ಎ ಮ್ಯಾನ್' ಪುಸ್ತಕದಲ್ಲಿ ಸ್ಪಷ್ಟವಾದ ಸಾಕ್ಷ್ಯಗಳ ಜೊತೆಗೆ ಆಫ್ರಿಕಾದಿಂದ ಮಾನವರು ಜಾಗತಿಕವಾಗಿ ಹರಡಿದ ಮಹಾವಲಸೆ ಹಾದಿಯ ಬಗ್ಗೆ ಬರೆದಿದ್ದಾರೆ. ಎಲ್ಲಾ ಪ್ರಾಂತದ ಜನರ ಡಿಎನ್‌ಎಯನ್ನೂ ಸ್ಪೆನ್ಸರ್‌ವೆಲ್ಸ್ ಅಧ್ಯಯನ ಮಾಡಿ ಖಚಿತವಾದ ವಲಸೆ ಹಾದಿಯನ್ನು ಗುರುತಿಸಿದ್ದಾರೆ. ಬಹಳಷ್ಟು ಪುರಾತತಜ್ಞರ ಪ್ರಕಾರ ವಲಸೆ 1 ಲಕ್ಷ ವರ್ಷಗಳ ಹಿಂದೆಯೇ ಶುರುವಾಗಿತ್ತು. ಆದರೆ ಸ್ಪೆನ್ಸರ್ ಅಧ್ಯಯನ ಆ ಅವಧಿಯನ್ನು 40,000 ವರ್ಷ ಕಡಿಮೆ ಅಂದಾಜಿಸಿದೆ. ಇದೇ ಕಾರಣದಿಂದ ಈ ಅಧ್ಯಯನವು ಸ್ವಲ್ಪ ವಿವಾದಾತ್ಮಕವಗಿಯೇ ಇದೆ. ಅಲ್ಲದೆ ಕಳೆದ ದಶಕದಲ್ಲಿ ಮೊದಲ ಮಾನವ ಆಫ್ರಿಕಾದಲ್ಲಿಯೇ ಇದ್ದದ್ದು ನಿಜವೇ ಮತ್ತು ಆತ ಅಲ್ಲಿಂದ ಹೊರಗೆ ವಲಸೆ ಹೇಗೆ ಹೋಗಿದ್ದ ಎನ್ನುವ ಬಗ್ಗೆ ಸಾಕಷ್ಟು ಚರ್ಚೆಗಳೂ ಆಗಿವೆ. ಆದರೆ ತಂತ್ರಜ್ಞಾನ ಹೊಸ ರೀತಿಯಲ್ಲಿ ಈ ವಲಸೆ ಹಾದಿಯನ್ನು ಬಿಚ್ಚಿಟ್ಟದ್ದು ಈ ದಶಕದ ಅತೀ ದೊಡ್ಡ ಮಾನವಶಾಸ್ತ್ರ ಕ್ಷೇತ್ರದ ಸಾಧಎ. ಆಧುನಿಕ ಮಾನವರು ಆಫ್ರಿಕಾ, ಯುರೋಪ್ ಮತ್ತು ಏಷ್ಯಾದಲ್ಲಿ ಏಕಕಾಲದಲ್ಲಿ ಬೆಳೆದಿದ್ದಾರೆ ಎನ್ನುವ ವಾದವನ್ನೂ ಸ್ಪೆನ್ಸರ್ ತಮ್ಮ ಅಧ್ಯಯನದಿಂದ ಸುಳ್ಳೆಂದು ತೋರಿಸಿದ್ದಾರೆ. ಸ್ಪೆನ್ಸರ್ ಅವರ ಆಫ್ರಿಕಾ ಮಾಡೆಲ್ ಅಧ್ಯಯನ ಪ್ರಕಾರ ಎಲ್ಲಾ ಮಾನವರೂ ಆಫ್ರಿಕಾದಿಂದಲೇ ಇತರ ಭಾಗಗಳಿಗೆ ವಲಸೆ ಹೋಗಿರುವುದು.

ಆಫ್ರಿಕಾದ ಜನಸಂಖ್ಯೆಯಲ್ಲಿ ಅತೀ ಪುರಾತನ ವಂಶವಾಹಿನಿ ಕೋಡ್‌ಗಳಿವೆ. ವ್ಯಾಪಕ ವಂಶವಾಹಿನಿ ಭಿನ್ನತೆಯೂ ಇದೆ. ಹೀಗಾಗಿ ಮಾನವ ಪ್ರಭೇಧವು ಇಲ್ಲಿ 1,50,000 ವರ್ಷಗಳ ಹಿಂದೆಯೇ ಬೆಳೆದಿರುವ ಸಾಧ್ಯತೆಯನ್ನು ಕಂಡುಕೊಳ್ಳಲಾಗಿದೆ. ಡಿಎನ್‌ಎ ಅಧ್ಯಯನಗಳ ಬಳಿಕ ತಿಳಿದಿರುವುದು ಆಧುನಿಕ ಮಾನವನ ಮೂಲ ಪ್ರಭೇದ ಹೋಮೋ ಎರಕ್ಟಸ್ ಆಫ್ರಿಕಾದಲ್ಲಿ ಹುಟ್ಟಿ ನಿಧಾನವಾಗಿ ಯುರೋಪ್ ಮತ್ತು ಏಷ್ಯಾದ ಕಡೆಗೆ ಹಬ್ಬಿದೆ ಎನ್ನುವ ಸತ್ಯ. ಜನಸಂಖ್ಯೆ ಏರಿರುವುದು, ಆಹಾರದ ಕೊರತೆ, ಗುಂಪು ಘರ್ಷಣೆಗಳು ಭಾಗಶಃ ಮಹಾವಲಸೆಗೆ ಕಾರಣವಾಗಿರಬಹುದು ಎಂದು ಊಹಿಸಲಾಗಿದೆ.

ಮಹಾ ಹೆಜ್ಜೆಗಳು:

ವೈ ಕ್ರೊಮೊಸೋಮ್ ಅಧ್ಯಯನವು ಹೇಳಿರುವ ಪ್ರಕಾರ ಮಹಾವಲಸೆ ಆರಂಭವಾಗಿರುವುದು 60,000 ದಿಂದ 50,000 ವರ್ಷಗಳ ಹಿಂದೆ. ಆರಂಭದಲ್ಲಿ ಪ್ರಯಾಣ ಮಾಡಿದವರು ದಕ್ಷಿಣದ ಏಷ್ಯಾ ಮೂಲದ ಕರಾವಳಿ ತೀರ ಬಳಸಿಕೊಂಡು 250 ಕಿ.ಮೀ.ಗಳಷ್ಟು ದೂರ ಕ್ರಮಿಸಿ 50,000 ವರ್ಷಗಳ ಹಿಂದೆ ಆಸ್ಟ್ರೇಲಿಯದ ಭೂ ಪ್ರಾಂತದಲ್ಲಿ ನೆಲೆಸಿದ್ದಾರೆ. ಆಸ್ಟ್ರೇಲಿಯದ ಮೂಲ ನಿವಾಸಿಗಳು ಆಫ್ರಿಕಾದಿಂದ ಬಂದ ಮೊದಲ ಹಂತದ ವಲಸಿಗರು. ನಂತರ ಎರಡನೇ ಮಹಾವಲಸೆ ಆಫ್ರಿಕಾದಿಂದ 45,000 ವರ್ಷಗಳ ನಂತರ ಕಂಡುಬಂತು. ಅವರು ನಿಧಾನವಾಗಿ ಮಧ್ಯ ಪ್ರಾಚ್ಯದಲ್ಲಿ ನೆಲೆಸಿದರು. ಅವರ ಸಣ್ಣ ಗುಂಪುಗಳು ಭಾರತ ಮತ್ತು ಚೀನಾ ಕಡೆಗೂ ಪಯಣ ಬೆಳೆಸಿದೆ. ಆಫ್ರಿಕಾದ ಬಿಸಿಲಿನ ಪ್ರದೇಶಕ್ಕೆ ವಿರುದ್ಧವಾಗಿರುವ ಚಳಿ

ಪ್ರದೇಶಗಳಿಗೆ ತೆರಳುತ್ತಲೇ ಮುಂದಿನ ತಲೆಮಾರು ಬಣ್ಣಗಳಲ್ಲಿ ತಿಳಿಯಾಗುತ್ತಾ ಬಂದಂತೆ ಮಾನವರು ಮಧ್ಯ ಏಷ್ಯಾ ಕಡೆಗೂ ಪ್ರಯಾನ ಬೆಳೆಸಿದರು. ಹೀಗಾಗಿ ಆಫ್ರಿಕಾ ಮಾನವಕುಲದ ತೊಟ್ಟಿಲಾಗಿದರೆ, ಮಧ್ಯ ಏಷ್ಯಾ ವರು ಬೆಳೆದ ಪರಿಸರ. 35,000 ವರ್ಷಗಳ ಹಿಂದೆ ಸಣ್ಣ ಗುಂಪುಗಳು ಮಧ್ಯ ಏಷ್ಯಾವನ್ನು ತೊರೆದು ಯೂರೋಪ್ ಕಡೆಗೆ ತೆರಳಿತು. ಶೀತಲ ಪ್ರದೇಶ ಅವರು ಅಲ್ಲೇ ನೆಲೆಸುವಂತೆ ಮಾಡಿತು. ಹೀಗಾಗಿ ಇತರ ಗುಂಪುಗಳಿಂದ ಪ್ರತ್ಯೇಕವಾಗಿ ಇವರು ಇನ್ನಷ್ಟು ತಿಳಿಯಾದ ಮೈಬಣ್ಣ ಹೊಂದಿದರು ಮತ್ತು ಆಫ್ರಿಕಾದ ಪೂರ್ವಜರಿಗಿಂತ ಸಣ್ಣ ಗಾತ್ರವನ್ನೂ ಪಡೆದರು. ಅಲ್ಲಿಂದ 20,000 ವರ್ಷಗಳ ಹಿಂದೆ ಮತ್ತೊಂದು ಗುಂಪು ಮಧ್ಯ ಏಷ್ಯಾದಿಂದ ಸೈಬೀರಿಯ ಮತ್ತು ಅರ್ಕಿಟಿಕ್ ಸರ್ಕಲ್‌ಗಳ ಕಡೆಗೆ ತೆರಳಿತು. ತಾವು ನೆಲೆಸಿದ್ದ ಪ್ರಾಂತದ ವಾತಾವರಣವನ್ನು ತಡೆದುಕೊಳ್ಳುವ ನಿಟ್ಟಿನಲ್ಲಿಯೇ ಅವರ ದೇಹದಲ್ಲಿ ಹಲವು ಬದಲಾವಣೆಗಳೂ ಆದವು. ಅಂತಿಮವಾಗಿ 15,000 ವರ್ಷಗಳ ಹಿಂದೆ ಮತ್ತೊಂದು ಐಸ್ ಏಜ್ ಕರಗಿ ಹೋದ ಮೇಲೆ ಇನ್ನೊಂದು ಗುಂಪು ಉತ್ತರ ಅಮೆರಿಕದ ಕಡೆಗೆ ತೆರಳಿತು. ಆರಂಭದ ಗುಂಪುಗಳಲ್ಲಿ 2–3 ಮಂದಿ ಅಥವಾ 10–20 ಮಂದಿಗಳೇ ಪ್ರಯಾಣ ಬೆಳೆಸಿರಬಹುದು. ನಂತರ ಪ್ರತ್ಯೇಕವಾಗಿ ನೆಲೆಸಿದ ಪ್ರಾಂತ್ಯಕ್ಕೆ ತಕ್ಕಂತೆ ಅವರ ದೈಹಿಕ ಚಕರೆಗಳೂ ಪ್ರತ್ಯೇಕವಾಗಿ ರೂಪುಗೊಂಡವು. ಆದರೆ ಬಹಳಷ್ಟು ಪುರಾತತ್ವ ತಜ್ಞರು ಮಾನವಶಾಸ್ತ್ರ ಅಧ್ಯಯನಕ್ಕೆ ಭಿನ್ನವಾದ ಸಾಕ್ಷ್ಯಗಳನ್ನೂ ಇಡುತ್ತಾರೆ. ಭಾರತ, ಆಸ್ಟ್ರೇಲಿಯ, ಚೀನಾ ಮತ್ತು ಮಧ್ಯಪ್ರಾಚ್ಯಗಳು ಬಹಳ ಹಿಂದೆಯೇ ಜನರ ಇರವನ್ನು ಹೊಂದಿತ್ತು ಎಂದು ಹೇಳುತ್ತಾರೆ. ಅಲ್ಲದೆ ಫಾಸಿಲ್ (ಅವಶೇಷ) ದಾಖಲೆಗಳ ವಿವರಗಳಿಗೆ ಹೋಲಿಸಿದರೆ ವೈ ಕ್ರೊಮೋಸೋಮ್ ಅಧ್ಯಯನ ನಿರಂತರವಾಗಿ ಮಹಾವಲಸೆಯ ಅವಧಿಯನ್ನು ಕಡಿಮೆ ಅಂದಾಜಿಸುತ್ತಲೇ ಬಂದಿದೆ.

ವೈ ಕ್ರೊಮೋಸೋಮ್ :

ವೈ ಕ್ರೊಮೋಸೋಮ್‌ನಲ್ಲಿರುವ ಡಿಎನ್‌ಎ ಆಧರಿಸಿ ನಡೆಸುವ ಅಧ್ಯಯನ. ಆನಸಂಖ್ಯೆ ಆಧ್ಯಯನಗಳಲ್ಲಿ ಇತ್ತೀಚೆಗೆ ವೈ ಕ್ರೊಮೋಸೋಮ್ ಮುಖ್ಯಪಾತ್ರವಹಿಸುತ್ತಿದೆ. ಏಕೆಂದರೆ ವೈ ಕ್ರೊಮೋಸೋಮ್ ಜಿನೋಮ್‌ನ ಇತರ ಭಾಗಗಳಂತೆ ಮರಳಿ ರೂಪುಗೊಳ್ಳುವುದಿಲ್ಲ. ವೈ ಕ್ರೊಮೋಸೋಂ ತಂದೆಯಿಂದ ಮಗನಿಗೆ ಒಂದು ಡಿಎನ್‌ಎ ರೂಪವನ್ನು ವರ್ಗಾಯಿಸುತ್ತದೆ. ಮೂಲತಃ ಇದು ತಲೆಮಾರಿನಿಂದ ತಲೆಮಾರಿಗೆ ಬದಲಾಗದೆ ನಡೆಯುವ ವರ್ಗಾವಣೆ. ಅಲ್ಲಲ್ಲಿ ಕೆಲವು ಬದಲಾವಣೆಗಳು ಆದರೂ ಜೆನೆಟಿಕ್ ಮಾರ್ಕರ್‌ಗಳಿಗೆ (ವಂಶವಾಹಿನಿ ಗುರುತು) ಇದರಿಂದ ಹಾನಿಯಾಗುವುದಿಲ್ಲ.

ಒಮ್ಮೆ ಈ ಮಾರ್ಕರನ್ನು ಗುರುತಿಸಿದಲ್ಲಿ ವಂಶವಾಹಿನಿಗಳ ಇತಿಹಾಸಕ್ಕೆ ಹೋಗಿ ಅವುಗಳ ಹುಟ್ಟಿನ ಅವಧಿಯನ್ನು ಗುರುತಿಸಬಹುದು. ಅಂದರೆ ಅವರ ಇತ್ತೀಚೆಗಿನ ಸಮಾನ ಪೂರ್ವಜ ಯಾರು ಎನ್ನುವುದನ್ನು ತಿಳಿದುಕೊಳ್ಳಬಹುದು. ಇಂತಹ ಮಾರ್ಕರ್‌ಗಳು ಹಲವು ಇವೆ. ಒಂದು ಮಾರ್ಕರ್ ಸಿಕ್ಕ ಕೂಡಲೇ ಅದರ ಹಿನ್ನೆಲೆಯನ್ನು ಜೋಡಿಸಿ ಪೂರ್ವಜರು ಎಷ್ಟು ಹಿಂದೆ ನೆಲೆಸಿದ್ದರು ಮತ್ತು ಎಲ್ಲಿ ನೆಲೆಸಿದ್ದರು ಎಂದು

ಹೇಳಬಹುದು. ವೀರುಮಾಂಡಿಯಲ್ಲಿ ಕಂಡುಬಂದ ಎಂ130 ಮಾರ್ಕರ್ ಹಿನ್ನೆಲೆಯೂ ಹೀಗೆಯೇ ಪತ್ತೆಯಾಗಿರುವುದು ಅದೇ ಭಾರತಕ್ಕೆ ಬಂದ ಮೊದಲ ಮಾನವನ ಮಹಾವಲಸೆಯ ಹಾದಿಯನ್ನು ತೋರಿಸಿದ್ದು.

ವೈ ಕ್ರೊಮೋಸೋಂ ಮಾರ್ಕರ್‌ನಂತೆಯೇ ಮತ್ತೊಂದು ಜೆನೆಟಿಕ್ ಮಾರ್ಕರನ್ನೂ ಮಾನವಶಾಸ್ತ್ರ ಅಧ್ಯಯನಕಾರರು ಗುರುತಿಸಿದ್ದಾರೆ. ಈ ಡಿಎನ್‌ಎಗಳು ಕೂಡ ಬದಲಾವಣೆಯಿಲ್ಲದೆ ತಲೆಮಾರಿಗೆ ತಮ್ಮ ಮಾರ್ಕರನ್ನು ಕಳುಹಿಸುತ್ತವೆ. ಅವುಗಳು ಮೈಟೋಖಾಂಡ್ರಿಯ ಎನ್ನುವ ಕೋಶಗಳಲ್ಲಿ ಕಂಡುಬಂದಿವೆ ಮತ್ತು ತಾಯಿಯಿಂದ ಮಗಳಿಗೆ ವರ್ಗಾವಣೆಯಾಗಿವೆ. ವೈ ಕ್ರೊಮೋಸೋಮ್ ಮೂಲಕ ಗುರುತಿಸಲಾದ ಇತ್ತೀಚೆಗಿನ ಪುರುಷನ ಸಮಾನ ಪೂರ್ವಜ 60,000 ವರ್ಷಗಳ ಹಿಂದೆ ನೆಲೆಸಿದ್ದರು. ಆದರೆ ಮೈಟೋಖಾಂಡ್ರಿಯ ಡಿಎನ್‌ಎ ಮೂಲಕ ಗುರುತಿಸಿದ ಇತ್ತೀಚೆಗಿನ ಸ್ತ್ರೀ ಸಮಾನ ಪೂರ್ವಜ 1,50,000 ವರ್ಷಗಳ ಹಿಂದೆ ನೆಲೆಸಿದ್ದರು.

ಮಹಾವಲಸೆಯ ಕೇಂದ್ರ ತಮಿಳುನಾಡು ಕರಾವಳಿ:

ಮಹಾವಲಸೆಯ ಹಾದಿಯನ್ನು ಹುಡುಕುತ್ತಾ ಭಾರತದ ಕರಾವಳಿ ತೀರವನ್ನು ಪ್ರವೇಶಿಸಿರುವ ಅಧ್ಯಯನಕಾರರು ಮುಖ್ಯವಾಗಿ ತಮಿಳುನಾಡಿನ ಮೇಲೆ ಹೆಚ್ಚು ಗಮನವಿಟ್ಟಿದ್ದಾರೆ. ರಾಮಸ್ವಾಮಿ ಪಿಚ್ಚಪ್ಪನ್ ಮತ್ತು ಸ್ಪೆನ್ಸರ್ ವೆಲ್ಸ್ ಅವರ ಅಧ್ಯಯನಗಳು ಹೇಳಿರುವ ಪ್ರಕಾರ ಆಫ್ರಿಕಾದಿಂದ ನೇರವಾಗಿ ವಲಸೆ ಬಂದಿರುವ ಜನರು ತಮಿಳುನಾಡಿನಲ್ಲಿ ನೆಲೆಸಿದ್ದಾರೆ. ವೀರುಮಾಂಡಿಯಲ್ಲಿ ಪತ್ತೆಯಾಗಿರುವ ಜೆನೆಟಿಕ್ ಮಾರ್ಕರ್ ಎಂ130 ಮೊದಲ ಮಾನವ ಭಾರತದ ಭೂನೆಲವನ್ನು ಕಾಲಿಟ್ಟ ಸಮಯವನ್ನು ಊಹಿಸಿದೆ. ಇದು ಇನ್ನೂ ಹೆಚ್ಚಿನ ಅಧ್ಯಯನಕ್ಕೆ ಪ್ರೇರಣೆಯಾಗುತ್ತಿದೆ.

ಎಂ130 ಮಾತ್ರವಲ್ಲ, ಇನ್ನೂ ಹಲವು ಮಾರ್ಕರ್‌ಗಳ ಅಧ್ಯಯನವು ಭಾರತದ ಕರಾವಳಿ ತೀರದಲ್ಲಿ ನಡೆಯುತ್ತಿದೆ. ಎಂ. 130 ಮಾರ್ಕರ್ 50,000 ವರ್ಷಗಳ ಹಿಂದಿನ ಮಹಾವಲಸೆಯನ್ನು ವಿವರಿಸಿದರೆ, ಎಂ20 ಮಾರ್ಕರ್ 35,000 ವರ್ಷಗಳ ಹಿಂದಿನ ವಲಸೆಯ ಕುರುಹು ಈಗಿನ ತಮಿಳುನಾಡಿನ ಪಿರಮಲೈ ಕಲ್ಲರ್ ಜನಾಂಗದಲ್ಲಿರುವುದನ್ನು ತಿಳಿಸಿದೆ. ಅಲ್ಲದೆ ಗುಜರಾತಿನ ಸೌರಾಷ್ಟ್ರ ಕರಾವಳಿಯ ಯಾದವ ಕುಲದವರಲ್ಲಿಯೂ ಇದೇ ಮಾರ್ಕರ್ ಪತ್ತೆಯಾಗಿದೆ. ಅಲ್ಲದೆ ಎಂ172 ಮಾರ್ಕರ್ ಕೆಲವು ತಮಿಳುನಾಡಿನ ಜನಸಂಖ್ಯೆಯಲ್ಲಿ ಕಂಡುಬಂದಿದೆ. ಇವೇ ಮಾರ್ಕರ್ ಪಾಕಿಸ್ತಾನದ ಬಲೂಚಿಸ್ತಾನದ ಪ್ರಾಂತದಲ್ಲೂ ಕಂಡಿವೆ. ಎಂ17 ಮಾರ್ಕರ್ ಮಧ್ಯ ಏಷ್ಯನ್ನರಲ್ಲಿ ಕಂಡಿದೆ. ಈ ವಂಶವಾಹಿನಿಗಳು ಜನಸಂಖ್ಯೆಗೆ ಹೇಗೆ ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ವಲಸೆ ಹೋಗಿದೆ ಎನ್ನುವುದನ್ನು ಕರಾರುವಕ್ಕಾಗಿ ವಿವರಿಸುತ್ತವೆ. ಸಮಾನ ಪೂರ್ವಜರನ್ನು ಹೊಂದಿದ ಸಮುದಾಯಗಳು ಪ್ರತ್ಯೇಕವಾಗಿ ಸ್ವತಂತ್ರ ಜನಾಂಗಗಳಾಗಿ ನೆಲೆಸಿರುವ

ರಹಸ್ಯವನ್ನು ಬಯಲು ಮಾಡಿರುವ ಈ ಅಧ್ಯಯನವು ಒಂದು ರೀತಿಯಲ್ಲಿ ರಕ್ತ ಸಂಬಂಧವೆನ್ನುವುದು ಧರ್ಮ, ಭಾಷೆ, ಜನಾಂಗ, ಜಾತಿ, ಸಂಸ್ಕೃತಿ ಅಥವಾ ದೇಶಗಳ ಗಡಿಯನ್ನು ಮೀರಿದೆ ಎನ್ನುವುದನ್ನು ತೋರಿಸಿಕೊಟ್ಟಿದೆ. ವೆಲ್ಸ್ ಮತ್ತು ಪಿಚ್ಚಪ್ಪನ್ ಅವರ ಅಧ್ಯಯನ ಮಾತ್ರವಲ್ಲ ಪುರಾತತ್ವ ಇಲಾಖೆಯ ಅಧ್ಯಯನವೂ ಭಾರತೀಯ ಕರಾವಳಿಯತ್ತ ಆಕರ್ಷಣೆ ಹೆಚ್ಚಿಸಿದೆ. ಗ್ರಹಾಂ ಹ್ಯಾಂಕಾಕ್ ಈಗ ಪೂರ್ವ ಕರಾವಳಿಯಲ್ಲಿ ಮುಳುಗಿದ ನಗರದ ಪತ್ತೆಯಲ್ಲಿ ತೊಡಗಿದ್ದಾರೆ. ಚೆನ್ನೈಗೆ 400 ಕಿ.ಮೀ. ದೂರದ ನಾಗಪಟ್ಟಿನಂನ ಬಳಿ ಪೂಂಪುಹರ್ ಕರಾವಳಿಯಳ್ಳಿ ಹ್ಯಾಂಕಾಕ್ ಅವಶೇಷಗಳ ಅಧ್ಯಯನ ನಡೆಸುತ್ತಿದ್ದಾರೆ. ಸಾಗರದ ಅಲೆಗಳು ಈ ನಗರವನ್ನು 17,000 ಮತ್ತು 7,000 ವರ್ಷಗಳ ಹಿಂದೆ ಮುಳುಗಿಸಿರುವ ಕುರುಹು ಸಿಕ್ಕಿದೆ. ಈ ಮುಳುಗಿದ ನಗರಗಳೂ ಮಾನವನ ಆರಂಭಿಕ ವಲಸೆಯ ಹಾದಿಯನ್ನು ಮುಚ್ಚಿ ಹಾಕಿವೆ. ಸ್ಪೆನ್ಸರ್ ಮತ್ತು ಪಿಚ್ಚಪ್ಪನ್ ಅಧ್ಯಯನದ ಪ್ರಕಾರ ಪೂರ್ವ ಕರಾವಳಿಯಲ್ಲಿ 50,000 ರಿಂದ 35,000 ವರ್ಷಗಳ ಹಿಂದೆ ವಲಸೆ ಬಂದ ಆಧುನಿಕ ಮಾನವನ ಪೂರ್ವಜರು ನೆಲೆಸಿದ್ದರು.

ವೀರುಮಾಂಡಿ ಮಾತು :

'ಪ್ರೊಫೆಸರ್ ಪಿಚ್ಚಪ್ಪನ್ ನನ್ನನ್ನು ಮನೆಗೆ ಹುಡುಕೊಂಡು ಬಂದಾಗ ನಾನು ಮನೆಯಲ್ಲಿರಲಿಲ್ಲ. ಆಗ ನಾನು ಮಾಹಿತಿ ತಂತ್ರಜ್ಞಾನ ವಿಷಯದಲ್ಲಿ ಸ್ನಾತಕೋತ್ತರ ಪದವಿಗಾಗಿ ಮಧುರೈನ ಕಾಮರಾಜ್ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದೆ. ಪ್ರೊಫೆಸರ್ ವಿಚಾರಿಸಿಕೊಂಡು ಹೋಗಿದ್ದಾರೆ ಎಂದು ಮನೆಯವರು ಹೇಳಿದಾಗ ಆತಂಕವಾಗಿತ್ತು. ಮರುದಿನ ಬೆಳಿಗ್ಗೆಯೇ ವಿಶ್ವವಿದ್ಯಾಲಯದ ಜೀವ ವಿಜ್ಞಾನ ವಿಭಾಗಕ್ಕೆ ಹೋದೆ. ಮೊದಲಿಗೆ ಅವರು ನನ್ನನ್ನು ಒಳಗೆ ಬಿಡಲಿಲ್ಲ. ಆದರೆ ಪ್ರೊಫೆಸರ್ ಸ್ವತಃ ನನ್ನನ್ನು ಹುಡುಕೊಂಡು ಬಂದಿದ್ದಾಗಿ ಹೇಳಿದಾಗ ಸುದ್ದಿ ಮುಟ್ಟಿದ ತಕ್ಷಣವೇ ಬರಮಾಡಿಕೊಂಡರು. ನನ್ನನ್ನು ಕಂಡು ಅವರಿಗೆ ಬಹಳ ಖುಷಿಯಾಗಿತ್ತು.

"ತಿಂಗಳಿನಿಂದ ನಿನ್ನ ಪತ್ತೆಗಾಗಿ ಬಹಳ ಪಾಡು ಪಟ್ಟಿದ್ದೇನೆ ಸದ್ಯ ನೀನೇ ನನ್ನನ್ನು ಹುಡುಕೊಂಡು ಬಂದೆಯಲ್ಲಾ?" ಎಂದು ಅವರು ಹೇಳಿದಾಗ ನನಗೆ ಏನೂ ಅರ್ಥವಾಗಲಿಲ್ಲ. ಅವರೇಕೆ ನನ್ನನ್ನು ಹುಡುಕಬೇಕು ಎಂದು ಅಚ್ಚರಿಯಾಗಿತ್ತು.

ನಂತರ ನಿಧಾನವಾಗಿ ವಿವರಿಸಿದರು. ಮೊದಲಿಗೆ ಅವರು ನನ್ನ ಪೂರ್ವಜರು ಆಫ್ರಿಕಾ ಮೂಲದವರು ಮತ್ತು 60,000 ವರ್ಷಗಳ ಹಿಂದೆ ಭಾರತಕ್ಕೆ ಬಂದ ಮೊದಲ ವಲಸಿಗರು ಎಂದಾಗ ನನಗೆ ನಂಬಿಕೆಯೇ ಬರಲಿಲ್ಲ. ಅದು ಹೇಗೆ ಸಾಧ್ಯ? ಎಂದು ಅಚ್ಚರಿಯಾಯಿತು. ಅಷ್ಟು ವರ್ಷಗಳ ಹಿಂದಿನ ಪೂರ್ವಜರ ಬಗ್ಗೆ ಇವರಿಗೆ ತಿಳಿಯುವುದ್ ಹೇಗೆ ಸಾಧ್ಯ? ಹಾಗೆ ತಿಳಿದರೂ ನಾನೇ ಅವರ ಮರಿ ಮೊಮ್ಮಗ ಎಂದು ಗುರುತಿಸುವುದು ಹೇಗೆ ಸಾಧ್ಯ ಎಂದೆಲ್ಲಾ ಪ್ರಶ್ನೆಗಳು ಮೂಡಿದವು. ಪ್ರೊಫೆಸರ್ ನಿಧಾನವಾಗಿ ನನಗೆ ತಮ್ಮ

ಅಧ್ಯಯನದ ವಿವರವನ್ನು ಹೇಳಿದ ಮೇಲೆ ಹಲವು ಪ್ರಶ್ನೆಗಳನ್ನು ಕೇಳಿ ನನ್ನ ಸಂಶಯಗಳನ್ನು ನಿವಾರಿಸಿಕೊಂಡ ಮೇಲೆ ಸ್ವಲ್ಪ ಮಟ್ಟಿಗೆ ನಂಬಿಕೆ ಉಂತಾಗಿತ್ತು. ನಂತರ ಆಸ್ಟ್ರೇಲಿಯದ ಜೆನೆಟಿಕ್ ವಿಜ್ಞಾನಿ ಸ್ಪೆನ್ಸರ್ ವೆಲ್ಸ್ ಭೇಟಿಯಾದ ಮೇಲೆ ಅವರು ಇನ್ನಷ್ಟು ವಿವರಗಳನ್ನು ನೀಡಿದ್ದರು. ಆದರೆ ಅವರಿಗೂ ನಮಗೂ ಒಬ್ಬನೇ ಪೂರ್ವಜ ಎನ್ನುವುದನ್ನು ನಂಬುವುದು ಕಷ್ಟವೇ ಆಗಿತ್ತು.

ಈ ಎಲ್ಲಾ ಅಧ್ಯಯನಕ್ಕೆ ಮೂಲ ಕಾರಣ ನನ್ನ ರಕ್ತದಾನ ಮಾಡುವ ಅಭ್ಯಾಸ ನಾನು ಯುವಕನಾಗಿದ್ದಾಗಲೇ ಆಗಾಗ್ಗೆ ರಕ್ತದಾನ ಮಾಡುತ್ತಿದ್ದೆ. ಹೀಗೆ 1997ರಲ್ಲಿ ಒಂದು ದಿನ ಕಾಲೇಜಿನಲ್ಲಿ ಬಿಎಸ್ಸಿ ಓದುತ್ತಿದ್ದಾಗ ಯಾವುದೋ ಅಧ್ಯಯನಕ್ಕೆ ಸಂಬಂಧಿಸಿ ರಕ್ತ ಸಂಗ್ರಹಿಸುತ್ತಿದ್ದಾರೆ ಎಂದು ತಿಳಿದಾಗ ಸ್ವತಃ ಹೋಗಿ ರಕ್ತ ಕೊಟ್ಟಿದ್ದೆ. ನಂತರ ಹಾಗೆ ರಕ್ತ ಕೊಟ್ಟಿದ್ದು ನನಗೆ ಮರೆತೇ ಹೋಗಿತ್ತು. ಆದರೆ ಜೀವ ವಿಜ್ಞಾನ ವಿಭಾಗ ಆ ರಕ್ತಗಳ ಸ್ಯಾಂಪಲ್‌ಗಳನ್ನು ಸಂಗ್ರಹಿಸಿ ಅಧ್ಯಯನ ನಡೆಸಿತ್ತು. ಅವರು ಇನ್ಯಾವುದೋ ವಿಷಯಕ್ಕೆ ಅಧ್ಯಯನ ಮಾಡಿದಾಗ ನನ್ನ ರಕ್ತದ ಸ್ಯಾಂಪಲ್‌ನಲ್ಲಿ ವಂಶವಾಹಿಗೆ ಸಂಬಂಧಿಸಿದ ಮಾರ್ಕರ್ ಎಂ130 ಇರುವುದು ತಿಳಿದು ಬಂತು. ಈ ಸಂಶೋಧನೆಗಾಗಿ ನಾನು ಪ್ರೊಫೆಸರ್ ಜೊತೆಗೆ ಸಹಕರಿಸಿದೆ. ಆದರೆ ಈ ಅಧ್ಯಯನ ಪ್ರಕಟವಾದ ಮೇಲೆ ಜನರು ನನ್ನನ್ನು ಹುಡುಕಿಕೊಂಡು ಬರಲಾರಂಭಿಸಿದರು. ಆಕಸ್ಮಿಕವಾಗಿ ಸಿಕ್ಕ ಈ ಜನಪ್ರಿಯತೆಯನ್ನು ಸ್ವೀಕರಿಸುವುದು ಕಷ್ಟವಾಗಿತ್ತು. ನನ್ನ ಮನೆಯವರು ಮೊದಲಿಗೆ ಸಹಕರಿಸಿದರು. ನಿಧಾನವಾಗಿ ಸಂಬಂಧಿಕರು ಮತ್ತು ಸ್ನೇಹಿತರು ಇದರಿಂದ ನಿನಗೇನು ಪ್ರಯೋಜನ ಎಂದು ಕೇಳಲಾರಂಭಿಸಿದರು. ಅವರಿಗೆ ಈ ಸಂಶೋಧನೆಯ ಮಹತ್ವ ತಿಳಿಸಿ ಹೇಳುವುದು ನನಗೆ ಸಾಧ್ಯವಾಗಲಿಲ್ಲ. ಅವರ ಅಜ್ಞಾನಕ್ಕೆ ಮರುಗಲೂ ಇಲ್ಲ. ಆದರೆ ಕೆಲವು ಮಾಧ್ಯಮಗಳು ಸ್ವಲ್ಪ ನೆಗೆಟಿವ್ ಸ್ವರೂಪದ ಲೇಖನಗಳನ್ನು ನನ್ನ ಬಗ್ಗೆ ಮತ್ತು ಅಧ್ಯಯನದ ಬಗ್ಗೆ ಪ್ರಕಟಿಸಿದಾಗ ಮನಎಯಲ್ಲಿ ಮತ್ತು ಕುಟುಂಬದಲ್ಲಿ ಸ್ವಲ್ಪ ಭಿನ್ನ ವಾತಾವರಣ ಸೃಷ್ಟಿಯಾಗಿತ್ತು. ಅದನ್ನು ಹೊರತುಪಡಿಸಿ ಈ ಅಧ್ಯಯನ ಬಹಳ ಖುಷಿ ತಂದಿದೆ. ಇಂತಹ ಒಂದು ಮಹತ್ವದ ಸಂಶೋಧನೆಯ ಭಾಗವಾಗಿರುವುದಕ್ಕೆ ಹೆಮ್ಮೆ ಎನಿಸಿದೆ. ಈ ಸಂಶೋಧನೆಯಿಂದ ನನಗೇನು ಲಾಭವಾಗಿದೆ ಎಂದು ಪ್ರಶ್ನಿಸುವಷ್ಟು ಕೀಳು ಮನಸ್ಸು ನನಗಿಲ್ಲ. ನನ್ನ ಲಾಭಕ್ಕಿಂತ ಹೆಚ್ಚಾಗಿ ಮಾನವತೆಗೆ ಇದರಿಂದ ಏನು ಲಾಭ ಎಂದು ಯೋಚಿಸುತ್ತೇನೆ. ಇತರರು ಏನೇ ಹೇಳಿದರೂ ನನಗೆ ಈ ಸಂಶೋಧನೆಯ ಮಹತ್ವದ ಅರಿವಿದೆ.



мಾನವನ ವಿಕಾಸದ ಹೆಜ್ಜೆಗಳು




ಮಹಾವಲಸೆಯ ಹೆಜ್ಜೆಗುರುತು



ಸಂಶೋಧಕ ಸ್ಪೆನ್ಸರ್‌ವೆಲ್ಸ್ ಜೊತೆ ವೀರುಮಾಂಡಿ




ವೀರುಮಾಂಡಿ ಪತ್ನಿ ಮತ್ತು ತಂದೆ



ಮಾನವನ ವಿಕಾಸ



ಆಸ್ಟ್ರಲೊಪಿಥಾಕಸ್



ಹೋಮೋ ಹೆಬಿಲೀಸ್



ಹೋಮೋ ಎರಕ್ಟಸ್



ಹೋಮೋ ಹಿಡಲ್‌ಬರ್ಗ್



ಹೋಮೋ ನಿಯಾಂಡರ್‌ಥಾಲ್



ಹೋಮೋ ಫ್ಲಾರೆಸೆನ್ಸಿಸ್



← ಆಹಾರಕ್ಕಾಗಿ ಭೇಟೆ



ಗುಹೆಗಳಲ್ಲಿ ವಾಸ →



← ಬೆಂಕಿಯ ಅನ್ವೇಷಣೆ



ಪಾತ್ರೆಗಳ ಉಪಯೋಗ →

ಭಾರತ ಇತಿಹಾಸ ಪೂರ್ವ ಸಂಸ್ಕೃತಿಯ ಕಾಲವಿಂಗಡಣೆ

ಹಳೆ ಶಿಲಾಯುಗ ಅಥವಾ Palaeolithic Age

ಪ್ರಾರಂಭದಲ್ಲಿ ಪ್ಯಾಲಿಯೋಲಿಥಿಕ ಕಾಲವನ್ನು ಹಳೆಶಿಲಾಯುಗವೆಂದು ಕರೆಯುತ್ತಿದ್ದು ಈ ಕಾಲವು ಬಹಳ ಹೆಚ್ಚಿನ ಅವಧಿಯನ್ನು ಹೊಂದಿದ್ದು ಅಂದರೆ ಮಾನವ ಜೀವಿಯ ಪ್ರಾರಂಭವಾದದಿನಿಂದ ಭಾರತದಲ್ಲಿ ಸರಿ ಸುಮಾರು ಕ್ರಿ.ಪೂ. ಮೂರು ಸಾವಿರ ವರ್ಷಗಳಿಂದ ಹಿಡಿದು ಕ್ರಿ.ಪೂ. ಎಂಟು ಸಾವಿರ ವರ್ಷಗಳವರೆಗೂ ಮುಂದುವರಿದಿರುವುದು ಕಂಡು ಬರುತ್ತದೆ. ಪುರಾತನ ಶಾಸ್ತ್ರಜ್ಞರು ಈ ಕಾಲವನ್ನು ಮೂರು ವಿಭಾಗಗಳಾಗಿ ಹೀಗೆ ವಿಂಗಡಿಸಿದ್ದಾರೆ. ಅವುಗಳು ಪೂರ್ವಕಾಲ, ಮಧ್ಯಕಾಲ ಮತ್ತು ಪೆಲಿಯೋಲಿಥಿಕ್ ಅಥವಾ ಹಳೇಶಿಲಾಯುಗವೆಂದು ಮನುಷ್ಯನು ಆಯಾ ಕಾಲದಲ್ಲಿ ಯಾವ ರೀತಿಯ ಆಯುಧಗಳನ್ನು ಉಪಯೋಗಿಸುತ್ತಿದ್ದನೋ ಅದಕ್ಕೆ ತಕ್ಕ ಹಾಗೆ ಈ ಕಾಲವನ್ನು ವಿಂಗಡಿಸಿರುವರು.

ಮೆಸೋಲಿಥಿಕ್ ಅಥವಾ ಮಧ್ಯಶಿಲಾಯುಗ

ಹಳೆ ಶಿಲಾಯುಗದ ನಂತರ ಬರುವ ಕಾಲ ಮಧ್ಯ ಶಿಲಾಯುಗ, ಇದನ್ನು ಶಿಲಾಯುಗದ ನಂತರದ ಕಾಲವೆಂದೂ ಸಹ ಕರೆದಿದ್ದಾರೆ. ಈ ಶಿಲಾಯುಗದ ಕಾಲವು ಸುಮಾರು ಕ್ರಿ.ಪೂ ಎಂಟು ಸಾವಿರ ವರ್ಷಗಳಿಂದ ಕ್ರಿ.ಪೂ. ನಾಲ್ಕು ಸಾವಿರ ವರ್ಷಗಳವೆರೆಗೆ ಇದ್ದಿತಂದು ತಜ್ಞರು ಗುರುತಿಸಿದ್ದಾರೆ. ಈ ಕಾಲವು ಹಳೆ ಶಿಲಾಯುಗಗಳ ಮಧ್ಯದ ಕಾಲವೆಂತಲೂ ಹಾಗೂ ಬದಲಾವಣೆಯ ಹಂತವೆಂತಲೂ ಕರೆದಿದ್ದಾರೆ. ಈ ಕಾಲದ ಆಯುಧಗಳು ಸೂಕ್ಷ್ಮ ಆಯುಧಗಳಾಗಿದ್ದುದು ಕಂಡು ಬರುತ್ತದೆ.

ನಿಯೋಲಿಥಿಕ್ ಅಥವಾ ಹೊಸ ಶಿಲಾಯುಗ:

ಮೂರನೆಯ ಹಂತವೇ ಹೊಸ ಶಿಲಾಯುಗ ಅಥವಾ ನಿಯೋಲಿಥಿಕ್ ಕಾಲ. ಈ ಕಾಲವು ಕ್ರಿ.ಪೂ. ನಾಲ್ಕು ಸಾವಿರದಿಂದ ಕ್ರಿ.ಪೂ. 1800ರವರೆಗೆ ವಿಸ್ತರಿಸಿದ್ದು, ಈ ಕಾಲದಲ್ಲಿ ಮಾನವನು ಹೊಳಪುಗಳಿಸಿದ ಶಿಲಾಯುಧಗಳನ್ನು ಉಪಯೋಗಿಸುತ್ತಿದ್ದುದು ಕಂಡು ಬಂದಿದೆ.

ಚಾಲ್ಕೋಲಿಥಿಕ್ ಅಥವಾ ತಾಮ್ರ ಶಿಲಾಯುಗ

ಈ ಕಾಲವನ್ನು ತಾಮ್ರ ಶಿಲಾಯುಗವೆಂದು ಕರೆದಿದ್ದು ಈ ಕಾಲವು ಕ್ರಿ.ಪೂ 1500 ರಿಂದ ಕ್ರಿ.ಪೂ 1000 ವರ್ಷಗಳವರೆಗೆ ವಿಸ್ತರಿಸಿದ್ದು, ಈ ಕಾಲವನ್ನು ಕಂಚಿನ ಯುಗವೆಂತಲೂ ಕರೆಯಲಾಗಿದೆ. ಈ ಕಾಲದಲ್ಲಿ

ತಾಮ್ರ, ಕಂಚು ಲೋಹಗಳನ್ನು ಉಪಯೋಗಿಸಲು ಪ್ರಾರಂಭಿಸಿದ್ದು ಇವುಅಗಳ ಜೊತೆ ಕಲ್ಲಿನ ಆಯುಧಗಳನ್ನು ಸಹ ಉಪಯೋಗಿಸುತ್ತಿದ್ದರು. ಈ ಕಾಲಕ್ಕೆ ಸಂಬಂಧಪಟ್ಟ ಸ್ಥಳಗಳ ಭಾರತದ ಹಲವು ಭಾಗಗಳಲ್ಲಿ ಹಂಚಿಹೋಗಿದ್ದಲ್ಲದೇ ಇವುಗಳು ಹರಪ್ಪ ಸಂಸ್ಕೃತಿಯಲ್ಲೂ ಇದ್ದವೆಂಬುದು ತಿಳಿದುಬರುತ್ತದೆ.

ಇತಿಹಾಸ ಪೂರ್ವ ಸಂಸ್ಕೃತಿಯ ಆಧಾರಗಳು

ಆಧುನಿಕ ಇತಿಹಾಸಕ್ಕೆ ಸಂಬಂಧಪಟ್ಟ ಹಂತಗಳಿಗೆ ಹಲವಾರು ರೀತಿಯ ಆಧಾರಗಳು ಕಂಡು ಬರುತ್ತವೆ. ಅವುಗಳ ಆಧಾರದಿಂದ ಸುಲಭವಾಗಿ ಇತಿಹಾಸವನ್ನು ಪುನಃ ರಚಿಸಲಾಗಿದೆ. ಆದರೆ ಈ ಕಾಲಕ್ಕೆ ಸಂಬಂಧಪಟ್ಟಂತೆ ದಾಖಲೆಗಳೂ ವೈವಿಧ್ಯತೆಯಿಂದ ಕೂಡಿವೆ. ಅಂದರೆ ಈ ಕಾಲದಲ್ಲಿ ಜನರು ತಾವು ಉಪಯೋಗಿಸಿ ಬಿಟ್ಟು ಹೋಗಿದ್ದ ವಸ್ತುಗಳನ್ನು ಆಧಾರಗಳಾಗಿ ಇಟ್ಟುಕೊಂಡು ಈ ಕಾಲದ ಇತಿಹಾಸದ ಪುನಃ ರಚನೆಯನ್ನು ಮಾಡಬೇಕಾಗಿದೆ. ಈ ಕಾಲವು ಮಾನವ ಪ್ರಾಥಮಿಕವಾಗಿ ಆಹಾರವನ್ನು ಹುಡುಕುವ ಹಂತ ಅಥವಾ ಅವನು ತಾನು ಒಂದೆಡೆ ನೆಲೆನಿಂತು ವಾಸಿಸುವ ಕಾಲಗಳ ಬಗ್ಗೆ ದಾಖಲೆಗಳ ಲಭ್ಯತೆ ಬಹಳ ಕಡಿಮೆಯೆಂದೇ ಹೇಳಬಹುದು. ಅದರಲ್ಲೂ ಬರವಣಿಗೆಯ ಆಧಾರಗಳು ತುಂಬಾ ಕಡಿಮೆ ಪ್ರಮಾಣದಲ್ಲಿವೆ. ಹೀಗಾಗಿ, ಪೂರ್ವಕಾಲದ ಮಾನವನ ಅವಶೇಷಗಳು ಕಾಣಸಿಗುವುದು, ಹಲವು ವಿಧದ ಶಿಲಾಯುಧಗಳು ಮತ್ತು ಕೆಲವೊಮ್ಮೆ ಪ್ರಾಣಿಗಳ ಅವಶೇಷಗಳೂ ಸಹ ಸಿಗುತ್ತವೆ. ಏಕೆಂದರೆ ಈ ಕಾಲದ ಮಾನವ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದುದರಿಂದ ಮತ್ತು ಆ ಕಾಲದಲ್ಲಿ ಅವನು ಉಪಯೋಗಿಸುತ್ತಿದ್ದ ಆಯುಧಗಳು ಬಹಳ ಮಹತ್ವವಾದ ಆಧಾರಗಳಾಗಿದ್ದು ಅವುಗಳ ಮುಖಾಂತರ ನಾವು ಈ ಪೂರ್ವ ಕಾಲದ ಇತಿಹಾಸವನ್ನು ರಚಿಸಲು ಅವಕಾಶವಾಗಿದೆಯೆಂದು ಹೇಳಬಹುದು.

ಪೂರ್ವಯುಗ ಮನುಷ್ಯನ ಆಯುಧಗಳು, ಅವನ ವಾಸಸ್ಥಳ, ಉಪಯೋಗಿಸುತ್ತಿದ್ದ ಆಹಾರ ಮುಂತಾದ ಪ್ರಾಥಮಿಕ ಮಾಹಿತಿಗಳನ್ನು ಅನುಸರಿಸಿ ನಾವು ಅವರ ಕಾಲದ ಜನಾಂಗ, ಸಮೂಹ ಮತ್ತು ಅವರ ಪ್ರಾಥಮಿಕ ಸಾಮಾಜಿಕ ಅಭಿವೃದ್ಧಿ ಮುಂತಾದುವನ್ನು ತಿಳಿಯಲು ಈ ಮಾಹಿತಿಗಳು ದಾಖಲೆ ಒದಗಿಸಿವೆ. ಇದಲ್ಲದೇ ಈ ಕಾಲದ ಸಂಸ್ಕೃತಿಯನ್ನು ಇದರ ಹಿಂದಿನ ಹಾಗೂ ಮುಂದಿನ ಕಾಲ ಸಂಸ್ಕೃತಿಯನ್ನು ತಿಳಿದುಕೊಂಡು ಪೂರ್ವಕಾಲದ ಇತಿಹಾಸದ ಬಗ್ಗೆ ಉತ್ತಮ ಮಾಹಿತಿಯನ್ನು ನಾವು ದಾಖಲಿಸಬಹುದಾಗಿದೆ. ಇದಲ್ಲದೇ ಇವರ ಕಾಲದ ಸಂಸ್ಕೃತಿ ಮತ್ತು ಇವರ ಸಾಂಸ್ಕೃತಿಕ ವಲಯಗಳನ್ನು ಸಹ ನಾವು ಗುರುತಿಸಬಹುದಾಗಿದೆ.

ಆಹಾರ ಹುಡುಕುವ ಮಾನವ ಸಮೂಹಗಳು

ಈ ಕಾಲದ ಮಾನವನನ್ನು ಈ ಶಿಲಾಯುಗದ ಪ್ರಾಥಮಿಕ ಮಾನವ ಎಂಬುದಾಗಿ ಕರೆಯಲಾಗಿದೆ. ಈ ಕಾಲಕ್ಕೆ ಸಂಬಂಧಿಸಿದ ಆಯುಧಗಳು ಭಾರತದ ಹಲವಾರು ಭಾಗಗಳಲ್ಲಿ ಕಂಡು ಬರುತ್ತವೆ. ಈ ಭಾಗಗಳಲ್ಲಿ ಬಹಳ ಪ್ರಮುಖವಾದುದೆಂದರೆ ವಾಯುವ್ಯ ಪಂಜಾಬ್ ಪ್ರಾಂತಯ್ದ ಪೋಟ್ವಾರ್ ಬಯಲಿನ ಪ್ರಾಂತ್ಯವು ಬಹಳ ಮುಖ್ಯವಾದುದಾಗಿದೆ. ಇದರ ಜೊತೆಗೆ ಬೀಸ್ ಮತ್ತು ಬಂಗಂಗ ಕಣಿವೆಗಳು ಪ್ರವರ ಕಣಿವೆಯ ನೇವಾಸ, ಗ್ೋದಾವರಿ ನದಿಯ ಉಪನದಿ, ಆಂಧ್ರ ಪ್ರದೇಶದ ಗುಂಡ್ಲಕಮ್ಮ ಮುಖಜ ಭೂವಿಯ ಗುಡಲೂರು, ಕೃಷ್ಣ ಕಣಿವೆಯ ನಾಗಾರ್ಜುನ ಕೊಂಡ, ಇವುಗಳ ಜೊತೆಗೆ ಇನ್ನು ಅನೇಕ ಈ ಯುಗದ ಸ್ಥಳಗಳೆಂದರೆ ವಡ ಮದುರೈ, ಅತ್ತಿರಂಪಾಕ್ಕಮ್ ಮುಂತಾದವುಗಳು. ಕೇಂದ್ರ ಬಯಲು ಇವುಅಗಳು ಚನ್ನೈನ ಹತ್ತಿರ ಇರುವುದು. ಇವೌಗಳ ಜೊತೆಗೆ ಒರಿಸ್ಸಾದ ಮಹಾನದಿ ಉತ್ತರ ದಿಕ್ಕಿನ ಜಿಲ್ಲೆಗಳೂ ಸಹ ಈ ಸಂಸ್ಕೃತಿಗೆ ಉದಾಹರಣೆಯಾಗಿ ಕಾಣ ಸಿಕ್ಕಿವೆ. ಈ ಪ್ರಾಥಮಿಕ ಮಾನವನು ಅನೇಕ ಆಯುಧಗಳು ಮತ್ತು ಹೊಳಪಿಲ್ಲದ ಶಿಲೆಯ ಆಯುಧಗಳನ್ನು ಉಪಯೋಗಿಸುತ್ತಿದ್ದನು. ಕೊಡಲಿಯನ್ನು ಸಾಮಾನ್ಯವಾಗಿ ಉಪಯೋಗಿಸುತ್ತಿದ್ದು ಇದು ಗಡಸಾಗಿದ್ದು ಸಣ್ಣ ಸಣ್ಣ ವಸ್ತುಗಳನ್ನಾಗಿ ಮಾಡಲು ಇದನ್ನು ಹೆಚ್ಚಾಗಿ ಸುಲಿಯುವುದು, ಪ್ರಾಣಿಗಳ ಮಾಂಸವನ್ನು ತುಂಡಾರಿಸಲು ಮತ್ತು ಮೂಳೆಗಳನ್ನು ಬೇರ್ಪಡಿಸಲು ಮುಂತಾದ ಕಾರ್ಯಗಳಿಗೆ ಉಪಯೋಗಿಸುತ್ತಿದ್ದರು. ಈ ಕಾಲದ ಮಾನವನು ಅತ್ಯವಶ್ಯಕವಾಗಿ ಆಹಾರವನ್ನು ಸಂಗ್ರಹಿಸುವವನಾಗಿದ್ದನು. ಇವನು ಹೆಚ್ಚಾಗಿ ತನ್ನ ಆಹಾರದ ಪೂರೈಕೆಗಾಗಿ ಪ್ರಕೃತಿಯನ್ನು ಅವಲಂಬಿಸಿದ್ದನು. ಅಲ್ಲದೇ ಪ್ರಾಣಿಗಳನ್ನು ಆಹಾರಕ್ಕೆ ಉಪಯೋಗಿಸುವ ಸಸ್ಯಗಳನ್ನು ಸಂಗ್ರಹಿಸಿ ಉಪಯೋಗಿಸುವುದರಲ್ಲಿ ನಿರತನಾಗಿದ್ದನು. ಕಾಲಾನಂತರದಲ್ಲಿ ಇವನು ಬೆಂಕಿಯನ್ನು ಉಪಯೋಗಿಸುವುದನ್ನು ಕಲಿತು ತನ್ನ ಜೀವನೋಪಾಯಕ್ಕಾಗಿ ಹಲವು ಮಾರ್ಗಗಳನ್ನು ಕಂಡುಕೊಂಡನು. ಈ ಕಾಲದ ಮಾನವನು ಪ್ರಾಣಿಗಳ ಚರ್ಮ ಮತ್ತು ಮರದ ತೊಗಟೆ ಹಾಗೂ ದೊಡ್ಡ ದೊಡ್ಡ ಎಲೆಗಳನ್ನು ತನ್ನ ದೇಹವನ್ನು ಮುಚ್ಚಿಕೊಳ್ಳುವ ಬಟ್ಟೆಯಾಗಿ ಉಪಯೋಗಿಸುತ್ತಿದ್ದನು. ಈ ಮಾನವರು ಹಲವು ಹೆಂಗಸರು ಮತ್ತು ಮಕ್ಕಳನ್ನು ಒಳಗೊಂಡ ಸಣ್ಣ ಗುಂಪುಗಳನ್ನು ಮಾಡಿಕೊಂಡು ಹಲವು ಪ್ರದೇಶಗಳಲ್ಲಿ ಅಲೆಮಾರಿ ಜನಾಂಗವಾಗಿ ತಿರುಗುತ್ತಿದ್ದರು. ಹಳೆಯ ಶಿಲಾಯುಗದ ಕೊನೆಯ ಹೊತ್ತಿಗೆ ಆಧುನಿಕ ಮನುಷ್ಯನು ಒಂದು ಕಡೆ ನೆಲೆ ನಿಲ್ಲುವ ಮಾನವನಾಗಿ ಕ್ರಿ.ಪೂ. 36,000 ವರ್ಷಗಳ ಅಂಚಿನಲ್ಲಿ ಕಾಣಿಸಿಕೊಳ್ಳುತ್ತಾನೆ. ಮಧ್ಯ ಶಿಲಾಯುಗದ ಸಂಸ್ಕೃತಿಯು ಕ್ರಿ.ಪೂ. 1650ರವರೆಗೆ ಮುಂದುವರೆಸಿಕೊಂಡು ಬಂದಿದೆ.

ಈ ಕಾಲದಲ್ಲಿ ಕಂಡು ಬರುವ ಮತ್ತೊಂದು ಪ್ರಮುಖ ಅಂಶವೆಂದರೆ ಪಶ್ಚಿಮ ರಾಜಾಸ್ಥಾನ ಮತ್ತು ಮಧ್ಯಪ್ರದೇಶ ಪ್ರಾಂತ್ಯಗಳಲ್ಲಿ ವಸ್ತುಗಳನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡುವ ತಾಂತ್ರಿಕತೆಯ ಇನ್ನಾವುದೇ ಪ್ರದೇಶದಕ್ಕಿಂತ ಈ ಕಾಲದಲ್ಲಿ ಬಹಳಷ್ಟು ಮುಂದುವರಿದ ಕಾರ್ಯವಾಗಿದ್ದಿತು. ಈ ರೀತಿಯ ಪ್ರಾದೇಶಿಕ

ವೈವಿಧ್ಯತೆಯ ಮತ್ತು ಪೂರ್ಣ ಸಂಸ್ಕೃತಿಯ ಸಮೃದ್ಧತೆಯ ಮುಂದಿನ ನಂತರ ಶಿಲಾಯುಗದ ಪ್ರಮುಖ ವಸ್ತು ವಿಷಯವಾಯಿತು. ಕಾರಣ ಈ ರೀತಿಯ ಸಂಸ್ಕೃತಿಯು ಮುಂದುವರಿದುಕೊಂಡು ಹೋಗಲು ಭದ್ರ ಬುನಾದಿಯನ್ನು ಹಾಕಲಾಯಿತು.

ಈ ಸೂಕ್ಷ್ಮ ಶಿಲೆಗಳು ಹಲವು ಲೋಹಗಳಿಂದ ಕೂಡಿದ್ದು ತಾಂತ್ರಿಕ ಬದಲಾವಣೆಗಳು ಸಾಕಷ್ಟು ಪ್ರಮಾನದಲ್ಲಿ ಆಗಿರುವುದನ್ನು ತೋರಿಸುತ್ತದೆ. ಈ ಬದಲಾವಣೆಯನ್ನು ಅಳವಡಿಸಿಕೊಂಡು ಮೂಳೆಗಳು, ಮರ ಮತ್ತು ಬೊಂಬು ಮುಂತಾದವುಗಳಲ್ಲಿ ವಸ್ತುಗಳನ್ನು ತಯಾರಿಸಲು ಈ ತಾಂತ್ರಿಕ ಜ್ಞಾನವನ್ನು ಬಳಸಿಕೊಳ್ಳಲಾಗಿದೆ. ಇನ್ನು ಕೆಲವು ಪ್ರದೇಶಗಳಲ್ಲಿ ಈ ಸೂಕ್ಷ್ಮ ಲೋಹಗಳ ಜೊತೆಗೆ ಮಡಕೆ ಮಾಡುವ ತಂತ್ರಜ್ಞಾನವನ್ನು ಕಲಿತರು. ಇದೊಂದು ಈ ಕಾಲದ ಪ್ರಮುಖ ಬದಲಾವಣೆಯಾಗಿದೆಯಲ್ಲದೇ ಮಾನವನ ಇತಿಹಾಸದಲ್ಲಿ ಆಹಾರದ ಉತ್ಪಾದನೆ ಮತ್ತು ಒಂದು ಕಡು ನೆಲೆಗೊಳ್ಳುವಿಕೆ ಮುಂತಾದ ಕ್ರಿಯೆಗಳಿಗೆ ಬಹಳಷ್ಟು ಅನುಕೂಲಕರವಾಗಿದೆಯೆಂದು ಹೇಳಬಹುದು. ಈ ರೀತಿಯ ಸಂಸ್ಕೃತಿಯು ಭಾರತದ ಅನೇಕ ಪ್ರದೇಶಗಳಲ್ಲಿ ಬೆಳಕಿಗೆ ಬಂದಿರುತ್ತದೆ. ಇದರ ಜೊತೆಗೆ ಗುಜರಾತಿನ ಲಾಂಗ್‌ನಾಜ್ ಮತ್ತು ಮಧ್ಯಪ್ರದೇಶದ ಅದಮ್‌ಘರ್ ಇವುಗಳು ಈ ಕಾಲದಲ್ಲಿ ಪಶು ಪ್ರಾಣಿಗಳನ್ನು ಸಾಕಿರುವುದು ಮತ್ತು ಹಲವು ಪ್ರದೇಶಗಳ ನಡುವೆ ಸಮೂಹಗಳು ಮತ್ತು ಹಲವು ವಸ್ತುಗಳನ್ನು ಬದಲಾಯಿಸಿಕೊಳ್ಳುವ ಕಾರ್ಯಗಳಲ್ಲಿ ತೊಡಗುವುದನ್ನು ಕಾಣುತ್ತೇವೆ.

ಆಹಾರ ಉತ್ಪಾದಿಸುವ ಮಾನವ:

ಆಹಾರ ಉತ್ಪಾದನಾ ಆಧಾರದ ಮೇಲೆ ಒಂದೆಡೆ ನೆಲೆ ನಿಲ್ಲುವ ಮನುಷ್ಯನ ಜೀವನವು ಪ್ರಪ್ರಥಮವಾಗಿ ಭಾರತದ ವಾಯುವ್ಯ ಪ್ರಾಂತ್ಯದಲ್ಲಾದುದು ಕಂಡು ಬರುತ್ತದೆ. ಈ ಪ್ರದೇಶದಲ್ಲಿ ಮಾನವನು ತನ್ನ ಆಹಾರ ಉತ್ಪಾದನೆಯ ಆರಂಭ ಕಾಲದಿಂದ ಹೊಸ ಶಿಲಾಯುಗದ ಪ್ರಾರಂಭವಾಗುವವರೆಗೆ ತನ್ನ ಪ್ರಗತಿಯನ್ನು ಸಾಧಿಸಿದನು. ಜೊತೆಗೆ ತಾಮ್ರ ಯುಗವನ್ನು ಸಹ ಮುಂದುವರೆಸಿಕೊಂಡು ಹೋದನು. ಇಂತಹ ಸಂಸ್ಕೃತಿಯ ತಾಣಗಳನ್ನು ತಾವು ರಾಜಾಸ್ಥಾನದ ಬಾಣಾಸ್ ಕಣಿವೆಯ ಪ್ರದೇಶದ ಅಹರ್, ನರ್ಮದಾ ಕಣಿವೆಯ ನವದತೋಲಿ, ಚಂಬಲ್ ಕಣಿವೆಯ ನಗದಿ, ದೈಮಾಬಾದ್, ಚಾಂದೋಲಿ, ಉತ್ತರ ದಖಿನ್ ಪ್ರದೇಶದ ಇತರೇ ಅನೇಕ ತಾಣಗಳಲ್ಲಿ ಬಯಲು ಗ್ರಾಮಗಳಲ್ಲಿ ಪ್ರಾಥಮಿಕ ರೈತರನ್ನು ಕಾಣುತ್ತೇವೆ. ಇವರು ಕೃಷಿಯಲ್ಲಿ ತೊಡಗಿಸಿಕೊಂಡು ಬೆಳೆಗಳನ್ನು ಬೆಳೆಯುವ ಹಂತಕ್ಕೆ ಸಾಗಿ, ಕೃಷಿ ಕಾರ್ಯವನ್ನು ಮಾಡುತ್ತಾ ಗೋಧಿ, ಭತ್ತ, ಕಾಳುಗಳು ಮುಂತಾದವುಗಳನ್ನು ದಕ್ಷಿಣ ಬಿಹಾರದ ಚಿರಾಂದ್‌ನಲ್ಲಿ ಮಾಡುತ್ತಿರುವುದು ಅಧ್ಯಯನದಿಂದ ಕಂಡುಬರುತ್ತದೆ.

ಇನ್ನು ದಕ್ಷಿಣ ಭಾರತಕ್ಕೆ ಬಂದರೆ ದಕ್ಷಿಣ, ಮಧ್ಯಭಾರತ ಮತ್ತು ಪೂರ್ವ ದಖನ್‌ನಲ್ಲಿ ಆರ್ಥಿಕ ವ್ಯವಸ್ಥೆಯು ಪಶು ಸಂಗೋಪನೆ ಪ್ರಾಮುಖ್ಯತೆ ನೀಡಿದ್ದು ಮತ್ತು ಹೊಸ ಶಿಲಾಯುಗ-ತಾಮ್ರ ಯುಗದ ಪ್ರಭಾವವನ್ನು ಕರ್ನಾಟಕದ ಪಿಕ್ಲಿ ಹಾಲ್ ಮತ್ತು ತೆಕ್ಕಲ ಕೋಟದಲ್ಲಿ ಅಥವಾ ಆಂಧ್ರಪ್ರದೇಶದ ಉತನೂರು ಮತ್ತು ನಾಗಾರ್ಜುನ ಕೊಂಡದಲ್ಲಿ ಕಾಣಬಹುದು. ಈ ಶಿಲಾಯುಗದ ಕಾಲವು ಕ್ರಿ.ಪೂ. 2000 ರಿಂದ ಮುಂದುವರೆದು ಕ್ರಿ.ಪೂ. 1000 ರ ಮಧ್ಯಭಾಗದವರೆಗೂ ಸಾಗಿತ್ತಲ್ಲದೇ, ಇನ್ನು ಕೆಲವು ಪ್ರದೇಶಗಳಲ್ಲಿ ಹೊಸ ಲೋಹಗಳ ತಂತ್ರಜ್ಞಾನದ ಪ್ರಾರಂಭವಾಗಿರುವುದು ಸಹ ಕಂಡುಬರುತ್ತದೆ.

ನಿಯೋಲಿಥಿಕ್ ಅಥವಾ ಹೊಸ ಶಿಲಾಯುಗ:

ಹೊಸ ಶಿಲಾಯುಗದ ಪ್ರಮುಖ ಕಾಲವು ಭಾರತ ದೇಶದಲ್ಲಿ ಕ್ರಿ.ಪೂ. 4000 ರಿಂದ ಕ್ರಿ.ಪೂ. 1800ರ ನಡುವೆ ಕಾಣಿಸಿಕೊಳ್ಳುತ್ತದೆ. ಈ ಕಾಲವು ಆಹಾರವನ್ನು ಉತ್ಪಾದಿಸುವ ಕಾಲವಾಗಿದ್ದು ಇಲ್ಲಿ ಮಾನವನು ತನ್ನ ಜೀವನವನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡಿರುವುದು ಕಂಡುಬರುತ್ತದೆ. ಹೊಸ ಶಿಲಾಯುಗದ ಜನ ಸಮುದಾಯದ ಸುಳಿವು ಪತ್ತೆಯಾಗಿರುವುದು ದಖಲ್ ಪ್ರಾಂತ್ಯ ಮತ್ತು ನೈರುತ್ಯ ಪ್ರದೇಶಗಳಲ್ಲಿ ಕಂಡುಬಂದಿರುವುದು. ಈ ಕಾಲದ ಹೊಸ ಜೀವನದ ಹಾದಿಯಲ್ಲಿ ಮನುಷ್ಯನು ಪಶುಸಂಗೋಪನಾ ಕಾರ್ಯವನ್ನಲ್ಲದೇ ಬೆಳೆಗಳನ್ನು ಬೆಳೆಯುವ ಕಾರ್ಯವನ್ನೂ ಸಹ ಮಾಡಲು ಪ್ರಾರಂಭಿಸಿದನು. ಈ ಕಾಲದಲ್ಲಿ ಸಾಕಲ್ಪಟ್ಟ ಪ್ರಾಣಿಗಳೆಂದರೆ ನಾಯಿ, ಕುರಿ ಮತ್ತು ಆಡುಗಳನ್ನು ಮೊದಲಿಗೆ ಸಾಕಲು ಪ್ರಾರಂಭಿಸಿದರು. ಇನ್ನು ಬೆಳೆಗಳನ್ನು ಬೆಳೆಯುವ ಕಾರ್ಯದಲ್ಲಿ ಗೋಧಿ ಮತ್ತು ಬಾರ್ಲಿಯನ್ನು ಪ್ರಪ್ರಥಮ ಬೆಳೆಗಳಾಗಿ ಬೆಳೆಯಲು ಪ್ರಾರಂಭಿಸಿದರು. ಇದರ ಪರಿಣಾಮವಾಗಿ ಮಾನವನು ಕೆಲವಾರು ಆಯ್ದ ಪ್ರದೇಶಗಳಲ್ಲಿ ವಾಸಿಸಲು ತೊಡಗಿದನು. ಇದರಿಂದ ಹಳ್ಳಿಗಳ ನಿರ್ಮಾಣವಾಗಿದ್ದಲ್ಲದೇ, ಕೃಷಿಕ ಸಮುದಾಯಗಳ ವ್ಯವಸ್ಥೆಯಾಗಿರುವುದು ಕಂಡುಬರುತ್ತದೆ. ಇವನ ಕಾರ್ಯದಲ್ಲಿ ಅಗತ್ಯವಾದ ಆಯುಧಗಳನ್ನು ಸಹ ಬದಲಾವಣೆಯಾಗಿರುವುದು ಈ ಕಾಲದಲ್ಲಿ ಕಾಣುತ್ತೇವೆ. ಈ ಎಲ್ಲಾ ಬದಲಾವಣೆಗಳು ಪ್ರಪ್ರಥಮವಾಗಿ ಭಾರತದ ವಾಯುವ್ಯ ಪ್ರದೇಶಗಳಲ್ಲಿ ಕಂಡು ಬಂಡುದಲ್ಲದೇ ಹರಪ್ಪ ಸಂಸ್ಕೃತಿಯ ಹುಟ್ಟು ಮತ್ತು ಅಭಿವೃದ್ಧಿಯಲ್ಲಿ ಪರ್ಯವಸಾನವಾಯಿತು. ಇನ್ನು ಭಾರತದ ಉಳಿದ ಪ್ರದೇಶಗಳಲ್ಲಿ ಈ ಬದಲಾವಣೆಯ ಅಲೆಯು ಕಡಿಮೆ ಪ್ರಮಾಣದಲ್ಲಿದ್ದು ಮಧ್ಯಯುಗದಿಂದ ಹೊಸ ಶಿಲಾಯುಗದವರೆಗೆ ಮತ್ತು ನಂತರದಲ್ಲಿ ತಾಮ್ರ ಯುಗಕ್ಕೆ ನಾಂದಿಯನ್ನಾಡಿರುವುದು ಕಂಡುಬರುತ್ತದೆ.

ಕಬ್ಬಿಣ ಯುಗ:

ಭಾರತದಲ್ಲಿ ಕಬ್ಬಿಣದ ಉಪಯೋಗದ ಪ್ರಾರಂಭದ ಇತಿಹಾಸವು ಬೇರೆ ಬೇರೆ ಪ್ರದೇಶಗಳಲ್ಲಿ ಆರಂಭವಾಗಿರುವುದು, ಯಾವ ಪ್ರದೇಶಗಳಲ್ಲಿ ಕಬ್ಬಿಣವನ್ನು ಉಪಯೋಗಿಸುತ್ತಿದ್ದರೆಂಬುದರ ಅಧ್ಯಯನವು ನಮಗೆ ಈ ಕಾಲದ ಬಗ್ಗೆ ಮಾಹಿತಿ ನೀಡುತ್ತವೆ. ಕಬ್ಬಿಣದ ಉಪಯೋಗದ ಕಾಲವು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಬದಲಾವಣೆಯಾಗಿರುವುದು ಕಂಡುಬರುತ್ತದೆ. ಆದರೂ ಕ್ರಿ.ಪೂ. 1000 ರಿಂದ ಕ್ರಿ.ಪೂ. 500 ನಡುವೆ ಇದರ ಉಪಯೋಗವು ಇತರೇ ಅನೇಕ ದೊಡ್ಡ ದೊಡ್ಡ ಪ್ರದೇಶಗಳಲ್ಲಿ ಹರಡಿರುವುದು ಕಂಡುಬರುತ್ತದೆ. ಅವುಗಳೆಂದರೆ,

1) ಗಂಗಾನದಿ ಕಣಿವೆಯ ಮೇಲ್ದಂಡೆ ಮತ್ತು ಇದರ ಉಪಭಾಗಗಳು

2) ಮಾಳ್ವ ಪ್ರಸ್ಥಭೂಮಿ ಮತ್ತು ತಪತಿ ಕಣಿವೆ.

3) ದಕ್ಷಿಣ ಮತ್ತು ಕೇಂದ್ರ ಭಾರತದ ಹಲವು ಭೂ ಭಾಗಗಳು.

4) ಬಲೂಚಿಸ್ಥಾನದ ಬಯಲು

5) ಮಧ್ಯ ಮತ್ತು ಗಂಗಾನದಿ ಕಣಿವೆಯ ಕೆಳಭಾಗ

6) ವಾಯುವ್ಯ ಭಾಗ ಅದರಲ್ಲೂ ಪೆಷವರ್ ಪ್ರಾಂತ್ಯದ ಪ್ರಮುಖ ಭಾಗಗಳು

ಗಂಗಾನದಿ ಕೆಣಿವೆಯ ಮೇಲ್ದಂಡೆ ಮತ್ತು ಸಿಂಧೂ-ಗಂಗಾನದಿ ಕಣಿವೆಯ ಮಧ್ಯಭಾಗದಲ್ಲಿ ಪ್ರಪ್ರಥಮವಾಗಿ ಕಬ್ಬಿಣದ ಸುಳಿವು ಕಂಡುಬ್ಂದಿರುವುದು ಕ್ರಿ.ಪೂ. 800ರಲ್ಲಿ ಇಲ್ಲಿಯ ಸಂಸ್ಕೃತಿಯಲ್ಲಿ ಬಣ್ಣ ಹಾಕಿದ ಕಬ್ಬಿಣದ ಬೂದು ಬಣ್ಣದ ಪಾತ್ರೆಗಳು ಕಂಡು ಬಂದಿದ್ದು- ಮೊದಲಿಗೆ ಇವುಗಳ ಉಪಯೋಗವು ತುಂಬಾ ಕಡಿಮೆ ಪ್ರಮಾಣದಲ್ಲಿದ್ದು, ಕ್ರಿ.ಪೂ. ಆರನೇ ಶತಮಾನದ ಮಧ್ಯ ಭಾಗದಲ್ಲಿ ಇದರ ಉಪಯೋಗವು ಸಾಮಾನ್ಯವಾಗಿ ಕಂಡುಬರುತ್ತದೆ. ಈ ಕಾಲದಲ್ಲಿ ಕಪ್ಪು ಬಣ್ಣದ ಮೆರುಗು ನೀಡಿದ ಪಾತ್ರೆಗಳನ್ನು ಕಾಣುತ್ತೇವೆ. ಈ ಕಾಲದಲ್ಲಿ ಇದರ ಉಪಯೋಗ ತಾಣಗಳು ಕೇಂದ್ರ ಪ್ರಾಂತ್ಯಗಳು, ಮತ್ತು ಗಂಗಾನದಿಯ ಕೆಳಭಾಗದಲ್ಲಿ ಸ್ಥಾಪಿತವಾಗಿ ಹಿಂದಿನ ಸಂಸ್ಕೃತಿಗಿಂತ ವಿಭಿನ್ನವಾದ ಮತ್ತು ಮಹತ್ವಪೂರ್ವಕ ಸಂಸ್ಕೃತಿಯಾಗಿ ರೂಪಿತವಾಯಿತು. ಮಾಳವ ಪ್ರಾಂತ್ಯದಲ್ಲಿ ಮತ್ತು ತಪತಿ ನದೀ ಕಣಿವೆಯಲ್ಲಿಯೂ ಇಂತಹ ಸಂಸ್ಕೃತಿಯ ತಾಣಗಳು ಸ್ಥಾಪಿತವಾಗಿದ್ದು ಅವುಗಳಲ್ಲಿ ಮಗ್ದ ಈರಾನ್ ಮತ್ತು ಪ್ರಕಾಶ್ ಮುಂತಾದವು ಪ್ರಸಿದ್ಧಿ ಪಡೆದಿದೆ. ಕಬ್ಬಿಣದ ಉಪಯೋಗವು ತಾಮ್ರ ಯುಗದ ಪ್ರಾರಂಬಹ್ದ ಸಂಸ್ಕೃತಿಯಲ್ಲಿ ಒಂದು ಪ್ರಮುಖ ಬದಲಾವಣೆಯನ್ನು ತಂದಿತೆಂದರೆ ತಪ್ಪಾಗಲಾರದು. ಇದಲ್ಲದೇ ಕಬ್ಬಿಣದ ಉಪಯೋಗವು ಗಂಗಾನದಿ ಬಯಲಿನ ಪ್ರದೇಶಗಳಿಗಿಂತ ಈ ಪ್ರದೇಶಗಳಲ್ಲಿ ಪ್ರಥಮವಾಗಿ ಕಂಡು ಬಂದಿರುವುದು. ಇದು ಸರಿ ಸುಮಾರು ಕ್ರಿ.ಪೂ. 1000 ರಲ್ಲಿರುವುದು ಪತ್ತೆಯಾಗಿದೆ. ಇದರ ಜೊತೆಗೆ ಉತ್ತರ ಕರ್ನಾಟಕದ ಹಳ್ಳೂರಿನಲ್ಲಿ ಕ್ರಿ.ಪೂ.

900ರಲ್ಲಿ ಕಬ್ಬಿಣದ ಉಪಯೋಗವು ಕಂಡುಬಂದಿದ್ದು ಹೊಸಶಿಲಾಯುಗದ ಕಾಲವನ್ನು ಬದಲು ಮಾಡಿರುವುದು ಕಾಣುತ್ತದೆ. ಈ ಪ್ರದೇಶಗಳಲ್ಲಿ ಸಿಕ್ಕಿರುವ ಅನೇಕ ಕಬ್ಬಿಣದ ಉಪಯೋಗಗಳು ಕಬ್ಬಿಣದ ಅಸ್ತಿತ್ವವನ್ನು ತೋರುತ್ತದೆ.

ಕಬ್ಬಿಣ ಯುಗದ ಪ್ರಭಾವ:

ಕಬ್ಬಿಣದ ಉಪಯೋಗವು ಆರ್ಥಿಕ ವ್ಯವಸ್ಥೆಯನ್ನು ಬದಲಾಯಿಸಿರುವುದು ಕಂಡುಬಂದಿದ್ದು, ಅವುಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಮುಂದುವರಿದ ಪ್ರಗತಿಪೂರ್ವ ಪ್ರಮುಖಾಂಶಗಳನ್ನು ತೋರಿಸುತ್ತವೆ. ಗಂಗಾ ನದಿ ಬಯಲು ಮತ್ತು ಮಾಳ್ವ ಪ್ರಾಂತ್ಯಗಳಲ್ಲಿ ಈ ಕಬ್ಬಿಣದ ಉಪಯೋಗವು ಅನೇಕ ನಗರ ಪ್ರದೇಶಗಳ ಉದಯಕ್ಕೆ ಕಾರಣವಾಗಿರುವುದು ಕಂಡುಬರುತ್ತದೆ. ಅನೇಕ ಬ್ರಾಹ್ಮಣಿಕ ಗ್ರಂಥಗಳು ಹಾಗೂ ಬೌದ್ಧ ಗ್ರಂಥಗಳು ಕ್ರಿ.ಪೂ. 1000 ವರ್ಷಗಳ ಮಧ್ಯಭಾಗದಲ್ಲಿ ಇದ್ದಂತಹ ಅನೇಕ ನಗರಗಳನ್ನು ಕುರಿತು ಮಾಹಿತಿ ನೀಡುತ್ತವೆ. ಇದಲ್ಲದೇ ಅನೇಕ ನಗರಗಳಾದ ಅಹಿಚ್ಛತ್ರ, ವಾರಾಣಾಸಿ, ಕೌಸಾಂಬಿ, ಶ್ರಾವಸ್ತಿ ಮತ್ತು ಉಜ್ಜಯಿನಿ ನಗರಗಳು ಕಬ್ಬಿಣ ಯುಗದ ನಗರೀಕರಣಕ್ಕೆ ಸಾಕ್ಷಿಯಾಗಿ ನಿಂತಿವೆಯೆಂದರೆ ತಪ್ಪಾಗಲಾರದು.

ಕ್ರಿ.ಪೂ. 6ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಈ ಕೆಲವಾರು ವಸತಿ ಸ್ಥಳಗಳು ನಗರ ಕೇಂದ್ರಗಳಾಗಿ ಬದಲಾಗಿರುವುದನ್ನು ನಾವು ಕಾಣುತ್ತೇವೆ. ಈ ಬದಲಾವಣೆಯು ಹರಪ್ಪ ನಾಗರೀಕತೆಯ ಪತನದ ನಂತರ ಪ್ರಪ್ರಥಮವಾಗಿ ಕೃಷಿ ಉತ್ಪನ್ನಗಳ ಉತ್ಪಾದನೆಯು ಬಹಳ ಹೆಚ್ಚಿನ ಪ್ರಮಾಣದಲ್ಲಿ ಆಗಿರುವುದನ್ನು ಇಲ್ಲಿ ತೋರಿಸುತ್ತದೆ. ಇದರ ಜೊತೆಗೆ ಇನ್ನೂ ಅನೇಕ ನಗರ ಕೇಂದ್ರಗಳ ಸ್ಥಾಪನೆಯೂ ಸಹ ಆಗಿರುವುದನ್ನು ಸೂಚಿಸುತ್ತದೆ. ಈ ಕಾಲದಲ್ಲಿ ಉಪಯೋಗಿಸುತ್ತಿದ್ದ ಬೆಳ್ಳಿ ಮತ್ತು ತಾಮ್ರದ ನಾಣ್ಯಗಳು ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗಿರುವುದು ಈ ಕಾಲದ ವ್ಯಾಪಾರ ಮತ್ತು ವಾಣಿಜ್ಯದ ಬೆಳವಣಿಗೆಯನ್ನು ಕುರಿತು ಉತ್ತಮ ಮಾಹಿತಿಯನ್ನು ಒದಗಿಸುತ್ತವೆ. ಕೆಲವು ನಗರ ಕೇಂದ್ರಗಳು ರಾಜಕೀಯ ಶಕ್ತಿಯ ಕೇಂದ್ರಗಳಾಗಿದ್ದುದಲ್ಲದೇ ಇವುಗಳನ್ನು ರಕ್ಷಣಾ ಕೇಂದ್ರಗಳಾಗಿಯೂ ಸಹ ಬೆಳೆಸಿದ್ದುದನ್ನು ತಿಳಿಸುತ್ತದೆ. ಹೀಗಾಗಿ ರಕ್ಷಣಾತ್ಮಕ ಘಟಕಗಳನ್ನು ಸ್ಥಾಪಿಸಿ ರಾಜಕೀಯ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸಿರುವುದು ಈ ಯುಗದಲ್ಲಿ ಕಾಣಸಿಗುತ್ತದೆ. ಕಬ್ಬಿಣ ಯುಗವು ಕೃಷಿ, ಕೈಗಾರಿಕೆ, ರಾಜಕೀಯ ಶಕ್ತಿ, ನಗರೀಕರಣ ಮುಂತಾದವುಗಳ ಬೆಳವಣಿಗೆಗೆ ಅತ್ಯುತ್ತಮ ಅವಕಾಶ ಮಾಡಿಕೊಟ್ಟಿರುವುದು ಕಂಡುಬರುತ್ತದೆ.



← ಲೋಹದ ಆಯುಧಗಳು



ಮಣ್ಣಿನ ಪರಿಕರಗಳು →



← ಕಲ್ಲಿನ ಆಯುಧಗಳು



ಕೃಷಿ ಸಲಕರಣೆಗಳು →



ಮಣ್ಣಿನ ಪರಿಕರಗಳು



← ಶಾಶ್ವತ ಮನೆಗಳ ನಿರ್ಮಾಣ

ಶಾಶ್ವತ ಮನೆಗಳ ನಿರ್ಮಾಣ →






← ವಿವಿಧ ವೃತ್ತಿಗಳ ಕಲಿಕೆ

ವಿವಿಧ ವೃತ್ತಿಗಳ ಕಲಿಕೆ →





← ಸಮೂಹ ಜೀವನ

ಪ್ರಾಣಿಗಳ ಪಳಗಿಸುವಿಕೆ →





← ಕೃಷಿಯಲ್ಲಿ ಪ್ರಾಣಿಗಳ ಉಪಯೋಗ

ಗುಹೆಯಲ್ಲಿ ಕಲೆ →



ಹರಪ್ಪ ಸಂಸ್ಕೃತಿಯ ಸಂಶೋಧನೆ

ಕೆಲವು ಇಂಜಿನಿಯರ್‌ಗಳು ರೈಲ್ವೇ ಮಾರ್ಗವನ್ನು ನಿರ್ಮಿಸಲು ಉತ್ತರ ಭಾರತದಲ್ಲಿ ಭೂಮಿಯನ್ನು ಅಗೆಯುತ್ತಿದ್ದಾಗ 1856ರಲ್ಲೇ ಈ ಸಂಸ್ಕೃತಿಗೆ ಸಂಬಂಧಪಟ್ಟ ಇಟ್ಟಿಗೆಗಳು ಕಂಡುಬಂದು ಆ ಇಟ್ಟಿಗೆಗಳನ್ನೇ ರೈಲ್ವೆ ಮಾರ್ಗಗಳ ನಿರ್ಮಾಣದಲ್ಲಿ ಇವರು ಬಳಸಿದರು. ಈ ಅವಶೇಷಗಳ ಇತಿಹಾಸದ ಬಗ್ಗೆ ಇವರಿಗೆ ತಿಳಿಯಲಿಲ್ಲ. 1861ರಲ್ಲಿ ಅಲೆಕ್ಸಾಂಡರ್ ಕನ್ನಿಂಗ್ ಹ್ಯಾಂರವರು ಪಂಜಾಬ್‌ನ ಹರಪ್ಪದಲ್ಲಿ ಕೆಲವು ಮೊಹರುಗಳನ್ನು ಸಂಶೋಧಿಸಿ ಇವರ ಬರವಣಿಗೆಯು ಬ್ರಾಹ್ಮಿ ಲಿಪಿಯಲ್ಲಿತ್ತು ಎಂಬುದಾಗಿ ತಿಳಿಸಿದರು. 1922ರಲ್ಲಿ ಪುರಾತತ್ವ ಶಾಸ್ತ್ರಜ್ಞಾರಾದ ಸರ್ ಜಾನ್ ಮಾರ್ಷಿಯಲ್‌ರವರು, ದಯಾರಾಮ್ ಸಾಹ್ನಿ ಹಾಗೂ ಆರ್.ಡಿ. ಬ್ಯಾನರ್ಜಿಯವರೊಡಗೂಡಿ ಮೊಹೆಂಜೋದಾರದಲ್ಲಿ ಒಂದು ಬೌದ್ಧ ಸ್ತೂಪವನ್ನು ಕಂಡು ಹಿಡಿದರು. ಇದರ ಸಂಶೋಧನೆಯು ಈ ಸಂಸ್ಥೆಗಳು ಅಂದರೆ ಹರಪ್ಪ ಮತ್ತು ಮೊಹೆಂಜೋದಾರೋದಲ್ಲಿ ಸಾಕಷ್ಟು ಸಂಶೋಧನೆಗಳಾಗಿ ಈ ಪ್ರಾಚೀನ ಸಂಸ್ಕೃತಿಯ ಅವಶೇಷಗಳು ದೊರೆತವು. ಈ ಹರಪ್ಪ ಸಂಸ್ಕೃತಿಗೆ ಸಂಬಂಧಪಟ್ಟ ಹರಪ್ಪ ವಸ್ತುಗಳು ದೊರೆತವು. ನಮ್ಮ ಭಾರತದ ಇತಿಹಾಸವು ಈ ವಸ್ತುಗಳ ಅವಶೇಷಗಳನ್ನು ಅವಲಂಭಿಸಿ ರಚನೆಯಾಗಿದೆ. ಈ ಸಂಸ್ಕೃತಿಯ ಲಿಪಿಯನ್ನು ಇನ್ನೂ ಕೂಡ ಬದಲಾಯಿಸಿಲ್ಲ. ಇದರಿಂದಾಗಿ ಈ ಸಂಸ್ಕೃತಿಯ ಅಧ್ಯಯನವು ಅಪೂರ್ಣವಾಗಿದೆ ಎನಿಸಿದೆ. ಅನೇಕ ಪ್ರಶ್ನೆಗಳಾದ ಸಂಸ್ಕೃತಿಯ ರಾಜಕೀಯ ವ್ಯವಸ್ಥೆ, ಭಾಷೆ, ಅನೇಕ ಸಾಮಾಜಿಕ ಲಕ್ಷಣಗಳು ಮತ್ತು ಇತರ ಪ್ರಶ್ನೆಗಳು ಇನ್ನೂ ಉತ್ತರ ಕಾಣದೇ ಉಳಿದಿವೆಯೆಂಬುದಾಗಿ ಹೇಳಬಹುದು.

ಹರಪ್ಪ ಸಂಸ್ಕೃತಿಯ ಪ್ರಮುಖ ಸ್ಥಳಗಳು:

ಹರಪ್ಪ ಸಂಸ್ಕೃತಿಯ ಜನರು ನಗರ, ಪಟ್ಟಣಗಳಲ್ಲಿ ವಾಸಿಸುತ್ತಿದ್ದರು. ಅವರು ವಾಸಿಸುತ್ತಿದ್ದ ಅನೇಕ ನಗರಗಳು ಕಂಡು ಬಂದಿವೆ. ಈ ನಗರಗಳಲ್ಲಿ ಇಂದಿನ ಕಾಲಕ್ಕೆ ಪ್ರಮುಖ ಲಕ್ಷಣಗಳನ್ನು ಕಾಣುತ್ತೇವೆ. ಈ ನಗರಗಳಲ್ಲಿ ಕೆಲವು ನಗರಗಳ ಮಾಹಿತಿಯನ್ನು ಪಡೆಯೋಣ.

ಮೊಹೆಂಜೋದಾರೋ:

ಮೊಹೆಂಜೋದಾರೋ ಪಟ್ಟಣವನ್ನು "ಸತ್ತವರ ಸಮಾದಿ" ಎಂದು ಕರೆಯಲಾಗುತ್ತಿತ್ತು. ಈ ಪಟ್ಟಣವು ಸಿಂಧ್ ಪ್ರಾಂತ್ಯದ ಲಾಡ್ಖಾನ್ ಜಿಲ್ಲೆಯ ಸಿಂಧು ನದಿ ಹಾಗೂ ನಾರಾ ಕಾಲುವೆಗಳ ನಡುವಿನ ಬಯಲು ಪ್ರದೇಶಗಳಲ್ಲಿ ಕಂಡುಬಂದಿದ್ದು ಇಲ್ಲಿ ಇನ್ನೊಂದು ನದಿಯಾದ ಮೆಹ್ರಾನ್ ಹರಿಯುತ್ತಿದ್ದು ಕೆಲವು ಪ್ರದೇಶಗಳನ್ನು ದಾಟಿ ಹೋಗಿ ಕಣ್ಮರೆಯಾಗುತ್ತದೆ. ಈ ಪ್ರದೇಶಾದ ಭೂಮಿಯು ಬಹಳ ಫಲವತ್ತಾಗಿದ್ದು ಈ ಪ್ರದೇಶವನ್ನು ಸಾಮಾನ್ಯವಾಗಿ 'ನಖಿಲಸ್ತಾನ್' ಎಂದು ಕರೆಯುವರು ಹಾಗೂ ಇದನ್ನು 'ಸಿಂಧ್ ಪ್ರಾಂತ್ಯದ

ತೋಟ' ಎಂದೂ ಸಹ ಕರೆದಿದ್ದಾರೆ. ಈ ಪ್ರದೇಶಾವನ್ನು ಸುಮಾರು ಐದು ಸಾವಿರ ವರ್ಷಗಳ ಹಿಂದೆ ನಿರ್ಮಿಸಿದ್ದು, ಸುಮಾರು ಏಳು ಬಾರಿ ಪುನಃ ನಿರ್ಮಾಣ ಮಾಡಲಾಯಿತೆಂದೂ ನಂಬಲಾಗಿದೆ. ಈ ಪ್ರದೇಶವು ನಶಿಸಿ ಹೋಗಲು ಕಾರಣಗಳು ತಿಳಿಯದಿದ್ದರೂ ಸಿಂಧೂನದಿ, ನಾರಾ ಹಾಗೂ ಮೆಹ್ರಾನ್ ನದಿಗಳ ನೆರೆ ಅಥವಾ ಪ್ರವಾಹಗಳಿಂದಾಗಿ ನಶಿಸಿ ಹೋಗಿರಬಹುದೆಂದು ತಿಳಿಯಲಾಗಿದೆ.

ಹರಪ್ಪಾ:

ಹರಪ್ಪಾ ನಗರವು ಮಾಂಟ್ರೋಮೆರ್‍ರಿ ಜಿಲ್ಲೆಯಲ್ಲಿದ್ದು, ಕೆಲವು ಇತಿಹಾಸಕಾರರ ಪ್ರಕಾರ ಇದು ಗಾತ್ರದಲ್ಲಿ ಮೊಹೆಂಜೋದಾರೋಗಿಂತ ದೊಡ್ಡದಾಗಿದೆ. ಆದರೆ ಪರ್ಸಿವಲ್ ಸ್ವಿಯರ್‌ರವರ ಪ್ರಕಾರ ಹರಪ್ಪಾ ನಗರವು ಸಹ ಮೊಹೆಂಜೋದಾರೋ ಪಟ್ಟಣದಂತೆ ಮೂರು ಮೈಲಿಗಳ ವಿಸ್ತೀರ್ಣವನ್ನು ಹೊಂದಿದೆ. ಸದ್ಯದಲ್ಲಿ ಈ ಪಟ್ಟಣವು ನಶಿಸಿಹೋಗಿರುವಾಗಿದೆ. ಇದರ ಪ್ರಚಾನತೆಯ ಬಗ್ಗೆ ತಿಳಿಸುವುದಾದರೆ ಕೆಲವು ಇತಿಹಾಸಕಾರರ ಪ್ರಕಾರ ಈ ಪಟ್ಟಣವು ಮೊಹೆಂಜೋದಾರೋಗಿಂತ ಹಳೆಯದೆಂದು ಹೇಳುತ್ತಾರೆ. ಆದರೆ ಬಹಳಷ್ಟು ವಿದ್ವಾಂಸರು ಈ ಹೇಳಿಕೆಯನ್ನು ಒಪ್ಪುವುದಿಲ್ಲ.

ರೋಪಾರ್, ಜೈಸಲ್ಮೀರ್ ಮತ್ತು ಲೋಥಾಲ್:

ಭೈ ಉತ್ಖನನವನ್ನು ಪ್ರಾಚ್ಯ ಇಲಾಖೆಯು ಅನೇಕ ಕಡೆಗಳಲ್ಲಿ ನಡೆಸಿದ್ದು, ಅವುಗಳಲ್ಲಿ ಇಂದಿನ ಪಂಜಾಬ್ ರಾಜ್ಯದಲ್ಲಿರುವ ರೋಪಾಲ್‌ನಗರ, ರಾಜಾಸ್ತಾನದ ಜೈಸಲ್ಮೀರ್ ಮತ್ತು ಲೋಥಾಲ್ (ಗುಜರಾತ್)ಗಳಲ್ಲಿ ಈ ಸಂಸ್ಕೃತಿಯ ಅವಶೇಷಗಳನ್ನು ಕಾಣುತ್ತೇವೆ.

ಹರಪ್ಪ ಸಂಸ್ಕೃತಿಯ ಪ್ರಮುಖ ಲಕ್ಷಣಗಳು:

ನಗರಯೋಜನೆ ಮತ್ತು ಕಟ್ಟಡಗಳು :

ಹರಪ್ಪಾ ಸಂಸ್ಕೃತಿಯ ಜನರು ಹಲವು ದೊಡ್ಡ ಮತ್ತು ಸಣ್ಣ ನಗರಗಳಲ್ಲಿ ವಾಸಮಾಡುತ್ತಿದ್ದುದು ಕಂಡು ಬರುತ್ತದೆ. ಅನೇಕ ನಗರ, ಪಟ್ಟಣಗಳು ಸಂಶೋಧನೆಯಿಂದ ಹೊರಬಂದಿದೆ. ಅವುಗಳಲ್ಲಿ ಮೊಹೆಂಜೋದಾರೋ ಮತ್ತು ಹರಪ್ಪ ಎರಡೂ ಬಹು ದೊಡ್ಡ ನಗರಗಳು, ಹರಪ್ಪಾ ಸಂಸ್ಕೃತಿಯ ನಗರ ಯೋಜನೆಯು ಮಹದಾಶ್ಚರ್ಯಗಳಲ್ಲಿ ಒಂದೆನಿಸಿದೆ. ಇವರ ನಗರ ಯೋಜನೆಯು ಹಲವಾರು ನೈಪುಣ್ಯತೆಯನ್ನು ವ್ಯಕ್ತಪಡಿಸುವ ಯೋಜನೆಗಳಾಗಿವೆ. ಇಲ್ಲಿಯ ನಗರಗಳ ರಸ್ತೆಗಳು ಬಹಳ ವಿಶಾಲವಾಗಿದ್ದು ಸುಮಾರು 9 ರಿಂದ 34 ಅಡಿಗಳಷ್ಟು ಅಗಲವಾಗಿದ್ದವು. ಅನೇಕ ಮನೆಗಳು ಮತ್ತು ಕಟ್ಟಡಗಳನ್ನು ಕಟ್ಟುತ್ತಿದ್ದು, ಯಾವುದೇ ಒಂದು ಕಟ್ಟಡವೂ ನಕ್ಷೆಯನ್ನು ಮೀರದೆ, ರಸ್ತೆಗೆ ತಗುಲದಂತೆ ನಿರ್ಮಾನವಾಗಿದ್ದವು. ಇದರಿಂದ

ನಗರಯೋಜನೆಯ ನಿಯಮ ಎಷ್ಟು ಕಟ್ಟುನಿಟ್ಟಾಗಿತ್ತು ಎಂಬುದನ್ನು ಸೂಚಿಸುತ್ತದೆ. ಈ ನಗರ ಯೋಜನೆಯಲ್ಲಿ ಚರಂಡಿ (ಒಳ ಮತ್ತು ಹೊರ) ವ್ಯವಸ್ಥೆಯು ಬಹಳ ಮುಖ್ಯವಾದುದಾಗಿದೆ. ಚರಂಡಿಗಳನ್ನು ಒಳ್ಳೆಯ ಬೆಂದ ಇಟ್ಟಿಏಗೆಗಳಿಂದ ಕಟ್ಟುತ್ತಿದ್ದು, ಈ ಚರಂಡಿಯನ್ನು ಅವುಗಳಿಂದ ಮುಚ್ಚುತ್ತಿದ್ದು, ಚರಂಡಿಯನ್ನು ಸ್ವಚ್ಛ ಮಾಡಲು ಹಲವು ರೀತಿಯ ವ್ಯವಸ್ಥೆಯನ್ನು ಮಾಡಿದ್ದರು. ಸಾರ್ವಜನಿಕರು ಹಾಗೂ ಪಶುಗಳ ಉಪಯೋಗಕ್ಕೆ ಸಾರ್ವಜನಿಕ ಬಾವಿಗಳನ್ನು ಮಾಡಿದ್ದರು. ವಾಸಮಾಡುವ ಮನೆಗಳು ಹಲವಾರು ಅಳತೆಗಳಿದ್ದವು. ಒಂದು ಕೊಠಡಿ, ಎರಡು ಕೊಠಡಿ, ಹೆಚ್ಚು ಕೊಠಡಿ ಹಾಗೂ ಬಹುಮಡಿ ಕಟ್ಟಡಗಳನ್ನು ನಿರ್ಮಿಸುತ್ತಿದ್ದರು. ಈ ಕಟ್ಟಡಗಳ ಗೋಡೆಗಳು 4 ರಿಂದ 5 ಇಟ್ಟಿಗೆಗಳಷ್ಟು ದಪ್ಪವಾಗಿದವು. ಈ ಮನೆಗಳ ಬಾಗಿಲುಗಳು 3 ರಿಂದ 7 ಅಡಿ ಎತ್ತರವಾಗಿದ್ದು ಇವುಗಳು ರಸ್ತೆಗೆ ಅಭಿಮುಖವಾಗಿ ನಿಲ್ಲಿಸಲ್ಪಟ್ಟಿದ್ದವು. ಈ ಜನರು ಮನೆಗಳ ನಿರ್ಮಾಣಕ್ಕೆ ಸುಟ್ಟ ಇಟ್ಟಿಗೆಗಳನ್ನು ಉಪಯೋಗಿಸುತ್ತಿದ್ದು 20 ರಿಂದ 25 ಇಂಚುಗಳಷ್ಟು ಉದ್ದವಾಗಿದ್ದವು. ಕಟ್ಟಡಗಳ ನೆಲವನ್ನು ಸಾರಿಸುವ ನೆಲ ಅಥವಾ ಅದಕ್ಕೆ ಬಣ್ಣವನು ಬಳಿದು ಪಾಲೀಶ್ ಮಾಡುವ ಪದ್ಧತಿ ಕೂಡ ಇತ್ತು. ಈ ವಸತಿ ಗೃಹಗಳು ಅಂಗಳ, ಮೊಗಸಾಲೆ, ಅಡಿಗೆ ಮನೆ, ದೊಡ್ಡ ಸಭಾಂಗಣ, ಸ್ನಾನದ ಕೊಠಡಿ, ಶಯ್ಯಾಗೃಹ, ಶೌಚಗೃಹ ಮತ್ತು ಇತರೇ ಅಗತ್ಯ ಸೌಲಭ್ಯಗಳನ್ನು ಹೊಂದಿರುತ್ತಿದ್ದವು. ದೊಡ್ಡ ಹಜಾರಗಳನ್ನೊಳಗೊಂಡ ಕೆಲವು ಕಟ್ಟಡಗಳನ್ನು ಶೋಧಿಸಿ ಸಂಪಾದಿಸಲಾಗಿದೆ. ಇವುಗಳು ಸಭಾಂಗಣಗಳು, ಸಾರ್ವಜನಿಕ ಕಛೇರಿಗಳು, ವಿಚಾರ ವಿನಿಮಯ ಸಭಾಮ್ಗಣಗಳು ಅಥವಾ ಅರಮನೆಗಳಾಗಿದವು ಎಂದು ಊಹಿಸಲಾಗಿದೆ. ಒಂದು ಬಹಳ ದೊಡ್ಡ ಸ್ನಾನಗೃಹವು ಮೊಹೆಂಜೋದಾರೋವಿನಲ್ಲಿ ಕಂಡು ಬಂದಿದ್ದು ಇದು 54 × 33 ಮೀಟರುಗಳಿದ್ದು, ಇದೇ ಗೋಡೆಯು 2 ಮೀಟರ್ ದಪ್ಪವಾಗಿದೆ. ಮಧ್ಯದಲ್ಲಿ ಒಂದು ಈಜು ಕೊಳವು ಇದ್ದು ಅದರ ಅಳತೆ 12 × 7 ಮೀಟರಿದ್ದು 2.5 ಮೀಟರ್ ಆಳವಿದ್ದು, ಇದರ ಆಳಕ್ಕೆ ಹೋಗಲು ಅನೇಕ ಮೆಟ್ಟಿಲುಗಳನ್ನು ಮಾಡಲಾಗಿದೆ. ಈಜುಕೊಳದ ನಾಲ್ಕೂ ಬದಿಯಲ್ಲೂ ಸಣ್ಣ ಕೊಠಡಿಗಳಿವೆ. ಈಜುಕೊಳದ ಪಕ್ಕದಲ್ಲಿ ಒಂದು ದೊಡ್ಡ ಭಾವಿಯಿದ್ದು ಅದರಿಂದ ಶುದ್ಧ ನೀರನ್ನು ಕೊಳಕ್ಕೆ ಬಿಡಲಾಗುತ್ತಿತ್ತು ಎಂದು ಕಾಣುತ್ತೇವೆ. ಇದಲ್ಲದೆ ನೀರನ್ನು ಹೊರ ಸಾಗಿಸಲು ದೊಡ್ಡದಾದ ಚರಂಡಿಯನ್ನು ವ್ಯವಸ್ಥೆಯೂ ಇದ್ದುದಾಗಿ ಕಂಡು ಬಂದಿದೆ. ಈ ಎಲ್ಲಾ ಸೌಲಭ್ಯಗಳು ಹರಪ್ಪಾ ಸಂಸ್ಕೃತಿಯು ಜನರು ಸ್ವಚ್ಚತೆಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿದ್ದರೆಂದೂ ಹಾಗೂ ಸ್ನಾನಪ್ರಿಯರೆಂದೂ ತಿಳಿದುಬರುತ್ತದೆ. ಹರಪ್ಪಾ ಸಂಸ್ಕೃತಿಯ ಇನ್ನೊಂದು ಮಹತ್ವಪೂರ್ಣ ಅಂಶವೆಂದರೆ ಅತ್ಯುತ್ತಮವಾದ ಚರಂಡಿ ವ್ಯವಸ್ಥೆ. ಒಂದೊಂದು ಮನೆಗೂ ಸಹ ಈ ಚರಂಡಿ ವ್ಯವಸ್ಥೆಯನ್ನು ಪಟ್ಟಣಗಳಲ್ಲಿ ಕಲ್ಪಿಸಲಾಗಿತ್ತು. ಮನೆಯೊಳಗಿನ ಕಲ್ಮಶ ನೀರನ್ನು ಈ ಚರಂಡಿಗೆ ಬಿಡಲು ವ್ಯವಸ್ಥೆ ಮಾಡಲಾಗಿದ್ದು, ಬೀದಿಯಲ್ಲಿರುವ ಚರಂಡಿಗೆ ಇದನ್ನು ಜೋಡಿಸಲಾಗಿತ್ತು. ಇನ್ನು ಬೀದಿ ಚರಂಡಿಗೆ ಬರುವ ನೀರು ಮುಖ್ಯ ಕಾಲುವೆಗೆ ಸೇರಿಕೊಂಡು ಪಟ್ಟಣದಿಂದ ಹೊರಗೆ ಸಾಗಿಸಲು ಏರ್ಪಾಡಾಗಿತ್ತು. ಈ ಚರಂಡಿಯನ್ನು ಇಟ್ಟಿಗೆ ಕಟ್ಟಡಗಳಿಂದ

ಮುಚ್ಚುವ ಏರ್ಪಾಡನ್ನು ಸಹ ಮಾಡಲಾಗಿತ್ತು. ಇದೊಂದು ಅಪೂರ್ವ ಹಾಗೂ ಪ್ರಮುಖ ಪದ್ಧತಿಯಾಗಿದ್ದು ಇದು ಹರಪ್ಪಾ ಸಂಸ್ಕೃತಿಯ ಆಡಳಿತ ಹೆಚ್ಚುಗಾರಿಕೆಯನ್ನು ತೋರಿಸುತ್ತದೆ.

ಸಾಮಾಜಿಕ ಜೀವನ:

ಹರಪ್ಪಾ ಸಂಸ್ಕೃತಿಯ ಜನರು ಉತ್ತಮ ಸಾಮಾಜಿಕ ಜೀವನದ ಪದ್ಧತಿಯನ್ನು ಹೊಂದಿದರು. ಅವರು ಸಂಘಾಜೀವಿಗಳಾಗಿದ್ದು ಸಮಾಜದಲ್ಲಿ ಒಬ್ಬರಿಗೊಬ್ಬರು ಕಲೆತು ಜೀವನ ಸಾಗಿಸುತ್ತಿದ್ದರಲ್ಲದೇ ಅವರು ಸುಸಂಸ್ಕೃತರೂ ಆಗಿದ್ದುದು ಕಂಡುಬರುತ್ತದೆ.

ಆಹಾರ:

ಹರಪ್ಪಾ ಸಂಸ್ಕೃತಿಯ ಜನರು ಭತ್ತ, ಗೋಧಿ, ಬಾರ್ಲಿ ಹಾಗೂ ಬೇಳೆಗಳನ್ನು ಬೆಳೆದು ತಮ್ಮ ಆಹಾರ ಪದಾರ್ಥಗಳಲ್ಲಿ ಉಪಯೋಗಿಸುತ್ತಿದ್ದರು. ಅವರು ಹಾಲು, ತುಪ್ಪ, ಮೊಸರು, ಮೀನು, ಮೊಟ್ಟೆ ಮತ್ತು ಪ್ರಾಣಿಗಳ ಮಾಂಶವನ್ನು ಸೇವಿಸುತ್ತಿದ್ದರು. ಹಲವು ಹಣ್ಣುಗಳು ಹಾಗೂ ತರಕಾರಿಗಳನ್ನು ಬಳಸುತ್ತಿದ್ದರು.

ವಸ್ತ್ರಗಳು ಹಾಗೂ ಆಭರಣಗಳು:

ಹರಪ್ಪಾ ಸಂಸ್ಕೃತಿಯ ಅನೇಕ ಮೂರ್ತಿಶಿಲ್ಪಗಳು ಹಾಗೂ ವರ್ಣಚಿತ್ರಗಳು ಇವರು ಧರಿಸುತ್ತಿದ್ದ ವಸ್ತುಗಳು ಹಾಗೂ ಆಭರಣಗಳ ಬಗ್ಗೆ ಮಾಹಿತಿಯನ್ನು ನೀಡುತ್ತವೆ. ಇವರು ಹತ್ತಿಬಟ್ಟೆ ಹಾಗೂ ಉಣ್ಣೆಬಟ್ಟೆಗಳನ್ನು ಧರಿಸುತ್ತಿದ್ದರು. ಪುರ್ಷ ಹಾಗೂ ಸ್ತ್ರೀಯರು ಉಡುಪುಗಳಲ್ಲಿ ಅಷ್ಟೇನೂ ವ್ಯತ್ಯಾಸ ಕಾಣುವುದಿಲ್ಲ. ಅವರು ಮುಖ್ಯವಾಗಿ ಎರಡು ಉಡುಪುಗಳನ್ನು ಧರಿಸುತ್ತಿದ್ದರು. ಅವುಗಳೆಂದರೆ ಒಂದು ಅವರ ಸೊಂಟಕ್ಕೆ ಸುತ್ತಿಕೊಂಡ ವಸ್ತ್ರ ಅಥವಾ ಧೋತಿ, ಇನ್ನೊಂದು ಅವರ ಎದೆಯ ಭಾಗವನ್ನು ಮುಚ್ಚುವಂತಹ ಒಂದು ವಸ್ತ್ರ. ಇವರು ಅನೇಕ ಆಭರಣಗಳನ್ನು ಧರಿಸುತ್ತಿದ್ದು ಅವುಅಗಳಲ್ಲಿ ಬೆಳ್ಳಿ, ಚಿನ್ನ, ಕಂಚು, ಹಿತ್ತಾಳೆ, ಕಪ್ಪೆಚಿಪ್ಪು ಅಲ್ಲದೇ ಕೆಲವು ಬೆಲೆ ಬಾಳುವ ಕಲ್ಲುಗಳನ್ನು ಉಪಯೋಗಿಸುತ್ತಿದ್ದರು. ಅವುಗಳಲ್ಲಿ ಪ್ರಶಸ್ತ ಕಲ್ಲು ಮುಂತಾದವುಗಳನ್ನು ತಮ್ಮ ಆಭರಣಗಳಲ್ಲಿ ಉಪಯೋಗಿಸುತ್ತಿದ್ದುದು ಕಂಡು ಬಂದಿದೆ. ಇವುಗಳಲ್ಲದೇ ಕಿವಿಯೋಲೆ, ಕೊರಳಿನ ಸರಗಳು, ಕೈಬೆರಳಿನ ಉಂಗುರಗಳು, ಕಡಗ ಮುಂತಾದ ಆಭರಣಗಳನ್ನು ಅಲ್ಲದೆ ಕಂಚು, ಹಿತ್ತಾಳೆ ಆಭರಣಗಳನ್ನು ಧರಿಸುತ್ತಿದ್ದರು. ಇಲ್ಲಿಯ ಸ್ತ್ರೀಯರು ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಮುಖದ ಪೌಡರ್‌ಗಳನ್ನು ಅನೇಕ ಸುಗಂದ ದ್ರವ್ಯಗಳನ್ನು ತುಟಿ ಬಣ್ಣ ಮುಂತಾದವುಗಳನ್ನು ಉಪಯೋಗಿಸುತ್ತಿದ್ದರು. ಇವರಲ್ಲ ಪರದಾಪದ್ಧತಿಯು ಇರಲಿಲ್ಲವೆಂದು ತಿಳಿದುಬರುತ್ತದೆ.

ವಿನೋದ ಕ್ರೀಡೆಗಳು:

ಹರಪ್ಪಾ ಸಂಸ್ಕೃತಿಯ ಜನರು ಅನೇಕ ರೀತಿಯ ವಿನೋದ ಕ್ರೀಡೆಗಳಲ್ಲಿ ಭಾಗವಹಿಸುತ್ತಿದ್ದರು. ಅವುಗಳಲ್ಲಿ ಪ್ರಾಣಿಗಳನ್ನು ಭೇಟೆಯಾಡುವುದು, ಮೀನು ಹಿಡಿಯುವುದು ಮುಖ್ಯವಾಗಿದ್ದವು. ಅನೇಕ ಪ್ರಾಣಿಗಳು ಮತ್ತು ಪಕ್ಷಿಗಳನ್ನು ಭೇಟೆಯಾಗಿ ಅವುಗಳನ್ನು ಸಾಕುವುದನ್ನು ಮಾಡುತ್ತಿದ್ದರು. ಇವುಗಳಲ್ಲದೇ ಅನೇಕ ಒಳಕ್ರೀಡೆಗಳನ್ನು ಆಡುತ್ತಿದ್ದರು. ಅವುಗಳಲ್ಲಿ ಚದುರಂಗ, ಪಗಡೆಯಾಟ ಪ್ರಮುಖವಾದವುಗಳು. ಅಲ್ಲದೇ ಇಲ್ಲಿಯ ಜನರು ಹಾಡುಗಾರಿಕೆ, ನೃತ್ಯ ಮತ್ತು ವರ್ಣಚಿತ್ರಗಳನ್ನು ಬಿಡಿಸುವುದರಲ್ಲಿ ಪರಿಣಿತರಾಗಿದ್ದರು. ಇದಕ್ಕೆ ಉದಾಹರಣೆಯಾಗಿ ಮೊಹೆಂಜೋದಾರೋನಲ್ಲಿ ಸಿಕ್ಕಿರುವ ಒಬ್ಬ ನೃತ್ಯಗಾತಿಯ ಚಿತ್ರವು ಆಕೆಯ ನೃತ್ಯ, ಧರಿಸಿದ ಆಭರಣಗಳು ಮುಂತಾದವುಗಳನ್ನು ತಿಳಿಸುತ್ತದೆ. ಇವರ ಮಕ್ಕಳು ಅನೇಕ ಮರದ ಆಟದ ಸಾಮಾನುಗಳನ್ನು, ಗೋಲಿಗಳನ್ನು ಹಾಗೂ ಅಮೃತ ಶಿಲೆಯ ಕಲ್ಲುಗಳನ್ನು ತಮ್ಮ ಆಟದ ವಸ್ತುಗಳಾಗಿ ಉಪಯೋಗಿಸುತ್ತಿದ್ದರು. ಅಲ್ಲದೇ ರಟ ರಟ ಸದ್ದು ಮಾಡುವ ವಸ್ತುಗಳು, ಸಿಳ್ಳು (ಸೀಟಿ) ಊದುವ ವಸ್ತುಗಳು, ಸಣ್ಣ ಮಣ್ಣಿನ ಗಾಡಿಗಳು ಹಾಗೂ ಹಲವು ಪ್ರಾಣಿಗಳ ಮಾದರಿ ಆಟದ ವಸ್ತುಗಳನ್ನು ಉಪಯೋಗಿಸುತ್ತಿದ್ದರು.

ಶಿಕ್ಷಣ ಹಾಗೂ ಬರವಣಿಗೆ:

ಹರಪ್ಪಾ ಸಂಸ್ಕೃತಿಯ ಜನರು ಶಿಕ್ಷಣದಲ್ಲಿ ಆಸಕ್ತಿಯನ್ನು ಹೊಂದಿದ್ದು ಓದುವುದು ಬರೆಯುವುದರಲ್ಲಿ ಅತಿ ಹೆಚ್ಚಿನ ಆಸಕ್ತಿಯನ್ನು ತೋರಿದ್ದಾರೆಂದು ಕಂಡು ಬರುತ್ತದೆ. ಇವರು ಚಿತ್ರ ಸಹಿತ ಬರವಣಿತೆಯನ್ನು ಅಳವಡಿಸಿಕೊಂಡಿದ್ದು ಮನುಷ್ಯ ಹಾಗೂ ಪ್ರಾಣಿಗಳ ಚಿತ್ರಗಳನ್ನು ಬರೆಯುತ್ತಿದ್ದರು. ಹಲವಾರು ಮೊಹರುಗಳು ಸಿಕ್ಕಿದ್ದು ಅವುಗಳ ಮೇಲೆ ಅನೇಕ ಬಗೆಯ ಕೆತ್ತನೆ ಹಾಗೂ ಬರವಣಿಗೆಗಳನ್ನು ಬರೆದಿರುವುದು ಕಂಡು ಬರುತ್ತದೆ. ಆದರೆ ಬರವಣಿಗೆಗಳನ್ನು ಇನ್ನೂ ಓದಲು ಸಾಧ್ಯವಾಗಿಲ್ಲ. ಇವರ ಕಾಲದಲ್ಲಿ ಶಿಕ್ಷಣ ಸಂಸ್ಥೆಗಳ ಬಗ್ಗೆ ಯಾವುದೇ ಮಾಹಿತಿಗಳಿಲ್ಲ.

ಶವಸಂಸ್ಕಾರದ ವಿಧಿಗಳು:

ಇವರ ಶವಸಂಸ್ಕಾರದ ವಿಧಿ ವಿಧಾನಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರಕದಿದ್ದರೂ, ಹರಪ್ಪಾದಲ್ಲಿ ಸಿಕ್ಕಿರುವ ಸಮಾಧಿಗಳನ್ನು ನೋಡಿದರೆ ಇವರು ಶವವನ್ನು ಹೂಳುವ ಪದ್ಧತಿಯನ್ನು ಇಟ್ಟುಕೊಂಡಿದ್ದರೆಂದು, ನದಿಗೆ ಶವವನ್ನು ಎಸೆಯುವುದು ಕೆಲವೊಮ್ಮೆ ನದಿಗಳ ದಡದಲ್ಲಿ ಶವವನ್ನು ಸುಡುತ್ತಿದ್ದರೆಂದೂ ತಿಳಿದುಬರುತ್ತದೆ.

ಆರ್ಥಿಕ ಜೀವನ:

ಹರಪ್ಪಾ ಸಂಸ್ಕೃತಿಯ ಜನರು ಶ್ರೀಮಂತರೂ, ಸಮೃದ್ಧರೂ ಹಾಗೂ ಶಾಂತಿಯನ್ನು ನಂಬಿದವರಾಗಿದ್ದರು. ಇವರು ಈ ಕೆಳಗಿನ ವೃತ್ತಿಗಳಲ್ಲಿ ತೊಡಗಿದ್ದರು.

ಅ) ಕೃಷಿ ಹಾಗೂ ಕೃಷಿ ಉತ್ಪಾದನೆ:

ಹರಪ್ಪಾ ಸಂಸ್ಕೃತಿಯ ಪ್ರಮುಖ ಕಸುವೆಂದರೆ ಕೃಷಿ ಅಥವಾ ಬೇಸಾಯ. ಇವರ ಬೇಸಾಯದ ಉಪಕರಣಗಳು ದೊರೆಯದೇ ಇದ್ದರೂ ಆಧುನಿಕ ನೇಗಿಲಿನ ರೀತಿಯ ಉಪಕರಣಗಳನ್ನು ಉಪಯೋಗಿಸಿ ಭೂಮಿಯನ್ನು ಉಳುಮೆ ಮಾಡುತ್ತಿದ್ದರೆಂದು ತಿಳಿಯುತ್ತದೆ. ಬೆಳೆ ಕೊಯ್ಯುವುದು, ಸ್ವಚ್ಛಮಾಡುವುದು ಮುಂತಾದ ಕಾರ್ಯಗಳನ್ನು ಹಲವು ಉಪಕರಣಗಳ ಸಹಾಯದಿಂದ ಮಾಡುತ್ತಿದ್ದರೆಂದು ಕಾಣುತ್ತದೆ. ಇವರು ಬೆಳೆಯುತ್ತಿದ್ದ ಬೆಳೆಗಳಿಗೆ ನೀರಾವರಿಯನ್ನು ಹಲವು ನದಿಗಳ ಮೂಲಕ ಹಾಯಿಸುತ್ತಿದ್ದರೆಂದು ತೋರುತ್ತದೆ. ಇವರು ಕೃಷಿಯಲ್ಲಿ ಗೋಧಿ, ಬಾರ್ಲಿ, ಭತ್ತ, ಹತ್ತಿ ಹಾಗೂ ಖರ್ಜೂರವನ್ನು ಬೆಳೆಯುತ್ತಿದ್ದರು. ಅನೇಕ ಹಣ್ಣುಗಳನ್ನು ಬೆಳೆಯುತ್ತಿದ್ದರು. ಸಾಸಿವೆ, ಹುಚ್ಚೆಳ್ಳನ್ನು ಬೆಳೆಯುತ್ತಿದ್ದರು. ಹೆಚ್ಚು ಬೆಳೆಯನ್ನು ಬೆಳೆದು ಶೇಖರಿಸಲು ತಮ್ಮ ಮನೆಗಳ ಖಣಜಗಳಲ್ಲದೇ ಸಾರ್ವಜನಿಕ ಖಣಜಗಳನ್ನು ಉಪಯೋಗಿಸುತ್ತಿದ್ದುದು ಕಂಡುಬರುತ್ತದೆ. ಇವರ ಉಳುಮೆಯ ಭೂಮಿ ಸಾಮಾನ್ಯವಾಗಿ ನದಿಯ ದಡದಲ್ಲಿದ್ದು ಅಲ್ಲಿಯ ಫಲವತ್ತಾದ ಮೆಕ್ಕಲು ಮಣ್ಣು ಹಾಗೂ ನೀರನ್ನು ಉಪಯೋಗಿಸಿ ಉತ್ತಮ ಬೆಳೆಗಳನ್ನು ಬೆಳೆಯುತ್ತಿದ್ದರು. ಆದರೆ ಇವರು ಕೃಷಿ ಉತ್ಪಾದನಾ ಬೆಳೆಗಳನ್ನು ಮಾರಾಟ ಮಾಡುತ್ತಿದ್ದುದಕ್ಕೆ ಯಾವುದೇ ದಾಖಲೆಗಳಿರುವುದಿಲ್ಲ. ಇನ್ನೂ ಕೃಷಿಯಲ್ಲಿ ದೊಡ್ಡ ಹೆಗಲಿರುವ ಎತ್ತುಗಳು ಹಾಗೂ ಕೋಣಗಳನ್ನು ಉಪಯೋಗಿಸುತ್ತಿದ್ದರು.

ಆ) ಗೃಹ ಕೈಗಾರಿಕೆ ಉತ್ಪಾದನೆ:

ಹರಪ್ಪಾ ಸಂಸ್ಕೃತಿಯ ಜನರು ಎರಡು ರೀತಿಯ ಪಾತ್ರೆಗಳನ್ನು ಉಪಯೋಗಿಸುತ್ತಿದ್ದರು. ಅವುಗಳು ಮಣ್ಣಿನಿಂದ ಹಾಗೂ ಲೋಹಗಳಿಂದ ಮಾಡಲ್ಪಟ್ಟಿದ್ದವು. ಮಣ್ಣಿನಿಂದ ಮಾಡಿದ ವಸ್ತುಗಳನ್ನು ಉತ್ತಮವಾಗಿ ತಯಾರಿಸುತ್ತಿದ್ದು ಅವುಗಳಲ್ಲಿ ಕೆಲವು ಸರಳವಾಗಿಯೂ, ಕೆಲವು ಬಣ್ಣದ ಚಿತ್ರಗಳಿಂದಲೂ ಹಾಗೂ ಹೊಳಪನ್ನು ಕೊಟ್ಟವುಗಳೂ ಆಗಿದ್ದವು. ಇನ್ನು ಇವರು ಲೋಹಗಳಲ್ಲಿ ಅನೇಕ ಸೂಚಿಗಳು, ಮುಳ್ಳುಗಳು, ಚಾಕುಗಳು, ಕತ್ತರಿಗಳು, ಕೊಡಲಿಗಳು ಮೀನು ಹಿಡಿಯುವ ಗಾಳದ ಕೊಕ್ಕೆಗಳು, ಕ್ಷೌರದ ಕತ್ತಿಗಳು ಮುಂತಾದವುಗಳನ್ನು ತಯಾರಿಸುತ್ತಿದ್ದರು. ಇವುಗಳನ್ನು ತಾಮ್ರ, ಹಿತ್ತಾಳೆ, ಕಂಚುಗಳಲ್ಲಿ ತಯಾರಿಸುತ್ತಿದ್ದರು. ಇವರು ಕಬ್ಬಿಣವನ್ನು ಉಪಯೋಗಿಸುತ್ತಿದ್ದುದರ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ. ಬಾಚಣಿಗೆಗಳನ್ನು ಮೂಳೆಗಳು ಹಾಗೂ ದಂತಗಳಿಂದ ತಯಾರಿಸುತ್ತಿದ್ದರು. ಚಕ್ರದ ಗಾಡಿಗಳು, ಬೆತ್ತದ ವಸ್ತುಗಳು, ಇಟ್ಟಿಗೆಯ ಗೊಂಬೆಗಳು, ಸೀಟಿಗಳು, ಚದುರಂಗ, ಪಗಡೆಯಾಟದ ದಾಳಗಳು ಮುಂತಾದ ವಸ್ತುಗಳನ್ನು ತಯಾರಿಸಿ ಉಪಯೋಗಿಸುತ್ತಿದ್ದರು.

ಇ) ಪಶು ಸಂಗೋಪನೆ:

ಹರಪ್ಪ ಸಂಸ್ಕೃತಿಯ ಜನರು ಅನೇಕ ಪ್ರಾಣಿಗಳನ್ನು ಸಾಕುತ್ತಿದ್ದರು. ಹಾಲು, ಮೊಸರು, ತುಪ್ಪಕ್ಕಾಗಿ ಹಸು, ಎಮ್ಮೆ, ಕುರಿ, ಹಾಡು ಮೊದಲಾದವುಗಳನ್ನು ಸಾಕುತ್ತಿದ್ದರು. ಉದ್ದವಾದ ಹೆಗಲನ್ನು ಹೊಂದಿದ್ದು ಎತ್ತುಗಳು, ಹಸುಗಳು, ಒಂಟೆಗಳು, ಆನೆಗಳು, ಹಂದಿಗಳು ಮತ್ತು ನಾಯಿಗಳನ್ನು ಸಾಕುತ್ತಿದ್ದರೆಂದು ತಿಳಿದು ಬಂದಿದೆ. ಇವುಗಳಲ್ಲದೇ ಅನೇಕ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಅವುಗಳಲ್ಲಿ ಮಂಗಗಳು, ಇಲಿ ಮುಂತಾದವು ಮುಖ್ಯವಾದವುಗಳು. ಮೀನನ್ನು ಹಿಡಿದು ಸಾಕುತ್ತಿದ್ದರಲ್ಲದೆ ಅವುಗಳನ್ನು ತಿನ್ನಲು ಉಪಯೋಗಿಸುತ್ತಿದ್ದರು.

ಈ) ವ್ಯಾಪಾರ ಮತ್ತು ವಾಣಿಜ್ಯ:

ಹರಪ್ಪಾ ಸಂಸ್ಕೃತಿಯ ಜನರು ಉತ್ತಮ ವ್ಯಾಪಾರದ ಚಟುವಟಿಕೆಗಳನ್ನು ಹೊಂದಿದ್ದರು. ಅಲ್ಲದೇ ಇಡೀ ಭಾರತದ ಎಲ್ಲಾ ಪ್ರದೇಶಗಳೊಂದಿಗೆ ವ್ಯಾಪಾರ ಸಂಪರ್ಕವನ್ನು ಹೊಂದಿದ್ದುದು ಕಂಡುಬರುತ್ತದೆ. ಇವರು ವ್ಯಾಪಾರಕ್ಕಾಗಿ ದೃಢವಾಗಿ ತಯಾರಿಸಿದ ಚಕ್ರಗಳ ಎತ್ತಿನ ಗಾಡಿಗಳನ್ನು ಉಪಯೋಗಿಸುತ್ತಿದ್ದರು. ದೋಣಿಗಳಲ್ಲಿ ನದಿಗಳು ಹಾಗೂ ಸಮುದ್ರದ ಮೇಲೆ ಪ್ರಯಾಣ ಮಾಡಿ ವ್ಯಾಪಾರವನ್ನು ಮಾಡುತ್ತಿದ್ದುದು ಕಂಡು ಬರುತ್ತದೆ. ಇವಲ್ಲದೇ ಆ ಕಾಲದ ಪ್ರಮುಖ ರಾಷ್ಟ್ರಗಳಾದ ಮೆಸಪಟೋಮಿಯ, ಈಜಿಪ್ಟ್, ಕ್ರೀಟ್, ಸುಮೆರ್ ಮುಂತಾದ ರಾಷ್ಟ್ರಗಳೊಂದಿಗೆ ಬೃಹತ್ ಪ್ರಯಾಣದ ವ್ಯಾಪಾರವನ್ನು ಇಟ್ಟುಕೊಂಡಿದ್ದರು. ಇವರು ಜೇಡಿ ಮಣ್ಣನ್ನು ದಖನ್ ಪ್ರಸ್ಥಭೂಮಿ ಹಾಗೂ ಕಂಥೇವಾಡದಿಂದ ಆಮದು ಮಾಡಿಕೊಳ್ಳುತ್ತಿದ್ದರು. ತಾಮ್ರವನ್ನು ರಾಜಾಸ್ಥಾನ ಮತ್ತು ಪರ್ಶಿಯಾದಿಂದಲೂ ತರಿಸಿಕೊಳ್ಳುತ್ತಿದ್ದರು. ಇವುಗಳಲ್ಲದೆ ಕೆಲವು ಬೆಲೆಬಾಳುವ ಹರಳುಗಳನ್ನು ಮಧ್ಯಪ್ರಾಚ್ಯ ರಾಷ್ಟ್ರಗಳು ಹಾಗೂ ಟಿಬೆಟ್ಟಿನಿಂದ ಆಮದು ಮಾಡಿಕೊಳ್ಳುತ್ತಿದ್ದರು. ಇವರೊಂದಿಗೆ ಹತ್ತಿಯ ವ್ಯಾಪಾರವನ್ನೂ ಹೆಚ್ಚಾಗಿ ಮಾಡುತ್ತಿದ್ದರು. ಈ ವ್ಯಾಪಾರಗಳು ತಮ್ಮ ವಸ್ತುಗಳನ್ನು ಮಾರಲು, ಕೊಳ್ಳಲು ಅನುಕೂಲವಾಗಲು ತಮ್ಮದೇ ಆದ ಗುರುತು, ಮೊಹರುಗಳನ್ನು ಇಟ್ಟುಕೊಂಡಿದ್ದುದಾಗಿ ತಿಳಿದು ಬರುತ್ತದೆ.

ಧಾರ್ಮಿಕ ಜೀವನ ಮತ್ತು ದೇವತೆಗಳು:

ಹರಪ್ಪಾ ಜನರ ಧಾರ್ಮಿಕ ಜೀವನದ ಬಗ್ಗೆ ಹೆಚ್ಚಿನ ಆಕರಗಳಾಗಲೀ ಅಥವಾ ದಾಖಲೆಗಳಾಗಲೀ ತಿಳಿದು ಬಂದಿಲ್ಲ. ಅಲ್ಲದೇ ಇವರ ಕಾಲದಲ್ಲಿ ಯಾವುದೇ ರೀತಿಯ ದೇವಾಲಯಗಳಾಗಲೀ ಅಥವಾ ಪುಣ್ಯ ಸ್ಥಳಗಳಾಗಲೀ ಅಥವಾ ಬಲಿಪೀಠಗಳಾಗಲೀ ಕಾಣುವುದಿಲ್ಲ. ಆದರೆ ಕೆಲವು ವಸ್ತುಗಳು ದೊರೆತಿರುವುದನ್ನು ಆಧಾರವಾಗಿಟ್ಟುಕೊಂಡು ಮೊಹೆಂಜೋದಾರೋ ಮತ್ತು ಹರಪ್ಪಾಗಳಲ್ಲಿ ಇವರ ಧಾಮಿಕ ಜೀವನ ಹೇಗಿತ್ತು ಎಂಬುದನ್ನು ತಿಳಿಯಬಹುದಾಗಿದೆ. ಇಲ್ಲಿ ಅನೇಕ ಮೊಹರುಗಳು, ಶಿಲ್ಪಗಳು ಅಮ್ತು ಇತರ ವಸ್ತುಗಳು ದೊರೆತಿವೆ. ಇವುಗಳಲ್ಲಿರುವ ಚಿತ್ರಗಳ ಆಧಾರದಿಂದ ಹರಪ್ಪಾ ಸಂಸ್ಕೃತಿಯ ಧಾರ್ಮಿಕ ಜೀವನದಲ್ಲಿ ಅವನ

ಆರಾಧನೆ, ಶಕ್ತಿದೇವತೆ, ಅನೇಕ ಪ್ರಾಣಿಗಳು, ಮರಗಳು ಮತ್ತು ತಾಯಿತಗಳು ಮತ್ತು ಯೋಗ ಆಚರಣೆ ಮುಂತಾದ ವಿಷಯಗಳು ತಿಳಿದು ಬರುತ್ತದೆ. ಇದಲ್ಲದೇ ಜನರು ಮಾತೃದೇವತೆಯ ಆರಾದಕರಾಗಿದ್ದು, ಈ ದೇವತೆಯನ್ನು ಇಡೀ ಸಂಸ್ಕೃತಿಯ ಜನರೆಲ್ಲರೂ ಪೂಜಿಸುತ್ತಿದ್ದರು. ಇದಕ್ಕೆ ಸಾಕ್ಷಿಯಾಗಿ ಮಾತೃದೇವತೆಯ ಚಿತ್ರಗಳನ್ನೂ ಅನೇಕ ಮಡಿಕೆಗಳು ಮತ್ತು ಮೊಹರುಗಳ ಮೇಲೆ ಕಾಣುತ್ತೇವೆ. ಇವನನ್ನು ಮಹಾಯೋಗಿ ಮತ್ತು ಪಶುಪತಿ ಎಂತಲೂ ಕರೆಯುತ್ತಿದ್ದರು. ಹೋರಿಗಳನ್ನು ಪೂಜಿಸುತ್ತಿದ್ದರು. (ಶಿವನ ಮಗ ನಂದಿಯಾಗಿ) ಇಂದಿನ ಕಾಲದ ಅನೇಕ ಧಾರ್ಮಿಕ ಆಚರಣೆ ವಿಧಿ ವಿಧಾನಗಳನ್ನು ಆಚರಿಸುತ್ತಿದ್ದರೆಂದ್ ಉತಿಳಿದುಬರುತ್ತದೆ. ಇದರಿಂದ ಹರಪ್ಪಾ ಸಂಸ್ಕೃತಿ ಮತ್ತು ಹಿಂದೂ ಧರ್ಮದ ನಡುವೆ ಮುಂದುವರೆದ ಧಾರ್ಮಿಕ ಸಂಬಂಧವಿದೆಯೆಂದು ತೋರಿಬರುತ್ತದೆ. ಇವರು ಅರಳೀಮರ, ಹಾವು ಮತ್ತು ಮೊಸಳೆಗಳನ್ನು ಪೂಜಿಸುತ್ತಿದ್ದರು. ಇವರ ಚಿತ್ರಗಳಲ್ಲಿ ದೇವತೆಗಳು, ರಾಕ್ಷಸರು ಹಾಗೂ ಸಣ್ಣಪುಟ್ಟ ದುಷ್ಟ ಶಕ್ತಿಗಳು ಕಂಡುಬರುತ್ತಧೆ. ಸೂರ್ಯನನ್ನು ದೇವತೆಗಳಲ್ಲಿ ಮಹಾನ್ ದೇವತೆಯೆಂದು ಪೂಜಿಸುತ್ತಿದ್ದರು. ಇವರು ಇಂದ್ರಜಾಲ, ಯಕ್ಷಿಣಿ ಮಂತ್ರಗಳಲ್ಲಿ ನಂಬಿಕೆಯುಳ್ಳವರೂ, ಮೂಢನಂಬಿಕೆಗಳೂ ಹಗೂ ತಾಯಿತಗಳನ್ನು ಧರಿಸುತ್ತಿರುವುದು ಮುಂತಾದವುಗಳನ್ನು ತಮ್ಮ ರಕ್ಷಣೆಗೆ ಉಪಯೋಗಿಸುತ್ತಿದ್ದರು. ಇದಲ್ಲದೇ ಇವರಿಗೆ ಮೋಕ್ಷ ಸ್ವರ್ಗಗಳ ಕಲ್ಪನೆಯೂ ಇದ್ದಿತೆಂದು ಕಂಡುಬರುತ್ತದೆ.

ಅ) ಧಾರ್ಮಿಕ ವಿಧಿ ವಿಧಾನಗಳು (ಸಂಸ್ಕಾರ)

ಹರಪ್ಪಾ ಸಂಸ್ಕೃತಿಯ ಜನರು ಭಕ್ತಿ ಮಾರ್ಗವನ್ನು ಅನುಸರಿಸುತ್ತಿದ್ದುದ್ದಾಗಿ ಕಾಣುತ್ತದೆ. ಹರಪ್ಪಾ ಸಂಸ್ಕೃತಿಯ ಜನರು ಆತ್ಮಪುನರಾವತಾರಗೊಳ್ಳುತ್ತದೆ ಎಂಬುದನ್ನು ನಂಬಿದ್ದು ಮುಂದಿನ ಪ್ರಪಂಚದಲ್ಲಿ ಪುನಃ ಜೀವಿಯಾಗಿ ಬದುಕಬೇಕೆಂಬುದರಲ್ಲಿ ನಂಬಿಕೆಯಿದ್ದು ಕೆಲವು ಪಾಪಗಳಿಂದಾಗಿ ಮುಂದಿನ ಜೀವನದಲ್ಲಿ ದುಷ್ಟಶಕ್ತಿಗಳು ಅಥವಾ ದೆವ್ವಗಳಾಗಿ ಹುಟ್ಟುವುದನ್ನು ನಂಬಿದ್ದರು. ಹಾಗೂ ಸ್ವರ್ಗ ನರಕದ ಬಗ್ಗೆ ನಂಬಿಕೆಯನ್ನಿಟ್ಟಿದ್ದರು. ಆರ್ಯರ ನಾಗರೀಕತೆಯಂತೆ ಮುಂದೆ ಏಳು ಜನ್ಮಗಳನ್ನು ಮಾನವನು ತಾಳುವುದು ಎಂಬುದನ್ನು ನಂಬಿದ್ದರು. ಇವರು ಮನುಷ್ಯ ಸತ್ತ ನಂತರ ಹೂಳುತ್ತಿದ್ದರು. ಕೆಲವೊಮ್ಮೆ ಸುಡುತ್ತಿದ್ದರು. ಹೂಳುವಾಗ ಅವರು ಉಪಯೋಗಿಸುತ್ತಿದ್ದ ಅನೇಕ ವಸ್ತುಗಳನ್ನು ಜೊತೆಯಲ್ಲಿಡುತ್ತಿದ್ದರು.

ಲಿಪಿ:

ಹರಪ್ಪಾದ ಜನರು ಓದಲು ಬರೆಯಲು ಅರಿತಿದ್ದರು. ಈ ಸಂಸ್ಕೃತಿಗೆ ಸಂಬಂಧಪಟ್ಟಂತೆ ಸುಮಾರು 530 ಮೊಹರುಗಳು ಹರಪ್ಪಾ ಮೊಹೆಂಜೋದಾರೋ ಮತ್ತು ಇತರ ಸ್ಥಳಗಳಲ್ಲಿ ದೊರೆತಿವೆ. ಇವುಗಳು ಈ ಜನರ ಸಾಕ್ಷರತೆಯ ಬಗ್ಗೆ ತಿಳಿಸುತ್ತದೆ. ಇವರ ಲಿಪಿಯು ಚಿತ್ರಗಳಿಂದ ಕೂಡಿದೆ. ಇವರ ಬರವಣಿಗೆಯ ಬಲಗಡೆಯಿಂದ ಎಡಗಡೆಯಿಂದ ಬಲಗಡೆ ಬೇರೆ ಬೇರೆ ರೇಖಾ ವಿನ್ಯಾಸಗಳಿಂದ ಕೂಡಿದೆ. ಭಾಷಾ ವಿದ್ವಾಂಸರಾದ ಸ್ಟುವರ್ಟ್ ವಿಗ್ಗಾಟ್‌ರವರ ಪ್ರಕಾರ ಹರಪ್ಪಾ ಜನರು ಸುಮಾರು 250 ವಿವಿಧ ಸಂಕೇತಗಳನ್ನು ಉಪಯೋಗಿಸುತ್ತಿದ್ದರೆಂದು ತಿಳಿಸಿದ್ದಾರೆ. ಇವರು ತಮ್ಮ ಮೊಹರುಗಳ ಮೇಲೆ ಬಹಳ ಸುಂದರವಾದ ಚಿತ್ರಗಳನ್ನು ಚಿತ್ರಿಸಿದ್ದಾರೆ. ಅವುಗಳಲ್ಲಿ ಅನೇಕ ಪ್ರಾಣಿಗಳು, ಸಸ್ಯಗಳು, ಮಾನವರು, ದೇವತೆಗಳು ಮುಂತಾದವುಗಳು ಇವೆ. ಅಲ್ಲದೇ ಯೋಗಿ ಗುರುತಿನ ಶಿವ, ನೃತ್ಯ ಮಾಡುತ್ತಿರುವ ಬಾಲೆ ಇವುಗಳು ಸುಂದರ ಚಿತ್ರಗಳು. ಆದರೆ ಇವರ ಲಿಪಿಯನ್ನು ಇನ್ನೂ ಪೂರ್ಣವಾಗಿ ಗುರುತಿಸಿ ಓದಲು ಸಾಧ್ಯವಾಗದೇ ಇದ್ದು ಇನ್ನೂ ಹೆಚ್ಚಿನ ಮಾಹಿತಿಗಳು ದೊರಕದೇ ಇವೆ.



← ಮುದ್ರೆ – ಮೊಹೆಂಜೊದಾರೊ

ಮುದ್ರೆ – ಹರಪ್ಪಾ →






← ಬಾವಿ – ಮಹೆಂಜೊದಾರೊ

ಒಳಚರಂಡಿ ವ್ಯವಸ್ಥೆ – ಹರಪ್ಪಾ →





← ಸ್ನಾನ ಘಟ್ಟ – ಮೊಹೆಂಜೊದಾರೊ

ನೀರಿನ ಬಾವಿ – ಹರಪ್ಪಾ →





← ಧಾನ್ಯದ ಉಗ್ರಾಣ – ಹರಪ್ಪಾ

ಮೊಹೆಂಜೊದಾರೊ ಪ್ರದೇಶ →



ಮಲೆ ಮಹದೇಶ್ವರ ಬೆಟ್ಟದ ಸೋಲಿಗರ ಬುಡಕಟ್ಟು ಜನಪದ ಶಿಲ್ಪಕಲೆ

ಜನಪದ ಜೀವಾಳ ಅಲಂಕಾರ ಸೊಗಡು ಭಿನ್ನಾಣ ಸೊಬಗು ಇತಿಹಾಸ, ವಿಚಾರ, ಭಕ್ತಿ, ಭಾವ, ನೃತ್ಯ, ಕಷ್ಟ-ಸುಖಗಳನ್ನು ನಮ್ಮ ಗ್ರಾಮೀಣ ಭಾಗದ ಜನರು ಒಂದು ಮನದಾಳ ನೋವನ್ನು ತೋಡಿಕೊಂಡು ಸಮಾಧಾನ ತೃಪ್ತಿ, ನೆಮ್ಮದಿಯನ್ನು ಕಾಣುವ ಈ ಭಾಗದ ಅಂದರೆ ದಕ್ಷಿಣ ಕರ್ನಾಟಕ, ಕೇರಳ, ತಮಿಳು ರಾಜ್ಯಗಳನ್ನು ಒಳಗೊಂಡಂತೆ ದಿನಪ್ರತಿ ಸಾವಿರಾರು ಸಂಖ್ಯೆಯಲ್ಲಿ ಸೇರುತ್ತಾರೆ. ವರ್ಷಕ್ಕೆ ಎರಡು ಭಾರಿ ದೊಡ್ಡಜಾತ್ರೆ ನಡೆಯುತ್ತವೆ. ಮಹದೇಶ್ವರ ದೀಪದ ಅಲಂಕಾರ ವೆಂದರೆ ಬಲು ಪ್ರೀತಿ. ಪೆಂಜಿದ ದೀಪ ಅಲಂಕಾರ ಹಾಗೇ ದೀಪಾವಳಿ ಹಬ್ಬದಲ್ಲಿ ಲಕ್ಷಾಂತರ ಭಕ್ತಾದಿಗಳು ಬರುತ್ತಾರೆ. ಕುಟುಂಬ ಸಮೇತರಾಗಿ ಬಂಧು ಮಕ್ಕಳ ಭವಿಷ್ಯ ಚೆನ್ನಾಗಿರಲಿ ಎಂಬ ಬೇಡಿಕೆಯನಿಟ್ಟು ಹರಕೆ ಮಾಡಿಕೊಳ್ಳುತ್ತಾರೆ. ಮುಡಿಸೇವೆ ಮಾಡಿಸುವುದು, ಅಂತರಗಂಗೆ ಎಂಬ ಕೊಳದಲ್ಲಿ ಸ್ನಾನ ಮಾಡುವುದು, ತೇವಾದ ಮೈಯಲ್ಲಿ ಪಂಚಿನ ಮಾಡುವುದರಿಂದ ನಮ್ಮ ಇಷ್ಟಾರ್ಥಿಗಳು ನೆರವೇರಿಸುತ್ತಾನೆ. ಸ್ವಾಮಿಗೆ ಇಷ್ಟವಾದ ವಿಭೂತಿ ಧಾರಣೆ ಇಷ್ಟವಂತೆ. ಕಂಸಾಳೆ ಮಾದಪ್ಪನಿಗೆ ಇಷ್ಟವಾದ ಸಂಗೀತವಂತೆ. ಮಾದಪ್ಪ ದೇವರಿಗೆ ಕಂಸಾಳೆ ಬಡಿದು ಹಾಡುವುದು, ಗುಡ್ಡಪ್ಪಾದರಿಗಳಿಗೆ ಮಾಮೂಲಿ ಬಿಕ್ಷೆ ಬೇಡುವುದು ಕೆಲಸ. ಆದರಿಂದ ಜೀವನೋಪಾಯೋಗದ ಕೆಲಸವಾಗಿದೆ ಗ್ರಾಮೀಣ ಪ್ರದೇಶದಲ್ಲಿ ಹಳ್ಳಿ ಮನೆಗಳಿಗೆ ದೇವರ ಪೂಜೆಗೆ ಹೋಗಿ ಅವರ ಮಾದಪ್ಪ ದೇವರ ಪ್ರತಿಮೆಗಳನ್ನಿಟ್ಟು ಪೂಜೆಮಾಡುವುದು ಹಾಗೂ ಭಕ್ತಿ ಹಾಡುಗಳನ್ನು ಹಾಡಿ ಅವರನ್ನು ಸಂತೈಸಿ ಅವರ ಮನೆ ಊಟಮಾಡಿ ಬರುವುದು.

ಸುಮಾರು 16ನೇ ಶತಮಾನದಲ್ಲಿ ಮಹದೇಶ್ವರ ಸ್ವಾಮಿ ಶಿವನ ಅವತಾರವೆತ್ತಿ ಬಂದರು ಎಂಬುವುದು ಜನರ ನಂಬಿಕೆ. ಶಿವರಾತ್ರಿ ಜಾತ್ರೋತ್ಸವ ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಚಾಮರಾಜನಗರ ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕು, ಮಲೆ ಮಹದೇಶ್ವರ ಬೆಟ್ಟವಿದೆ. ಇಲ್ಲಿ ಸಾಗಿ ಬರುವ ಭಕ್ತಾದಿಗಳ ದಾರಿಯುದಕ್ಕೂ ಸಿಕ್ಕುವ ಹಳ್ಳಿಗಳಲ್ಲಿ ಮಾದಪ್ಪ ನಡೆದು ಬಂದ ಸಂಪ್ರದಾಯ ಆಚರಣೆ ಹುಟ್ಟುಕೊಳ್ಳುತ್ತವೆ.

ಸೋಲಿಗರ ಬಲ್ಲಯ್ಯನ ವಂಶಸ್ಥರಾದ ಇವರು ಬೇಡ ಕೆಂಪಣ್ಣ ಗುಂಪಿಗೆ ಸೇರಿದವರೆಂದು ಇಲ್ಲಿಯ ಜನರು ಹೇಳುತ್ತಾರೆ. ಭಾರತ ಎತ್ತರ ನಾಡಿನಿಂದ ಸಾಗಿಬಂದ ಮಾದಪ್ಪ ಸ್ವಾಮಿಗೆ ದಾರಿಯುದ್ದಕ್ಕೂ ರಾಕ್ಷಸರು ಜನರನ್ನು ಹಿಂಸಿಸುವರು. ಧರ್ಮವನ್ನು ಪಾಲಿಸದೇ ಇರುವವರು ಹೀಗೆ ಹತ್ತು ಹಲವು ಪವಾಡಗಳನ್ನು ಮಾಡುತ್ತಾ ಶಿವನು ಭಕ್ತಿಯ ಪದದೆಡೆಗೆ ಕರೆದೊಯ್ಯುವ ಪ್ರಯತ್ನಮಾಡಿ ಬೇಟೆಯನ್ನೇ ವೃತ್ತಿಯಾಗಿದ್ದ ಜನರಿಗೆ ವ್ಯವಸಾಯದ ಅರಿವನ್ನು ಉಂಟುಮಾಡಿ ಸಾಲುರು ಮಠದಲ್ಲಿ ನೆಲೆಸುತ್ತಾರೆ.

ಸಲರು ಮಠದ ಮಲ್ಲಿಕಾರ್ಜುನ ಸ್ವಾಮಿಗೆ ಶಿಷ್ಯವೃತ್ತಿಯನ್ನು ಸ್ವೀಕರಿಸಿ ಸಾಲರು ಮಠದಕೀರ್ತಿಯನ್ನು ಬೆಳೆಸುತ್ತಾರೆ. ಏಳು ಮಲೆಗಳ ಮಧ್ಯದಲ್ಲಿರುವ ಈ ಸ್ಥಳ ಮನೋಲ್ಲೊಸಗೊಳ್ಳುವ ಪರಿಸರದಿಂದ ಕೂಡಿದೆ.

ಸೋಲಿಗರ ಜುಂಜೇಗೌಡ ಎಂಬುವರು ಮಾಹದೇಶ್ವರ ಸ್ವಾಮಿಗಳ ಗರ್ಭಗುಡಿಯ ನಿರ್ಮಾಣಕಾರರು. ನೆಲದಿಂದ ಲಿಂಗದ ರೂಪದಲ್ಲಿ ಮೂಡಿದ ಕಲ್ಲಿಗೆ ಮಹದೇಶ್ವರ ಸ್ವಾಮಿಗಳ ಐಕ್ಯವಾದ ಜಾಗ ಎಂದು ಈಗ ಅದು ಮಹದೇಶ್ವರ ಸ್ವಾಮಿಯ ದೇವಸ್ಥಾನವಾಗಿದೆ.

ಬುಡಕಟ್ಟು ಜನರ ಜನಪದ ಶಿಲ್ಪಕಲೆ ವಿಚಾರದಲ್ಲಿ ಅಧ್ಯಯನ ಮಾಡಿದ್ದ, ನಮಗೆ ಸರ್ವಕಾಲಿಕ ಸತ್ಯ ಎಂಬಂತೆ ಕುರುಹುಗಳು ಮಲೆಮಹದೇಶ್ವರ ಬೆಟ್ಟದಲ್ಲಿ ಸಿಗುತ್ತವೆ. ಇಲ್ಲಿಯ ಹಾಡಿಯ ಜನರು ನಾಗಮಲೆ ಎಂಬ ಕಾಡಿನೊಳಗೆ ಮಹದೇಶ್ವರಸ್ವಾಮಿ ತಪಸ್ಸುಮಾಡಿ ವಾಪಸ್ಸು ಏಳುಮಲೆ ಮಧ್ಯದಲ್ಲಿ ಐಕ್ಯವಾಗುತ್ತಾರೆ. ಒಂದು ದೇವಸ್ಥಾನ ಮಾಡಿ, ಮಾದಪ್ಪ ದೇವಸ್ಥಾನದಿಂದ ಸುಮಾರು 5 ಕಿ.ಮೀ. ದೂರದಲ್ಲಿ ನಡೆದುಕೊಂಡೇ ಹೋಗಬೇಕಾದ ದಾರಿಯಲ್ಲಿ ಒಂದು ದೊಡ್ಡ ಬಂಡೆ ಸೀಳೊಡೆದು ನಾಗ ಹೆಡೆಯಾಗೇ ರೂಪುಗೊಂಡಿರುವುದರಿಂದ ನಾಗಮಲೆಯಲ್ಲಿ ದೊಡ್ಡ ಬಂಡೆಯಲ್ಲಿ ಒಡೆದು ಮಾದಪ್ಪ ತಪಸ್ಸಿಸುತ್ತಿದ್ದೇನೆ ಎಂಬ ಪ್ರತೀತಿಯಿಂದ ಹರಕೆಯೊತ್ತು ಕಾಲ್ನಡಿಗೆಯಲ್ಲಿ ನಡೆದು ಬರುತ್ತಾರೆ. ಯಾವುದೇ ದಾರಿಯ ಸೌಕರ್ಯವಿಲ್ಲದೆ ಕಲ್ಲು ಮತ್ತು ಮುಳ್ಳುಗಳ ದಾರಿಯಲ್ಲಿ ಸಾಗಬೇಕಾಗುತ್ತದೆ.

ಇಲ್ಲಿ ಕಾಡಿನೊಳಗೆ ಸಿಗುವ ನಾಲ್ಕಾರು ಮನೆಗಳಲ್ಲಿ ಇರುವ ಸೋಲಿಗ ಬುಡಕಟ್ಟು ಜನರ ದಾರಿಹೋಕರಿಗೆ ಮಜ್ಜಿಗೆ, ಬೆಳಗಿನ ಉಪಹಾರ ಇತ್ಯಾದಿ ತಿಂಡಿ ತಿನಿಸುಗಳನ್ನು ಮಾರಿಯೇ ಜೀವಿಸಬೇಕಾಗುತ್ತದೆ. ನಾಡಿನ ಯಾವುದೇ ಮೂಲಭೂತ ಸೌಕರ್ಯವಿಲ್ಲದ ಬಳಲಿದ ದೇಹಗಳನ್ನು ಮಳೆಯಾಶ್ರಯದಲ್ಲಿ ಸ್ವಲ್ಪ ಕೃಷಿಮಾಡುತ್ತಾ ನಮಗೆಲ್ಲ ಮಾದೇಶ್ವರಸ್ವಾಮಿ ಆಶೀರ್ವಾದ ಇದೆ. ನಮಗೆ ಯಾವುದೇ ತೊಂದರೆ ಆಗಲ್ಲ ಎಂಬಂತ ನಂಬಿಕೆಯಿಂದ ಕಾಡು ಮೃಗಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಬದುಕುತ್ತಿದ್ದಾರೆ. ಆನೆ, ಹುಲಿ, ಜಿಂಕೆ, ಇತರೆ ಕಾಡು ಪ್ರಾಣಿಗಳ ವಾಸಸ್ಥಾನವಾಗಿದೆ. ಇವರು ಬೆಳೆಯುವ ಬೆಳೆಗಳನ್ನು ನಾಶಮಾಡಿದರೂ ಈ ಜಾಗ ಬಿಟ್ಟರೆ ಬದುಕೇ ಇಲ್ಲ ಎಂಬಂತೆ ಅವರ ಭಕ್ತಿಭಾವಗಳಿಂದ ದೇವರ ಜೊತೆ ಗ್ರಾಮ ದೇವತೆಗಳ ಬಿಸಿಲುಮಾರಮ್ಮ, ಮಾರಮ್ಮ ಮಸಣಮ್ಮ ಎಂಬ ಇತ್ಯಾದಿ ಹೆಸರುಗಳಿಂದ ಪೂಜಿಸುತ್ತಿದ್ದಾರೆ.

ಇವರು ನೈಸರ್ಗಿಕವಾಗಿ ಸಿಗುವಂತಹ ಕಲ್ಲು, ಮಣ್ಣು, ಮರ, ಬಿದಿರಿನಿಂದ ಸ್ವಾಭಾವಿಕವೆಂಬಂತೆ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ನಾಲ್ಕಾರು ಬರಿ ಈ ಹಾಡಿ ಬೇಟಿಕೊಟ್ಟ ನನಗೆ ಇವರ ನಿರ್ಮಿಸಿ ಕೊಂಡಿದ ಸಣ್ಣ ಸಣ್ಣ ಗುಡಿಸಲುಗಳು ಬುಡಕಟ್ಟು ಜನರ ಜನಪದ ಶಿಲ್ಪ ಕಲಾಕೃತಿಯಾಗಿ ಕಾಣಬರುತ್ತವೆ. ಇದಕ್ಕೆ ಹೊಂದಿಕೆ ಎಂಬಂತಹ ಹಲವಾರು ಭಾವ ಚಿತ್ರ ಸೆರೆಹಿಡಿಯಲಾಗಿದೆ. ಇಲ್ಲಿಯ ಹಾಡಿಗಳಲ್ಲಿ

ಸೋಲಿಗರು, ಎರವವರು ಬೇಡಿಕೆಂಪಣ್ಣಗಾರರು ಅಲ್ಲಿಯೊಂದು ನಾಯಕ ಆದಿವಾಸಿಗಳು ಇಲ್ಲಿಯೊಂದು ಕುಟುಂಬವೆಂಬಂತೆ ವಾಸಿಸುತ್ತಿದ್ದಾರೆ.

ಕಾಡಿನಲ್ಲಿ ಸಿಗುವ ಬಿದಿರು, ಬೆತ್ತ, ಮಣ್ಣುಗಳಿಂದಲೇ ಗುಡಿಸಲು, ಧನದ ಕೊಟ್ಟಿಗೆ, ಕುರಿಕೊಟ್ಟಿಗೆಗಳನ್ನು ನಿರ್ಮಿಸಿಕೊಂಡಿರುವ ಬುಡಕಟ್ಟು ಜನರ ಜನಪದ ಶಿಲ್ಪಕಲೆಗಳ ಕಲ್ಪನೆ ಇವರಿಗೆ ಇದ್ದು ಸಹಜವಾಗಿ ಅವುಗಳ ಅಂದಗೊಳಿಸುತ್ತಾರೆ.



← ಸೋಲಿಗರ ಮಹಿಳೆ
ಮತ್ತು ಮನೆ ಚಿತ್ರ

ಮರದ ಚೆಕ್ಕೆ ಧೂಪ ಮಾರುವ
ಸೋಲಿಗ →






← ಆನೆ ತಲೆ ದಿಬ್ಬ ಕಲಾಕೃತಿ

ಸೋಲಿಗರ ಬಸವನ ಗುಡಿ →





← ಸೋಲಿಗರ ಬಾವಿ ನಿರ್ಮಾಣ



ನಾಗಮಲೆ ಬೆಟ್ಟಕ್ಕೆ ಕಲ್ಲಿನ ದಾರಿ →



← ಸೋಲಿಗರ ಮಣ್ಣಿನ ಮನೆ

ಹೊಲಕ್ಕೆ ಬೇಲಿಯಾಗಿ
ಕಲ್ಲುಗಳ ಜೋಡಣೆ →





← ಸೋಲಿಗ ಕಂಸಾಲೆ ಗುಡ್ಡಪ್ಪಗಳು



ಮಹದೇಶ್ವರ ದೇವರ
ಗೋಪುರ ಶಿಲ್ಪ →



← ಒಳಕಲ್ಲು ಶಿಲ್ಪ



ಸೋಲಿಗರ ಹಗ್ಗದ ಮಂಚ →



← ಸೋಲಿಗರ ಕಟ್ಟಿಗೆ ಮನೆ

ಸೋಲಿಗರ ಬಸವನ ಆರಾಧನೆ →





←ಮನೆಯ ನಿರ್ಮಾಣದಲ್ಲಿರುವ ಸೋಲಿಗ

ಸೋಲಿಗರ ಪಂಜಿನ ಮಾರಾಟ
ಮಾಡುತ್ತಿರುವ ಮಹಿಳೆಯರು →





← ಸಾಲೂರು ಮಠದ ಮಠಾಧಿಪತಿಗಳ ಗದ್ದುಗೆ ಶಿಲ್ಪಗಳು

ಹುಲಿವಾಹನ ಮತ್ತು ಮಹದೇಶ್ವರ ಕಲಾಕೃತಿ →





← ಸೋಲಿಗರ ಬಿಕ್ಕುಲುಕೇಮ್ಮ ಗುಡಿ

ಸೋಲಿಗರ ಹರಕೆಯ ತ್ರಿಶೂಲಗಳು→





← ಬ್ಯಾಡ ಗೆಂಪಣ್ಣ ಜನಾಂಗದ ಅಂಗಡಿ ಬೀದಿ

ಸೋಲಿಗರ ಬಿದಿರಿನ ಗೃಹಬಳಕೆ ವಸ್ತುಗಳು →





← ನಾಗಮಲೆ ದೇವಾಲಯ ಬಸಪ್ಪ ಶಿಲ್ಪ

ದೊಡ್ಡ ಬಂಡೆಯಲ್ಲಿ ಹೊಡೆದು ನಾಗಪ್ಪನ ಆಕೃತಿ ಶಿಲ್ಪ →





← ಹಿಟ್ಟಿಗೆ ತಯಾರಿಕೆ

ಸೋಲಿಗರ ಬಿದಿರು ಮತ್ತು
ಮಣ್ಣಿನ ಮನೆ →





← ನಾಗಮಲೆ ಮಹದೇಶ್ವರ
ದೇವರ ದೇವಾಲಯ



← ಮಲೇ ಮಹದೇಶ್ವರ ವಿಗ್ರಹ

ಮಲೇ ಮಹದೇಶ್ವರ ದೇವರ ಬಸವ ರಥ →





← ಮಲೇ ಮಹದೇಶ್ವರ ದೇವರ ರುದ್ರಾಕ್ಷಿ ರಥ

ಮಲೇ ಮಹದೇಶ್ವರ ದೇವರ ಹುಲಿ ವಾಹನ ರಥ →





← ಸೋಲಿಗರ ಕಡಬಡಯ್ಯ



ಕಲ್ಲು ಜೋಡಣೆ →



← ಸೋಲಿಗರ ಮಣ್ಣಿನ ಮನೆ



ಸೋಲಿಗರ ತಟ್ಟಿಗೆ ಮನೆ →

ಬುಡಕಟ್ಟು ಜೇನು ಕುರುಬರ ಜನಪದ ಶಿಲ್ಪಕಲೆ

ಹೆಚ್.ಡಿ. ಕೋಟೆ ತಾಲ್ಲೂಕಿನ ಬುಡಕಟ್ಟು ಜನರ ಹಾಡಿ ವಿವರ ಜಂಬಳ್ಳಿ ಹಾಡಿ ಸೊಳ್ಳೆಪುರ ಹಾಡಿ, ಧಮನ್‌ಕಟ್ಟೆ ಹಾಡಿ, ಎಂ.ಜಿ.ಹಳ್ಳಿ ಹಾಡಿ, ಹುಣಸೆಗೊಪ್ಪ ಹಾಡಿ, ಬಳ್ಳೆಹಾಡಿ, ಮರನಹಾಡಿ, ಮಾಳದಹಾಡಿ, ಕಾರಪುರಹಾಡಿ, ಹಿರೇಹಳ್ಳಿಹಾಡಿ, ಮತಃ ಹಾಡಿ ಕೆ.ಜಿ. ಹಾಡಿ, ರಾಮನೇಹಳ್ಳಿ ಹಾಡಿ, ಸೀಗುರು ಹಾಡಿ ಹೀಗೆ ಚಿಕ್ಕ ಕುಟುಂಬಗಳಿಂದ ಕೂಡಿದ್ದು ಈ ವಲಯದ ಮೈಸೂರು ಜಿಲ್ಲೆ, ಹೆಗಡದೇವನಕೋಟೆ ತಾಲ್ಲೂಕು, ಹುಣಸೂರು ಇತರ ತಾಲ್ಲೂಕುಗಳಿಗೆ ಕಾಡು ಕುರುಬರು ಜೇನು ಕುರುಬ ಬುಡಕಟ್ಟು ಜನರು ಎಂಬ ಗುಂಪುಗಳ ಹಾಡಿಗಳಲ್ಲಿ ವಾಸಿಸುತ್ತಿದ್ದಾರೆ. ಇವರ ಶಿಲ್ಪಕಲಾ ಅಧ್ಯಯನಕ್ಕೆಂದು ಹೊರಟ ನನಗೆ ಮೈಸೂರುನಿಂದ ಬೆಳಗ್ಗಿನ ಜಾವ 6:00 ಗಂಟೆಗೆ ಹೊರಟು 47 ಕಿ.ಮೀ ದೂರ ಇರುವ ಹೆಗ್ಗಡದೇವನಕೋಟೆಗೆ 8:00 ಗಂಟೆಗೆ ತಲುಪಿದೆವು. ಹೆಚ್.ಡಿ.ಕೋಟೆ ಸಿಗುವ 15 ಕಿ.ಮೀ. ಮುಂಚನೇ ಬುಡಕಟ್ಟು ಜನರು ಕಾಣಬರುತ್ತಾರೆ. ಅವರ ದಿನನಿತ್ಯ ಬದುಕೆಂದು ಬೇರೆ ಬೇರೆ ಉದ್ಯೋಗ ಹರಸಿ ಹಾಡಿಯ ಹತ್ತಿರದ ಹಳ್ಳಿಗಳಿಗೆ ಕೂಲಿ ಮಾಡಲು ಬರುತ್ತಾರೆ. ಇದೇ ಮೊದಲಬಾರಿಗೆ ಬುಡಕಟ್ಟು ವಿಚಾರವಿಟ್ಟುಕೊಂಡು ಬಂದಿರುವುದರಿಂದ ನಿಜವಾಗಲೂ ಇವರಲ್ಲಿ ವಿಶೇಷತೆ ಕಾಣಸಿಗುತ್ತಿತ್ತು. ಹೆಚ್.ಡಿ.ಕೋಟೆ ಸರ್ಕಾರಿ ಬಸ್ಸ್ ನಿಲ್ದಾಣದಲ್ಲಿಯೇ ಇರುವ ಬೇರೆ ಬೇರೆ ಊರಿಗೆ ಪ್ರಯಾಣಿಸಲು ಬಂದಿದರು ನಮ್ಮ ನಗರ ಜನರೊಂದಿಗೆ ಯಾವುದೇ ಮಾತುಕತೆ ಇಲ್ಲ.

ನಾನು ಇವರ್‍ಯಾಕೆ ಹೀಗೆ ನಾನಾದರೂ ಒಂದು ಸಾರಿ ಮಾತಾಡಿಸೋಣ ಎಂದು ಪ್ರಯತ್ನಿಸಿದೆ. ಆತನ ಒಂದು ಮಾತು ಹೇಳಿದ ನನಗೆ ಏನು ಗೊತ್ತಿಲ್ಲ..... ನೀನು ಯಾರಾದರೂ...... ಕೇಳು ಹೋಗ ಎಂದು ತೀರ ಮುಗ್ದತೆಯಿಂದ ದೂರ ನಡೆದು ಹೋದ. ಈ ಅಧ್ಯಯನ ಕೈಗೊಳ್ಳುವ ಮೊದಲು ಸಾಕಷ್ಟು ನಿರಾಶಕ್ತಿಯಿಂದ ಯೋಜಿಸುತ್ತಿದ್ದ ನನಗೆ ಇವರ ಜೀವನಕ್ರಮ, ಪ್ರಕೃತಿ ಆರಾಧನೆ, ಪರಿಸರ ಪ್ರೇಮ, ಕಾಳಜಿ ಎಷ್ಟೊಂದು ಮುಂದಾಲೋಚನೆಯಿಂದ ಪರಿಸರ ಹಾನಿಯಾಗದಂತೆ ಕಾಡನು ಮಡಿಲು ಮಾಡಿಕೊಂಡು ಬದುಕುತ್ತಿದ್ದಾರೆ. ಇವರ ನಮ್ಮ ನಾಡಿನ ಜನರ ಹಾಗೇ ದುರಾಸೆ ಮಾಡಿದರೂ ಸಹ ಒಂದು ವರ್ಷಕ್ಕೆ ಕಾಡನ್ನು ನಾಶಮಾಡಬಹುದು. ಕಾಡಿನಿಂದ ತಮ್ಮೆಲ್ಲಾ ಅವಶ್ಯಕತೆಗಳನ್ನು ಪೂರೈಸಿದ್ದರು ನಮ್ಮ ನಾಡಿನ ಸಂಪತನ್ನು ಹಾಗೇ ಕಾಪಾಡುತ್ತಿದ್ದಾರೆ. ಇಲ್ಲಿ ನನಗೆ ಸೋಮೇಶ್ ಎಂಬ ಶಾಲಾ ಶಿಕ್ಷರನ್ನು ಪರಿಚಯಿಸಿಕೊಂಡೆ. ಇವರಿಂದ ನನಗೆ ಜೇನು ಕುರುಬರ ಜನಪದ ಶೈಲಿಯ ಸ್ವಾಭಿಮಾನವನ್ನು ಪರಿಚಯಿಸಿದರು. ನಾಡಿನ ಸಾಮಾಜಿಕ ಸಮಸ್ಯೆಗಳಲ್ಲಿ ಒಂದಾದ ಜೀತ ಪದ್ಧತಿಯನ್ನು ಅವರು ವಿರೋಧಿಸುತ್ತಾರೆ. ಪ್ರಾಣ ಹೋದರೂ ಬೇಡಿ ತಿನ್ನುವುದೇ ರೂಡಿಮಾಡಿಕೊಂಡಿಲ್ಲ. ಮನೆಯಲ್ಲಿ ತಿನ್ನಲು ಏನು ಇಲ್ಲವೆಂದರೆ ಒಂದು ಕುಡುಗೋಲು, ಮಚ್ಚು ಅಥವಾ ಗುದ್ದಲಿ ತೆಗೆದುಕೊಂಡು ಹೋಗಿ ಕಾಡಿನಲ್ಲಿ ಗೆಡ್ಡೆ, ಗೆಣಸು, ಹಣ್ಣು, ಹಂಪಲು, ಸೊಪ್ಪು ತರುತ್ತಾರೆ.

ಗೆಣಸನ್ನು ಅಗೆದು ಕಿತ್ತುಕೊಂಡ ಮೇಲೆ ಅದರ ಬಳ್ಳಿಯನ್ನು ಮತ್ತೆ ನೆಲದಲ್ಲಿ ನೆಟ್ಟು ನೀರು ಹಾಕಿ ಅದರ ಸಂತತಿಯನ್ನು ಕೊನೆಗೊಳ್ಳದಂತೆ ಕಾಪಾಡುತ್ತಾರೆ. ಹಾಗೂ ಬಿಕ್ಷೇ ಬೇಡುವುದನ್ನು ವಿರೋಧಿಸುತ್ತಾರೆ. ಎಂತಹ ಒಳ್ಳೆಯ ಮನೆಯ ಅನುಕೂಲವಿದ್ದರು ರಾತ್ರಿವೇಳೆ ಬೀದಿಯಲ್ಲೇ ಮಲಗುತ್ತಾರೆ. ಯಾವುದೇ ಕಾಡು ಪ್ರಾಣಿ ಹತ್ತಿರ ಬರದಂತೆ ಬೆಂಕಿ ಹಾಕಿಕೊಂಡು ಸುತ್ತಲು ಮಲಗುತ್ತಾರೆ.

ಹೆಚ್.ಕೆ. ಬೀಮನಹಳ್ಳಿ ಎಂಬ ಹೆಚ್.ಡಿ. ಕೋಟೆಯಿಂದ ಸುಮಾರು 10 ಕೀ.ಮೀ ದಲ್ಲಿದ್ದು ಈ ಗ್ರಾಮದಲ್ಲಿ ಮಾಸ್ತಮ್ಮ ಹಬ್ಬ, ಗಣಗಲೆ ಮಾರಮ್ಮ ಹಬ್ಬ, ಯಜುರಯ್ಯ ಹಬ್ಬ, ಬೇಲದ ಮರದ ಹೆಡೆ, ಪ್ರಕೃತಿಯನ್ನೆ ದೇವರೆಂದು ಪೂಜಿಸುತ್ತಿದ್ದು ಇವರ ಆಚರಣೆಯು ವೈಜ್ಞಾನಿಕ ತಿಳಿವಳಿಕೆ ಕೂಡಿದೆ ಎನ್ನಬಹುದು. ಅಕ್ಷರ ಜ್ಞಾನವಿಲ್ಲವೆಂದರು ಅವರ ಆಲೋಚನೆ ನಮ್ಮನ್ನು ಚಿಂತಿಸುವಂತಹದಾಗಿದೆ.

ಮದುವೆ ವಿಚಾರ ತಿಳಿಯಲು ಕೇಳಿದಾಗ ವಯಸ್ಸಿಗೆ ಬಂದ ಮಕ್ಕಳ ಯಾರನ್ನು ಯಾರಬೇಕಾದರೂ ಆಯ್ಕೆಮಾಡಿಕೊಂಡು ಅವರ ಹಾಡಿಯಿಂದ 5–6 ತಿಂಗಳ ಕಾಲ ಬೇರೆಯಲ್ಲಾದರೂ ಉಳಿದು ತೀರಿಗೆ ಬಂದರೆ ಅವರುಗಳು ಸಂಪೂರ್ಣವಾಗಿ ಕುಟುಂಬ ನಡೆಸಲು ಸಮರ್ಥರಾಗಿತ್ತಾರಂತೆ. ಸೋಮೇಶರವರು ಈ ಹಾಡಿಗಳಲ್ಲಿ ಸಾಮಾಜಿಕ ಒಡನಾಡಿಗಳಾಗಿ ಸಾಕಷ್ಟು ಬುಡಕಟ್ಟು ಜನರ ಹಬ್ಬ, ಉತ್ಸವಗಳಲ್ಲಿ ಭಾಗಿಯಾದ ವಿಚಾರವನ್ನು ತಿಳಿಸಿಕೊಟ್ಟರು. ಇವರ ಸಲಹೆ ಮೇರೆಗೆ ಹೆಚ್.ಡಿ.ಕೋಟೆಯಿಂದ ಸುಮಾರು 20 ಕಿ.ಮೀ. ಅಂತ್ರಸಂತೆ ಅಂದರೆ ಕಬಿನಿ ಅಣೆಕಟ್ಟೆಯ ಹಿನ್ನಿರು ಎನ್ನುವಾಗ ಹೊಂದಿಕೊಂಡಿರುವ ಹಾಗೂ ನಾಗರಹೊಳೆ ಬಂಡಿಪುರ ಅಭಯಾರಣ್ಯಗಳನ್ನು ಹೊಂದಿಕೊಂಡಂತೆ ಸಾಕಷ್ಟು ಹಾಡಿಗಳು ಗುಂಪಾಗಿ ವಾಸಿಸುತ್ತಿದ್ದಾರೆ. ಈ ಅರಣ್ಯದೊಳಗೆ ಕೇರಳದ ಮಾನಂದವಾಡಿಗೆ ಹಾದುಹೋಗುವಂತೆ ರಸ್ತೆ ಮಾರ್ಗವಿದೆ.

A ಹಾಡಿ ಎಂಬ ಒಂದು 50 ಕುಟುಂಬ ಇರುವ ಗುಂಪು ಪಕ್ಕದಲ್ಲಿ B ಹಾಡಿ ಎಂದು ಇನ್ನೊಂದು ಗುಂಪು. ಇಲ್ಲಿನ ಬುಡಕಟ್ಟು ಜನ ಮುಖಗಳನು ನೋಡಿ ಆಶ್ಚರ್ಯಪಟ್ಟೆ. ಅವರ ನೈಸರ್ಗಿಕವಾಗಿ ಸಿಗುವ ವಸ್ತುಗಳೊಡನೆ ನಿರ್ಮಿಸಿಕೊಂಡಿರುವ ಪುಟ್ಟ ಪುಟ್ಟ ಗುಡಿಸಲುಗಳು ಇತ್ತೀಚಿಗೆ ಸುಧಾರಿತವೆಂಬಂತೆ ಸರ್ಕಾರದಿಂದ ಆಶ್ರಯ ಯೋಜನೆ ಮನೆ ಒಬ್ಬರಿಗೆ ಸಿಕ್ಕಿದರು ಇದೆಲ್ಲಾ ನಮಗ್ಯಾಕೆ ಎಂಬ ನಿರಾಶಕ್ತಿಯಿಂದ ಉತ್ತರಿಸಿದರು. ಅಲ್ಲಿಂದ ಬಂಡಿಪುರ ಅರಣ್ಯ ಇಲಾಖೆ ಕಛೇರಿಯ ಸುತ್ತಮುತ್ತ 10–20 ಕುಟುಂಬಬಳಿದ್ದು ನಮ್ಮ ನಾಡಿ ಸಾಮಾನ್ಯ ಜೀವನ ಪದ್ಧತಿ ಕಲಿಯುವ, ಪರಿಚಯವಿಲ್ಲದವರು ಬಂದು ಮಾತಾನಾಡಿಸಿದರೆ ಸರಿಯಾದ ರೀತಿಯಲ್ಲಿ ಉತ್ತರಿಸಲಾಗದಾಗೇ ನಡೆದುಕೊಳ್ಳುತ್ತಾರೆ. ಮೊದಲು ಇವರು ಇಷ್ಟು ದುರಂಹಾಕರಿಗಳು ಯಾವ ವಿಚಾರವನ್ನು ಹೇಳುವುದಿಲ್ಲ ಎಂದು ಮನಸ್ಸಿನಲ್ಲಿ ಅಂದುಕೊಂಡೆ ನಂತರದಲ್ಲಿ ಗೊತ್ತಾಯಿತು ಇವರ ನಾವುಗಳು ಕೇಳುವ ವಿಷಯ ವಿಳ್ಯ, ವಿಚಾರ ತಿಳಿದಿಲ್ಲ. ಇದು ಇವರ ಮುಗ್ದತೆಯನ್ನು ತೋರಿಸುತ್ತದೆ. ಮನಸ್ಸಿನಲ್ಲಿ ಬಂದ ಭಾವನೆ ನನಗೆ ನಾನೇ ಸಮಾಧಾನಪಡಿಸ್ಕೊಂಡೆ.

ಮೊದಲೇ ಹೇಳಿದಂಗೇ ಅವರುಗಳ ಜನಪದ ಶಿಲ್ಪಕಲೆ ಭಾವನೆ ಹುಡುಕಿದಾಗ ವ್ಯವಸಾಯಕ್ಕೆ ಉಪಯೋಗಿಸುವ ಮರದ ಯಂತ್ರೋಪಕರಣಗಳು ಒಬ್ಬ ತಯಾರುಮಾಡುತ್ತಿದ್ದರು ಹಾಗೂ ಮರ ಗಾಡಿಯನ್ನು ತಯಾರುಮಾಡಿಕೊಡುತ್ತಿದ್ದರು. ಹಾಡಿಯ ಒಳಗೆ ಹೊರಗೆ ಎಂಬಂತಹ ಮರದ ಕೇಳ ದೇವರು ಕಲ್ಲುನಿಟ್ಟು ಪೂಜಿಸುತ್ತಿದ್ದರು. ಸಸಿಮಾರಮ್ಮ ಈ ಪ್ರದೇಶ ಎಲ್ಲಾ ಆಚರಿಸುವ ಹಬ್ಬ. ಮಳೆಬಿದ್ದ ಮೇಲೆ ಹೊಲದಲ್ಲಿ ಬಿತ್ತನೆ ಹಾಕಿ ಪೈರು ಬಂದ ಮೇಲೆಯೇ ಸಸಿಮಾರಮ್ಮ ಎಂದು ಹೊಸದಾಗಿ ಬೆಳೆದ ಪೈರಿಗೆ ಪೂಜೆ ಸಲ್ಲಿಸುತ್ತಾರೆಂತೆ.

ನಾನು ಮುಂಚೆ ಹೇಳಿದ ಇನ್ನೊಂದು ವಿಚಾರ ಮನಸ್ಸಿಗೆ ನೋವುಂಟು ಮಾಡಿತ್ತು. ಇದು ಇವತ್ತಿಗೂ ಇವರಲ್ಲಿ ಸರಿಯಾದ ತಿಳುವಳಿಕೆ ಇಲ್ಲ. ಮಹಿಳೆಯರಿಗೆ ಸರಿಯಾದ ಸ್ಥಾನ ಮಾನ ಇವರಲ್ಲಿ ಇಲ್ಲ. ಪುಟ್ಟ ಹಾಡಿಯಲ್ಲಿ ಇಬ್ಬರು ಹೆಂಗಸರು ಮಣ್ಣಿನಲ್ಲಿ ಚಿಕ್ಕದಾದ ಗುಡಿಸಲು ಕಟ್ಟುತ್ತಿದ್ದರು. ಆ ಹಾಡಿಯ ಯಾವ ಒಬ್ಬ ಗಂಡಸು ಅವರ ಸಹಾಯಕ್ಕೆ ಬಂದಿಲ್ಲ. ಆಗಾಗಲೇ 5 ಅಡಿ ಮಣ್ಣುಗೋಡೆ ನಿರ್ಮಿಸಿದರು. ಆಶ್ಚರ್ಯದಿಂದ ಅವರನ್ನು ಮಾತಾನಾಡಿಸಲು ಅವರ ಬಳಿ ನಡೆದೆ ಅಮ್ಮ ನೀವು ಏನು ಮಾಡುತ್ತಿದ್ದೀರಿ ನೀವು ಬಳಸುತ್ತಿರುವ ಮಣ್ಣು ಗೋಡೆ ಕಟ್ಟಲು ಯೋಗ್ಯವಲ್ಲದು ಬೇರೆ ಕಡೆಯಿಂದ ಸೂಕ್ತವಾದ ಮಣ್ಣು ತಂದು ಕಟ್ಟಿ ಎಂದು ಪ್ರಶ್ನಿಸಿದಾಗ ಅವರ ಬಿಸಿಲಿನಲ್ಲಿ ಬೆವರು ಸುರಿಸಿ ಕಟ್ಟುತ್ತಿದ ಗೋಡೆ ಮೇಲೆ ತಮ್ಮಲ್ಲಾ ಬೇಸರ ವ್ಯಕ್ತಪಡಿಸಿದಾಗೇ ಇತ್ತು.

ಅಲ್ಲಾ ಸ್ವಾಮಿ ಎಲ್ಲಿಂದ ಒಳ್ಳೆಯ ಮಣ್ಣು ತರುವುದು. ನಮ್ಮ ಕೈಯಲ್ಲಿ ಯಾವುದೇ ಹಣ ಇಲ್ಲಾ ಆ ದಿನದ ದುಡಿಮೆಯೇ ಆದಿನದ ಅನ್ನ. ನಮ್ಮ ಕುಲದಲ್ಲಿ ನಾವುಗಳು ಆಯ್ಕೆಮಾಡಿಕೊಂಡು ಜೊತೆ ಆಗುವ ಗಂಡಸರುಗಳು ಯಾವಾಗ ಬೇಕಾದರೂ ಇನ್ನೊಂದು ಹೆಂಗಸಿನ ಜೊತೆ ಕುಟುಂಬ ನಡೆಸುತ್ತಾರೆ. ಅಗಿರುವಾಗ ಭೂಮಿಗೆ ಹೆಣ್ಣಾಗೇ ಹುಟ್ಟಿದ ತಪ್ಪಿಗೆ ಬದುಕಲೇ ಬೇಕೆಂಬ ಆಸೆಯಿಂದ ನಾವುಗಳೇ ಇವರುವುಷ್ಟರ ಮಟ್ಟಿಗೆ ಗುಡಿಸಲು ನಿರ್ಮಿಸಿಕೊಳ್ಳುತ್ತಿದ್ದೇವೆ ಎಂದರು. ಅವರಿಗೆ ಯಾವುದೇ ಅಳತೆ ಪ್ರಮಾಣದ ಅಂದ ಚಂದ ಆಲೋಚನೆಯಿಂದ ಕಟ್ಟಿಲ್ಲವಾದರೆ ಆ ಪರಿಸರಕ್ಕೆ ಅವುಗಳೇ ಶಿಲ್ಪಕೃತಿಗಳಾಗಿ ಕಾಣಬರುತ್ತವೆ. ಜೊತೆಗೂಡಿದ ಗಂಡಸು ಮಹಿಳೆಗೆ ಯಾರು ಯಾವಾಗ ಬೇಕಾದರೂ ಬಿಟ್ಟು ಇನ್ನೊಬ್ಬರ ಜೊತೆ ಸಂಸಾರ ಮಾಡುತ್ತಾರಂತೆ.

ಇವರಿಗೆ ಸ್ವಂತಮನೆ, ಆಸ್ತಿ, ಹೀಗೆ ಯಾವುದು ಇರುವುದಿಲ್ಲ. ಆದರೆ ಸಂಪೂರ್ಣವಾಗಿ ಶ್ರಮಜೀವಿಗಳು. ಕೊಡಗು ಜಿಲ್ಲೆಯ ಎಸ್ಟೇಟ್‌ಗಳಲ್ಲಿ ಕೂಲಿಗೆಂದು ತಿಂಗಳುಗಳ ಗಟ್ಟಲ್ಲೇ ದುಡಿದು ಬದುಕು ಸಾಗಿಸುತ್ತಿದ್ದಾರೆ. ಸುಂದರ ಎಂಬ 45ರ ವರ್ಷ ವ್ಯಕ್ತಿಯೊಡನೆ ಮಾತಾನಾಡಿಸಿದಾಗ ವಿಭಿನ್ನ ಆಕಾರದಲ್ಲಿ ಕಾಣಿಸತೊಡಗಿದ್ದು ಅವನು ದೇವರ ಗುಡ್ಡಪ್ಪನಾಗಿದ್ದು ನನ್ನನ್ನು ಕಂಡ ತಕ್ಷಣ ಯಾವುದೋ ಟಿ.ವಿ. ಚಾನಲ್‌ನವರು ನಾನೇ ತಪ್ಪು ಮಾಡಿಲ್ಲ ಸಾರ್ ಎಂದ ಭಯಬೀತನಾದ. ನಾನು ಇಲ್ಲ ಬನ್ನಿ ಸ್ವಾಮಿ ನಾನು ನಿಮ್ಮ ಬದುಕಿನ ಆಚರಣೆಗಳ

ವಿಚಾರವನ್ನು ತಿಳಿದು ಪುಸ್ತಕ ಬರೆಯಲು ಬಂದಿರುವುದು ಅಷ್ಟೇ. ಭಯ ಬೇಡ ಬನ್ನಿ ಎಂದಾಗ ನನ್ನ ಹೆಸರು ಸುಂದರ ಅಂತ ಚಾಮುಂಡೇಶ್ವರಿ ದೇವರನ್ನು ಪೂಜಿಸುತ್ತಾನೆ. ವಾರಕ್ಕೆ ಎರಡು ದಿನ ಈ ಮರದಕೆಳಗೆ ಕಳಸ ಮತ್ತು ಚಾಮುಂಡೇಶ್ವರ ದೇವರ ಕಲ್ಲನಿಟ್ಟು ಪೂಜಿಸುತ್ತೇನೆ. ಆಂಜನೇಯ ದೇವರನ್ನು ಪೂಜಿಸುತ್ತೇನೆ. ಶುಂಠಿಕೃಷಿ ತಿಳಿದಿರುತ್ತೇನೆ. ಬೋರ್‌ವೆಲ್‌ಗಳ ರಿಪೇರಿ ಮಾಡುತ್ತಿದ್ದೇನೆ ನನಗೆ ಏನು ತೊಂದರೆ ಮಾಡಿಸಬೇಡಿ ಕೇಳಿಕೊಳ್ಳುತ್ತಿದ್ದನು.

ಕಲ್ಲು ಕೆತ್ತನೆ ಎಂದರೆ ತುಂಬ ಶ್ರಮದ ಕೆಲಸ ದಾಸಿಬೋವಿ ಎಂಬ 60 ವರ್ಷದ ವ್ಯಕ್ತಿಯನ್ನು ಮಾತನಾಡಿಸಿದ ನನಗೆ ಈತನ ಬೋವಿ ಜನಾಂಗ ಸೇರಿದವನಾಗಿದ್ದು ಕಲ್ಲು ಕೆತ್ತನೆ ಮಾಡಿಕೊಂಡು ದೊಡ್ಡಮ್ಮ ತಾಯಿ ದೇವರ ಪೂಜಿಸುತ್ತಾನೆ.

ಶಿವಣ್ಣ ಎಂಬ ಇನ್ನೊಬ್ಬ ಅದೇ ಹಾಡಿಯಲ್ಲಿ ಶಿವ ದೇವರು ಬಿಸಿಲ ಮಾರಮ್ಮ ಪೂಜಿಸುತ್ತಾನೆ. ಮಣ್ಣಿನ ಗೋಡೆಗಳನ್ನು ಕಟ್ಟಿ ಮನೆ ನಿರ್ಮಿಸಿಕೊಡುವಲ್ಲಿ ಜ್ಞಾನನಾಗಿರುತ್ತಾನೆ. ಸರಳ ಮತ್ತು ಸುಂದರವಾಗಿ ಅದೇ ಹಾಡಿಯಲ್ಲಿ ನಿರ್ಮಿಸಿಕೊಡುತ್ತಾನೆ. ಇವರ ಜಾಣ್ಮೆಯನ್ನು ಪರಿಶೀಲಿಸಿ ನನಗೆ ಇವರ ಜನಪದ ಶಿಲ್ಪಕಲೆ ಪ್ರಜ್ಞೆ ಮತ್ತು ಪ್ರವೃತ್ತಿ ತುಂಬಾನೆ ಸೊಗಸಾಗಿತ್ತು. ಯಾವುದೇ ಕಾಲಕ್ಕೂ ಏನು ತೊಂದರೆ ಮಣ್ಣಿನ ಗುಡಿಸಲಿನಲ್ಲಿ ಆಗುವುದಿಲ್ಲ ಎಂದು ಹೇಳುತ್ತಾನೆ.

ಆದಿಕರ್ನಾಟಕ ಜಾತಿಯ ಕರಿಯ್ಯ ಎಂಬ ವ್ಯಕ್ತಿಯ ಪರಿಚಯಿಸಿಕೊಂಡು ಇಲ್ಲಿ ಯಾವ ಕಡೆಯಲ್ಲಿ ಯಾವ ಜನಾಂಗದಲ್ಲಿ ವಾಸಿಸುತ್ತಾರೆ ಕೇಳಿದಾಗ ಬೋವಿ, ಕಾಡು ಕುರುಬರು, ಗಂಗಾಕಾರರು, ನಾಮದಾರಿ ಗೌಡಾರು, ಸೋಲಿಗರು, ಗಿರಿಜನರು, ಹಾಲು ಕುರುಬರು, ಬೆಟ್ಟ ಕುರುಬರು, ಆಚಾರ್ಯನಾಯಕ ಹೀಗೆ ಅಲ್ಲಿ ಹಾಡಿಗೇಲಿ ವಾಸಿಸುತ್ತಿದ್ದಾರೆ.

ಹಬ್ಬ ಆಚರಣೆ ವಿಚಾರ ಹೊಳಕಲ್ಲು ದೇವರು, ಅಂಕನಾಥಸ್ವಾಮಿ, ಬೀನಕ್ಲೊಲಿ ಮಹದೇಶ್ವರ ಜಾತ್ರೆ, ಹಾಗೂ ದೀಪಾವಳಿ, ಶ್ರಾವಣ ಸಂಕ್ರಾಂತಿ, ಯುಗಾದಿ ಹಬ್ಬಗಳನ್ನು ಮಾಡುತ್ತಾರೆಂತೆ.

ನನ್ನೊಡನೆ ಮಾತನಾಡುತ್ತಿದ್ದ ಕರಿಯಯ್ಯ ಕುಟುಂಬದ ಯಾವುದು ದುರ್ಘಟನೆಯಿಂದ ಮನೆ 4 ಪುಟ್ಟ ಮಕ್ಕಳು ಕುಟುಂಬದ ಎಲ್ಲರನ್ನು ವಯಸ್ಸಾದ ನಾನೇ ದುಡಿದು ಸಾಕುತ್ತಿದ್ದೇನೆ ಎಂದು ದುಃಖಿಸುತ್ತಾ ಹೇಳತೊಡಗಿದ ಅಧ್ಯಯನ ವಿಚಾರವಾಗಿ ಹೋಗಿದ ನಾನು ಬ್ಯಾಗಿನಲ್ಲಿ ತಂದಿದ ದ್ರಾಕ್ಷಿ ಹಣ್ಣುಗಳನ್ನು ಅವರ ಮಕ್ಕಳಿಗೆ ನೀಡಿ ನಾನೇನಾದರು ಇವರಿಗೆ ಸಹಾಯ ಮಾಡಲಿಕ್ಕಾಗುವುದಿಲ್ಲವಲ್ಲ ಎಂಬ ದುಃಖ ತುಂಬಿ ನೋವಿನಿಂದ ಅಲ್ಲಿಂದ ನಡೆದು ಬಂದೆ.

ಕಾಡು ಕುರುಬರ ಭಾಷೆ ಕನ್ನಡವಾದರೂ ಕೂಡ ಲಿಖಿತವಿಲ್ಲ ಪದಗಳನ್ನೆ ಅವರು ಮುಗ್ದವಾಗಿ ಮಾತನಾಡಿಕೊಳ್ಳುತ್ತಾರೆ.

ಅಲ್ಲಿಂದ ಮಂಚೇಗೌಡ ಹಾಡಿಯಲ್ಲಿ ಹೋದಾಗ ಮದ್ಯಾಹ್ನ 1:30 ಸಮಯದಲ್ಲಿ ಬೇಟಿಕೊಟ್ಟ ನನಗೆ ಅಲ್ಲೊಂದು ಪುಟ್ಟ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಗೆ ಬೇಟಿ ನೀಡಿದೆ. ಶಿಕ್ಷಕರಾದ ಮಂಜುನಾಥರವರ ಎಲ್ಲಾ ಮಕ್ಕಳ ಪರಿಚಯಿಸಿದರು. ಅವರ ಶಾಲೆಯ ಮಾದರಿ ಪರಿಸರ ಪ್ರಶಸ್ತಿ ಪಡೆದಿದ್ದು ಹಾಡಿಯ ಮಕ್ಕಳಿಗೆ ಉತ್ತಮವಾದ ವಿದ್ಯಾಭ್ಯಾಸ ಮಾಡಿಸುತ್ತಿದ್ದ ಶಿಕ್ಷಕರ ಸಲಹೆಯಂತೆ, ಹಾಡಿಯ ಜನರನ್ನು ಮಾತನಾಡಿಸಲು ಹೋದಾಗ ಆಹಾರ ಪದ್ಧತಿ ಗೆಡ್ಡೆ ಗೆಣಸು, ಜೇನುತುಪ್ಪ, ಇಲಿ, ಪಕ್ಷಿಗಳು, ಅಳಿಲು, ಮೀನು ಶೇಕರಿಸುವುದು ಇದನ್ನು ಮಾರಾಟಮಾಡುವುದು ಆಹಾರ ತಯಾರಿಕೆ ಮಾತ್ರ ಮನೆಯ ಹೊರಗಡೆಯಾಗಿರುತ್ತದೆ.

ಹಬ್ಬ ಉತ್ಸವಗಳಲ್ಲಿ ಕೋಲಾಟ ಜಾನಪದಗೀತೆ ನೃತ್ಯ ಅಂತರಸಂತೆ ಮತ್ತು ಭೀಮನಕೊಲ್ಲಿ ಊರುಗಳಲ್ಲಿ ನಡೆಯುವ ಮಹದೇಶ್ವರ ಸ್ವಾಮಿಯ 3 ಜಾತ್ರೆಯಲ್ಲಿ ಸುತ್ತಮುತ್ತ ಎಲ್ಲಾ ಹಾಡಿ ಜನರು ಬಂದು ಭಾಗವಹಿಸುತ್ತಾರಂತೆ. ಈ ಮೂರು ದಿನಗಳ ಜಾತ್ರೆಯ ಸ್ಥಳದಲ್ಲಿಯೇ ಉಳಿದು ಇಲ್ಲಿ ನಡೆಯುವ ಪೂಜೆ, ಮೆರವಣಿಗೆ ಉತ್ಸವಗಳನ್ನು ನೋಡಿ ಆನಂದ ಪಡುತ್ತಾರಂತೆ.

ಈ ಜನಗಳನ್ನು ಮಾತನಾಡಿಸುತ್ತಿದ್ದ ನನಗೆ ಶಾವಸಂಸ್ಕಾರ ವಿಷಯ ಕೇಳಿ ಆಶ್ಚರ್ಯವುಂಟಾಗಿತ್ತು. ಮರಣ ಹೊಂದಿದ ವ್ಯಕ್ತಿಯನ್ನು ಅದೇ ಹಾಡಿಯ ಬೇರೊಬ್ಬ ವ್ಯಕ್ತಿಯೂ ಮರಣ ಹೋಂದಿರುವ ವ್ಯಕ್ತಿಯ ಆತ್ಮವನ್ನು ಭರಮಾಡಿಕೊಂಡು ಆತನ ಕುಟುಂಬ ವರ್ಗದವರು ಸತ್ತಿರುವ ವ್ಯಕ್ತಿ ಆಸೆ, ಆಮಿಂಸೆ, ಕಷ್ಟ-ಸುಖ, ಬಯಕೆಗಳನ್ನು ಕೇಳುತ್ತಾರಂತೆ. ಅವನು ಕೇಳುವ ಎಲ್ಲವನ್ನೂ ಏರ್ಪಾಡುಮಾಡಿ ಅವನು ತಿಂದಿ, ಕುಡಿದು ತೃಪ್ತನಾದ ಎಂದುಕೊಳ್ಳುತ್ತಾರಂತೆ. ಹಾಡಿಯ ಹಿರಿಯರು ಪ್ರಶ್ನೆ ಕೇಳಿದ ಮೇಲೆ ಕುರ್ಜಮಾಡಿ ಶವವಿಟ್ಟು ಸಾಗಿಸಿ ಸಂಸ್ಕಾರ ಮಾಡುವ ಕೆಲಸವಾಗಿರುತ್ತದೆ.

ಋತುಮತಿಯಾದ ಹೆಣ್ಣುಮಕ್ಕಳನ್ನು ಮನೆಯಿಂದ 7 ದಿನಗಳ ಹೊರಗಡೆ ಇರಿಸಿದ್ದು ನಂತರ ಆರತಿ ಶಾಸ್ತ್ರ ಮಾಡಿದ ಮೇಲೆ ಮನೆಯೊಳಗೆ ಕರೆತರುತ್ತಾರೆ.

ಮದುವೆ ವಿಷಯಕ್ಕೆ ಬಂದರೆ 18 ವರ್ಷ ಮೇಲ್ಪಟ್ಟವರು ಕರಿಮಣಿ ತಾಳಿಕಟ್ಟುವ ಸಂಪ್ರದಾಯವಿದೆ. ಅದಕ್ಕಿಂತ ಮುಂಚೆ ಅವರು ಒಬ್ಬರೊಬ್ಬರು ಇಷ್ಟಪಟ್ಟಿದರೆ ಹಾಡಿಯಿಂದ ದೂರ ಜಾಗ ಹೋಗಿ ನಾಲ್ಕಾರು ತಿಂಗಳ ಕಾಲ ಸ್ವತಂತ್ರವಾಗಿ ಕುಟುಂಬ ನಿರ್ವಹಿಸಿದ ಮೇಲೆ ಹಾಡಿಯೊಳಗೆ ಪ್ರವೇಶವಾಗುತ್ತದೆ.

ಮೈಜುಮ್ ಎನ್ನಿಸುವಂತಹ ಹಾಡಿ ಮಕ್ಕಳ ಸಾಹಸ ಕಥೆಯನ್ನು ಹೇಳಬೇಕು. ಹೆಚ್.ಡಿ. ಕೋಟೆ ತಾಲ್ಲೂಕು ಕಪಿಲ ನದಿಯ ದಡ ಭೀಮನಕೊಲ್ಲಿ ಎಂಬಲ್ಲಿ ವರ್ಷದ ಜನವರಿ ತಿಂಗಳಲ್ಲಿ ಮಹದೇಶ್ವರ ಜಾತ್ರೆ ಸಂಭ್ರಮದಲ್ಲಿ ನದಿಯನ್ನು ದಾಟಬೇಕಾದ ಜನರು ದೋಣಿಯಲ್ಲಿ ಪ್ರಯಣಿಸಲು ಅವಶ್ಯವಿರುವುದಕ್ಕಿಂತ ಹೆಚ್ಚು ಜನರು ದೋಣಿಯನ್ನೇರಿ ನದಿ ದಾಟಲು ಪ್ರಯತ್ನಿಸಿದಾಗ ದಡದಲ್ಲಿ ನೋಡುತ್ತಿದ್ದ 12 ವರ್ಷದ ಬುಡಕಟ್ಟು ಜನರ ಅಂಗವಿಕಲ ಮುರುಗನ್ ಮತ್ತು ಅವನ ಗೆಳೆಯ ಜನರಿಗೆ ಹೇಳುತ್ತಾರೆ. ದೋಣಿಗೆ ತುಂಬಾ ಭಾರವಾಗಿದೆ ನೀವುಗಳು ದೋಣಿ ಏರಬೇಡಿ ಎಂದು. ಆದರೂ ಕೇಳದ ಜನರು ದೋಣಿಯಲ್ಲಿ

ಪ್ರಯಾಣಿಸುತ್ತಾರೆ. ಮಧ್ಯ ನದಿಗೆ ಬಂದ ದೋಣಿಯು ನದಿಯಲ್ಲಿ ಮುಳುಗುತ್ತದೆ. ನೋಡ ನೋಡುತ್ತಿದ್ದಾಗ ದುರ್ಘಟನೆ ಸಂಭವಿಸಿದನ್ನು ನೋಡಿ ಸಹಾಯಕ್ಕೆ ನದಿಗೆ ಹಾರಿರುತ್ತಾನೆ. ತನ್ನ ಪ್ರಾಣವನ್ನು ಲೆಕ್ಕಿಸದೆ ಗೆಳೆಯರಿಬ್ಬರು ಸೇರಿ ಪ್ರಯಣಿಸುತ್ತಿದ್ದ 15 ಜನರಲ್ಲಿ 7–8 ಜನರನ್ನು ನದಿಯಿಂದ ಮೇಲೆತ್ತುತ್ತಾರೆ. ಮಕ್ಕಳ ಸಹಾಸನೋಡಿದ ಜನರಿಗೆ ಸಂತೋಷದಿಂದ ಮಕ್ಕಳನ್ನು ಅಭಿನಂದಿಸಿ ಸರ್ಕಾರ ಇವರಿಗೆ ಶೌರ್ಯ ಪ್ರಶಸ್ತಿ ನೀಡುತ್ತದೆ. ಈಗಲೂ ಈ ವಿಷಯ 5ನೇ ತರಗತಿಯ ಪಠ್ಯದಲ್ಲಿ ಸೇರಿದ್ದು "ಗೆಳೆಯ ಸಹವಾಸ" ಪಠ್ಯವಾಗಿದೆ. ಬುಡಕಟ್ಟು ಜನರ ಜನಪದ ಶಿಲ್ಪಕಲೆ ಅಧ್ಯಯನಕ್ಕೆ ಸಾಗಿ ಬಂದ ನನಗೆ ಆಚರಣೆ, ಜೀವನ ಕ್ರಮ ಇವರುಗಳು ಬಳಸುವ ಉಪಕರಣಗಳು, ಮನೆ ನಿರ್ಮಿಸಿಕೊಂಡಿರುವ ರೀತಿ, ದೇವಾಲಯ ನಿರ್ಮಾಣ, ದೇವರ ಕಲ್ಲುಗಳ ಪೂಜಾವಿಧಾನ, ಕುರಿ, ಮೇಕೆ, ಧನ, ಕೋಳಿ ಸಾಕಾಣಿಕೆ ಮಾಡಲು ನಿರ್ಮಿಸಿಕೊಂಡಿರುವ ಧನದ ಕೊಟ್ಟಿಗೆಗಳು, ಗುಡಿಸಲಿಗೆ ಬಿದಿರಿನಿಂದ ನಿರ್ಮಿಸಿಕೊಂಡಿರುವ ಬೇಲಿ ಇಂತಹದೇ ಶಿಲ್ಪ ರಚನೆಗೆ ಸ್ಫೂರ್ತಿ ನೀಡುವಂತಹ ವಿಚಾರಗಳಿಂದ ಅಧ್ಯಯನದ ನನಗೆ ತುಂಬಾ ಪೂರ್ಣ ವಿಚಾರ ಸಿಕ್ಕಿತು.

ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ, ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಮುಂತಾದ ತಾಲ್ಲೂಕುಗಳಲ್ಲಿಯೂ ಮತ್ತು ಕೊಡಗು ಜಿಲ್ಲೆಯ ಸೋಮವಾರ ಪೇಟೆ, ವಿರಾಜಪೇಟೆ ತಾಲ್ಲೂಕುಗಳಲ್ಲಿ ಹಾಗೂ ಕೇರಳದ ಮೈನಾಡು (ಮಲಬಾರ್) ತಮಿಳು ನಾಡಿನ ನೀಲಗಿರಿಯ ಬೆಟ್ಟಗುಡ್ಡಗಳಲ್ಲಿ ಜೇನು ಕುರುಬರು ಅನಾದಿಯಿಂದಲೂ ನೆಲೆಸಿದ್ದಾರೆ. ಚಾಮರಾಜ ನಗರ ಮೈಸೂರು ಜಿಲ್ಲೆಯಲ್ಲಿ 1991ರ ಜನಗಣತಿಯ ಪ್ರಕಾರ ಜೇನು ಕುರುಬರು 14073 ಜೇನು ಕುರುಬರು ಸ್ಥಳೀಯರು ಕರೆಯುವ ಹಾಗೆ 'ಜೇನು ನುಡಿ' ಭಾಷೆಯನ್ನು ಮಾತನಾಡುತ್ತಾರೆ. (1994:74) ಇದು ಅವರ ಆಡುಭಾಷೆ ಮಾತ್ರ ಆಗಿದೆ. ಇದು ದಕ್ಷಿಣ ದ್ರಾವಿಡ ಭಾಷೆಯಾದ ಕನ್ನಡಕ್ಕೆ ಸಮೀಪವಾಗಿದೆ. ಅವರು ಬೇರೆ ಬೇರೆ ಜನರ ಜೊತೆಯಲ್ಲಿ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ ಮತ್ತು ಕನ್ನಡ ಲಿಪಿಯನ್ನು ಉಪಯೋಗಿಸುತ್ತಾರೆ. ಜೇನು ಕುರುಬರು ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ಮೈಸೂರು ಜಿಲ್ಲೆಯ, ಹೆಗ್ಗಡದೇವನ ಕೋಟೆ, ಹುಣಸೂರು, ಪಿರಿಯಾಪಟ್ಟಣಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಜೇನು ಕುರುಬರು ದಟ್ಟವಾದ ಕಾಡು ಬೆಟ್ಟ ಪ್ರದೇಶಗಳಲ್ಲಿ ಮತ್ತು ಮೈದಾನ ಪ್ರದೇಶಗಳಲ್ಲಿ ವಾಸವಾಗಿದ್ದು ಅಲ್ಲಿನ ಭೌಗೋಳಿಕ ಪರಿಸರ ಅವರ ಜೀವನ ನಿರ್ವಹಣೆಗೆ ಅನುಕೂಲಕರವಾಗಿದೆ.

ಜೇನು ಕುರುಬಾ ಉಗಮ :

ಜೇನು ಕುರುಬರ ಬಗ್ಗೆ ಮಿಶ್ರ (1975 :75) ಅವರು ಹೀಗೆ ಬರೆಯುತ್ತಾರೆ. ಕಾಡು ಕುರುಬರಾದ ಜೇನು ಮತ್ತು ಬೆಟ್ಟ ಕುರುಬ ಪಲ್ಲವರ ಸಂತತಿಯಾಗಿ ದಕ್ಷಿಣ ಭಾರತದ ಕೆಲವು ಭಾಗದಲ್ಲಿ ರಾಜ್ಯಭಾರ

ಮಾಡುತ್ತಿದ್ದರು. ಕ್ರಿಶ. 7ರ ಶತಮಾನದಲ್ಲಿ ಬಲಿಷ್ಟ ಚಕ್ರಾದಿಪತ್ಯಗಳಾದ ಕಂಗೋ, ಚೋಳ್ಯ ಮತ್ತು ಚಾಲುಕ್ಯರು ಪಲ್ಲವರಾದ ಕುರುಬರು ರಾಜ್ಯಭಾರ ನಡೆಸುತ್ತಿದ್ದಾಗ ಅವರನ್ನು ಸದೆ ಬಡಿದು ಸೋಲಿಸಿದರು. ಆಗ ಅನೇಕರು ಸತ್ತರು, ಕೆಲವರು ಚೆಲ್ಲಾಪಿಲ್ಲಿಯಾಗಿ ತಲೆ ಮರೆಸಿಕೊಳ್ಳಲು ಗುಡ್ಡಗಾಡನ್ನು ಹೊಕ್ಕರು. ಕಾಡು ಬೆಟ್ಟಗಳಲ್ಲಿ ನೆಲೆಸಿದ ಅವರ ಸಂತತಿಯು ಹೊರ ಸಂಪರ್ಕವಿಲ್ಲದೆಯೇ ಪೂರ್ಣವಾಗಿ ಕಾಡಿನಲ್ಲಿ ವಂಶಾಭಿವೃದ್ಧಿಲ ಹೊಂದಿ, ಆದಿವಾಸಿಗಳಾಗಿ ಉಳಿದರು. ಅವರ ಪ್ರತಿನಿಧಿಗಳೇ ಮೇಲೆ ತಿಳಿಸಿದ ಪ್ರದೇಶಗಳಲ್ಲಿ ವಾಸವಾಗಿದ್ದಾರೆ.

ಆದಿವಾಸಿಯಾದ ಕುರುಬರು ಉತ್ತರ ಮಲಬಾರ್ (ನಾರ್ತ್ ಮಲಬಾರ್) ಕುರುಬರ ನಾಡು ಎಂಬ ತಾಲ್ಲುಕುಗಳಲ್ಲಿ ಹೆಚ್ಚಾಗಿ ನೆಲೆಸಿದ್ದ ಅವರನ್ನು ಕುರುಮಬ್ಯಾಸ ಎಂಬುದಾಗಿ 1891ರ ಮದ್ರಾಸ್ ಜನ ಗಣತಿ ರಿಪೂರ್ಟ್‌ನಲ್ಲಿ ಪ್ರಕಟಿಸಲಾಗಿದೆ. 1975–76 ಕುರುಬ ಅಥವಾ ಕುರುಬರು ಆಧುನಿಕ ಕುರುಬರ ಅಥವಾ ಪಲ್ಲವರ ಪ್ರತಿನಿಧಿಗಳು ದಕ್ಷಿಣ ಭಾರತದಲ್ಲಿ ಪಲ್ಲವರು ಒಂದಾನೊಂದು ಕಾಲದಲ್ಲಿ ಪ್ರಭಾವಶಲಿಗಳಾಗಿದ್ದರು ಅವರ ಪ್ರಾಬಲ್ಯದ ಕುರುಹಾಗಿ ಕೆಲವೇ ಕೆಲವು ನಿದರ್ಶನಗಳಿವೆ.

ಏಳನೇ ಶತಮಾನದಲ್ಲಿ ಇವರ ಪ್ರಾಬಲ್ಯ ಉಚ್ಚ ಶಿಖರಕ್ಕೇರಿತ್ತು. ಆದರೆ ಇವರ ಪ್ರಾಬಲ್ಯ ಕ್ಷೀಣಿಸುತ್ತಾ ಬಂದುದು ಕೊಂಗು, ಚ್ಯೋಳ, ಚಾಲುಕ್ಯರ ಸಂತತಿಗಳು ಪ್ರಾಬಲ್ಯಕ್ಕೆ ಬಂದಾಗ ಏಳು ಅಥವಾ ಎಂಟನೇ ಶತಮಾನದಲ್ಲಿ ಜ್ಯೋಳರ ರಾಜ ಎಂಬುವನು ಪ್ರಾಬಲ್ಯವನ್ನು ಹತ್ತಿಕ್ಕಿದನು. ನಂತರ ಇವರು ಚೆಲ್ಲಾಪಿಲ್ಲಿಯಾದರು. ಮಲಬಾರ್ ಬೆಟ್ಟಗಲಲ್ಲಿ ನೀಲಗಿರಿ, ಕೂರ್ಗ್, ವೈನಾಡ್ ಮತ್ತು ಮೈಸೂರು ಚಾಮರಾಜನಗರ ಕಡೆಗಳಲ್ಲಿ ಹರಡಿಕೊಂಡರು.

ಜೇನು ಕುರುಬರ ವಾಸ:

ಇವರು ವಾಸಿಸುವ ಸ್ಥಳಗಳಲ್ಲಿ 10ರಿಂದ 20 ಮನೆಗಳು ಒಂದೇ ಕಡೆ ಇರುತ್ತದೆ. ಇವರ ಮನೆಗಳು ಐದು ಅಡಿ ಅಗಲ, ಏಳು ಅಡಿ ಉದ್ದದ ಜಾಗದಲ್ಲಿ ಪುಟ್ಟ ಗುಡಿಸಲುಗಳು ಕಾಡಿನ ಬಿದಿರು ಕೊಂಬೆಗಳ ಕಟಿಕೆಯ ಮೇಲೆ ಹುಲ್ಲು, ಎಲೆಗಳು, ಛಾವಣಿ, ಮಣ್ಣಿನ ನೆಲ, ಚಕ್ರಾಕಾರದ ಗೋಡೆಯನ್ನು ನಿರ್ಮಿಸಿ ಅದರ ಮೇಲೆ ಶಂಕುವಿನಾಕಾರದ ಗುಡಿಸಲನ್ನು ಕಟ್ಟಿಕೊಂಡಿದ್ದಾರೆ. ಕಲ್ಲುಗೋಡೆಯಲ್ಲಿ ಒಬ್ಬ ಮನುಷ್ಯನು ಮಾತ್ರ ಒಳಗಡೆ ಹೋಗುವುದಕ್ಕೆ ಸಾಕಾಗುವಷ್ಟು ಭಾಗವನ್ನು ಬಿಟ್ಟಿರುತ್ತಾರೆ. ಇದೇ ಬಾಗಿಲು ಒಂದೊಂದು ಕಡೆ ಇಂತಹ 10 ರಿಂದ 20 ಗುಡಿಸಲು ಮನೆಗಳು ಕಂಡುಬರುತ್ತದೆ. ಅವರು ಗುಡಿಸಲುಗಳನ್ನು ನಿರ್ಮಿಸಿಕೊಳ್ಳಲು ತಮ್ಮ ಪರಿಸರದಲ್ಲಿ ಸಿಗುವ ಮಣ್ಣು, ನೀರು, ಮರಗಳಿಂದ ತಮ್ಮ ಗುಡಿಸಲು ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಇವುಗಳಿಗೆ 'ಹಾಡಿ' ಎನ್ನುವರು. ಇತ್ತೀಚಿನ ಕೆಲವು ಜೇನು ಕುರುಬರ ಕುಟುಂಬಗಳಿಗೆ ಸರ್ಕಾರದ ವತಿಯಿಂದ ವಸತಿ ಗೃಹಗಳನ್ನು ನಿರ್ಮಿಸಲು ಅನುಕೂಲಗಳನ್ನು ಒದಗಿಸಲಾಗಿದೆ.

ಜೇನು ಕುರುಬರ ವಿವಾಹ ಪದ್ಧತಿ:

ಇಲ್ಲಿಯ ಜೇನು ಕುರುಬರ ಜನಾಂಗದಲ್ಲಿ ಒಳಬಾಂದವ್ಯ ಅಸ್ಥಿತ್ವದಲ್ಲಿದ್ದು ಹದಿನೈದು ವಯಸ್ಸು ತುಂಬಿದ ಹುಡುಗರಿಗೆ ಮತ್ತು ಹುಡುಗಿಯರಿಗೆ ಮದುವೆ ಮಾಡುವ ಪದ್ಧತಿ ವಾಡಿಕೆಯಲ್ಲಿದೆ. ಏಕಪತ್ನಿತ್ವ ಇವರಲ್ಲಿ ರೂಢಿಯಲ್ಲಿದೆ. ಗಂಡ ಸತ್ತರೆ ಆ ಹೆಣ್ಣು ಬೇರೆಯವರನ್ನು ಮದುವೆಯಾಗುವ "ವಿಧವಾ ವಿವಾಹ" ಪದ್ಧತಿಯೂ ಸಹ ಜಾರಿಯಲ್ಲಿದೆ. ಈ ವಿವಾಹವು ಸಾಮಾನ್ಯ ಮದುವೆಯ ರೂಪದಲ್ಲಿಲ್ಲದಿದ್ದರೂ "ಕೂಡಾವಳಿ" ಯಾಗಿರುತ್ತದೆ. ಲೈಂಗಿಕ ಅಪರಾದವೆಸಗಿದ ಗಂಡಸು ಮತ್ತು ಹೆಂಗಸರನ್ನು ಒಂದು ಗೂಡಿಸಲು ಅಥವಾ ವಿವಾಹ ವಿಚ್ಛೇದನಕ್ಕೆ ಅವರ ಗುಂಪಿನ ಯಜಮಾನನ ಮುಖಾಂತರ ತೀರ್ಮಾನ ತೆಗೆದುಕೊಳ್ಳುತ್ತಾರೆ.

ಬೆಳಗೆರೆಯವರ ಪ್ರಕಾರ ಜೇನುಕುರುಬರ ವೈವಾಹಿಕ ಜೀವನವು ಸರಳತೆಯಿಂದ ಹಾಗೂ ವೈವಿದ್ಯತೆಯಿಂದ ಕೂಡಿರುತ್ತದೆ. ಈ ಜನಾಂಗದಲ್ಲಿ ಪ್ರೀತಿಸಿ ಮದುವೆಯಾಗುವುದು ಕಂಡು ಬರುತ್ತದೆ. ಸ್ವಜಾತಿಯಲ್ಲಿ ಗಂಡು ಹೆಣ್ಣು ಪ್ರೀತಿಸಿದರೆ ಪ್ರೀತಿಯ ಸಂಬಂದಗಳನ್ನು ಯಾರೂ ದಿಕ್ಕರಿಸುವುದಿಲ್ಲ. ಅದ್ದೂರಿಯ ಮದುವೆ ಸಮಾರಂಭಗಳು ನಡೆಯುವುದಿಲ್ಲ. ಇವರಲ್ಲಿ ಸ್ವಜಾತಿಯಲ್ಲಿ ಮದುವೆಯಾಗದೇ ಬೇರೆ ಬೇರೆ ಜಾತಿಯ ಹುಡುಗಿಯನ್ನು ಪ್ರೀತಿಸಿ ಮದುವೆಯಾಗಿರುವುದೂ ಸಹ ಕಂಡು ಬರುತ್ತದೆ. ಪ್ರೀತಿಸಿದವರಿಬ್ಬರೂ ಎರಡು ದಿನ ಕಾಡಿನಲ್ಲಿದ್ದು ನಂತರ 'ಹಾಡಿಗೆ' ಬರುತ್ತಾರೆ. ಒಂದು ಹಾಡಿಯ ಗುಂಪಿನ ಯಜಮಾನರಿಗೆ ತಪ್ಪು ಕಾಣಿಕೆ ನೀಡುತ್ತಾರೆ. ಅಲ್ಲಿಗೆ ಅವರು ಮದುವೆ ಆದಂತೆ. ಅವರು ಒಂದು ಗೊತ್ತಾದ ದಿನದಿಂದ ಬೇರೆ ಗುಡಿಸಲಿನಲ್ಲಿ ಹೊಸ ಬದುಕನ್ನು ಪ್ರಾರಂಭಿಸುತ್ತಾರೆ.

ಸಾಮಾನ್ಯವಾಗಿ ಹಣವಿರುವುವರು ಮದುವೆ ಸಮಾರಂಭಗಳನ್ನು ಹೊಸ 'ಹಾಡಿಯ' ಗುಂಪಿನ ನಾಯಕರ ಮುಖಾಂತರ ಮಾಡುತ್ತಾರೆ. ಇವರಲ್ಲಿ ಹೆಣ್ಣಿಗೆ ತಾಳಿಕಟ್ಟುವ ಸಂಪ್ರದಾಯವಿದೆ. ವಧುವಿಗೆ ಸೀರೆ, ಮೂಗುತಿ, ಓಲೆ ಮುಂತಾದ ವಸ್ತುಗಳನ್ನು ಕೊಡುವ ಸಂಪ್ರದಾಯವಿದೆ. ಸಾಮಾನ್ಯವಾಗಿ ಮದುವೆಯನ್ನು ತಂದೆಯ ಸಹೋದರಿಯ ಮಗಳ ಜೊತೆ ಇಲ್ಲವೆ ತಾಯಿಯ ಸಹೋದರ ಮಗಳ ಜೊತೆ ಮತ್ತು ಹಿರಿಯಕ್ಕನ ಮಗಳ ಜೊತೆ ಮಾಡುವ ವಾಡಿಕೆ ಇದೆ.

ಜನನ ಸಂಸ್ಕಾರ:

ಗರ್ಭವತಿಗೆ ಪ್ರಾಪ್ತಿ ಕಾಲವಾದ ತರುವಾಯ ಪತಿಯು ಎಲ್ಲಾ ರೀತಿಯಲ್ಲೂ ಸಹಕಾರ ಮತ್ತು ಸೇವೆ ಸಲ್ಲಿಸುತ್ತಾನೆ. ಪ್ರಸವವಾಗುವ ಮುನ್ನ ಪತಿಯು ಹಾಡಿಯ ಯಜಮಾನನಿಗೆ ಪ್ರತ್ಯೇಕ ಗುಡಿಸಲಿನ ನಿರ್ಮಾಣಕ್ಕೆ ಕೋರುತ್ತಾನೆ. ಹಾಡಿಯವರ ಸಹಾಯದಿಮ್ದ ಗುಡಿಸಲು ನಿರ್ಮಾಣವಾದಾಗ ಗರ್ಭವತಿಗೆ ಪ್ರಸವವೇದನೆಯು ಪ್ರಾರಂಭವಾದಾಗ ಅನುಭವಸ್ಥ ತಿಳುವಳಿಕೆ ಇರುವ ಸ್ತ್ರೀಯನ್ನು ಕರೆಯಲಾಗುತ್ತದೆ. ಅವರು ಗುಡಿಸಲಿನೊಳಗೆ

ಚಾಪೆ ಹಾಕಿ ಅದರಲ್ಲಿ ಅವಳನ್ನು ಮಲಗಿಸಿ ಹೆರಿಗೆ ಮಾಡಿಸುತ್ತಾರೆ. ಹೆರಿಗೆಯ ನಂತರ ತಾಯಿ – ಮಗುವನ್ನು ಬಿಸಿ ನೀರಿನಿಂದ ಸ್ನಾನ ಮಾಡಿಸಲಾಗುತ್ತದೆ. "ಬಾಣಂತಿಯ" ಶಾಖವಾಗಿರಲು ಬೆಂಕಿಯನ್ನು ಕಾಯಿಸುತ್ತಾರೆ. ಯಾವ ಆಹಾರವನ್ನು ಬೇಕಾದರೂ ಸೇವಿಸಬಹುದೆಂದು ಸಾಮಾನ್ಯವಾಗಿ ರಾಗಿ, ಗಂಜಿ, ಸೊಪ್ಪು, ಗೆಡ್ಡೆ ಗೆಣಸು ಮುಂತಾದ ಆಹಾರವನ್ನು ಸೇವಿಸುತ್ತಾಳೆ. ಪ್ರಾತ್ಯೇಕ ಗುಡಿಸಲಿನಲ್ಲಿದ್ದ ತಾಯಿ ಮಗುವನ್ನು ವಾರಗಳ ತರುವಾಯ ಶಾಶ್ವತ ಗುಡಿಸಲಿಗೆ ಕರೆದುಕೊಂಡು ಬರಲಾಗುತ್ತದೆ. ನಾಮಕರಣವನ್ನು ಮಗು ಹುಟ್ಟಿದ ಹನ್ನೆರಡನೇಯ ದಿನ ನೆರವೇರಿಸುತ್ತಾರೆ ಇದನ್ನು ತಾಯಿಯ ಚಿಕ್ಕಪ್ಪ ನೆರವೆರಿಸುತ್ತಾನೆ.

ನಾಮಕರಣ:

ಈ ಜನಾಂಗದವರು ಇಡುವ ಹೆಸರುಗಳು ಅವರ ಮನೆಯ ದೇವರಿಗೆ ಸಂಬಂಧಿಸಿರುತ್ತದೆ. ತಂದೆ ಹೆಸರು ಮಾಸ್ತಿ, ಮಗನ ಹೆಸರು ದೊಡ್ಡ ಮಾಸ್ತಿ, ಇನ್ನೊಬ್ಬ ಮಗನ ಹೆಸರು ಚಿಕ್ಕ ಮಾಸ್ತಿ ಹೀಗೆ ಕರೆಯುತ್ತಾರೆ. ಹೆಂಗಸರಲ್ಲೂ ಸಹ ಇದೇ ರೀತಿ ರೂಢಿಯಲ್ಲಿದೆ. ಬಸ್ವಿ, ಸೀರೆ, ಕುಳ್ಳಿ, ಚಿಕ್ಕಿ, ಕರ್ಗಿ, ಚೆಲುವಿ, ಚೋಳಿ, ಬೈರಿ, ಕಾಳಿ, ಮಾದಿ, ಕೆಂಚಿ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮಗುವಿಗೆ ಅವರ ಮನೆದೇವತೆ ಅನುಸಾರ ನಾಮದೇಯ ಮಾಡಲಾಗುತ್ತದೆ. ಕೆಲವು ಸಲ ಮಗುವಿನ ದೈಹಿಕ ಲಕ್ಷಣಗಳಿಂದಲೂ ನಾಮಕರಣ ಮಾಡಲಾಗುವುದು. ಇತ್ತೀಚಿಗೆ ಆಧುನಿಕ ಹೆಸರುಗಳನ್ನು ಸಹ ಇಡುತ್ತಿದ್ದಾರೆ. ಆದರೆ ಆ ಮಗುವಿಗೆ ಪದೇ ಪದೇ ರೋಗ – ರುಜಿನಗಳು ಸಂಭವಿಸುತ್ತಿದ್ದರೆ 'ಬುಂಡೆ' ಕರೆದು ಅಥವಾ ದೇವರನ್ನು ಕರೆಯಿಸಿ ಪ್ರಶ್ನೆ ಕೇಳಿ ದೇವತೆಯು ಸೂಚಿಸಿದಂತೆ ನಾಮಕರಣ ಮಾಡಲಾಗುತ್ತದೆ.

ಮಗುವಿನ ಹೆಸರು ಅವರ ಮನೆದೇವತೆಗೆ ಇಷ್ಟವಾಗದಿದ್ದಲ್ಲಿ ತೊಂದರೆ, ಇಲ್ಲವೇ ಏನೋ ಕಷ್ಟ ಬರುತ್ತದೆ ಎಂದು ಅವರ ದೃಢವಾದ ನಂಬಿಕೆ. ಮಗುವಿನ ಪ್ರಥಮ ಮುಡಿಯನ್ನು ಸೋದರಮಾವ ತೆಗೆಯಬೇಕು. ಒಂದು ಗೊತ್ತಾದ ದಿನ ಸೋದರಮಾವನಿಗೆ ಎಲೆ, ಅಡಿಕೆಯೊಂದಿಗೆ ಕಾಣಿಕೆ ಇಟ್ಟು ಕೊಡುತ್ತಾರೆ. ಕತ್ತರಿಸಿದ ಕೂದಲನ್ನು ಕಾಡಿನ ಮರದ ಎಲೆಯಲ್ಲಿ ಶೇಖರಿಸಿ, ಒಂದು ಪೊದೆಯ ಒಳಗಿಡುತ್ತಾರೆ. ಅದನ್ನು ಕಾಲಿನಿಂದ ಯಾರು ತುಳಿಯಬಾರದು ತುಳಿದರೆ ಮಗುವಿನ ಆರೋಗ್ಯ ಕೆಡುತ್ತದೆ ಎಂಬ ನಂಬಿಕೆ. ಹೀಗೆ ಹೆಣ್ಣು ಅಥವಾ ಗಂಡು ಮತ್ತು ಅವಳಿ ಮಕ್ಕಳಿಗೂ ಜನನ ಸಂಸ್ಕಾರದ ವಿಧಿಯನ್ನು ನಡೆಸುತ್ತಾರೆ.

ಮರಣ ಸಂಸ್ಕಾರ:

ಜೇನು ಕುರುಬರಲ್ಲಿ ಸತ್ತವರನ್ನು ಹೂಳುವ ಪದ್ಧತಿ ಇದೆ. ಇವರಲ್ಲಿ ಮೂರು ದಿನಕ್ಕೆ ಹಾಲು ತುಪ್ಪ ಹಾಗೂ 12 ನೇ ದಿನಕ್ಕೆ ತಿಥಿಯನ್ನು ಆಚರಿಸುತ್ತಾರೆ. ಜೇನು ಕುರುಬರ ಮನೆಯಲ್ಲಿ ಯಾರಾದರೂ ಸತ್ತರೆ, ಸತ್ತವರ ಪ್ರೇತವು ಕುಲಸ್ಥರ ಕನಸಿನಲ್ಲಿ ಕಾಣಿಸಿಕೊಳ್ಳುವುದೆಂಬ ನಂಬಿಕೆ ಅವರಿಗಿದೆ. ಸತ್ತವರು ಗಾಳಿಯಾಗಿ ತನ್ನ ಕುಟುಂಬದ ಜೀವಂತ ಮಕ್ಕಳಿಗೆ ಕಾಯಿಲೆಗಳನ್ನು ಕೊಡುತ್ತಾರೆ ಎಂದು ಈ ಜನರು ನಂಬಿಕೆಯನ್ನು ಇಟ್ಟುಕೊಂಡಿದ್ದಾರೆ. ಸತ್ತಿರುವ ಮನೆಯಲ್ಲಿ ಯಾರಿಗಾದರೂ ಕಾಯಿಲೆಗಳು ರೋಗ ರುಜಿನಗಳು ಬಂದರೆ ಎಲ್ಲರೂ ಬಯಲಿಗೆ ಬೆಂಕಿಯ ಸುತ್ತ ಕುಳಿತು 'ಹಾಡಿಯ' ಗಾಳಿ ಕರೆಯುವವರನ್ನು ಕರೆಯಿಸಿ ಕೊರತೆಗಳನ್ನು ವಿಚಾರಿಸುವುದು ಇವರಲ್ಲಿ ರೂಢಿಯಲ್ಲಿದೆ.

ಆಕಸ್ಮಿಕವಾಗಿ ಅರಣ್ಯದಲ್ಲಿ ಕ್ರೂರ ಮೃಗಗಳಿಗೆ ಸಿಕ್ಕಿ ಬಲಿಯಾದರೆ ಅವರನ್ನು ಮತ್ತು ಹಾಡಿಯಲ್ಲಿ ಅಥವಾ ಹೊರಗಡೆ ಆತ್ಮಹತ್ಯೆ ಮಾಡಿಕೊಂಡವರನ್ನು ಸಹ ಹೂಳುತ್ತಾರೆ. ಆದರೆ ಅನಾರೋಗ್ಯ ನಿಮಿತ್ತ ಹಾಡಿಯಿಂದ ಹೊರಗೆ ಸತ್ತರೆ ಹಾಡಿಯಲ್ಲಿಗೆ ತಂದು ಸ್ನಾನ ಮಾಡಿಸಿ ನಂತರ ಸ್ಮಶಾನದಲ್ಲಿ ಹೂಳುತ್ತಾರೆ. ಹಬ್ಬ ಹರಿದಿನಗಳಲ್ಲಿ ಕಷ್ಟ ಸುಖಗಳಲ್ಲಿ, ವಿವಾಹ, ಋತುಮತಿ ಇನ್ನೂ ಮುಂತಾದ ಧಾರ್ಮಿಕ ಸಂಸ್ಕಾರಗಳಲ್ಲಿ ಸತ್ತವರನ್ನು ನೆನೆದು ಅವರ ಹೆಸರೇಳಿ ಅನ್ನ ಹಾಕುತ್ತಾರೆ. ಇವರಲ್ಲಿ ಸುಡುವ ಪದ್ಧತಿ ಕಂಡುಬರುವುದಿಲ್ಲ.

ಜೇನು ಕುರುಬರ ಧಾರ್ಮಿಕ ಜೀವನ:

ಜೇನು ಕುರುಬರು ಅನೇಕ ದೇವತೆಗಳನ್ನು ಪೂಜಿಸುತ್ತಾರೆ. ಇವರ ಮುಖ್ಯ ಆರಾಧ್ಯ ದೇವರು ಬೆಳ್ಳಮ್ಮ ತಾಯಿ, ಬೆಟ್ಟದ ಚಿಕ್ಕಮ್ಮ, ಮಾರಮ್ಮ ಈ ದೇವತೆಗಳ ಮೂರ್ತಿಗಳನ್ನು ಬಂಡೆಯ ಕೆಳಗೆ ಅಥವಾ ಮರದ ಅಡಿಯಲ್ಲಿಟ್ಟು ಪೂಜಿಸುತ್ತಾರೆ ಮತ್ತು ಅವರ ಹಾಡಿಯಲ್ಲಿ ದೇವಸ್ಥಾನಗಳನ್ನು ನಿರ್ಮಿಸಿಕೊಂಡು ಪೂಜೆ ಸಲ್ಲಿಸುತ್ತಾರೆ. ಅವರ ಮನೆಯ ದೇವತೆಗಳಾದ "ಬೆಳ್ಳಮ್ಮ ತಾಯಿ, ಚಿಕ್ಕಮ್ಮ, ದೊಡ್ಡಮ್ಮ, ಪಟಲಮ್ಮ ಇತ್ಯಾದಿ ದೇವರುಗಳನ್ನು ಪೂಜಿಸುತ್ತಾರೆ. ಅವರು ಮುಂದೆ ಮದುವೆ ಸಮಾರಂಭ ಪೂಜೆ ಮುಂತಾದವುಗಳನ್ನು ನೆರವೇರಿಸಲು ಜಂಗಮ ಪೂಜಾರಿಗಳನ್ನು ಕರೆಸುತ್ತಾರೆ.

ಗುಂಡುಪೇಟೆ ತಾಲ್ಲೂಕಿನ ಬಂಡೀಪುರ ಅರಣ್ಯದ ಸುತ್ತ ಮುತ್ತಲಿನಲ್ಲಿ ನೆಲೆಸಿರುವ ಜೇನು ಕುರುಬ ಜನಾಂಗವು ಬಂಡೀಪುರದ ಅರಣ್ಯದ ಒಳಗಿರುವ ಹಾಡಿಗೆ ಸುಮಾರು 10–12 ಮೈಲಿಗಳ ಅಂತರದ ಕ್ಷೇತ್ರದಲ್ಲಿ ನೆಲೆಸಿರುವ ದೇವರುಗಳನ್ನು ಪೂಜಿಸುತ್ತಾರೆ. ಅವರು ಪೂಜಿಸುವ ದೇವತೆಗಳಲ್ಲಿ ಊರ ದೇವತೆಗಳು, ವನದೇವತೆಗಳು ಅಂದರೆ ಊರ ದೇವತೆಗಳಾದ ಬೈರಮ್ಮ, ಬೊಮ್ಮ ದೇವರು, ಬಸವೇಶ್ವರ, ಚಿಕ್ಕದೇವಿ, ವನದೇವತೆಗಳಾದ ಬೆಟ್ಟದ ಚಿಕ್ಕಮ್ಮ, ಬೆಟ್ಟದ ದೊಡ್ಡಮ್ಮ ಮುಂತಾದ ದೇವತೆಗಳನ್ನು ಪೂಜಿಸುತ್ತಾರೆ. ಊರು ಮತ್ತು ವನದೇವತೆಗಳೆಲ್ಲವೂ ಕುಲದೇವತೆಗಳಾಗಿವೆ. ವನದೇವತೆಗಳು

ವನದಲ್ಲಿರುವಾಗ ರಕ್ಷಣೆ ಮಾಡುತ್ತವೆ. ಊರ ದೇವತೆಗಳು ಊರಿನಲ್ಲಿರುವಾಗ ರಕ್ಷಿಸುತ್ತವೆ ಎಂಬ ನಂಬಿಕೆಯನ್ನಿಟ್ಟುಕೊಂಡು ನಿರ್ಭಯವಾಗಿ ಜೀವನ ಸಾಗಿಸುತ್ತಿದ್ದಾರೆ. ಇವರುಗಳು ಪೂಜಿಸುವ ದೇವತೆಗಳೆಲ್ಲ ಇತರೆ ವರ್ಗದವರಾದ ಬೆಟ್ಟ ಕುರುಬರು, ಸೋಲಿಗರು ಸಹ ಇವರಂಟೆಯೇ ಎಲ್ಲಾ ಪೂಜೆ ಪುರಸ್ಕಾರವನ್ನು ಮಾಡುತ್ತಾರೆ. ಇದಲ್ಲದೇ ಯುಗಾದಿ, ಸಂಕ್ರಾಂತಿ ಮತ್ತು ಗೌರಿಹಬ್ಬಗಳನ್ನು ಆಚರಿಸುತ್ತಾರೆ.

ನ್ಯಾಯ ಪದ್ಧತಿ:

ಜೇನು ಕುರುಬರ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಸಾಂಪ್ರದಾಯಿಕವಾದ ರೀತಿಯಲ್ಲಿ ಗ್ರಾಮದ ಯಜಮಾನನು ಬಗೆಹರಿಸುತ್ತಾನೆ. ಅವನು ಜಾತಿಯಿಂದ ಬಹಿಷ್ಕಾರ ಹಾಕುವ ಮತ್ತು ದಂಡವನ್ನು ವಿಧಿಸುವ ಹಕ್ಕನ್ನು ಹೊಂದಿದ್ದಾನೆ.

ಹಾಡಿಯ ಯಜಮಾನನಿಗೆ ಪ್ರತಿಯೊಬ್ಬರೂ ಗೌರವ ಸಲ್ಲಿಸುತ್ತಾರೆ. ಹಾಡಿಯಲ್ಲಿ ಜರುಗುವ ಪ್ರತಿಯೊಂದು ವಿಧಿಗಳಲ್ಲಿಯೂ ಇವನ ಪಾತ್ರ ಗಣನೀಯ. ಸಾಮಾಜಿಕ ಮತ್ತು ಧಾರ್ಮಿಕ ನೀತಿ, ನಿಯಮಗಳಿಗೆ ವಿರುದ್ಧವಾಗಿ ವರ್ತಿಸುವವರನ್ನು ಹಾಗೂ ಯಜಮಾನನಿಗೆ ವ್ಯತಿರಿಕ್ತವಾಗಿ ನಡೆದುಕೊಂಡವರನ್ನು ದಂಡಿಸುವ ಹಕ್ಕು ಬಾಧ್ಯತೆಯನ್ನು ಹೊಂದಿದ್ದಾನೆ. ಸಾಂಸಾರಿಕ, ವ್ಯವಹಾರಿಕ, ಲೈಂಗಿಕ, ವಿರಸ ಮತ್ತು ಮನಸ್ತಾಪಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಯಜಮಾನನು ಖುದ್ದಾಗಿ ತೀರ್ಮಾನಿಸುತ್ತಾನೆ. ತಪ್ಪಿತಸ್ಥರನ್ನು ದಂಡಿಸಲಾಗುತ್ತದೆ. ನಾನಾ ವಿಧಗಳಲ್ಲಿ ಅಂದರೆ ತಮ್ಮ ಜನಾಂಗದಿಂದ ಅಥವಾ ಹಾಡಿಯಿಂದ ಬಹಿಷ್ಕಾರಿಸುವುದು, ದಂಡ ವಿಧಿಸುವುದು ಮತ್ತು ಅನ್ಯಾಯವಾದವರಿಗೆ ಅನುಕಂಪ ತೋರಿಸಿ ತಪ್ಪಿತಸ್ಥರಿಂದ ಪರಿಹಾರ ಕೊಡಿಸುವುದು ಇವುಗಳಲ್ಲಿ ಯಜಮಾನನ ತೀರ್ಮಾನವೇ ಅಂತಿಮ ತೀರ್ಮಾನವಾಗಿತ್ತು. ಹಾಡಿಯ ಎಲ್ಲಾ ಜನರು ಯಜಮಾನನು ಅಜ್ಞಾಪಿಸಿದಂತೆ ನಡೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಈ ಜನಾಂಗದಲ್ಲಿ ಹಾಡಿಯ ಯಜಮಾನನ ಮೇಲೆಯೇ ಹೆಚ್ಚಾಗಿ ದೇವ-ದೇವತೆಗಳು ಮೈ ಮೇಲೆ ಬರುತ್ತದೆ. ಮಾಂತ್ರಿಕ ವಿದ್ಯೆಯಲ್ಲಿಯೂ 'ಬುಂಡೆ' 'ಕರೆಯುವ' ವ್ಯಕ್ತಿಯೂ ಸಹ ಇವನೇ ಆಗಿರುತ್ತಾನೆ. ಇದಲ್ಲದೆ ಹಾಡಿಯ ಯಜಮಾನನೂ ಆಗಿರುವುದರಿಂದ ಈ ವ್ಯಕ್ತಿಗೆ ಅವರ ಹಾಡಿಯವರಲ್ಲದೆ. ಇತರೆ ಹಾಡಿಗಳ ಜನರೂ ಸಹ ಗೌರವ ಕೊಡುತ್ತಾರೆ. ಸಂಪ್ರದಾಯ ನಿರತ ಸಮಾಜವಾದ್ದರಿಂದ ರಾಜಕೀಯ ಪ್ರಜ್ಞೆ ಇದ್ದಂತಿಲ್ಲ.

ಜೇನು ಕುರುಬರ ಸಾಮಾಜಿಕ ಜೀವನ:

ಜೇನು ಕುರುಬರು ಅವರ ಜೀವನ ಕ್ರಮದಲ್ಲಿ ಕೆಲವು ಪದ್ಧತಿಗಳನ್ನು ಇಂದಿಗೂ ಉಳಿಸಿಕೊಂಡಿರುವುದನ್ನು ನಾವು ಕಾಣಬಹುದು. ಅವರಿಗೆ ವಾಸ ಮಾಡಲಿಕ್ಕೆ ಹಕ್ಕಿಗೂಡಿನಂತೆ ಸಣ್ಣ ಗುಡಿಸಲುಗಳು ಮಾತ್ರ ಇವೆ. ಅದರೊಳಗೆ ಮಲಗದೇ ಸಾಮಾನ್ಯವಾಗಿ ಹೊರಕ್ಕೆ ಬಂದು ಬೆಂಕಿ ಹಾಕಿಕೊಂಡು

ಅದರ ಸುತ್ತಲು ಮಲಗಿಕೊಳ್ಳುತ್ತಾರೆ. ಜೇನುಕುರುಬರು ಪರಿಶಿಷ್ಟ ಜಾತಿ (ಹರಿಜನ), ಸೋಲಿಗ, ಹಕ್ಕಿಪಿಕ್ಕಿಯವರು, ಬೆಟ್ಟ ಕುರುಬರು ಇನ್ನು ಮುಂತಾದ ಜಾತಿ ಮತ್ತು ವರ್ಗಗಳವರ ಮನೆಯಲ್ಲಿ ಆಹಾರ ಸೇವಿಸುವುದಿಲ್ಲ. ತಾವು ಇವರೆಲ್ಲರಿಗಿಂತ ಶ್ರೇಷ್ಠರೆಂದು ಹೇಳಿಕೊಳ್ಳುತ್ತಾರೆ. ಇವರಿಗಿಂತ ಕೀಳುಜಾತಿಯವರಲ್ಲಿ ವಿವಾಹ ಸಂಬಂಧವನ್ನು ನಿಷೇದಿಸಲಾಗಿದೆ. ಇವರಿಗಿಂತ ಕೀಲ ಕುಲಸ್ಥನಾಗಲಿ ಅಥವಾ ಜಾತಿಯವನಾಗಲೀ ಹೊಡೆದರೆ ಮತ್ತು ಇತರೆ ಯಾರಾದರೂ ಪಾದರಕ್ಷೆಯಿಂದ ಹೊಡೆದರೆ ಅಂತಹ ವ್ಯಕ್ತಿಯನ್ನು ಜೀವನ ಪರ್ಯಂತ ಕುಲದಿಂದ ಹೊರಗಿಡಲಾಗುತ್ತಿತ್ತು. ಆದರೆ ಕುಲಸ್ಥರು ಇತ್ತೀಚೆಗೆ ಅಂತಹವನಿಗೆ ದಂಡ ವಿಧಿಸಿ ಕುಲಕ್ಕೆ ಹಾಕಿಕೊಳ್ಳುವ ಪದ್ಧತಿಯೂ ಬೆಳೆದುಬಂದಿದೆ. ಇಲ್ಲಿಯ ಜೇನು ಕುರುಬರು ಸಾಮಾಜಿಕ ಮತ್ತು ಧಾರ್ಮಿಕ ನಿಯಮಗಳಿಗೆ ಬದ್ದರಾಗಿದ್ದಾರೆ. ಇಲ್ಲಿಯ ಯುವಕ, ಯುವತಿಯರು, ಸ್ತ್ರೀ–ಪುರುಷರು ಅವರ ಹಬ್ಬಗಳಲ್ಲಿ ಗುಡಿಸಲಿನ ಮುಂಭಾಗದಲ್ಲಿ ಸೇರಿ ಹಾಡನ್ನು ಹಾಡುತ್ತಾ ಮತ್ತು ಅವರಲ್ಲಿರುವ ವಾದ್ಯವಾದ ಡೋಲು, ಕೊಳಲು ಮತ್ತು ಮೊರೆಯನ್ನು ಭಾರಿಸುತ್ತಾ ಕುಣಿಯುತ್ತಾರೆ. ಜನಪದ ಸಾಹಿತ್ಯ ಕೂಡ ಆಡು ಭಾಷೆಯಲ್ಲಿದೆ.

ಜೇನು ಕುರುಬರು ಪ್ರಾಕೃತಿಕ ಅಲೆಮಾರಿಗಳಂತೆ ಬದುಕುತ್ತಾರೆ. ಎಲ್ಲಿಯೂ ಸಹ ಅವರು ಸ್ಥಿರವಾಗಿ ನೆಲೆಸುತ್ತಿಲ್ಲ. ಮನಸ್ಸು ಬಂದ ಕಡೆ 'ಹಾಡಿ' ಕಟ್ಟಿಕೊಳ್ಳುತ್ತಾರೆ. ಅವರಿಗೆ ಬದಲಾವಣೆ ಬೇಕೆನಿಸದೆ ಮತ್ತೊಂದೆಡೆ ಹಾಡಿ ಕಟ್ಟುವ ಮುನ್ನ ಆ ಜಾಗದಲ್ಲಿ ಕಲ್ಲುಗಳ ಮೇಲೆ ಕಲ್ಲುಗಳನ್ನು ಇಟ್ಟು ಪೂಜೆ ಮಾಡಿ ವಾಪಸ್ಸಾಗುತ್ತಾರೆ. ಮೂರನೇ ದಿನದವರೆವಿಗೂ ಆ ಕಲ್ಲುಗಳು ಹಾಗೆ ಇದ್ದಾರೆ. ಆ ಪ್ರದೇಶ ಸುರಕ್ಷಿತ ಸ್ಥಳವೆಂದು ಭಾವಿಸುತ್ತಾರೆ ಆ ಕಲ್ಲುಗಳೇನಾದರೂ ಉರುಳಿ ಬಿದ್ದಿದ್ದರೆ ಅಲ್ಲಿ 'ಹಾಡಿ' ನಿರ್ಮಿಸಿಕೊಳ್ಳುವುದು ಅಪಾಯಕರವೆಂದು ಅವರ ನಂಬಿಕೆ. ಗುಡಿಸಲುಗಳನ್ನು ಕಟ್ಟುವುದರ ಕ್ರಮವನ್ನು ಲಕ್ಷ್ಮೀಪತಿ ಈ ರೀತಿ ವಿವರಿಸುತ್ತಾರೆ. "ಜೇನು ಕುರುಬರು ಗುಡಿಸಲುಗಳನ್ನು ಒಂದು ಗುಡಿಸಲಿಗೆ ಎದುರಾಗಿ ಇಲ್ಲವೇ ಪಕ್ಕದಲ್ಲಿ ಮತ್ತೊಂದು ಗುಡಿಸಲನ್ನು ಕಟ್ಟುವುದಿಲ್ಲ. ಹತ್ತಾರು ದಿಕ್ಕುಗಳಿಗೆ ಅವರ ಹಾಡಿಗಳನ್ನು ಕಟ್ಟಿಕೊಳ್ಳುತ್ತಾರೆ. ತಮ್ಮ ಗುಡಿಸಲುಗಳನ್ನು ಕಟ್ಟಿಕೊಳ್ಳಲು ಅವರು ತಮ್ಮ ಪರಿಸರದಲ್ಲೇ ಸಿಗುವ ದಬ್ಬೆಗಳು, ನಾರು, ಸೋಗೆ, ಮಣ್ಣು, ನೀರು, ಮರಗಳಿಂದ ತಮ್ಮ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಾರೆ. ಇತ್ತೀಚೆಗೆ ಕೆಲವು ಜೇನು ಕುರುಬರಿಗೆ ಸರ್ಕಾರದ ವತಿಯಿಂದ ವಸತಿ ಸೌಲಭ್ಯವನ್ನು ನೀಡಲಾಗಿದೆ. ಕಾಲೋನಿಗಳಲ್ಲಿ ಅವರನ್ನು ಸ್ಥಳಾಂತರಿಸಲಾಗಿದೆ. ಕೆಲವು ಕಡೆಗಳಲ್ಲಿ ವಿಶೇಷವಾಗಿ ಹೆಗ್ಗಡದೇವನ ಕೋಟೆ ಮತ್ತು ವಿರಾಜಪೇಟೆ ತಾಲ್ಲೂಕಿನ ನಾಗರಹೊಳೆ ಅರಣ್ಯ ಪ್ರದೇಶಗಳಲ್ಲಿ ಈ ಸ್ಥಳಾಂತರದ ವಿರುದ್ಧ ಹೋರಾಟ ನಡೆಯುತ್ತಿದೆ.

ಜೇನು ಕುರುಬರ ಆರ್ಥಿಕ ಜೀವನ:

ಆರ್ಥಿಕವಾಗಿ ಈ ಜನಾಂಗದವರು ಬಹಳ ಹಿಂದುಳಿದಿದ್ದಾರೆ ಜೇನು ಕುರುಬರು ಕಾಡು ವಾಸಿಗಳಲ್ಲಿ ಅಥವಾ ಪ್ರಾಚೀನ ಸ್ಥಿತಿಯಲ್ಲಿರುವ ಆದಿವಾಸಿಗಳಲ್ಲಿ ಅತ್ಯಂತ ಹಿಂದುಳಿದ ಜನಾಂಗವಾಗಿದ್ದಾರೆ. ಇವರನ್ನು ಸರ್ಕಾರ (Primative Trube) ಪಂಗಡದಲ್ಲಿ ಸೇರಿಸಿದೆ. ಜೇನು ಕುರುಬರಿಗೆ ಜೇನು ಸಂಗ್ರಹಿಸುವುದು ಗೆಡ್ಡೆ –ಗೆಣಸು, ಹಣ್ಣು ಹಂಪಲುಗಳನ್ನು ಸಂಗ್ರಹಿಸುವುದು ಸಾಂಪ್ರದಾಯಿಕ ಕಸುಬುಗಳಾಗಿವೆ. ಇವರಿಗೆ ಸರ್ಕಾರದಿಂದ ವ್ಯವಸಾಯಕ್ಕೆ ಭೂಮಿಯನ್ನು ನೀಡಿದ್ದರೂ ಸಹ ಬಹುತೇಕ ಜನರು ದಿನಗೂಲಿ ಕಾರ್ಮಿಕರಾಗಿ ಕೆಲಸ ನಿರ್ವಹಿಸಿಕೊಂಡು ಕಾಡಿನ ಬೆಟ್ಟ ಗುಡ್ಡಗಳ ಪ್ರದೇಶಗಳಲ್ಲಿ ಮತ್ತು ಬಯಲು ಪ್ರದೇಶಗಳಲ್ಲಿ ಗುಡಿಸಲುಗಳನ್ನು ಕಟ್ಟಿಕೊಂಡು ಜೀವಿಸುತ್ತಿದ್ದಾರೆ. "ಜೇನು ಕುರುಬರಿಗೆ ಜೇನು ಸಂಗ್ರಹಿಸುವುದು ವಂಶ ಪಾರಂಪರ್ಯವಾಗಿ ಬಂದ ಮೂಲ ವೃತ್ತಿಯಾಗಿದೆ. ಮತ್ತು ಕಾಡಲ್ಲಿ ದೊರೆಯುವ ಗೆಡ್ಡೆ – ಗೆಣಸುಗಳನ್ನು ಸಂಗ್ರಹಿಸುತ್ತಾರೆ. ಅವರು ಕಾಡು ಪ್ರಾಣಿಗಳನ್ನು ಹಿಡಿಯುವ ಹಾಗೂ ಅವುಗಳನ್ನು ಪಳಗಿಸುವ ಕೆಲಸದಲ್ಲಿ ತೊಡಗಿರುತ್ತಾರೆ. ಇವರ ಆರ್ಥಿಕ ಜೀವನವನ್ನು 4 ವಿಭಾಗಗಳಾಗಿ ವಿಂಗಡಿಸಬಹುದು.

ರೈತರಿಗೆ ಸೇವೆ ಸಲ್ಲಿಸಿ ಪಡೆಯುವ ಆದಾಯ:

ಜೇನು ಕುರುಬರು ಅಕ್ಕಪಕ್ಕದ ಗ್ರಾಮಗಳಲ್ಲಿ ಶಾಶ್ವತವಾಗಿ ನೆಲೆಸಿರುವ ರೈತ ಕುಟುಂಬಗಳಿಗೆ ಬೇಸಾಯ ಮತ್ತು ಇತರೆ ಕೆಲಸ ಕಾರ್ಯಗಳನ್ನು ಮಾಡುವಾಗ ಸೇವೆಗೆ ಪ್ರತಿಫಲವಾಗಿ ಅವರಿಂದ ಧವಸ ಧಾನ್ಯ ಅಥವಾ ಹಣವನ್ನು ಪಡೆಯುತ್ತಾರೆ.

ದಿನಗೂಲಿಗಳಾಗಿ ಪಡೆಯುವ ಆದಾಯ:

ದಿನನಿತ್ಯದ ಕೂಲಿಗಳಾಗಿ ರೈತರ ಹೊಲ, ತೋಟಗಳಲ್ಲಿ ಮತ್ತು ಮನೆ ಕೆಲಸಗಳಲ್ಲಿ ದುಡಿಯುತ್ತಾರೆ. ಆ ದಿನದ ಕೂಲಿಯನ್ನು ದುಡಿಮೆಗೆ ಅನುಗುಣವಾಗಿ ಕೊಡಲಾಗುತ್ತಿದೆ. ವಯಸ್ಕ ಗಂಡಸರಿಗೆ ಮತ್ತು ಹೆಂಗಸರಿಗೆ ದಿನಕ್ಕೆ ನಿಗದಿತ ಕೂಲಿ ಕೊಡುತ್ತಾರೆ. 14 ವರ್ಷಕ್ಕಿಂತ ಕಡಿಮೆ ಹುಡುಗರಿಗೆ ಕಡಿಮೆ ಕೂಲಿ ಇದೆ. ಆಗಾಗ ಈ ಕೂಲಿ ದರ ಹೆಚ್ಚು ಕಡಿಮೆ ಆಗುತ್ತ ಇರುವುದು ಬೇಡಿಕೆಗೆ ಅನುಸಾರವಾಗಿದೆ.

ಸ್ವಂತ ಬೇಸಾಯದಿಂದ ಗಳಿಸುವ ಆದಾಯ:

ಸ್ವಂತ ದುಡಿಮೆಯ ಪ್ರತಿಫಲಗಳಿಂದ ಗಳಿಸಿದ ಎತ್ತುಗಳಿಂದ ಮತ್ತು ಸರ್ಕಾರವು ಉಚಿತವಾಗಿ ಅಥವಾ ಸಾಲ ಸೌಲಭ್ಯಗಳಿಂದ ನೀಡಿದ ಎತ್ತುಗಳಿಂದ ಮತ್ತು ಸರ್ಕಾರ ನೀಡಿದ ಜಮೀನಿನಲ್ಲಿ ಕೆಲವರು ಬೇಸಾಯ ಮಾಡುತ್ತಿದ್ದಾರೆ. ಕೆಲವರು ಹಾರೆ, ಗುದ್ದಲಿಗಳಿಂದ ಭೂಮಿಯನ್ನು ಹದಗೊಳಿಸಿ ಬೆಳೆಯನ್ನು ಬೆಳೆಸುತ್ತಾರೆ.

ಸಾಮಾನ್ಯವಾಗಿ ಹೊಲಗಳೇ ಆಗಿರುವುದರಿಂದ ಮಳೆಯಾಸರೆಯಲ್ಲಿ ರಾಗಿ, ಜೋಳ, ಕಡ್ಲೆಕಾಯಿ, ಹುರುಳಿ, ಸೂರ್ಯಕಾಂತಿ, ಮೆಣಸಿನಕಾಯಿ ಮುಂತಾದ ಬೆಳೆಗಳನ್ನು ಬೆಳೆಸುತ್ತಾರೆ. ಇವರಿಗೆ ಕಾಡು ಪ್ರಾಣಿಗಳ ಹಾನಿಯಿಂದ ಮತ್ತು ಬೇಸಾಯದಲ್ಲಿ ಆಧುನಿಕ ಸಲಕರಣೆಗಳ ಕೊರತೆ ಇರುವುದರಿಂದ ಆದಾಯ ಅಷ್ಟಕ್ಕಷ್ಟೇ ಇವರು ಸಂಪೂರ್ಣವಾಗಿ ಬೇಸಾಯದಿಂದ ಆದಾಯ ಪಡೆಯುತ್ತಿಲ್ಲ. ಇನ್ನುಳಿದ ಇತರ ಆದಾಯದ ಕೆಲಸಗಳಿಂದ ಜೀವನ ಸಾಗಿಸುತ್ತಿದ್ದಾರೆ.

ಹಂಗಾಮಿಯಾಗಿ ದಕ್ಕುವ ಆದಾಯ:

ವರ್ಷದಲ್ಲಿ ಹಂಗಾಮಿಯಾಗಿ ದೊರೆಯುವ ಕೆಲಸಗಳಾದ ಮರ ಕಡಿದು ಸಾಗಿಸುವುದು, ಆನೆ ಹಿಡಿಯುವುದು ಮತ್ತು ಪಳಗಿಸುವುದು ಮತ್ತು ಅರಣ್ಯದ ಮರ ಪೋಷಣೆಯ ಕಾರ್ಯದಲ್ಲಿ ಮತ್ತು ಅರಣ್ಯದೊಳಗೆ ರಸ್ತೆ ನಿರ್ಮಾಣ, ಅರಣ್ಯದಲ್ಲಿ ಹುಲ್ಲು ಕುಯ್ಯುವುದು. ಅರಣ್ಯದಲ್ಲಿ ಕಾಣಿಸಿಕೊಳ್ಳುವ ಬೆಂಕಿ ಆರಿಸುವುದು ಮತ್ತು ಅಕ್ಕ ಪಕ್ಕದ ಹಳ್ಳಿಯಲ್ಲಿ ಕೃಷಿ ಕಟಾವು ಕಾಲದಲ್ಲಿ ಕುರುಚಲು ಗಿಡದ ಕಾಡನ್ನು ಬೇಸಾಯಕ್ಕಾಗಿ ದುರಸ್ತಿ ಮಾಡಲು ಹಾಗೂ ಇನ್ನಿತರ ಸಂದರ್ಭಗಳಲ್ಲಿ ದೊರಕಬಹುದಾದ ಕೆಲಸ ಕಾರ್ಯಗಳಿಂದ ಆದಾಯಗಳಿಸುತ್ತಾರೆ.

ಜೇನು ಕುರುಬರ ವೃತ್ತಿ:

ಜೇನು ಕುರುಬರು ಹಾರುವ ಒಂದು ಜೇನಿನ ಹುಳುವಿನಿಂದ ಅದರ ಗೂಡು ಕಂಡು ಹಿಡಿಯುವ ಚತುರರು. ಎತ್ತರದ ತುದಿ ಕೊಂಬೆಗಳಲ್ಲಿ ಜೋತಾಡುವ ಹೆಜ್ಜೇನನ್ನು ಮರದ ಪೊಟರೆ, ಹುತ್ತಗಳಲ್ಲಿರುವ ತುಡಬೆ ಜೇನನ್ನು ಸಂಗ್ರಹಿಸುತ್ತಾರೆ. ಈ ಜೇನು ಕುರುಬರು ಬಿಳಿ ಮೊಟ್ಟೆಗಳಿರುವ ಜೇನು ತುಪ್ಪವನ್ನು ಯಾರಿಗೂ ಮಾರಾಟ ಮಾಡುವುದಿಲ್ಲ. ಈ ಜೇನು ತುಪ್ಪಗಳ ಮೊಟ್ಟೆಯನ್ನು ಹಾಡಿಯವರೆಲ್ಲರೂ ಸಮವಾಗಿ ಹಂಚಿಕೊಂಡು ತಿನ್ನುತ್ತಾರೆ. ಅವರು ಇದನ್ನು ಅತ್ಯಂತ ಪೌಷ್ಟಿಕ ಆಹಾರವೆಂದು ನಂಬಿದ್ದಾರೆ. ಲಕ್ಷ್ಮೀಪತಿಯವರ ಪ್ರಕಾರ ಸಾಮಾನ್ಯವಾಗಿ ಅವರು ಜೇನು ಎಳೆಯುವಾಗ ಆಧುನಿಕ ಉಪಕರಣಗಳನ್ನು ಉಪಯೋಗಿಸುವುದಿಲ್ಲ. ಏಕೆಂದರೆ ಜೇನು ನೊಣಗಳು ಪುನಃ ಜೇನು ಗೂಡು ಕಟ್ಟುವುದಿಲ್ಲವೆಂಬುದು ಅವರ ನಂಬಿಕೆ. ಜೇನು ಕುರುಬರು ಸಣ್ಣಪುಟ್ಟ ಜೇನು ಗೂಡುಗಳಿದ್ದರೆ ಅವುಗಳ ಕೆಳಗಡೆ ಬೆಂಕಿಯ ಹೊಗೆ ಹಾಕಿ ತುಪ್ಪ ತೆಗೆಯುತ್ತಾರೆ. ಆದರೆ ಹೆಜ್ಜೇನು ಎಳೆಯುವುದಕ್ಕೆ ಸಾಕಷ್ಟು ತರಬೇತಿ ಮತ್ತು ತಂಡದ ಪ್ರಯತ್ನದಿಂದ ಮಾತ್ರ ಸಾಧ್ಯ.

ಸಾಮಾನ್ಯವಾಗಿ 'ಬರೆ' ಎಂಬ ಮರದಲ್ಲಿ ಯಾವಾಗಲೂ ಹೆಜ್ಜೇನಿನ ಗೂಡುಗಳಿರುತ್ತವೆ. ಈ ಜೇನು ಕುರುಬರು ರಾತ್ರಿ ವೇಳೆಯಲ್ಲಿ ಜೇನನ್ನು ಎಳೆಯುತ್ತಾರೆ. ಬೆಳಗಿನ ವೇಳೆಯಲ್ಲಿ ಜೇನನ್ನು ಎಳೆಯುವುದಿಲ್ಲ.

ಹಾಡಿಯ ಪುರುಷರೆಲ್ಲರೂ ಸೇರಿ ಜೇನು ಹೆಳೆಯುವುದಕ್ಕೆ ಹೋಗುತ್ತಾರೆ. ಜೇನು ಕುರುಬರು ಜೇನು ಎಳೆಯುವುದಕ್ಕೆ ಹೋಗುವಾಗ 'ಬರೆ' ಮರಕ್ಕೆ ಮೊದಲು ಪೂಜೆ ಸಲ್ಲಿಸುತ್ತಾರೆ. ಆಮೇಲೆ ಜೇನು ಗೂಡುಗಳಿಗೆ ಉದ್ದನೆಯ ಪುರಳೆಗಳನ್ನು ಜೋಡಿಸಿ ಹೊಗೆಯಾಡುವಂತೆ ಮಾಡಿ ಜೇನು ತಟ್ಟೆಯ ಮೇಲಿನ ನೊಣಗಳು ಬೆಂಕಿಯ ಹೊಗೆಯಿಂದ ಹಾರಿಹೋಗುವಂತೆ ಮಾಡಿರುತ್ತಾರೆ. ಎಳೆಯುವವರನ್ನು ಅಂತಹ ಸಂದರ್ಭಗಳಲ್ಲಿ ಕೊಂಬೆಯ ಮೇಲೆ ಹರಿದಾಡುವ ಕೆಲವು ಜೇನು ನೊಣಗಳು ಜೇನು ಎಳೆಯುವವನನ್ನು ಕಚ್ಚುವುದುಂಟು ಇವರು ಜೇನು ತಟ್ಟೆಯ ಅತಿ ಕೆಳಭಾಗದ ಮೊಟ್ಟೆಯ ಗೂಡುಗಳನ್ನು ಬಿದಿರು ಕಡ್ಡಿಯಿಂದ ಕತ್ತರಿಸಿ ಎಲೆಯ ಬುಟ್ಟಿಯಲ್ಲಿ ತುಂಬಿ ಕೆಳಗಡೆ ಕಳುಹಿಸುತ್ತಾರೆ. ಅವರು ಜೇನು ಮರಿಗಳನ್ನು ಮತ್ತು ಕೊಂಬೆಗೆ ಅಂಟಿಕೊಂಡಿರುವ ಸ್ವಲ್ಪ ತುಪ್ಪವನ್ನು ಅಲ್ಲಿಯೇ ಬಿಟ್ಟು ಉಳಿದ ಜೇನು ತಟ್ಟೆಯನ್ನು ಕತ್ತರಿಸಿಕೊಳ್ಳುತ್ತಾರೆ. ಈ ಜೇನು ಕುರುಬರು ಇದುವರೆವಿಗೂ ಜೇನು ಎಳೆದಿರುವ ತಟ್ಟೆಗಳಲ್ಲಿ ಅತಿ ಹೆಚ್ಚಿನ ದಾಖಲೆಯೆಂದರೆ 25 ಲೀಟರ್ ಜೇನುತುಪ್ಪ ಒಮ್ಮೆ ಜೇನು ಗೂಡಿನಲ್ಲಿಯೇ ಸಿಕ್ಕಿರುವುದು. ಜೇನು ಕುರುಬರು ಈ ವೃತ್ತಿಯಿಂದಲೇ ಸಂಪೂರ್ಣ ಆದಾಯಗಳಿಸಿ ಜೀವನ ಸಾಗಿಸುತ್ತಿದ್ದಾರೆ. ಜೇನು ಕುರುಬರು ಎಂಬ ನಾಮಾಂಕಿತವೇ ಸೂಚಿಸುವಂತೆ ಜೇನು ಬಿಚ್ಚುವಿಕೆ ಅವರ ಪ್ರಥಮ ವೃತ್ತಿಯಾಗಿದೆ. ಜೇನು ಹುಳುಗಳ ಬಗ್ಗೆ ವಿವರ ಅವಶ್ಯಕವಾಗಿದೆಯೆಂದು ತಿಳಿದು ಬರುತ್ತದೆ.



← ಮೇಕೆ ಮಗುವಿಗೆ ಜನ್ಮ ನೀಡಿದ ಚಿತ್ರ

ತೆಪ್ಪ ಮತ್ತು ಜೇನು ಕುರುಬರ ಚಿತ್ರ →





← ಮರದ ಮುಖವಾಡ ಶಿಲ್ಪ

ಜೇನು ಕುರುಬರ ಆಂಜನೇಯ ಗೋಡೆ ಶಿಲ್ಪ →



ಮಂಡ್ಯ ಜಿಲ್ಲೆಯ ಲಂಬಾಣಿ ಬುಡಕಟ್ಟು ಜನರ ಜನಪದ ಶಿಲ್ಪಕಲೆ

ಲಂಬಾಣಿ ಕಾಲೋನಿಯನ್ನೆ ನಿರ್ಮಿಸಿಕೊಂಡಿರುತ್ತಾರೆ. ಸುಮಾರು 200 ವರ್ಷಗಳಿಂದ ಈ ಜಾಗದಲ್ಲಿಯೇ ವಾಸಿಸುತ್ತಿದ್ದ ಇವರ ಜಾನಪದ ನೃತ್ಯ ಗೀತೆ, ಹಾಡು, ಹಲವು ವಿಭಾಗಗಳು ಕಾರ್ಯಕ್ರಮ ನಡೆಸಿಕೊಡುತ್ತಾರೆ. ಈ ಹಾಡಿಯ ಮುಖ್ಯಸ್ಥರು ಕೃಷ್ಣನಾಯಕರು. ಇಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಜತೆಗೆ ಗ್ರಂಥಾಲಯವನ್ನು ನಡೆಸುತ್ತಿದ್ದಾರೆ. ಲಲಿತನಾಯಕ್ ಮೇಡಂ ಈ ಜನರಿಗೆ ಸಾಕಷ್ಟು ಸಹಾಯ ಪೂರಕ ಧನಿಯಾಗಿದ್ದಾರೆ.

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಚಿರಾಂಗ್‌ಪುರ ಚಿನ್ನಯ್ಯ 60 ವರ್ಷ, ಕಮಲಮ್ಮ 50 ವರ್ಷ, ಸರೋಜಮ್ಮ 45 ವರ್ಷ. ಮೇದ ಜನಾಂಗ ಇವರು ಬಿದಿರಿನ ಬುಟ್ಟಿ ಎಣೆಯುವುದರಲ್ಲಿ ಪರಿಣಿತಿರಾಗಿದ್ದಾರೆ. ಪಂಜರ, ಬುಟ್ಟಿ, ಮಂಕ್ರಿ, ಮೋರ, ಏಣಿ ಹೂಕುಂದ ಹೀಗೆ ದಿನ ಬಳಕೆಯ ಬಿದಿರಿನ ವಸ್ತುಗಳನ್ನು ತಯಾರು ಮಾಡಿಕೊಂಡು ಅವರಿಗೆ ಅರಿವಿಲ್ಲದಂತೆಯೇ ಬುಡಕಟ್ಟು ಜನರ ಜನಪದ ಶಿಲ್ಪಕಲೆಯನ್ನು ಮೈಗೂಡಿಸೊಕೊಂಡಿದ್ದಾರೆ. ಬೇಟಿಯಾದ ನನಗೆ ಇವರ ಜಾಣ್ಮೆಯನ್ನು ನೋಡಿ ನಮ್ಮ ಕನ್ನಡ ಮತ್ತು ಸಂಸ್ಕೃತಿ ಶಿಲ್ಪಕಲಾ ಅಕಾಡೆಮಿಯು ಬಿದಿರಿನ ಕಲಾ ವಸ್ತುಗಳನ್ನು ಶಿಲ್ಪಕಲಾ ಕ್ಷೇತ್ರ ಆಯ್ಕೆಮಾಡಿರುವುದನ್ನು ತಿಳಿಸಿರುತ್ತೇನೆ ಇನ್ನು ಚೆನ್ನಾಗಿ ತಯಾರಿ ಮಾಡಿ ಹಾಗೂ ಹೊಸ ಪ್ರಯೋಗಗಳನ್ನು ಮಾಡಲು ಮಕ್ಕಳಿಗೆ ತಿಳಿಸಿ ಎಂದು ಹೇಳಿದ್ದಾರೆ.

ಇವರು ಗೋಪಾಲಸ್ವಾಮಿ, ಚಾಮುಂಡೇಶ್ವರಿ, ಶನೀಶ್ವರ, ಧರ್ಮರಾಯ ಮತ್ತು ಗಣೇಶ, ಅಂಜುನಯ್ಯ ದೇವರುಗಳನ್ನು ಪೂಜಿಸುತ್ತಾರಂತೆ. ಸಂಕ್ರಾಂತಿ ಹಬ್ಬದ ಸುಗ್ಗಿ ಸಂಕೇತ ಸಂಭ್ರಮಕ್ಕೆ ಹಿರಿಯರಿಗೆ ಭಕ್ತಿ ಭಾವದಿಂದ ಪೂಜೆ ಸಲ್ಲಿಸುತ್ತಾರಂತೆ.



ಲಂಬಾಣಿ ಜನಾಂಗದ ದೇವರ ಶಿಲ್ಪ



ಲಂಬಾಣಿ ಜನಾಂಗದ ಸಿದ್ದಪ್ಪಾಜಿ ದೇವರ ಕಂಡಾಯ

ಮೇದಾ ಬುಡಕಟ್ಟು ಜನಾಂಗದ ಚಿಕ್ಕಸಿದ್ದಯ್ಯನ ಜನಪದ ಶಿಲ್ಪಕಲೆ

ಮೇದಾ ಬುಡಕಟ್ಟು ಚಿಕ್ಕಸಿದ್ದಯ್ಯ ಎಂಬುವರ ಅಧ್ಯಯನದಲ್ಲಿ ಮಾತನಾಡಿಸಿದಾಗ ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನ ಮಾಂಬಳ್ಳಿ ಗ್ರಾಮದವರಾಗಿದ್ದು ಬಿದಿರಿನ ಶಿಲ್ಪಕಲೆ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಬುಡಕಟ್ಟು ಕುಟುಂಬದವರು ಆಗಿದ್ದರು ವಿದ್ಯಾವಂತರಾಗಿದ್ದಾರೆ. ತಮ್ಮ ಕುಟುಂಬದ ಜೀವನಾಧಾರ ವೃತ್ತಿಯಾದ ಕಾರಣ ಮನೆ ಮಂದಿರೆಲ್ಲರೂ ಈ ಶಿಲ್ಪಕಲೆ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಗ್ರಾಮದ ಸುತ್ತಲು ನಡೆಯುವ ಸಂತೆ, ಹಬ್ಬದ ಜಾತ್ರೆ, ವಸ್ತುಪ್ರದರ್ಶನಗಳಲ್ಲಿ ಭಾಗವಗವಹಿಸುತ್ತಾರೆ. ಕುಟುಂಬದ ಎಲ್ಲರು ಸಹಾ ದಿನದಿಂದ ದಿನಕ್ಕೆ ಹೊಸ ಆಲೋಚನೆ ಮಾಡಿ ಹೊಸತರದಲ್ಲಿ ಬಿದಿರಿನ ಶಿಲ್ಪಕಲೆಗಳನ್ನು ಮಾಡುತ್ತಾರೆ.

ಇವರ ಹಬ್ಬ ಆಚರಣೆಗಳನ್ನು ಕೇಳಿದಾಗ, ಇಂಡಿ ಮಾರಮ್ಮ ಕೊಂಡ ಉತ್ಸವ, ಲಕ್ಷ್ಮಿ ಅಗ್ರಮಾಂಬಳ್ಳಿ ಗ್ರಾಮದಲ್ಲಿ ಜಾತ್ರೆ ನಡೆಯುತ್ತದೆ. ವಿಜಯ ದಶಮಿ, ಗೌರಿಗಣೇಶ ಹಬ್ಬ, ಯುಗಾದಿ ಹಬ್ಬ, ದೀಪಾವಳಿ ಹಬ್ಬ ಆಚರಿಸುತ್ತಾರಂತೆ.

ಇವರ ಕಲಾತ್ಮಕ ಆಲೋಚನೆಯಲ್ಲಿ ಮೂಡಿ ಬರುವ ಆಕೃತಿಗಳು ಹೂಕುಂದ, ಮಕ್ರಿ, ಮೋರ, ಬುಟ್ಟಿ, ಕೀ ಚೈನ್, ಲ್ಯಾಂಪ್ ಸೇಡ್ಸ್, ಬುಟ್ಟಿ, ಬ್ಯಾಂಗಲ್ಸ್, ಬಾಚಣಿಗೆ, ದೋಣಿ, ಬಟ್ಟಲು, ಪೆನ್‌ಸ್ಟ್ಯಾಂಡ್ಸ್, ಗುಡಿಸಲು ಆಕೃತಿ, ಗಡಿಯಾರ, ಆಭರಣಗಳು ಹೀಗೆ 100–150ಕ್ಕೂ ವಿವಿಧ ಬಗೆಯ ಬಿದಿರಿನ ಶಿಲ್ಪಕಲಾಕೃತಿಯಲ್ಲಿ ತೊಡಗಿದ್ದಾರೆ. ಆದಿವಾಸಿಗಳಾದರು ಸಹಾ ಅಳತೆ ಪ್ರಮಾಣಾವಿಟ್ಟು ಕೆಲಸ ಮಾಡುವುದರಲ್ಲಿ ನಿಪುಣರಾಗಿದ್ದಾರೆ. ಬಿದಿರಿನ ಅನೇಕ ಕಲಾಕೃತಿಗಳನ್ನು ಮಾಡಿ ಸ್ಥಳಿಯ ಜನಮನ್ನಣೆ ಪಾತ್ರರಾಗಿದ್ದಾರೆ. ಜಿಲ್ಲಾ ಮಟ್ಟದ ವಸ್ತುಪ್ರದರ್ಶನಗಳು, ಖಾದಿ ಮೇಳ, ತೋಟಗಾರಿಕೆಯ ಫಲಪುಷ್ಪ ಪ್ರದರ್ಶನ ಹೀಗೆ ಬೇರೆ ಇಲಾಖೆಯ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ತಮ್ಮ ಕಲಾ ನೈಪುಣ್ಯತೆಯ ಪ್ರತೀಕ್ಷಕೆ ಮಾಡಿ ತೋರಿಸಿಕೊಟ್ಟಿದ್ದಾರೆ.

ಅಲ್ಲದೆ ಬ್ಯಾಂಬು ಸೊಸೈಟಿ ಆಫ್ ಇಂಡಿಯಾ, ಅರಣ್ಯ ಇಲಾಖೆ ಸನ್ಮಾನಿಸಿದ್ದಾರೆ. ಸೂರಜ್ ಕುಂಡ ಮೇಳ, ಅಂತರ್ ರಾಷ್ಟ್ರೀಯ ಮೇಳ, ಇಂದಿರಾ ಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಣ ಕೇಂದ್ರ ಕೊಚ್ಚಿನ್ ಅರಣ್ಯ ಇಲಾಖೆ ಹಮ್ಮಿಕೊಂಡಿದ್ದ ಗಿರಿಜನರ ಕರಕುಶಲ ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಿರುತ್ತಾರೆ.

ಅಧ್ಯಯನದ ಪ್ರವಾಸವಾಗಿ ಜೈಪುರ, ಅಸ್ಸಾಂಗಳಿಗೆ ಬೇಟಿ ನೀಡಿದ್ದಾರೆ.

ಬುಡಕಟ್ಟು ಜನಗಳಾದರು ಸಹ ಬಿದಿರಿನ ಶಿಲ್ಪಕಲೆಯಲ್ಲಿ ತೊಡಗಿಸಿಕೊಂಡು ಅವರ ಸಮುದಾಯದ ಯುವಕರಿಗೆ ಮಾದರಿ ವ್ಯಕ್ತಿಯಾಗಿ ಕಾಣಬರುತ್ತಾರೆ. ರಾಷ್ಟ್ರ ವ್ಯಾಪ್ತಿ ತಮ್ಮ ಶಿಲ್ಪಕಲಾ ನೈಪುಣ್ಯತೆಯಿಂದ ಗುರುತಿಸಿಕೊಂಡಿದ್ದಾರೆ.



← ಚಿಕ್ಕ ಸಿದ್ದಯ್ಯ ಬಿದಿರಿನ ಶಿಲ್ಪ ರಚನೆ

ಬಿದಿರಿನ ಹೂಕುಂದ ಶಿಲ್ಪ →





← ಮಕ್ರಿ ಶಿಲ್ಪಗಳು

ಬಿದಿರಿನ ಹೂ ಕುಂದಗಳು →





← ಬಿದಿರಿನ ಗೋಡೆ ಶಿಲ್ಪಗಳು

ನೆರಳು ಮತ್ತು ಬೆಳಕಿನ ಬಿದಿರಿನ ಬುಟ್ಟಿ ಶಿಲ್ಪ →





ಚಿಕ್ಕಸಿದ್ದಯ್ಯ ಬಿದಿರಿನ ಶಿಲ್ಪ ರಚನೆ ಸಿದ್ಧತೆ ಚಿತ್ರ

ಮಂಡ್ಯ ಜಿಲ್ಲೆ ಹಕ್ಕಿ-ಪಿಕ್ಕಿ ಜನರ ಜನಪದ ಶಿಲ್ಪಕಲೆ

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಶಿಕಾರಿಪುರದ ಹಕ್ಕಿಪಿಕ್ಕಿ ಬುಡಕಟ್ಟು ಜನರನ್ನು ಬೇಟಿಯಾಗಿ ಅವರಲ್ಲಿ ಜನಪದ ಶಿಲ್ಪಕಲೆ ವಿಚಾರ ತಿಳಿಸಿದಾಗ ಅನೇಕ ಅಲಂಕಾರದ ಆಭರಣಗಳ ತಯಾರಿಕೆಯಿಲ್ಲಿ ತೊಡಗಿಕೊಂಡಿದ್ದರು. ಮನೆಗಳ ಮುಂದೆ ನೇತಾಕುವ ದೃಷ್ಠಿ ಮುಖಗಳು ಕರಿಮಣಿ ಜೋಡಿಸಿ ತಯಾರಿಸುತ್ತಿದ್ದರು.

ಸುಮಾರು 400 ಕುಟುಂಬಗಳಿರುವ ಈ ಹಳ್ಳಿಯಲ್ಲಿ ಜನಪತ್ರಿ (70) ಎಂಬ ಹಿರಿಯ ವ್ಯಕ್ತಿಯನ್ನು ಮಾತಾನಾಡಿಸಿದಾಗ ದೇವಾಡಿಸೋಪು ತಿಂದು, ಭಿಕ್ಷೆಬೇಡಿ ಮಕ್ಕಳನ್ನು ಈ ಗ್ರಾಮವನ್ನು ಕಟ್ಟಿರುತ್ತೇನೆ. ಹಕ್ಕಿ ಪ್ರಾಣಿಗಳನ್ನು ಶಿಕಾರಿ ಜೀವಿಸುತ್ತಿದ್ದ ನಮ್ಮ ಗ್ರಾಮ ಸುತ್ತಲೂ ಅಂಬತೂರ ಜಾತ್ರೆ, ಚುಂಚನಗಿರಿ ಜಾತ್ರೆಗಳಲ್ಲಿ ವಿವಿಧ ಮಕ್ಕಳು ಆಟದ ಸಾಮಾನು ಮಾರಿ ಜೀವಿಸುತ್ತಿದ್ದೀವಿ ಎಂದು ಹೇಳಿ ಸಾಕಿದ ಮೇಕೆಗಳನ್ನು ಕಾಡಿಗೆ ಕರೆದು ಹೋದರು.


ಅದೇ ಗ್ರಾಮ ನಿವಾಸಿ ಜವರ ಎಂಬ ದೇವರ ಗುಡ್ಡಪ್ಪನನ್ನು ಮಾತನಾಡಿಸಿದಾಗ ಅವರ ಮನೆಯ ಒಂದು ಮೂಲೆಯಲ್ಲಿ ಅನೇಕ ದೇವರ ವಿಗ್ರಹನಿಟ್ಟುದ್ದು ಚಾಮುಂಡೇಶ್ವರಿ, ಧರ್ಮಸ್ಥಳದ ಮಂಜುನಾಥ ಸ್ವಾಮಿಗೆ ಪೂಜೆ ಮಾಡುವುದು ಮತ್ತು ಗ್ರಾಮ ಜನರ ಕಷ್ಟ ಕಾರ್ಪಣ್ಯಗಳನ್ನು ಕೇಳಿ ಗುರುಗುಂಜಿ ಶಾಸ್ತ್ರ ಹೇಳುವುದು ಈ ಜವರಪ್ಪನ ಮಾಮೂಲಿ ಕೆಲಸವಾಗಿದೆ. ಇವರ ಗುರುಗುಂಜಿ ಶಾಸ್ತ್ರ ಹೇಳುವುದುರಲ್ಲಿ 4, 4, 1 ಎಂದು ಮೂರು ಬಾರಿ ಬಂದರೆ ನಾವು ಮಾಡುವ ಕೆಲಸ ಒಳ್ಳೆಯದಾಗುತ್ತದೆ. ಇಲ್ಲವಾದರೆ ಮಾಡಬೇಕಾಗಿರುವ ಶುಭ ಕಾರ್ಯಗಳು ನಿಲ್ಲಿಸುತ್ತಿದ್ದರು. ಇತ್ತೀಚೆಗೆ ಶವ ಸಂಸ್ಕಾರವನ್ನು ಪೆಟ್ಟಿಗೆಯಲಿ ಉಳುವುದು ಹೆಚ್ಚಾಗಿ ಮಳೆಯಾಗುತ್ತಿಲ್ಲ, ಶವಗಳನ್ನು ಸುಟ್ಟರೆ ಉತ್ತಮ ಮಳೆಯಾಗುತ್ತದೆ. ಒಂದೊಮ್ಮೆ ಉತಿಟ್ಟಿದ ಶವಗಳನ್ನು ಹೊರ ತೆಗೆದು ಸುಟ್ಟ ಮೇಲೆಯೇ ಹಳ್ಳ ಕೊಳ್ಳ ಕೆರೆ ತುಂಬಿ ಹರಿಯುವ ಮಳೆಯಾಗಿತ್ತು. ಕಬ್ಬಾಳಮ್ಮ ಮತ್ತು ಕಾಳಿ ದೇವಿಗೆ ಸಿಹಿ ಪೂಜೆ ಮಾಡುವುದು, ಕಜ್ಜಾಯ ಸುಡುವುದು, ಬೇಯುವ ಕಜ್ಜಾಯವನ್ನು ಬಂಡಲಿಯಿಂದ ಹೊರ ತೆಗೆಯುವ ಪವಾಡವನ್ನು ಮಾಡುತ್ತಾರೆ.

ಕಾರದ ಪೂಜೆ ಎಂದು ಓತವನ್ನು ಬಲಿಕೊಡುವುದು ಎಂದರ್ಥ ಗುಡ್ಡಪ್ಪ ಆಗ್ರದಿಂದ ಮೇಕೆಗೆ ಚುಚ್ಚಿ, ರಕ್ತ ಕುಡಿಯುತ್ತಾನಂತೆ ಹೀಗೆ ಹಕ್ಕಿ-ಪಿಕ್ಕಿ ಬುಡಕಟ್ಟು ಜನರ ಜೀವನ ಕ್ರಮ ಆಚರಣೆ, ಸಂಪ್ರದಾಯ ನನಗೆ ಆಶ್ಚರ್ಯವನ್ನುಂಟು ಮಾಡಿದವು. ಇವರ ಕಾಡಿನಲ್ಲಿ ಸಿಗುವ ಕಲ್ಲು ಮತ್ತು ಮಣ್ಣು ಮಿಶ್ರ ಮಾಡಿ ಗೋಡೆ ನಿರ್ಮಿಸಿರುವುದು ಇವರಲ್ಲಿ ಶಿಲ್ಪಕಲೆ ಅರಳುವುದಕ್ಕೆ ಕನ್ನಡಿಯಾಗಿದೆ.



← ಹಕ್ಕಿಪಿಕ್ಕಿ ಜನರ ಮಣ್ಣು ಮತ್ತು ಕಲ್ಲಿನ ಗೋಡೆ ಶಿಲ್ಪ

ಹಕ್ಕಿಪಿಕ್ಕಿ ಜನರ ಹಿರಿಯ ವ್ಯಕ್ತಿ ಮತ್ತು ಮನೆ →





← ಹಕ್ಕಿಪಿಕ್ಕಿ ಜನರ ಕೋಳಿ ಪಂಜರದ ಶಿಲ್ಪ

ಹಕ್ಕಿಪಿಕ್ಕಿ ಜನರ ದೇವರ ಮೂರ್ತಿ ಇಟ್ಟು ಪೂಜಿ ಮಾಡುತ್ತಿರುವುದು →





← ಹಕ್ಕಿಪಿಕ್ಕಿ ಜನರ ನೃತ್ಯಗಾರ್ತಿ

ಹಕ್ಕಿಪಿಕ್ಕಿ ಜನರ ಮನೆಯ ಶಿಲ್ಪ →





← ಹಕ್ಕಿಪಿಕ್ಕಿ ಜನರ ಮದುವೆ ಚಿತ್ರ

ಹಕ್ಕಿಪಿಕ್ಕಿ ಜನರ ಗುಂಪು →



ಬಿಳಿಗಿರಿ ರಂಗಸ್ವಾಮಿ ಬೆಟ್ಟದ ಬುಡಕಟ್ಟು ಸೋಲಿಗರ ಜನಪದ ಶಿಲ್ಪಕಲೆ

ನನ್ನ ಅಧ್ಯಯನ ಮುಂದಿನ ದಾರಿ ಹುಡುಕುತ್ತಾ ಚಾಮರಾಜನಗರ ಜಿಲ್ಲೆ, ಬಿಳಿಗಿರಿ ರಂಗಸ್ವಾಮಿ ಬೆಟ್ಟಕ್ಕೆ ಸಾಗಿದೆ. ಮೂಲ ನಿವಾಸಿಗಳಾದ ಸೋಲಿಲ್ಲದ ಸೋಲಿಗ ಸರಾದರರು, ಬಿಲ್ಲಯ್ಯ ಮತ್ತು ಕರಯ್ಯ ಎಂಬ ಒಂದೇ ಸೋಲಿಗ ವಂಶಸ್ಥರಾದ ಇವರು ಕಾಲಾಂತರದಲ್ಲಿ ಮಲೆ ಮಹದೇಶ್ವರ ಬೆಟ್ಟದಲ್ಲಿರುವವರು ಬಿಲ್ಲಯ್ಯನ ವಂಶಸ್ಥರಾಗಿ ಬ್ಯಾಡಗೆಂಪಣ್ಣ ಜನರು ಎಂದು ಹೇಳುತ್ತಾರೆ. ಮಹದೇಶ್ವರ ಸ್ವಾಮಿಗಳ ಆಶೀರ್ವಾಚನದಂತೆ (ತಮ್ಮಡಿ) (ಪೂಜೆಮಾಡುವವನು) ಗಳಾಗಿ ಮಾರ್ಪಾಡಾಗುತ್ತಾರೆ.

ಹಾಗೆಯೇ ಕಾರಯ್ಯನ ವಂಶಸ್ಥರು ಮೈಸೂರು ಜಿಲ್ಲೆಯ ಗುಂಡ್ಲುಪೇಟೆ, ಚಾಮರಾಜನಗರ, ಯಳಂದೂರು, ಕೊಳ್ಳೆಗಾಲ ತಾಲ್ಲೂಕಿನಲ್ಲಿ ಕಾಣಬರುತ್ತಾರೆ. ಸುಮಾರು 45000 ಸಾವಿರ ಜನಸಂಖ್ಯೆ ಸೋಲಿಗರು ಇದ್ದಾರೆ. ಸಾಧಾರಣ ಎತ್ತರವಾಗಿದ್ದು ಕಡಿಮೆ ಉಡುಪನ್ನು ತೊಡುತ್ತಾರೆ. ಜೀವನಾಧಾರವಾಗಿ ಕಾಡಿನಲ್ಲಿ ಸಿಗುವ ಆಯಾ ಕಾಲಕ್ಕೆ ಸಿಗಬಹುದಾದ ಪದಾರ್ಥ ಆಯ್ದುತಂದು ಮಾರಾಟಮಾಡುವುದು, ಶೀಗೇ ಬೇರು, ಜೇನುತುಪ್ಪ ಗೆಡ್ಡೆ ಗೆಣಸು, ಹಣ್ಣು, ಹಂಪಲುಗಳನ್ನು, ಕಟ್ಟಿಗೆ ಕೂಡಿ ಹಾಕಿ ಮಾರುವುದು ದಿನನಿತ್ಯ ಉದ್ಯೋಗ. ಕೂಲಿ ಕೆಲಸಕ್ಕೂ ಸಹ ಹೋಗುತ್ತಾರೆ. ಮೇಕೆ, ಧನಕರು ಸಾಕಾಣಿಕೆಯನ್ನು ರೂಡಿಸಿಕೊಂಡಿದ್ದಾರೆ.

ನನ್ನ ಅಧ್ಯಯನ ವಿಷಯವಾದ ಬುಡಕಟ್ಟು ಜನರ ಜನಪದ ಶಿಲ್ಪಕಲೆ ಈ ಬುಡಕಟ್ಟು ಸೋಲಿಗರ ಬದುಕು ಸ್ವಾಭಾವಿಕ ನಡೆದುಬಂದಿರುತ್ತದೆ. ಇವರ ಜನಪದ ಆಚರಣೆ ವಿಚಾರ ಹುಡುಕುತ್ತಾ ಹೋದಂತೆ ಬಿಳಿಗಿರಿ ರಂಗಸ್ವಾಮಿ ದೇವರ ಜನಪದ ಕಥೆಯನ್ನು ಹೇಳಬೇಕಾಗಿರುತ್ತದೆ.

ತಿರುಪತಿ ತಿಮ್ಮಪ್ಪ (ವಿಷ್ಣುದೇವ)ನು ಅವತಾರವೆಂಬಂತೆ ತಿರುಪತಿಯಿಂದ ಶ್ರೀರಂಗಪಟ್ಟಣದ ರಂಗಸ್ವಾಮಿಯಾಗಿ ನೆಲೆಸುವ ದೇವರನ್ನು ನಂತರದಲ್ಲಿ ಕರಿಗಿರಿರಂಗಸ್ವಾಮಿಯಾಗಿ ರೂಪುಗೊಳ್ಳುತ್ತಾನೆ. ಈ ಕ್ಷೇತ್ರ ಭಕ್ತರನ್ನು ಮೆಚ್ಚಿಗೊಂಡ ರಂಗಸ್ವಾಮಿ ದೇವರನ್ನು ಮುಂದೆ ಬಿಳಿಯದ ಪರ್ವತ ಶ್ರೇಣಿಯ ಕಡೆ ಪ್ರಯಾಣ ಬೆಳೆಸಿ, ಹಿತಕರ ವಾತಾವರಣದಲ್ಲಿ ತನ್ನ ಇಬ್ಬರು ಹೆಂಡತಿಯರಾದ ತುಳಸಿದೇವಿ ಮತ್ತು ಲಕ್ಷ್ಮಿದೇವಿಯರನ್ನು ಕರೆದು ತಂದು ಉಲ್ಲಾಸಕರ ವಾತಾವರಣದಲ್ಲಿ ನೆಲೆಯೂರುತ್ತಾರೆ. ವರ್ಷ ಪೂರ್ತಿ ಯಾವುದೇ ತಾಪಮಾನ ಏರದ ಸಾಧಾರಣ ಮಟ್ಟ ಕಾಪಾಡಿಕೊಂಡು ಕರ್ನಾಟಕದ ಊಟಿ ಎಂದು ಹೆಸರು ಪಡೆದುಕೊಂಡಿದೆ. ಇಂತಹ ಹಿತಕರ ವಾತಾವರಣದಲ್ಲಿ ನೆಲಸುವ ರಂಗನಾಥನು ಈ ಕಥೆಯಲ್ಲಿ ತುಂಟಾಟ, ಮನ್ಮಥ ರೂಪದಂತಹ ಪೋಲಿ ಚಟುವಟಿಕೆಗಳಿಂದ ಕರೆಸಿಕೊಳ್ಳುತ್ತಾನೆ.

ತನ್ನ ಪತಿಯೊಂದಿಗೆ ನೆಲೆಯೂರದ ರಂಗನಾಥನು (ನಾರಾಯಣ)ನು ಸೋಲಿಗರ ದೊಡ್ಡ ರಂಗಿ ಮಗಳು ಸೊಳೆ ರಂಗಿ ಸಹವಾಸ ಮಾಡುತ್ತಾರೆ. ಅವಳೊಡನೆ ಸಂಬಂಧಿವಿರಿಸಿ ಜಾತ್ರೆಯ ದಿನದಂದು ತೇರು

ಉತ್ಸವಕ್ಕೆ ಬಂದಿದ ಸೋಲಿಗರ ಬೊಮ್ಮಯ್ಯ ಮಗಳು ಕುಸುಮಾಲೆಯ ಅಂದಕ್ಕೆ ಮನಸೋತ ನಾರಾಯಣನು ಆಕೆಯ ಪಡೆಯಲೇಬೇಕು ಎಂಬ ಅತಿಯಾದ ಆಸೆಯಿಂದ ಸೋಲಿಗರ ಹೆಣ್ಣು ಮಕ್ಕಳ ಅಂದಕ್ಕೆ ಬೆರಗಾಗುತ್ತಾನೆ.

ತನ್ನ ಇಬ್ಬರು ಹೆಂಡತಿಯರನ್ನು ಮನಸ್ಪೊಪಿಸಿ ಬುಡಬುಡುಕೆ ವೇಷಧರಿಸಿ ಬೊಂಮಯ್ಯ ಸಂಪರ್ಕಿಸಿ, ಕುಸುಮಾಲೆಗೆ ಕೆಟ್ಟ ಜಾತಕ ಹೇಳಿ ನಂಬಿಸುತ್ತಾನೆ. ಪುರಾಣಿ ಪೋಡಿನಲ್ಲಿ ಕಾದು ಕುಳಿತಿದ್ದು ಗೆಡ್ಡೆ ಗೆಣಸು ಕೀಳಲು ಬಂದ ಕುಸುಮಾಲೆಗೆ ಅತಿಯಾದ ಮಿಂಚು, ಗುಡುಗು, ಮಳೆಯನ್ನು ತರುತ್ತಾನೆ. ಕಾಡಿನ ಮಧ್ಯೆ ಒಬ್ಬಳೇ ಚಲುವೆಗೆ ಭಯಗೊಂಡು ಆಶ್ರಯ ಕೇಳಿ ಬಂದ ಕುಸುಮಾಲೆಯನ್ನು ಆಶ್ರಯ ಕೊಡುವ ನೆಪದಲ್ಲಿ ತನ್ನ ಗುಡಿಸಲಿಗೆ ಭರಮಾಡಿಕೊಂಡು ಗುಡುಗಿನ ರಭಸಕ್ಕೆ ಹೆದರಿದ ಬಾಲೆಯೂ ಹೆದರಿ ರಂಗನಾಥನ ತಬ್ಬಿಕೊಳ್ಳುತ್ತಾಳೆ. ತನ್ನ ಹರಕೆಯಂತೆ ತಬ್ಬಿದ ಬಾಲೆಯನ್ನು ಮಿಲನಗೊಂಡು ಆಕೆಯನ್ನು 4 ನೇ ಹೆಣ್ಣಿನ ಸಂಬಂಧಮಾಡಿ ಕುಸುಮಾಲೆಯನ್ನು 4 ನೇ ಹೆಂಡತಿಯಾಗಿ ಸ್ವೀಕರಿಸಿ ಆಶ್ರಯ ನೀಡುತ್ತಾನೆ.

ಇಂತಹ ವಿಚಿತ್ರ ವಿಷಯವನ್ನು ಇಟ್ಟುಕೊಂಡು ಜನಪದ ಕಥೆಯಲ್ಲಿ ಸ್ವಾಮಿ ಬೆಳ್ಳಿಕುಟ್ಟಿ ಬೆಟ್ಟದ ರಂಗಸ್ವಾಮಿಯನ್ನು ಸೋಲಿಗರ ಭಾವನಾಗಿ ಕಾಣಬರುತ್ತಾರೆ.

ನಾವುಗಳು ಇಷ್ಟು ದಿನ ನಾರಾಯಣನು ಭಕ್ತಿ ಭಾವದಿಂದ ಪೂಜಿಸಿ, ಜನರು ಈ ಕಥೆಯಲ್ಲಿ ಕಳ್ಳ ನಾರಾಯಣ, ಚಿತ್ರಾಂಗದ ಆಟಾವಾಡುವ ಸುಳ್ಳು ಹೇಳುವ ನಾರಾಯಣನಾಗಿ ಕಾಣಬರುತ್ತಾನೆ. ನನ್ನಲ್ಲಿ ವಿಚಾರ ಮಾಡಿದಾಗ ಈ ಕಥೆಯಲ್ಲಿ ತಿಳಿಯುವ ವಿಷವೆಂದರೆ ಮನುಷ್ಯ ಸಾಂಸಾರಿಕ ಜೀವನ ಪದ್ಧತಿ ತಿಳಿ ಹೇಳುವುದು ಸಂತಾನೋತ್ಪತ್ತಿ ಮಾಡುವುದನ್ನು ತಿಳಿ ಹೇಳಿದಂತಿದೆ. ಮೂಲ ನಿವಾಸಿಗೆ ಕೌಟುಂಬಿಕ ಜೀವನದ ಕ್ರಮ ಹೆಂಡತಿಯರ ಜೊತೆಗೆ ಅನುನತೆಯಿಂದ ಬಾಳಲು ಸಮುದಾಯ ಸಾಮಾಜಿಕ ಜೀವನದ ಕ್ರಮವನ್ನು ಹೇಳಿದಂತಿದೆ.

ಸೋಲಿಗರ ಬೊಂಮಯ್ಯನ ಮಗಳು ಕುಸುಮಾಲೆಯ ಹೆಂಡತಿಯಾಗಿ ಸ್ವೀಕರಿಸಿದ ನಾರಾಯಣನನ್ನು ಸೋಲಿಗರ ಭಾವ ಮೈದುನರೆಂದು ಹೇಳುತ್ತಾ ಭಕ್ತಾದಿಗಳಾಗಿ ಬರುತ್ತಾರೆ. ಈ ಸೋಲಿಗರೆ ರಂಗನಾಥ ಸ್ವಾಮಿ ದೇವಾಲಯ ನಿರ್ಮಿಸಿಕೊಡುತ್ತಾರೆ. ಮುಂದಿನ ದಿನಗಳಲ್ಲಿ ಇಲ್ಲಿಯ ದೇವರು ರಂಗನಾಥ, ಲಕ್ಷ್ಮೀ, ತುಳಸಿದೇವಿ, ಕುಸುಮಾಲೆ, ಚಿಕ್ಕರಂಗಿನ ಎಂದು ಪೂಜಿಸುತ್ತಾ ಸಾಗುತ್ತಾರೆ. ಹೀಗೆ ಸೋಲಿಗ ಬುಡಕಟ್ಟು ಜನರಲ್ಲಿ ಜನಪದ ಶಿಲ್ಪಕಲೆ ಪ್ರಾರಂಭಗೊಂಡು ಇಂದಿಗೂ ಅದರ ಪವಿತ್ರ ಗೌರವ, ಭಕ್ತಿ ಭಾವವನ್ನು ಕಾಣಸಿಗುತ್ತಿದೆ.

ದೇವಸ್ಥಾನ ಕಲ್ಲಿನ ಕಂಬದಲ್ಲಿ ಚಿತ್ರಗಳನ್ನು ಕೆತ್ತನೆ ಇದ್ದು ಸೊಗಸಾಗಿವೆ. ನಂದಿಕಂಬ ಮೆಟಲ್‌ನಿಂದ ತಯಾರಾಗಿದೆ. ಸುಮಾರು 15 ಎತ್ತರವಿದೆ. ಸಾಧಾರಣ ಮಟ್ಟದ ಗೋಪುರವಿದೆ. ದೇವಾಲಯದ ಪಕ್ಕ ಎರಡು ಉಪ ಮಂಟಪಗಳನ್ನು ರಚಿಸಿದ್ದಾರೆ. ಭೂಮಿ ಸಾಧಾರಣ ಮಟ್ಟಕ್ಕೆ 400 ಅಡಿ ಎತ್ತರದಲ್ಲಿ ದೇವಾಲಯ

ನಿರ್ಮಾಣಮಾಡಲಾಗಿದೆ ಹಾಗಾಗಿ ತುಂಬಾನೇ ಸುಂದರವಾದ ದೇವಾಲಯವಾಗಿದೆ.

ಬಿಳಿಗಿರಿ ರಂಗಸ್ವಾಮಿಯ ತೇರು: ಈ ತೇರಿನ ಈ ಬುಡಕಟ್ಟು ಜನರ ಜನಪದ ಶಿಲ್ಪಕಲೆ ಸಾಕ್ಷಿಭೂತ ದೊಡ್ಡ ಪ್ರಮಾಣದ ಕಲಾಕೃತಿ ಎನ್ನಬಹುದು. ಬಣ್ಣಗಳಿಂದ ಲೇಪಿಸಿ ಮರದ ಶಿಲ್ಪಕಲಾ ಕೆತ್ತನೆ ಸೊಗಸು ಮಾನವ ಜೀವನದ ಕೌಟುಂಬಿಕ ನೆಲೆಯನ್ನು ಹಿಡಿ ತೇರಿನ ಸುತ್ತಲು ಅಲಂಕರಿಸಲಾಗಿದೆ. ಸುಮಾರು 20–25 ಅಡಿ ಎತ್ತರ, 10 ಅಡಿ ಅಗಲ ತೇರು ಬೃಹದಾಕಾರದ ಬಂಡಿಗಳನ್ನು ತೊಡಿಸಿದ್ದಾರೆ. ತೇರಿನ ಹಂತ ಹಂತಗಳಾಗಿ ಮಾಡಿ ಪ್ರತಿಯೊಂದು ಹಂತದಲ್ಲಿ ಮನುಷ್ಯ ಸಂತಾನೋತ್ಪತ್ತಿ ಕ್ರಿಯೆಗೆ ಪ್ರಚೋದಿಸುವ ಶಿಲ್ಪಕಲಾಕೃತಿಗಳಿವೆ. ಹಾಗೂ ಸಂತಾನ ಕ್ರಿಯೆಯ ವಿಧಾನಗಳನ್ನು ಈ ಶಿಲ್ಪಕಲೆಯಲ್ಲಿ ಕಾಣಬಹುದಾಗಿದೆ. ಕುಟುಂಬದ ನಿರ್ವಹಣೆ, ವಿದ್ಯಾಭ್ಯಾಸ ಮಾಡುತ್ತಿರುವ ಹೆಣ್ಣುಮಗಳು, ಬೇಟೆಗೆ ಹೋಗುವ ಬೇಟೆಗಾರನ ವ್ಯಕ್ತಿ, ಆನೆಯ ಶಿಲ್ಪ, ಕುದುರೆ ಶಿಲ್ಪ, ಮಿಲನದಲ್ಲಿ ತೊಡಗಿಕೊಂಡಿರುವ ಶಿಲ್ಪ, ವ್ಯಾಳಿ ಶಿಲ್ಪ, ಗಣೇಶ ಶಿಲ್ಪ, ನವಿಲು ಶಿಲ್ಪ, ಹೂವಿನ ಶಿಲ್ಪ, ಸಂಗೀತ ನುಡಿಸುವ ವ್ಯಕ್ತಿಯ ಶಿಲ್ಪ, ಮಿಲನಕ್ಕೆ ಮಹಿಳೆಯರು, ಸಹಾಯ ಮಾಡುತ್ತಿರುವ ಶಿಲ್ಪ, ತಾಯಿ ಮತ್ತು ಮಗು ಕುದುರೆ ಸವಾರಿ ಶಿಲ್ಪ, ರಾಕ್ಷಸನ ಶಿಲ್ಪ, ಕೃಷ್ಣನ ಗೋಪಿಕ ಸ್ತ್ರೀಯರ ಜತೆಗಿನ ಶಿಲ್ಪ ಹೀಗೆ ಸೂಕ್ಷ್ಮವಾಗಿ ತೇರಿನ ಅಂದ ಸೌಂದರ್ಯ ಗುರುತಿಸಲು ಹೊರಟರೆ ಬೃಹದಾಕಾರ ಬುಡಕಟ್ಟು ಜನರ ಜನಪದ ಶಿಲ್ಪಕಲಾಕೃತಿಯಾಗಿ ಕಾಣಿಸುತ್ತದೆ. ತೇರಿನ ಪ್ರತಿಯೊಂದು ಶಿಲ್ಪಕಲಾಕೃತಿಗಳ ಬೇರೆ ಬೇರೆ ಬಣ್ಣಗಳಿಂದ ಲೇಪಿಸಿ ಅಲಂಕರಿಸಿದ್ದಾರೆ. ಗಂಡು ಮತ್ತು ಹೆಣ್ಣುಗಳಿಬ್ಬರನ್ನು ಲೈಂಗಿಕತೆಗೆ ಅಥವಾ ಸಂತಾನೊತ್ಪತ್ತಿಗೆ ಪ್ರಚೋದಿಸುವಂತಹ ಶಿಲ್ಪಕಲಾ ಕೃತಿಯಾಗಿದೆ.

ತೇರಿನ ಬಿದಿಯಲ್ಲಿ ಸೋಲಿಗರ ವಿವಿಧ ಹಾಡಿ ಜನರು ಬಂದು ತಂಗುದಾಣಗಳನ್ನು ನಿರ್ಮಿಸಿಕೊಂಡಿದ್ದಾರೆ. ಬದಿಯ ಎರಡು ಕಡೆಯಿಂದ 40 ತಂಗುದಾಣಗಳಿವೆ. ಇವುಗಳು ಸಹಾ ಶಿಲ್ಪಕಲಾ ರಚನೆಯಲ್ಲಿ ನಿರ್ಮಾಣ ಮಾಡಿದ್ದಾರೆ.

ರಂಗನಾಥನ ದೇವಾಲಯದಲ್ಲಿ ದೊಡ್ಡ ಚರ್ಮದ ಪಾದುಕೆಗಳಿದ್ದು ರಂಗನಾಥನು ಕಾಡಿನಲ್ಲಿ ಓಡಾಡಲು ಬಳಸುತ್ತಿದ್ದರು ಎಂದು ಹೇಳಲಾಗುತ್ತದೆ. ಭಕ್ತಾದಿಗಳಿಗೆ ಇವುಗಳಿಂದ ಆಶೀರ್ವದಿಸಿ ಕಳುಹಿಸಿಕೊಡುತ್ತಾರೆ. ಗಿರಿಜನ ಹಾಡಿಯನ್ನು ಹುಡುಕಿದ ನನಗೆ ಮಹದೇವ, ಬೇರೇಗೌಡ, ಸಣ್ಣ ರಂಗೇಗೌಡ ಪರಿಚಯವಾದರು. ದಾಸೇಗೌಡ ಎಂಬುವರು ಮನೆ ನಿರ್ಮಿಸಿಕೊಡಲು ಮುಹುರ್ತದ ಪೂಜೆ ಮಾಡುತ್ತಿದ್ದರು. ಇವರ ಮಣ್ಣು, ಬಿದಿರಿ ಮತ್ತು ಮರದಿಂದ ಸುಂದರವಾಗಿ ಗುಡಿಸಲು ನಿರ್ಮಾಣಮಾಡುವುದರಲ್ಲಿ ನಿಪುಣರು. ಬಿಟ್ಟಿ ಸೇವೆ ಎಂಬ ರಂಗನಾಥನ ಜಾತ್ರೋತ್ಸವದಲ್ಲಿ ಸೋಲಿಗರ ಸಳಿಕೀರು ಕುಲ, ತೇನೆಯರ ಕುಲ, ಸೂರರ ಕುಲ, ಬೆಳ್ಳಿರ ಕುಲ, ಹಾಲರ ಕುಲದ ಎಲ್ಲರು ಸೇರಿ ಜಾತ್ರೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ತೆಪೋತ್ಸವದಲ್ಲಿ ತೆಪ್ಪಕಟ್ಟಿ ಅಲಂಕರಿಸಿ ತೆಪ್ಪ ನಡೆಸುವ ಕಾರ್ಯ ಎಲ್ಲಾ ನಡೆಸಿಕೊಡುತ್ತಾರೆ. ಇವರ ಜನಪದ ಶಿಲ್ಪಕಲಾಕೃತಿ ಕಾಣಬರುತ್ತದೆ.

ರೊಟ್ಟಿ ಹಬ್ಬ ಆಚರಣೆ ಮಾಡುವುದು, ಜಡೇಸ್ವಾಮಿ ಕೇತಪ, ಮಹದೇವಸ್ವಾಮಿ, ಏಳುಮಂದಿ ಅಮ್ಮ, ದೊಡ್ಡ ಸಂಪಿಗೆ, ಚಿಕ್ಕಸಂಪಿಗೆ, ಕಾರಯ್ಯನ ವಂಶಸ್ಥರು ಮಾಡುತ್ತಾರೆ.

ಕುಳೇಮಾರಿ ಹಬ್ಬ, ಸಂಕ್ರಾಂತಿ, ಗೌರಿಗಣೇಶ, ಯುಗಾದಿ ಹಬ್ಬಗಳು ರೂಢಿಯಲ್ಲಿ ಆಚರಿಸಿ ಬಂದಿರುತ್ತಾರೆ. ಜೇನು, ಗೆಡ್ಡೆ, ಗೆಣಸು, ಹಲಸು, ಬೆಟ್ಟದ ನೆಲ್ಲಿಕಾಯಿ, ಮಾವಿನ ಹಣ್ಣು, ಮಾಗಳ ಬೇರು, ಶೀಗೆ ಅಂಟವಳಕಾಯಿ ಶೇಖರಿಸಿ ಮಾರಾಟ ಮಾಡುತ್ತಾರೆ. ವ್ಯವಸಾಯ, ಕಲಮಾರಿ, ಕಾಪಿ ಬೆಳೆಯುವ ಉದ್ಯೋಗವಾಗಿದೆ. ಮಕ್ಕಳ ವಿದ್ಯಾಭ್ಯಾಸವನ್ನು ಮಾಡಿಸುತ್ತಾರೆ. ಹೀಗೆ ಹತ್ತಾರು ಅಧ್ಯಯನ ಈ ಸೋಲಿಗರ ಜೀವನ ಕ್ರಮದ ಬಗ್ಗೆ ನಡೆದಿರುತ್ತದೆ.

ಕುಡುಗೋಲು ಶಾಪ ಎಂಬ ರೋಗಕ್ಕೂ ತುತ್ತಾಗುತ್ತಿರುವುದನ್ನು ಕೇಳಿ ಬೇಸರವಾಯಿತು. ಆಮ್ಲಜನಕದ ಕೊರತೆಯಿಂದ ಶೇ 37% ಸೋಲಿಗರಿಗೆ ಅವರ ರಕ್ತದಲ್ಲಿ ಸೂಕ್ಷ್ಮಾಣುಗಳು ಕುಡುಗೋಲು ಆಕೃತಿ ಹೊಂದಿ ಕೈಕಾಲು, ಮಂಡಿನೋವು ಕಾಣಿಸಿಕೊಳ್ಳುತ್ತದೆ.

ಮಂಚಿಪಾಳ್ಯ ಎಂಬ ಹಾಡಿಯ ಬಲಕ್ಕೆ ಬೆಟ್ಟದಲ್ಲಿ ಕೊಟ್ಟ ಮಾಸ್ತಮ್ಮ ದೇವಸ್ಥಾನದ ಸನ್ನಿದಿಯಲ್ಲಿ ಮರಗಳ ಬೇರಿನ ಮಧ್ಯೆ ಹರಿದು ಬರುವ ನೀರು ಇವರ ಎಲ್ಲಾ ಕಾಯಿಲೆಗಳಮದ್ದಾಗಿದೆ. ಒಂದೇ ಕಡೆ 4 ವಿವಿಧ ಜಾತಿಯ ಮರಗಳ ಬೇರು ಸುತ್ತಿಕೊಂಡಿದ್ದು, ಆ ಮರಗಳ ಬೇರಿನ ಕೆಳಗೆ ಒಂದು ಭಾವಿ ಇದ್ದಿತಂತೆ ಮಾಸ್ತಮ್ಮ ಎಂಬ ಪತಿವೃತ ಹೆಂಗಸು ಈ ಭಾವಿಯಲ್ಲಿ ಬಿದ್ದ ಸತ್ತ ದಿನದಿಂದ ಈ ಭಾವಿ ಮತ್ತು ಮರಗಳನ್ನು ಸೇರಿಸಿ, ಜೊಟ್ಟದ ಮಾಸ್ತಮ್ಮ ದೇವರಗುಡಿ ಮಾಡಿ ಪೂಜಿಸುತ್ತಿದ್ದಾರೆ. ಮಾಂತ್ರಿಕ ಎಂಬಂತೆ ಸೋಲಿಗರ ಎಲ್ಲಾ ಕಷ್ಟ, ದುಃಖಗಳೇ ಈ ನೀರನ್ನು ಹರಕೆಮಾಡಿ ಕುಡಿದರೆ ಒಳ್ಳೆಯದಾಗುತ್ತದೆ ಎಂದರು.

ಹೀಗೆ ಬಿಳಿಗಿರಂಗನಾಥ ಬೆಟ್ಟ ಸೋಲಿಗರ ಜನಪದ ಶಿಲ್ಪಕಲೆಗಳನ್ನು ಹುಡುಕಿ ಹೋದ ನನಗೆ ಮಾಹಿತಿಯಾಗಿರುತ್ತದೆ.



← ಬಿಳಿಗಿರಿ ರಂಗನಾಥ ದೇವಾಲಯ
ಮುಖ್ಯದ್ವಾರ ಶಿಲ್ಪ



ಬಿಳಿಗಿರಿ ರಂಗನಾಥ ದೇವಾಲಯದ ಗೋಪುರ →



← ದೇವಾಲಯ ಆವರಣ ತಂಗುದಾಣ



ಬಿಳಿಗಿರಿ ರಂಗನಾಥ ದೇವಾಲಯ ಶಿಲ್ಪ→



← ಸೋಲಿಗರ ಬೀದಿಯಲ್ಲಿ ಅಶೋಕ ಸ್ಥಂಭ ಶಿಲ್ಪ



ಸೋಲಿಗರ ಮಣ್ಣಿನ ಮನೆ →



← ಸೋಲಿಗರ ಮಾರಮ್ಮ ದೇವಾಲಯ



ಮ್ಮಾರಮ್ಮನನ್ನು ಮರದ ಬುಡದಲ್ಲಿಟ್ಟು ಪೂಜಿಸುವುದು →



← ರಥ ಚಕ್ರ ಶಿಲ್ಪ

ರಥದಲ್ಲಿರುವ ಕೃಷ್ಣ ಮತ್ತು
ಗೋಪಿಕಾ ಸ್ತ್ರೀಯರ ಶಿಲ್ಪ →





← ರಥದಲ್ಲಿರುವ ಬೇಟೆಗಾರನ ಶಿಲ್ಪ

ರಥದಲ್ಲಿರುವ ತಾಯಿ ಮತ್ತು ಮಗು ಶಿಲ್ಪ →





ಸೋಲಿಗರ ಬಿಳಿಗಿರಿರಂಗಸ್ವಾಮಿ ದೇವರ ರಥ



← ರಥದಲ್ಲಿರುವ ಮನುಷ್ಯ ಮತ್ತು ಸಂಗಾತಿಗಳ ಶಿಲ್ಪ


ರಥದಲ್ಲಿರುವ ಕುದುರೆಯ ಶಿಲ್ಪ →






← ರಥದಲ್ಲಿರುವ ಶಾಲಾ ಬಾಲಕಿ ಶಿಲ್ಪ


ರಥದಲ್ಲಿರುವ ನಗ್ನ ಸುಂದರಿ ಶಿಲ್ಪ →





← ಬಿಳಿಗಿರಿ ರಂಗನಾಥಸ್ವಾಮಿ
ರಥದಲ್ಲಿರುವ ಮಿಲನದ ಶಿಲ್ಪ

ಸೋಲಿಗರ ಕಟ್ಟಿಗೆ ಸಾಗಿಸುತ್ತಿರುವ ವ್ಯಕ್ತಿ →






← ಆಂಜನೇಯ ಗೋಡೆ ಶಿಲ್ಪ

ಸೋಲಿಗರು ಮತ್ತು ಶಿವಲಿಂಗ →






← ದೇವಾಲಯದ ಕಂಬದ ಮೇಲೆ ಶಿಲ್ಪ ಚಿತ್ರ

ದೇವಾಲಯದ ಗೋಡೆ ಶಿಲ್ಪ →





← ದೇವಾಲಯ ರಂಗನಾಥ ಮೂರ್ತಿ ಶಿಲ್ಪ

ದೇವಾಲಯದ ಕಂಬಸ್ಥಂಭ ಶಿಲ್ಪ →





← ಸೋಲಿಗರ ಮುಹೂರ್ತ ಪೂಜಾ ವಿಧಾನ

ಸೋಲಿಗರ ಹಟ್ಟಿ (ಮನೆ) ಶಿಲ್ಪ) →





← ಸೋಲಿಗರ ಕೊಳಲು ನುಡಿಸುವ ವ್ಯಕ್ತಿ ಚಿತ್ರ

ಸೋಲಿಗರ ರೊಟ್ಟಿ ಹಬ್ಬದ ಚಿತ್ರ →





ಜೇನುಕುರುಬ ಅಟ್ಟು



ಸೋಲಿಗರ ಬೇಟೆಗಾರನ ಚಿತ್ರ

ಮಂಡ್ಯ ಜಿಲ್ಲೆ ಬುಡಕಟ್ಟು ಹಾಲುಮತ ಕುರುಬರ ಜನಪದ ಶಿಲ್ಪಕಲೆ

ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ತುಪ್ಪದ ಮಡುವು ಎಂಬ ಜನಪದ ಶಿಲ್ಪಕಲೆಗಳ ಗ್ರಾಮವಿದ್ದು ಅಧ್ಯಯನಕ್ಕಾಗಿ ಸಾಗಿ ಬಂದ ನನಗೆ ಆ ಗ್ರಾಮದಲ್ಲಿ ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿರುವ ಮುಕ್ಕಣೇಶ್ವರ ದೇವಸ್ಥಾನವು ನೂರಾರು ವರ್ಷಗಳ ಜನಪದ ಶಿಲ್ಪಕಲೆ ಇತಿಹಾಸ ಸಾರುತ್ತಿತ್ತು. ದೇವಸ್ಥಾನ ಭಾವ ಚಿತ್ರಗಳನ್ನು ಸೆರೆಹಿಡಿಯುತ್ತಿದ್ದ ನನಗೆ ಅಲ್ಲಿಯ ಗುಡಪ್ಪ ರುದ್ರಪ್ಪ ಈ ದೇವರ ಕುರಿತಾದ ಜನಪದ ಕಥೆಯನ್ನು ಹೇಳಿದರು. ಇಷ್ಟು ವಿಷಯವುಳ್ಳ ಈ ದೇವಸ್ಥಾನಕ್ಕೆ ಇಷ್ಟು ದಿನ ಏಕೆ ಯಾರು ಗುರುತಿಸಿರುವುದಿಲ್ಲ ಎಂಬ ಬೇಸರವು ಆಯಿತು.

ಗ್ರಾಮದ ಪಕ್ಕದ ಕಾಡಿನಲ್ಲಿ ಸಿಗುವ ಕಲ್ಲನ್ನು ತಂದು ಕ್ರಮ ಬದ್ಧವಾಗಿ ಜೋಡಿಸಿ ದೇವಸ್ಥಾನ ನಿರ್ಮಿಸಿದ್ದಾರೆ. ಮರದ ಭಾಗಿಲು ದಪ್ಪವಾಗಿದ್ದು ಹಾಲುಮತ ಕುರುಬರ ಮುಗ್ಧತೆ ಮತ್ತು ಜಾಣ್ಮೆಯನ್ನು ತೋರಿಸುತ್ತಾ ಇದು ಶಿಲ್ಪಕಲಾಕೃತಿಯಾಗಿ ಕಾಣುತ್ತದೆ. ಈ ದೇವಸ್ಥಾನದಲ್ಲಿ ನಿಂತ ಕುದುರೆ ಶಿಲ್ಪ, ದೇವರ ಅಲಂಕರಿಸುವ ಪ್ರಭಾವಳಿ, ದೇವರ ವಿಗ್ರಹಗಳು, ವೀರಭದ್ರ ಸ್ವಾಮಿಯ ಮೂರ್ತಿಗಳು, ಕಾಶಿ ಕುಣಿತಕ್ಕೆ ಬಳಸುವ ಮೂರ್ತಿಗಳು, ಈ ದೇವಸ್ಥಾನದ ಮುಂದೆ ಇರುವ ಚಿಕ್ಕ ಬಾಗಿಲಿನ ಕಲ್ಲುಗಳು ಕಡಿಮೆ ಎತ್ತರದ ಚಪ್ಪರದಂತೆ ಇರುವ ಗುಡಿಯು ಸ್ವಾಭಾವಿಕ ಸುಂದರವಾಗಿ ಕಾಣುತ್ತಿತ್ತು.

ಈ ಮುಕ್ಕಣ್ಣೇಶ್ವರ ದೇವರ ಜನಪದ ಕಥೆ ಹೇಳಬೇಕೆಂದರೆ ಶಿವಭಕ್ತ ಜಮದಗ್ನಿ ಋಷಿ ಪ್ರತಿದಿನ ಶಿವಪೂಜೆ ಮಾಡಲು ಸಿದ್ಧಪಡಿಸಿರಬೇಕಾದರೆ ಋಷಿ ಪತ್ನಿ ರೇಣುಕಾದೇವಿ ಮರಳಿನಿಂದ ಮಾಡಿದ ಮಡಿಕೆಯಲ್ಲಿ ಪೂಜೆಗೆ ನೀರು ತರಲೆಂದು ನದಿಯ ಕಡೆ ಹೊರಟು ನೀರು ತರುವಾಗ ಆದೇ ರಾಜ್ಯದ ರಾಜ ಜಲಕ್ರೀಡೆಯಲ್ಲಿ ತೊಡಗಿರಲು ಆತನ ಅಂಗ ಸೌಂದರ್ಯಕ್ಕೆ ಮನಃ ಸೋತ ರೇಣುಕಾದೇವಿ ತಾನು ತೆಗೆದುಕೊಂಡು ಹೋಗುತ್ತಿದ್ದ ಮಡಿಕೆ ಹೊಡೆಯುತ್ತದೆ. ಋಷಿ ಆಶ್ರಮದ ಬಳಿ ಬಂದಾಗ ಮರಳಿನ ಮಡಿಕೆ ಹೊಡೆದು ನೀರು ಚೆಲ್ಲಿ ಬರಿಗೈಯಲ್ಲಿ ರೇಣುಕಾದೇವಿ ಬಂದಿರುತ್ತಾರೆ. ಕಾರಣ ಕೇಳಿದಾಗ ವಿಚಲಿತಳಾದ ರೇಣುಕಾದೇವಿ ಮನಃ ಸ್ಥಿತಿಕಂಡು ಋಷಿಯು ಏಳು ಜನ ಮಕ್ಕಳನ್ನು ಕರೆದು ಹೆತ್ತ ತಾಯಿಯನ್ನು ಹತ್ಯೆ ಮಾಡಲು ಹೇಳುತ್ತಾರೆ. ಕೊನೆ ಮಗನಾದ ಪರಶುರಾಮನು ಕೋಪೋದ್ರಿಕ್ತನಾಗಿ ತಾಯಿ ಹತ್ಯೆ ಮಾಡುತ್ತಾನೆ. ಮಗನನ್ನು ಈ ಶಾಪದಿಂದ ವಿಮೋಜನೆ ಪಡೆಯಲು ಶ್ರೀಶೈಲದ ಬೆಟ್ಟದಲ್ಲಿರುವ ಶಿವನ ಬಳಿ ಹೋಗಲು, ಶಿವನು ಶ್ರೀಶೈಲದಿಂದ ಹಾಲತ್ತಿ ಬೆಟ್ಟಕ್ಕೆ ಬಂದು ನೆಲೆಸಿರುತ್ತಾನೆ. ಹಾಲತ್ತಿ ಬೆಟಕ್ಕೆ ಆಗಮಿಸಿದ ಜಮದಗ್ನಿ ಋಷಿ ಶಿವನನ್ನು ಹುಡುಕಲು ಪ್ರಯತ್ನಿಸಿರುತ್ತಾರೆ. ಬೆಟ್ಟದ ಬಂಡೆಯಲ್ಲಿ ಜಮದಗ್ನಿ ನಾನು ಇಲ್ಲಿರುವೆನು ಬಾ ಎಂದು ಕರೆತಂದಂತಹ ಧ್ವನಿ ಬರುತ್ತದೆ. ಧ್ವನಿ ದಾರಿ ಹಿಡಿದು ಮುಂದೆ ಸಾಗಿದ ಜಮದಗ್ನಿನಿಗೆ ಶಿವ ಕಾಣಿಸಲಿಲ್ಲ ಮತ್ತೆ ಈಶ್ವರ ಎಲ್ಲಿದ್ದಿಯಾ ತಂದೆ ನಾನು ನಿನ್ನನ್ನು ನೋಡಲೇ ಬೇಕು ಎಂದು ಕೇಳಿದಾಗ ಶಿವನು ಬೆಟ್ಟದ

ದೊಡ್ಡ ಬಂಡೆಯ ಒಳಗೆ ಸೇರಿರುವುದು ತಿಳಿಯುತ್ತದೆ. ಹಾಗಾಗಿ ಈಗಲೂ ಹಾಲತ್ತಿ ಬೆಟ್ಟದಲ್ಲಿ 10 ಅಡಿ ದೂರ ನಿಂತು ನಡೆದರೆ ಇನ್ನು 10 ಅಡಿ ದೂರ ಮಂಡಿಯೂರಿ ತವಯಬೇಕು. ಈ ಜಾಗವನ್ನು ಶಿವನು ವಾಸಸ್ಥಳ ಮಾಡಿಕೊಂಡಿರುತ್ತಾನೆ. ಸುತ್ತಲ ಭಕ್ತರನ್ನು ಸೃಷ್ಠಿಸಲು ಶಿವ ಮತ್ತು ಪಾರ್ವತಿಯರು ತಮ್ಮ ದೈವಿ ಶಕ್ತಿಯಿಂದ ಹಾಲು ಮತದ ಮುದ್ದಣ್ಣ ಸೃಷ್ಠಿಸುತ್ತಾರೆ. ಮುಂದೆ ತುಪ್ಪದ ಮಡುವು ಎಂಬಲ್ಲಿ ಹಾಲ ಮತ ಜನಾಂಗ ಏಳಿಗೆಯಾಗಿ ಇಂದಿಗೂ ಈ ಗ್ರಾಮದಲ್ಲಿ ಹಾಲು ಮತದ ಕುರುಬರು ಶಿವ ಭಕ್ತರಾಗಿದಾರೆ. 1900 ಸಾವಿರ ವರ್ಷಗಳ ಇತಿಹಾಸವಿದೆಯಂತೆ.

ಪ್ರತ್ಯಕ್ಷನಾದ ಶಿವನಿಂದ ಹತ್ಯೆಯಾಗಿದ್ದ ತಾಯಿಗೆ ಜೀವಕೊಡಿ ಎಂದು ಪರಶುರಾಮನು ಕೇಳಲು ಶಿವನು ರೇಣುಕಾದೇವಿ ಶರೀರವನ್ನು ಬಿಟ್ಟು ಬರಿ ಶಿರಕ್ಕೆ ಜೀವ ಕೊಡುತ್ತಾರೆ. ಈ ಗ್ರಾಮದಲ್ಲಿ ಬರಿ ಶಿರನಿಟ್ಟು ಗ್ರಾಮದೇವತೆಯಾಗಿ ಪೂಜಿಸುತ್ತಿದ್ದಾರೆ.

ಈ ಗ್ರಾಮದಿಂದ 40 ಕಿ.ಮೀ. ದೂರದಲ್ಲಿರುವ ಚುಂಚನಗಿರಿಗೂ ಈ ಜನಪದ ಕಥೆ ನಂಟನ್ನು ಬೆಸೆಯುತ್ತಾರೆ. ಚುಂಚಯ್ಯ ಎಂಬ ರಾಕ್ಷಸನನ್ನು ಸಂಹರಿಸಲು ಶಿವನು ಅವತಾರವೆತ್ತಿ ಬಂದಿದ್ದನ್ನು ಎಂಬ ಪತೀತಿ ಇದೆ.

ಈ ಗ್ರಾಮದಲ್ಲಿ ಆಂಜನೇಯ, ಈಶ್ವರ, ಮಾರಮ್ಮ, ಮುತ್ತಿನ ಮಾರಮ್ಮ ಎಂಬ ದೇವಸ್ಥಾನಗಳಿವೆ. ಈ ದೇವರುಗಳಿಗೆ ಹರಕೆ ಹೊತ್ತು ಬರುವ ಭಕ್ತಾದಿಗಳಿಂದ ಉತ್ಸವ ನಡೆಯುತ್ತಿರುತ್ತವೆ. ಈ ದೇವಸ್ಥಾನದ ಹಿರಿಯ ವ್ಯಕ್ತಿ ಗುಡ್ಡಪ್ಪರವರಿಂದ ಈಜನಪದ ಕಥೆ ಕೇಳಿ ಇದಕ್ಕೆ ಒಂದು ಲಿಖಿತ ರೂಪಕೊಟ್ಟು ದೇವಸ್ಥಾನದ ಭಾವ ಚಿತ್ರಗಳನ್ನು ದಾಖಲಿಸಲು ಪ್ರಯತ್ನಿಸಿರುತ್ತೇನೆ.

ಕಾವಾ ಆರ್ಟ್ಸ್ ಕಾಲೇಜಿನ ಶಿಲ್ಪಕಲಾ ಉಪನ್ಯಾಸಕರಾದ ವೀರಣ್ಣ ಅಕ್ಕಸಾಲಿಯವರ ಬಳಿ ಈ ಬುಡಕಟ್ಟು ಜನಪದ ಶಿಲ್ಪಕಲೆ ವಿಚಾರ ತಿಳಿಸಿಕೊಡಲು ಕೇಳಿಕೊಂಡಾಗ ಅವರು ಇದೊಂದು ಮೌಲ್ಯಯುತವಾದ ವಿಷಯವಾಗಿದ್ದು ಇದೇ ಮೊದಲಬಾರಿಗೆ ಈ ಪ್ರಯತ್ನದಲ್ಲಿ ಇಲಾಖೆ ತೊಡಗಿಸಿಕೊಂಡಿದೆ. ಹೆಚ್ಚು ಹೆಚ್ಚು ಮೂಲ ನಿವಾಸಿ ಶಿಲ್ಪಕಲೆಯನ್ನು ಹುಡುಕಿ ಅವರ ಆಚರಣೆಗಳಲ್ಲಿ ವೈಜ್ಞಾನಿಕ ಸತ್ಯ ಇರುತ್ತದೆ ಎಂದರು.

ನಮ್ಮ ಆಧುನಿಕ ಶಿಲ್ಪಕಲೆಯ ವಿಷಯ, ಅಂದ, ಚಂದ, ಅಲಂಕಾರಗಳು ಮೂಲನಿವಾಸಿಗಳ ಜನಪದ ಶಿಲ್ಪಕಲೆಯ ತಳಹದಿಯ ಮೇಲೆ ನಿಂತಿದೆ. ಬುಡಕಟ್ಟು ಜನರ ಆಚರಣೆಗಳು ಸರ್ವಕಾಲಿಕ ಸತ್ಯವಾದವು. ಅವುಗಳನ್ನು ನಾವುಗಳು ಕೇವಲವಾಗಿ ಕಾಣಬಾರದು. ನೀವು ಸಂಗ್ರಹಿಸಿರುವ ಭಾವ ಚಿತ್ರಗಳನ್ನು ತುಂಬಾ ವಿಷಯ ಪೂರ್ಣವಾಗಿದೆ. ಅವರುಗಳ ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಿ ಕೊಂಡಿರುವ ಮನೆಗಳು ಸ್ವಾಭಾವಿಕ ಸುಂದರವಾಗಿ ಕಾಣುತ್ತವೆ. ವೀರಣ್ಣ ಅಕ್ಕಸಾಲಿಯವರ ಬಾಲ್ಯ ಜೀವನದಲ್ಲಿ ಮೊದಲಬಾರಿಗೆ ಶಿಲ್ಪಕಲೆಯಲ್ಲಿ ತೊಡಗಿಸಿದ್ದನು ನೆನೆಪಿಸಿಕೊಳ್ಳುತ್ತಾ, ಅವರ ಮನೆಯ ಅಂಗಳದ ಮರಳಿನಲ್ಲಿ ಲಿಂಗದ

ಮೂರ್ತಿಮಾಡಿ ಅಕ್ಕಪಕ್ಕ ಮನೆಯವರ ಪ್ರೀತಿಗೆ ಪಾತ್ರರಾದ ಕ್ಷಣ ಚೆನ್ನಾಗಿತ್ತು. ಹೀಗೆ ಬಾಲ್ಯದಲ್ಲಿ ಅವರ ಶಾಲಾ ಚಿತ್ರಕಲಾ ಶಿಕ್ಷಕರ ಹುನ್ನಕುಂಟೆ ಎಂಬುವರಿಂದ ಪ್ರಭಾವರಾದೆವು.

ಹೀಗೆ ಶಿಲ್ಪಕಲೆ ಎನ್ನುವುದು ಮೂಲ ನಿವಾಸಿಗಳ ಬದುಕಿನಲ್ಲಿ ಸೇರಿದ್ದು ಜೀವನಕ್ರಮ ಆಚರಣೆಗೊಳ್ಳುತ್ತಿದೆ. ಕಾಡಿನ ಮೂಲನಿವಾಸಿಗಳ ಪದ್ಧತಿ, ಸಂಪ್ರದಾಯಗಳ ಅನುಕರಣೆಮಾಡಿಕೊಂಡು ನಾಡಿನ ಜನರು ಹೋಗುತ್ತಾರೆಯೇ ವಿನಃ ನಾಡಿನ ಸಂಪ್ರದಾಯಗಳ ಅನುಕರಣೆ ಮಾಡಿರುವ ಉದಾಹರಣೆಗಳಿಲ್ಲ. ಹೀಗೆ ಬುಡಕಟ್ಟು ಜನಪದ ಶಿಲ್ಪಕಲೆ ವಿಚಾರಕ್ಕೆ ಬಂದರೆ ಅವರೇ ಶ್ರೇಷ್ಠರು ಎನ್ನುತ್ತಾರೆ. ಹಿರಿಯರು ಆದ ವೀರಣ್ಣ ಸಾರ್ ಮಾತು ಕೇಳಿ. ಈ ವಿಷಯಕ್ಕೆ ಅಧ್ಯಯನಕ್ಕೆ ಇನ್ನು ಹೆಚ್ಚಿನ ಆಸಕ್ತಿ ಬಂದಿತ್ತು. ನಾನು ಸಾಗಿದ ಹಾಡಿಗಳಲ್ಲು ಜನಪದ ಶಿಲ್ಪಕಲೆ ಹೆಚ್ಚು ಹೆಚ್ಚು ಸೂಕ್ಷ್ಮವಾಗಿ ಗುರುತಿಸಿದೆ. ಅವರ ಸಾಮಾಜಿಕ ಮತ್ತು ಧಾರ್ಮಿಕ ಜೀವನದೊಂದಿಗೆ ಶಿಲ್ಪಕಲೆಯ ಪಾತ್ರ, ಆಚರಣೆ ಅವವರುಗಳ ಉಪಯೋಗಿಸುವ ಆಯುಧಗಳನ್ನು ಶಿಲ್ಪಕಲಾ ವ್ಯಪ್ತಿಗೆ ಬರುತ್ತವೆಂಬುದನ್ನು ವೀರಣ್ಣ ಸಾರ್ ತಿಳಿಸಿದಂತಾಯಿತು.

ಕೊಡಗು ಜಿಲ್ಲೆ ಗೋಣಿಕೊಪ್ಪ ಸ್ಥಳಿಯವಾಗಿ ಹಾಡಿಗಳನ್ನು ನೋಡಲು ಹೋದಾಗ ಹತ್ತಾರು ಬೆಟ್ಟ ಕುರುಬ ಹಾಡಿಗಳ ದರ್ಶನವಾಯಿತು. ಯಾವ ಬುಡಕಟ್ಟು ಜನಪದ ಶಿಲ್ಪಕಲೆ ವಿಚಾರ ಅಧ್ಯಯನಿಸುತ್ತಿದ್ದಿನೋ ಈ ಕಲೆಗೆ ಸೂಕ್ತವೆನ್ನುವಾಗೇ ಆದಿವಾಸಿ ಬೀದಿಯಲ್ಲಿ ಆಟವಾಡುತ್ತಾ ಬಂದ 4 ವರ್ಷದ ಬಾಲಕ, ಅವನ ಕೈಯಲ್ಲಿ ಬೀದಿಯಲ್ಲಿ ಬಂಡಿ ಹೊಡಿಸುವಾಗೇ ಮರದ ಕೋಲು ಮತ್ತು ಚಕ್ರಗಳನ್ನು, ನಡೆಸುತ್ತಾ ಬಂದ. ನಿಜವಾಗಲೂ ಈ ಒಂದು ಕಲಾಕೃತಿಯೇ ಮೂಲವಾಸಿಗಳ ಜನಪದ ಶಿಲ್ಪಕಲೆಗೆ ಸರಿಯೆನಿಸಿತ್ತು. ಆ ಬಾಲಕನ ಸಂಪೂರ್ಣ ಭಾವಚಿತ್ರವನ್ನು ಕಲೆಹಾಕಿ ನಮ್ಮ ಅಧ್ಯಯನ ವರದಿಯ ಮುಖಪುಟಕ್ಕೆ ಸೂಕ್ತವಾಗಿ ಭಾವ ಚಿತ್ರವಾಯಿತು. ಈ ಚಿತ್ರದಲ್ಲಿ ಆ ಬಾಲಕ ಬೀದಿಯಲ್ಲಿ ಬಂಡಿ ನಡೆಸುತ್ತಾ ಬಂದ ಪರಿ, ಜನಪದ ಶಿಲ್ಪಕಲೆ ನಡೆದು ಬಂದ ಹಾದಿಯನ್ನು ಹೇಳುವಂತಿದೆ.

ಈ ಹಾಡಿಗಳ ಬೆಟ್ಟ ಕುರುಬ ಮತ್ತು ಜೇನು ಕುರುಬ ನೆಲೆಸಿದ್ದು ಜೊತೆಗೆ ಎರವರು ಇದ್ದಾರೆ. ಎರವರ ರಾಚಯ್ಯ ಎಂಬ ಸ್ಥಳೀಯ ಹಿರಿಯ ವ್ಯಕ್ತಿಯನ್ನು ಮಾತನಾಡಿಸಿದಾಗ ಈ ಕಾಡಿನಲ್ಲಿ ಅನೇಕ ಪುಟ್ಟ ಪುಟ್ಟ ದೇವರ ಗುಡಿಗಳನ್ನು ಕಟ್ಟಿಸಿರುವುದು ಕಂಡು ಬಂದಿತ್ತು. ಧರೆಗೆ ದೊಡ್ಡವರು ಮಂಟೇಸ್ವಾಮಿ ಅನುಯಾಯಿಗಳಾದ ರಾಚಪ್ಪಾಜಿ, ದೊಡ್ಡಮ್ಮತಾಯಿ, ಸಿದ್ಧಪ್ಪಾಜಿಯವರುಗಳ ಗದ್ದುಗೆ, ಕಂಡಯಗಳನ್ನು ಪೂಜಿಸುತ್ತಿದ್ದರು. ಗುಡಿಗಳಲ್ಲಿ ಜಾಗಟೆ, ತ್ರಿಶೂಲ, ದೇವತೆಗಳ ಬಳೆಗುಚ್ಚು, ರುದ್ರಾಕ್ಷಿ ಮಣಿ, ಸರ, ದೊಡ್ಡ ತಾಯಿ ದೇವರ ಮಾಂಗಲ್ಯ ಸರ ಹೀಗೆ ದೇವರನ್ನು ಅಲಂಕರಿಸಿದರು.

ಅಯ್ಯಪ್ಪಸ್ವಾಮಿ ಪೂಜಿಸುತ್ತಿದ್ದು 18 ಮೆಟ್ಟಿಲುಗಳನ್ನು ನಿರ್ಮಿಸಿ ಗುಡಿ ನಿರ್ಮಾಣ ಮಾಡಿಕೊಂಡಿದ್ದರು. ರಾಚಯ್ಯ ಗುಡ್ಡಪ್ಪ ವಾಸಿಸಲು ಮಣ್ಣಿನಲ್ಲಿಯೇ ಗೋಡೆ ಮನೆ ನಿರ್ಮಿಸಿದ್ದಾರೆ. ಮೂರು ಹಂತ ಪಡಸಾಲೆ ಮಾಡಿ ಸಾಗಣಿಯಿಂದ ನುಣಪು ಮಾಡಿದ್ದಾರೆ. ಬೇವಿನ ಕಟ್ಟೆ ನಿರ್ಮಿಸಿ ವಿವಿಧ ಜಾತಿ ಹೂಗಿಡಗಳಿಂದ

ಬೃಹದಾಕಾರದ ಬೇವಿನ ಮರವಿದ್ದಿತು. ಕಾಡಿನ ಮಧ್ಯೆ ಇರುವ ಈ ರಾಚಯ್ಯನವರ ಬಿದಿರಿನಿಂದ ಧನದಕೊಟ್ಟಿಗೆ ಸಾಕಿದ ಪ್ರಾಣಿಗಳಿಗೆ ಚಪ್ಪರ ನಿರ್ಮಾಣ ಮಾಡಿದ್ದರು. ತಿತಿಮತಿಯ 5 ಕಿ.ಮೀ. ದೂರದಲ್ಲಿರುವ ಈ ರಾಚಯ್ಯನವರು ಪಾಶಣಮೂರ್ತಿ ದೇವರ ಬಗ್ಗೆ ವಿವರಿಸಿ ಕೆಟ್ಟದನ್ನು ಮಾಡಿದವರಿಗೆ ಪಾಶಣಮ್ಮ ಬಂದು ವಿಷ ಉಣಬಡಿಸುತ್ತಾಳೆ. ಹಾಗೂ ಪಾಶಣಮ್ಮ ದೇವರಿಗೆ ತೆರೆ ಕಟ್ಟಿಕೊಂಡು ಇಬ್ಬರು ಕುಣಿತ್ತಾರೆ. ಕುಟ್ಟಿಜಾತ ದೇವರು ಸಹಾ ಈ ಕಾಣಬರುತ್ತಾರೆ. ಕೆಟ್ಟ ಜನಗಳನ್ನು ಕಂಡ ಬಲುಕೋಪವಂತೆ. ಹಬ್ಬದಲ್ಲಿ ಸಹಾ ತುಂಬಾನೇ ಶಿಸ್ತು ಪಾಲನೆ ಮಾಡಿದರೆ ಏನೂ ಸಮಸ್ಯೆ ಇರುವುದಿಲ್ಲ. ಅವರುಗಳು ಕೆಟ್ಟದಾಗಿ ಮಾಡಿದರೆ ದೊಣ್ಣೆ ಹೊಡೆಯುವುದು ಅನ್ನ ಬೇಯಿಸುವ ಪಾತ್ರೆಯಲ್ಲಿ ಕಕ್ಕಸು ಕಾಣುತ್ತದೆಯಂತೆ ಹೀಗೆ ಈ ರಾಚಯ್ಯ ಗುಡ್ಡಪ್ಪರವರು ಅನೇಕ ದೇವರ ವಿಗ್ರಹಗಳನ್ನು ಪೂಜಿಸುತ್ತಿದ್ದರೆ ಅಕ್ಕಪಕ್ಕದ ಜನರು ಬಂದು ಪೂಜೆಮಾಡಿಸಿ ಹೋಗುತ್ತಾರೆ.


ಬೆಟ್ಟ ಕುರುಬರ ಕುರುಡು ಹಬ್ಬ (ಕುದುರೆ ಹಬ್ಬ) ಆಚರಿಸುವ ರೀತಿಯಿಂದ ಅನೇಕ ಸಂಪ್ರದಾಯಸ್ಥರು ದೂರ ಉಳಿಯುತ್ತಾರೆ. ಈ ಹಬ್ಬದ ಆಚರಣೆಯ ವಿಶೇಷವೆಂದರೆ ವಿವಿಧ ಬಣ್ಣಗಳಿಂದ ದೇಹ ಮತ್ತು ಮುಖವನ್ನು ಅಲಂಕರಿಸಿ ಹೆಜ್ಜೂರು ಜಾತ್ರೆಯಲ್ಲಿ ಕುಣಿಯುತ್ತಾರೆ. ಈ ಕುಣಿಯುವ ಸಮಯದಲ್ಲಿ ಯಾವ ವಯಸ್ಸಿನ ಗಂಡಸಿಗೆ ಯಾರ ಬೇಕಾದರೂ ಜೊತೆಗೂಡಿ ಹೋಗಬಹುದು. ಹಾಗೇ ಯಾವುದೇ ಹೆಂಗಸಿಗೂ ಯಾವ ವಯಸ್ಸಿನ ಗಂಡಸ್ಸಿನ ಜೊತೆ ಓಡಿ ಹೋಗಬಹುದು. ಈ ಕುಣಿಯುವ ಸಮಯದಲ್ಲಿ ಎಲ್ಲಾರು ಆಕರ್ಷಿತರಾಗಿ ಕಾಣುತ್ತಾರೆ. ಬೆತ್ತಲಾಗಿ ಕುಣಿಯುವುದು ರೂಢಿಯಲ್ಲಿದೆ. ಭದ್ರಕಾಳಿ ಮತ್ತು ಅಯ್ಯಪ್ಪಸ್ವಾಮಿ ದೇವರುಗಳಿಗೆ ಈ ಪರಿಯ ಜಾತ್ರೆ ಏರ್ಪಾಡು ಮಾಡುತ್ತಾರಂತೆ. ವರ್ಷದ ಮೇ ತಿಂಗಳ 2ನೇ ವಾರದಲ್ಲಿ ಮಂಗಳವಾರ ಪ್ರಾರಂಭವಾಗಿ ಬುಧವಾರ ರಾತ್ರಿ ಮುಗಿಯುತ್ತದೆಯಂತೆ. ತಿತಿಮತಿಯ ಸುತ್ತಮುತ್ತಾ ಜಂಗಲ್ ಹಾಡಿ ಮಜ್ಜಿಗೆ ಹಾಡಿ, ಘಾರಂಹಾಡಿ, ಕರಕಂಡಿ ಹಾಡಿ, ರೇಷ್ಮೆ ಹಾಡಿಗಳಿರುತ್ತವೆ.



← ತುಪ್ಪದ ಮಡು ಗ್ರಾಮ ಕಲ್ಲು ಚಪ್ಪರದ ಗುಡಿಯ ಶಿಲ್ಪ

ಹಾಲುಕುರುಬರ ಹಟ್ಟಿಯ ಚಿತ್ರ →





← ಮಹದೇಶ್ವರ ದೇವಾಲಯದ ಬಸವಪ್ಪ ಶಿಲ್ಪ

ಹಾಲು ಕುರುಬರ ಗ್ರಾಮದ ಪುರಾತನ ದೇವಾಲಯ →





← ಮುಕ್ಕಣ್ಣೇಶ್ವರ ದೇವಾಲಯದ
ಪ್ರಭಾವಳಿ ಮತ್ತು ವಿಗ್ರಹಗಳ ಬುಟ್ಟಿ



ಮುಕ್ಕಣ್ಣೇಶ್ವರ ದೇವರ ಮೂರ್ತಿ ಶಿಲ್ಪ →



← ವೀರಭದ್ರಸ್ವಾಮಿ ವಿಗ್ರಹ ಶಿಲ್ಪ



ಗ್ರಾಮದ ದೇವರ ಕಲ್ಲು ಶಿಲ್ಪ →



ಚಿಕ್ಕಯ್ಯ ದೇವರ ಗುಡಿಯ ಚಿತ್ರ



ಚಿಕ್ಕಯ್ಯ ದೇವಾಲಯ ಆವರಣ ಒಳಕಲ್ಲು ಚಿತ್ರ

ಮಳವಳ್ಳಿ ತಾಲ್ಲೂಕು ಬುಡಕಟ್ಟು ಜನಪದ ಶಿಲ್ಪಕಲೆ

(ಮಂಟೇಸ್ವಾಮಿ ದೇವರು)

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಅನೇಕ ಜನಪದ ಕಥೆಗಳು ಮತ್ತು ಕಲೆಗಳು ಜನ್ಮತಾಳಿದ ತವರೂರು ಎನ್ನಬಹುದು. ಬುಡಕಟ್ಟು ಜನಪದ ಶಿಲ್ಪಕಲೆ ವಿಚಾರದಲ್ಲಿ ಮಳವಳ್ಳಿ ತಾಲ್ಲೂಕಿನ ಒಪ್ಪಿದ ಪುರದಲ್ಲಿ ಧರೆಗೆ ದೊಡ್ಡವರು ಐಕ್ಯವಾದ ಸ್ಥಳವಾಗಿದ್ದು, ಸರ್ವಕಾಲಕ್ಕೂ ಸತ್ಯ ಎಂಬಂತಹ ಜನಪದ ಕಥೆ ಹುಟ್ಟಿಕೊಳ್ಳುತ್ತದೆ. ಈ ಕಥೆಯ ಜತೆಯಲ್ಲಿ ಜನಪದ ಶಿಲ್ಪಕಲೆ ಕಾಣಿಸುತ್ತಾ ಸಾಗುತ್ತದೆ.

ಶ್ರೀಶೈಲದಿಂದ ಮಂಟೇಸ್ವಾಮಿಯವರು ದುಷ್ಟ ಜನಗಳನ್ನು ದುರ್ಮಾರ್ಗದಲ್ಲಿ ನಡೆಯುವವರನ್ನು ಅಹಂಕಾರ ಅಡಗಿಸಿ ಒಳ್ಳೆಯ ರೀತಿ ನೀತಿಯಲ್ಲಿ ನಡೆಯುವ ಜನರಿಗೆ ಒಳ್ಳೆಯದನ್ನು ಮಾಡುತ್ತಾ ಕಾವೇರಿ ನದಿ ತೀರಿ ಆಯ್ಕೆಮಾಡಿಕೊಂಡು ಕಪ್ಪಡಿಯಲ್ಲಿ ಪವಾಡ ಪ್ರದರ್ಶಿಸಿ, ಮಳವಳ್ಳಿ ತಾಲ್ಲೂಕು ತಲಕಾಡು ಮಾರ್ಗವಾಗಿ ಒಪ್ಪಿದ ಪುರದಲ್ಲಿ ಐಕ್ಯವಾಗಲು ತೀರ್ಮಾನಿಸುತ್ತಾರೆ. ದಾರಿಯುದ್ದಕ್ಕೂ ಶಿಷ್ಯಯಂದಿರಾದ ರಾಚಪ್ಪಾಜಿ, ದೊಡ್ಡಮ್ಮ ತಾಯಿಯ ಮತ್ತಿಹರನ್ನು ಕರೆಕೊಂಡು ತಲಕಾಡು ಮಾರ್ಗವಾಗಿ ಸಾಗುತ್ತಿರುತ್ತಾರೆ.

ಏಳು ವರ್ಷದ ಹಸುಕಂದ ಕೆಂಪಚಾರಿಯನ್ನು ಶಿಷ್ಯನಾಗಿ ಪಡೆದ ಮಂಟೇಸ್ವಾಮಿಯವರು ಈತನಿಗೆ ಸಕಲ ವಿದ್ಯಾಪರಾಂಗತನಾಗಿ ಮಾಡಿ ಉತ್ತಮ ಭಕ್ತಿ ಮತ್ತು ಪವಾಡ ಪುರುಷನ್ನಾಗಿ ಮಂಟೇಶ್ವಾಮಿ ತಯಾರು ಮಾಡುತ್ತಾರೆ. ಒಪ್ಪಿದಪುರದ ಕುರುಬ ಜನಾಂಗ ಕುರಿ ತೊಟ್ಟಿಯಲ್ಲಿ 12 ಅಡಿ ಆಳ ಬಾವಿ ತೆಗೆಸಿ ಐಕ್ಯವಾಗಬೇಕು ಎಂದು ಹೇಳುತ್ತಾರೆ.

ಈ ಜನಪದ ಕಥೆ ಹೇಳುವಾಗೇ ಅಂದಿನ ಕಾಲಕ್ಕೆ ಆಯುಧಗಳ ಬಳಕೆ ಭವಿಷ್ಯ ನುಡಿಯುವ ಮಂಟೇಶ್ವರಸ್ವಾಮಿ ಐಕ್ಯವಾಗಲು ಬಾವಿ ತೆಗೆಸುವ ಕ್ರಿಯೆ ಹೀಗೆ ಇವುಗಳ ಜನಪದ ಶಿಲ್ಪಕಲೆಯನ್ನು ಬಳಕೆಮಾಡಲಾಗಿದೆ. ಮಂಟೇಸ್ವಾಮಿ ದೇವರನ್ನು ಕಂಡಯದ ಒಡೆಯ ಮೂರ್ತಿ ಶಿವನು ಲಿಂಗದ ರೂಪ ಎನ್ನುವಾಗೇ ಮಂಟೇಶ್ವಾಮಿಯವರು ಕಂಡಯದ ಮೂರ್ತಿಯಾಗಿರುತ್ತಾರೆ. ಇಂದಿಗೂ ಮಂಟೇಸ್ವಾಮಿ ದೇವರ ಗುಡಿಗಳಲ್ಲಿ ಕಂಡಯವನ್ನು ಇಟ್ಟಿರುತ್ತಾರೆ.

ಮಳವಳ್ಳಿ ತಾಲ್ಲೂಕಿನ ಹಲಗೂರಿನಲ್ಲಿ ತುಂಬಾನೆ ದುರಂಹಕಾರದಿಂದ 7 ಜನ ಅಣ್ಣ ತಮ್ಮಂದಿರು ಬಾಳ್ವೆ ಮಾಡುತ್ತಿರುತ್ತಾರೆ. ಇವರ ಯಾವ ಕಾರಣಕ್ಕೂ ಆ ಊರಿಗೆ ಯಾವೊಬ್ಬ ಸಾಧು ಜಂಗಮ ಪ್ರವೇಶಿಸದಂತೆ ಸುತ್ತೇಳು ಹಳ್ಳಿಗಳಲ್ಲಿ ಪ್ರಭಾವಿಗಳಾಗಿದ್ದರು ದೊಡ್ಡ ಪ್ರಮಾಣದ ಕುಲುಮೆ ಕೆಲಸ ಮಾಡುತ್ತಿರುವ ಇವರು ಹತ್ತಾರು ಜನರಿಗೆ ಕೆಲಸ ಕೊಟ್ಟಿರುತ್ತಾರೆ.

ಇವರ ದುರಂಹಕಾರ ಮಟ್ಟ ಹಾಕಲು ಮಂಟೇಸ್ವಾಮಿಯ ತನ್ನ ಶಿಷ್ಯನಾದ ಸಿದ್ದಪ್ಪಾಜಿಯವರನ್ನು ಕಬ್ಬಿಣದ ಆಯುಧ ಮಾಡಿಸಿ ತರಲು ಕಳುಹಿಸುತ್ತಾರೆ. ಹಲಗೂರಿಗೆ ಬಂದಾಗ ಸಿದ್ದಪ್ಪಾಜಿಯವರಿಗೆ ದುರಂಹಕಾರಿಗಳಾದ ಪಂಚಾಳದವರು ಆಯುಧ ಮಾಡಿಕೊಡಲು ನಿರಾಕರಿಸುತ್ತಾರೆ. ಶಿಷ್ಯರಾದ ಸಿದ್ದಪ್ಪಾಜಿಯವರು ಎಷ್ಟು ಕೇಳಿಕೊಂಡರು ಆಯುಧಗಳನ್ನು ಮಾಡಿಕೊಡದ ಪಂಚಾಳದವರು ಸಿದ್ದಪ್ಪಾಜಿಯವರ ಸತ್ಯ ಪರೀಕ್ಷೆಗೆ ಒಳಪಡಿಸುತ್ತಾರೆ. ಅನೇಕ ಪವಾಡಗಳನ್ನು ಮಾಡಿಸುತ್ತಾರೆ. ಇವರ ಎಲ್ಲಾ ಪವಾಡಗಳನ್ನು ದೈವಿಶಕ್ತಿಯಿಂದ ಸಿದ್ದಪ್ಪಾಜಿಯವರು ಗೆಲ್ಲುತ್ತಾರೆ.

ನಂತರ ಹಲಗೂರಿನ ಪಂಚಾಳದವರು ಮಂಟೇಸ್ವಾಮಿ ಐಕ್ಯವಾಗಲು ಆಯುಧಗಳನ್ನು ಮಾಡಿ ಒಪ್ಪಿದಪುರಕ್ಕೆ ಬಂದು 12 ಅಡಿ ಆಳದ ಬಾವಿ ತೆಗೆದು ಸಿದ್ದಪಡಿಸುತ್ತಾರೆ. ಈ ಸಂದರ್ಭದಲ್ಲಿ ದೊಡ್ಡಮ್ಮ ತಾಯಿಯವರು ಕೊಡುವ ಪ್ರಸಾದವನ್ನು ದಾರಿಯಲ್ಲಿ ಬಿಸಾಡಿ ಬರುತ್ತಾರೆ. ಕೋಪಗೊಂಡ ಮಂಟೇಸ್ವಾಮಿಯವರು ಈ ಜನಕ್ಕೆ ಅನೇಕ ಜನ್ಮಜನಗಳಿಗೂ ತಟ್ಟುವುದಂತಹ ಶಾಪವನ್ನು ಕೊಡುತ್ತಾರೆ.


ಮಂಟೇಸ್ವಾಮಿಯವರ ಆಶೀರ್ವಚನದಂತೆ ಸಿದ್ದಪ್ಪಾಜಿಯ ಕೊಳ್ಳೆಗಾಲ ತಾಲ್ಲೂಕು ಚಿಕ್ಕಲೂರು ಕ್ಷೇತ್ರ ನೆಲೆಸುತ್ತಾರೆ. ರಾಚಪ್ಪಾಜಿ ಮತ್ತು ದೊಡ್ಡಮ್ಮ ತಾಯಿಯವರು ಮೈಸೂರಿನ ಕಪ್ಪಡಿಯಲ್ಲಿ ನೆಲೆಸುತ್ತಾರೆ.

ಶ್ರೀಮಂಟೇಸ್ವಾಮಿಯವರು ಕಲಿಯುಗ ಪ್ರಾರಂಭವಾಗುತ್ತದೆ. ಅನೇಕ ಅನಾಚಾರಗಳು ನಡೆಯುತ್ತವೆ. ಇವುಗಳನ್ನು ನಾವು ನೋಡಲಾರವು ಎಂದು ತನ್ನ ಸ್ವ ಇಚ್ಚೆಯಂತೆ ಒಪ್ಪಿದಪುರದಲ್ಲಿ ಐಕ್ಯವಾಗುತ್ತಾರೆ. ಹೀಗೆ ಈ ಮಂಟೇಸ್ವಾಮಿ ದೇವರ ಜನಪದ ಕಥೆಯಲ್ಲಿ ಅನೇಕ ಸಂದರ್ಭದಲ್ಲಿ ಶಿಲ್ಪಕಲೆ ಕಾಣಿಸುತ್ತಾ ಸಾಗುತ್ತದೆ. ದೇವರ ಗುಡಿಯಲ್ಲಿ ಬೃಹದಾಕಾರದ ನಗಾರಿ ಕಾಣಿಸಿತ್ತು.



← ಮಂಟೇಸ್ವಾಮಿ ದೇವಸ್ಥಾನದ ಮುಖ್ಯದ್ವಾರ ಶಿಲ್ಪ

ಮಂಟೇಸ್ವಾಮಿ ದೇವರ ಮೂರ್ತಿ ಶಿಲ್ಪ →





← ಮಂಟೇಸ್ವಾಮಿ ದೇವಾಲಯದ ರಥದ ಶಿಲ್ಪ

ಮಂಟೇಸ್ವಾಮಿ ದೇವಾಲಯದ
ದೊಡ್ಡ ನಗಾರಿ ಶಿಲ್ಪ →





← ಮಂಟೇಸ್ವಾಮಿ
ದೇವಾಲಯದ ಅರಳಿ ಕಟ್ಟೆ

ಮಂಟೇಸ್ವಾಮಿ ದೇವರ
ಬಸವಪ್ಪನ ಚಿತ್ರ →





← ಮಂಟೇಸ್ವಾಮಿ ದೇವಾಲಯದ ಮಂಟಪ

ಮಂಟೇಸ್ವಾಮಿ ಭಕ್ತರ ತಂಗುದಾಣ →



ತಲಕಾಡಿನ ತಲ/ಕಾಡ ಎಂಬ ಬುಡಕಟ್ಟು ಜನರ ಜನಪದ ಶಿಲ್ಪಕಲೆ

ಮೈಸೂರು ನಗರದ ಪೂರ್ವದಲ್ಲಿ 30 ಮೈಲಿ ದೂರದೊಳಗೆ ಅಂದರೆ ತಿರುಮಕೂಡಲು ಕ್ಷೇತ್ರಕ್ಕೆ ಪೂರ್ವದಿಕ್ಕಿಗೆ ಪಾಪ ಪರಿಹಾರಕವಾದ 'ಗಜಾರಣ್ಯ' ಕ್ಷೇತ್ರವೊಂದುಂಟು.

ಭೌಗೋಳಿಕವಾಗಿ ವಿಮರ್ಶಿಸಿದರೆ ಸ್ವರ್ಗಲೋಕವು, ಭೂಗೋಳದ ಉತ್ತರದಲ್ಲಿರುವ ಉರ್ಧ್ವಲೋಕವೆಂದೂ, ಪಾತಾಳ ಲೋಕವು ದಕ್ಷಿಣದಲ್ಲಿರುವ ಅಧೋಲೋಕವೆಂದೂ ವ್ಯಕ್ತವಾಗುತ್ತದೆ. ಈ ದೃಷ್ಟಾಂತವನ್ನು ಗಜಾರಣ್ಯ ಕ್ಷೇತ್ರವೆಂದು ತಿಳಿಯಬಹುದು.

ಸೋಮಗಿರಿ:

ಅರ್ಕಗಿರಿಗಳ ಮಧ್ಯೆ ಇರುವ ಭೂಪ್ರದೇಶವು ದಕ್ಷಿಣ ಕಾಶಿ ಗಜಾರಣ್ಯಕ್ಷೇತ್ರವೆಂದು ಸ್ಥಳಪುರಾಣ ತಿಳಿಸುತ್ತದೆ. ಆದರೆ ಕಾವೇರಿ ನದಿಯ ದಡದಲ್ಲಿರುವ ಭೂಪ್ರದೇಶವೇ ಗಜಾರಣ್ಯ ಕ್ಷೇತ್ರವೆಂದು ಸಿದ್ಧವಾಗಿದೆ. ಈ ಪ್ರದೇಶವನ್ನು ದೇಹದಂತೆ ಭಾವಿಸಿದಾಗ ಈ ಕ್ಷೇತ್ರದ ಪೂರ್ವದಿಕ್ಕಿನಲ್ಲಿ ಅರ್ಕೇಶ್ವರನು ಆ ದಿವ್ಯದೇಹವಾಗಿಯೂ, ಪಾತಾಳೇಶ್ವರನು ಇರುವ ಸ್ಥಳವು ಆಧಾರ್ಚಕ್ರವಿರುವ ಪೃಷ್ಠಿ ಪ್ರದೇಶವಾಗಿಯೂ, ಸೈಕತೇಶ್ವರನು ಬೆನ್ನಾಗಿಯೂ, ಸೋಮಗಿರಿ ಶಿಕರದ ಶ್ರೀಮಲ್ಲಿಕಾರ್ಜುನ ಲಿಂಗವು ಸಹಸ್ರಾರು ಬ್ರಹ್ಮರಂಧ್ರ ಸೂಚಕವಾಗಿಯೂ ಇದ್ದು. ಆ ದಿವ್ಯದೇಹದ ಹೃದಯಪುಂಡರೀಕದೊಳಗೆ ಇರುವ ಜ್ಯೋತಿರ್ಲಿಂಗವಾಗಿ ಪ್ರಕಾಶಿಸುತ್ತಿರುವ ಪಂಚಲಿಂಗ ಪ್ರಭುವಾದ ಶ್ರೀ ವೈದ್ಯೇಶ್ವರನು ವಿರಾಜಿಸುತ್ತಿರುವುದನ್ನು ಗಮನಿಸಬಹುದು. ಶಿವಸ್ವಾಮಿಯಾದ ಸ್ಕಂದನು ಸನತ್ಕುಮಾರ ಯೋಗಿಗೆ ಹೇಳುವುದು –

ಭೂ ಪ್ರದೇಶದ ಕ್ಷೇತ್ರಗಳಲ್ಲೆಲ್ಲ ಗಜಾರಣ್ಯ ಕ್ಷೇತ್ರವು ಬಹಳ ಶ್ರೇಷ್ಠವಾದುದರಿಂದ ಈ ಭೂಭಾಗವು ಪರಮೇಶ್ವರನ ಮುಖವೆನಿಸಿದೆ. ಆದುದರಿಂದಲೇ ಸಾಂಬಸದಾಶಿವನು ತನ್ನ ಪಂಚವದನಗಳ ಪ್ರತೀಕವಾಗಿ ಪಂಚಲಿಂಗಗಳ ಸ್ವರೂಪದಿಂದ ಸೂರ್ಯನು ಮೀನರಾಶಿಯಲ್ಲಿರುವಾಗ ಉತ್ತರ ಫಲ್ಗುಣಿ ನಕ್ಷತ್ರದಲ್ಲಿ ಅಭಿಜಿನ್ ಮುಹೂರ್ತದಲ್ಲಿ ಪರಮೇಶ್ವರನು ಪಂಚಲಿಂಗಗಳಲ್ಲಿ ಪ್ರವೇಶಿಸಿದನು. ಶಿವನು ಈ ಐದು ಲಿಂಗಗಳನ್ನು ಸಂದರ್ಶನ ಮಾಡುವ ಮಾನವನು ಶಂಕರನಿಗೆ ಪ್ರಿಯನಾಗುವನು.

ಈ ಐದು ಲಿಂಗಗಳನ್ನು ಒಂದೇ ದಿನ ದರ್ಶನ ಮಾಡುವ ಮನುಜನು ಶಿವಸಾಯುಜ್ಯವನ್ನು ಹೊಂದುವನು.

ವೈದ್ಯೇಶ್ವರ:

ಒಂದಾನೊಂದು ದಿವಸ ಬೇಡರು ಕಾಡಿನಲ್ಲಿ ಬೇಟೆಯಾಡುತ್ತಿರುವಾಗ ಆನೆಗಳು ಪಕ್ಕದ ಹಳ್ಳದಿಂದ ನೀರನ್ನು ತಂದು ಒಂದು ಪೊದರಿನಲ್ಲಿ ಹಾಕಿ ಅದೇ ಹಳ್ಳದಲ್ಲಿ ಬೆಳೆದಿದ್ದ ತಾವರೆ ಹೂಗಳನ್ನು ತಂದು ಪೊದರಿನೊಳಗಿಟ್ಟು ಹೋಗುತ್ತಿದ್ದವು. ಇದನ್ನು ಕಂಡು ಆ ಬೇಡರು ಬಹಳ ಆಶ್ಚರ್ಯದಿಂದ ಆ ಪೊದರಿನಲ್ಲಿ ಏನಿದೆ? ಎಂಬ ಉತ್ಸುಕತೆಯಿಂದ ಅರಿಯಲು ಉದ್ಯುಕ್ತರಾದರೂ ತಮ್ಮ ಕೊಡಲಿಯಿಂದ ಪೊದರನ್ನು ಕಡಿಯುತ್ತಿರುವಾಗ ಅವರ ಕೊಡಲಿಯ ಪೆಟ್ಟು ಪಕ್ಕದಲ್ಲಿದ್ದ ಲಿಂಗಕ್ಕೆ ತಾಗಿತು. ತಕ್ಷಣ ಅದರಿಂದ ರಕ್ತಪ್ರವಾಹ ಹೊರಟಿತು. ಆ ಬೇಡರಿಬ್ಬರು ಭಯಾಕ್ರಾಂತರಾಗಿ ಚೀರಿಕೊಂಡರು. ಆಗ ಅಶರೀರವಾಣಿಯು 'ಎಲೈ ಬೇಡರಿರಾ, ನೀವು ಭೂರುಗದ ಕಾಯಿಯನ್ನು ಜಜ್ಜಿ ಪೆಟ್ಟು ಬಿದ್ದಿರುವ ಸ್ಥಳಕ್ಕೆ ಲೇಪನ ಮಾಡಿರಿ? ನಿಮ್ಮ ಹೆಸರು ಚಿರಸ್ಥಾಯಿಯಾಗಲಿ' ಎಂದು ಹೇಳಿತು.

ಆ ಬೇಡರು ಅಶರೀರವಾಣಿಯ ಆಜ್ಞೆಯ ಪ್ರಕಾರ ಬೂರುಗಕಾಯಿಯನ್ನು ಜಜ್ಜಿ ಲಿಂಗಕ್ಕೆ ಪೆಟ್ಟು ಬಿದ್ದ ಭಾಗಕ್ಕೆ ಲೇಪನ ಮಾಡಿದ ಕೂಡಲೇ ರಕ್ತ ಪ್ರವಾಹ ನಿಂತು ಅದು ಕ್ಷೀರರೂಪಾಂತರದಿಂದ ಪ್ರವಾಹವಾಗಿ ಒಂದು ಹಳ್ಳದಲ್ಲಿ ನಿಂತಿತು. ಹಾಗೇ ನಿಂತ ಸ್ಥಳವು ಗೋವಿನ ಕರ್ಣಾಕಾರವಾಗಿ ಕಾಣುತ್ತಿತ್ತು. ಅದಕ್ಕೆ ಈಗಿನ 'ಗೋಕರ್ಣ ತೀರ್ಥ' ಎಂದು ಪ್ರಸಿದ್ಧಿಯಾಯಿತು. ಸ್ವಯಂ ತಾನೇ ವೈದ್ಯನನ್ನು ಹೇಳಿದ್ದರಿಂದ ವೈದ್ಯನಾಥೇಶ್ವರ ಎಂಬ ಅಭಿದಾನದಿಂದ ಪ್ರಖ್ಯಾತನಾದನು. ಪ್ರಥಮದಲ್ಲಿ ಗಜಗಳಿಂದ ಪೂಜೆಗಳನ್ನು ಸ್ವೀಕರಿಸುತ್ತಿದ್ದರಿಂದ ಗಜಾರಣ್ಯ ಕ್ಷೇತ್ರವೆಂದು ಪ್ರತೀತಿ. ಬೇಡರಿಬ್ಬರ ಹೆಸರು (ತಲ, ಕಾಡ) ಚಿರಸ್ಥಾಯಿಯಾಗಿ ಉಳಿಯಲು ಈ ಪ್ರದೇಶಕ್ಕೆ 'ತಲಕಾಡು' ಎಂದು ಹೆಸರಾಗಿದೆ. ಕಾರ್ತೀಕ ಮಾಸದಲ್ಲಿ ಕಾವೇರಿಯು ಗುಪ್ತಗಾಮಿನಿಯಾಗಿ ಬಂದು ಗೋಕರ್ಣ ತೀರ್ಥದಲ್ಲಿ ನೆಲೆಸಿರುವಳು. ಆದ್ದರಿಂದ ಗೋಕರ್ಣದಲ್ಲಿ ಮಿಂದು ಭವರೋಗವೈದ್ಯನೂ ಪಂಚಲಿಂಗಗಳಲ್ಲಿ ಪ್ರಧಾನನೂ ಆದ ವೈದ್ಯೇಶ್ವರನನ್ನು ವೈಶಾಖ ಶುದ್ಧ ಪೂರ್ಣಿಮಾ ದಿವಸದಲ್ಲಿ ಅರ್ಚಿಸಿದರೆ ಶಿವಸಾಯುಜ್ಯ ಪ್ರಾಪ್ತಿಯಾಗುತ್ತದೆ ಎಂದು ಸ್ಕಾಂದ ಮಹಾಪುರಾಣದಲ್ಲಿ ಹೇಳಿದೆ.

ಅರ್ಕೇಶ್ವರ:

ಸೂರ್ಯನು ಈ ಕ್ಷೇತ್ರದಲ್ಲಿ ಈಶ್ವರನನ್ನು ಅರ್ಚಿಸಿ ಗ್ರಹಗಳ ನಾಯಕನಾದನು. ಪ್ರತಿ ದಿವಸವೂ ಸಹ ಪ್ರಾತಃ ಕಾಲದಲ್ಲಿ ಸೂರ್ಯನ ಕಿರಣಗಳು ಬೀಳುವುದನ್ನು ನೋಡಿದರೆ ಸೂರ್ಯನು ಬಂದು ಪೂಜಿಸುತ್ತಿದ್ದಾನೆ ಎಂದು ಭಾಸವಾಗುತ್ತದೆ. ಹೀಗೆ ಸೂರ್ಯನಿಂದ ಅರ್ಚಿತನಾದ್ದರಿಂದ ಅರ್ಕೇಶ್ವರ (ಅರ್ಕ, ಸೂರ್ಯ) ಎಂದು ಅನ್ವರ್ಥನಾಮದಿಂದ ವಿಖ್ಯಾತನಾಗಿದ್ದಾನೆ. ಕಾವೇರಿಯ ಉತ್ತರವಾಹಿನಿಯಲ್ಲಿ ಸ್ನಾನಮಾಡಿ ಅರ್ಕೇಶ್ವರನನ್ನು ಮಾಘ ಶುದ್ಧ ಸಪ್ತಮಿ ದಿವಸದಲ್ಲಿ ಆರಾಧಿಸುವವರು ಐಹಿಕ ಭೋಗ ಭಾಗ್ಯಗಳನ್ನು ಅನುಭವಿಸಿ ಅಂತ್ಯದಲ್ಲಿ ಸ್ವರ್ಗಲೋಕ ಪಡೆಯುತ್ತಾರೆ ಎಂಬುದರಲ್ಲಿ ಸಂಶಯವಿಲ್ಲ.

ಪಾತಾಳೇಶ್ವರ:

ಪಾತಾಳ ಲೋಕವಾಸಿಯಾದ ವಾಸುಕಿಯೂ ಈ ಕ್ಷೇತ್ರದಲ್ಲಿ ಈಶ್ವರನನ್ನು ಪೂಜಿಸಿ ಮೆಚ್ಚಿಸಿ ನಾಗ ಲೋಕಾಧಿಪತ್ಯವನ್ನು ಪಡೆದನು. ಆತನಿಂದ ಪೂಜಿತನಾದ್ದರಿಂದ ಪಾತಾಳೇಶ್ವರ ಅಥವಾ ವಾಸುಕೀಶ್ವರ ಎಂದು ಪ್ರಸಿದ್ಧಿಯನ್ನು ಪಡೆದನು. ಸಮೀಪದಲ್ಲೇ ಇರುವ ಪೂರ್ವವಾಹಿನಿಯಾದ ಕಾವೇರಿಯಲ್ಲಿ ಸ್ನಾನಮಾಡಿ ಅನ್ಯನ, ಭಕ್ತಿಯಿಂದ ಶ್ರಾವಣ ಶುದ್ಧ ಪಂಚಮಿಯಲ್ಲಿ ಪೂಜೆಗೈದು ನಾಕಲೋಕವನ್ನು ಪಡೆಯುವನು.

ಸೈಕತೇಶ್ವರ:

ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮನು ಚರಾಚರ ವಸ್ತುಗಳನ್ನು ಸೃಷ್ಟಿ ಮಾಡುತ್ತಿರುವಾಗ ಅವಯುವ ಸೌಷ್ಟವವುಳ್ಳ ಸುಂದರ ಸ್ತ್ರೀಯನ್ನು ಸೃಷ್ಟಿಸಿ, ಅವಳಲ್ಲಿ ಕಾಮಪರವಶನಾದಾಗ, ಶಾರದೆಯು ಹರಿಣೀ ರೂಪತಾಲ ಓಡಿ ಹೋಗುತ್ತಿರಲು ಬ್ರಹ್ಮನು ಗಂಡು ಜಿಂಕೆಯ ರೂಪತಾಳಿ ಹಿಂಬಾಲಿಸಿದನು. ಹರಿಣಿಯ ಅರ್ತನಾದಕ್ಕೆ ಈಶ್ವರನು ಪ್ರತ್ಯಕ್ಷನಾಗಿ ಗಂಡು ಜಿಂಕೆಯ ರೂಪತಾಳಿರುವ ಬ್ರಹ್ಮನನ್ನು ತನ್ನ ಪಿನಾಕ ಎಂಬ ಧನುಸ್ಸಿನಿಂದ ಒಂದು ಶಿರಚ್ಛೇದನ ಮಾಡಿದನು. ದುಷ್ಟನಿಗ್ರಹಕ್ಕೆ ಸಮರ್ಥನಾದ ಪರಮೇಶ್ವರನಿಂದ ತಿರಸ್ಕರಿಸಲ್ಪಟ್ಟ ಕಮಲಭವನು ಗಜಾರಣ್ಯ ಕ್ಷೇತ್ರಕ್ಕೆ ಬಂದು ಶಾಸ್ತ್ರೋಕ್ತವಾಗಿ ಮರಳಿನಿಂದ ಶಿವಲಿಂಗಮಾಡಿ ಪ್ರತಿಷ್ಠಿಸಿ ವೇದೋಕ್ತ ಪ್ರಕಾರವಾಗಿ ಅನನ್ಯ ಭಕ್ತಿಯಿಂದ ಚರ್ಚಿಸಿದನು. ಭಕ್ತಾನುಗ್ರಹನಾದ ಪರಮೇಶ್ವರನು ಬ್ರಹ್ಮನ ಅಪೇಕ್ಷೆಯಂತೆ ಶಾರದೆಯನ್ನು ಶಬ್ಧಮಯಳನ್ನಾಗಿ ಮಾರ್ಪಡಿಸಿ ಆಕೆಯನ್ನು ಬ್ರಹ್ಮನಿಗೆ ದಾನಮಾಡಿದನು. ಬ್ರಹ್ಮನು ಮರಳಿನಿಂದ ಲಿಂಗವನ್ನು ಮಾಡಿ ಅರ್ಚಿಸಿದ್ದರಿಂದ 'ಬ್ರಹ್ಮಕೃತ ಸೈಕತೇಶ್ವರ' ಎಂದು ಸುಪ್ರಸಿದ್ಧವಾಯಿತು. ಕಾವೇರಿಯ ದಕ್ಷಿಣವಾಹಿನಿಯಲ್ಲಿ ಸ್ನಾನಮಾಡಿ ಮರಳೇಶ್ವರನನ್ನು ಮಾಘ ಬಹುಳ ಚತುರ್ದಶಿ ದಿವಸ ಅರ್ಚಿಸಿದರೆ ಬ್ರಹ್ಮಲೋಕ ಪ್ರಾಪ್ತಿಯಾಗುವುದು.

ಪರಮೇಶ್ವರನ ಪಂಚಮುಖಗಳಿಂದಲೇ ಪಂಚಭೂತಗಳು ಸೃಷ್ಟಿಯಾಗಿರುವುದಾಗಿ ಲಿಂಗಪುರಾಣವು ತಿಳಿಸುತ್ತದೆ. ಪ್ರಧಾನಮುಖವಾದ ಈಶಾನ ಮುಖದಿಂದ ಆಕಾಶತತ್ವವು, ಪೂರ್ವಮುಖವಾದ ತತ್ಪುರುಷ ಮುಖದಿಂದ ಅಗ್ನಿತತ್ವವು, ದಕ್ಷಿಣ ಮುಖವಾದ ಅಘೋರಮುಖದಿಂದ ಜಲತತ್ವವು, ಪಶ್ಚಿಮ ಮುಖವಾದ ಸದ್ಯೋಜಾತ ವದನದಿಂದ ಪೃಥ್ವೀತತ್ವವು, ಉತ್ತರ ಮುಖವಾದ ವಾಮದೇವ ವದನದಿಂದ ವಾಯುತತ್ವವು, ಉತ್ಪನ್ನವಾಗಿರುವುದಾಗಿ ಲಿಂಗಮಹಾಪುರಣದಲ್ಲಿ ಸ್ಪಷ್ಟವಾಗಿದೆ. 'ಆಲಯಂ ಪಂಚ ಭೂತಾನಾಂ' ಎಂಬ ಪ್ರಮಾಣದಂತೆ ಪೃಥ್ವೀ, ಆಪ್, ತಾಜಸ್ಸು, ವಾಯು, ಆಕಾಶಗಳೆಂಬ ಪಂಚಭೂತಗಳಿಗೆ ಆಶ್ರಯವಾಗಿರುವುದರಿಂದ ಪಂಚ ಭೂತಾತ್ಮಕನಾದ ಬ್ರಹ್ಮಾಂಡ ರೂಪವನ್ನು ಧರಿಸಿರುವುದೆಂಬುದು ಸಿದ್ಧಾಂತವಾಗಿದೆ. ಪಂಚಭೂತಗಳ ಸಮಷ್ಟಿರೂಪನಾದ ಶಿವನೇ ಲಿಂಗರೂಪನಾಗಿರುವನೆಂದು ಪ್ರಮಾಣ

ವಾಕ್ಯಗಳು ಅಸಂಖ್ಯವಾಗಿವೆ. ಪಂಚಲಿಂಗಗಳಲ್ಲಿ ಮೇಲೆ ತಿಳಿಸಿದ ವೈದ್ಯೇಶ್ವರ, ಅರ್ಕೇಶ್ವರ, ಪಾತಾಳೇಶ್ವರ ಮತ್ತು ಸೈಕತೇಶ್ವರ ಚತುರ್ಲಿಂಗಗಳ ಸ್ಥೂಲ ಪರಿಚಯವನ್ನು ಹೇಳಿದ್ದಾಯಿತು.

ಇನ್ನು ಮುಂದೆ ಪಂಚಲಿಂಗಗಳಲ್ಲಿ ಐದನೆಯದಾದ ಉತ್ತರಮುಖವಾದ ಮತ್ತು ವಾಯುತತ್ವಕ್ಕೆ ಕಾರಣವಾದ ವಾಮದೇವವದನದಿಂದ ಮಲ್ಲಿಕಾರ್ಜುನ ಎಂಬ ಅಭಿದಾನದಿಂದಲೂ ಅಷ್ಟದಳದಲ್ಲಿ ಪೂರ್ವದಳವಾದ ಸೋಮಗಿರಿ ಶಿಖರದ ಮೇಲೆ (ಮುಡುಕುತೊರೆ ಬೆಟ್ಟ) ನೆಲೆಸಿರುವಿಕೆಯ ಅಂತರಾರ್ಥವು ವಿಮರ್ಶನೀಯವಾಗಿದೆ. ಕಾಮದೇನುವಿನಿಂದಲೂ ಅರ್ಚಿತರಾದ ಉಮಾಮಹೇಶ್ವರರು ಶ್ರೀ ಭ್ರಮರಾಂಬಾ ಮಲ್ಲಿಕಾರ್ಜುನೇಶ್ವರನಾಗಿ ಇಲ್ಲಿ ಸಂಪೂಜಿತರಾಗಿರುವುದರ ಕಾರಣವಾದರೂ ಪ್ರಕೃತಿ ಪುರುಷಾತ್ಮಕವಾಗಿ ಪರಬ್ರಹ್ಮಸ್ವರೂಪದ ವೈಶಿಷ್ಟ್ಯತೆಗೆ ಕಾರಣವಾಗಿದೆ.



← ವೈದ್ಯನಾಥಸ್ವಾಮಿ ದೇವಾಲಯ ಮುಖ್ಯದ್ವಾರ ಶಿಲ್ಪ



ದೇವಾಲಯ ಮತ್ತು ಗೋಪುರ ಶಿಲ್ಪ →



← ದೇವಾಲಯ ದೊಡ್ಡಬಾಗಿಲು ಶಿಲ್ಪ



ದೇವಾಲಯ ಆವರಣ ಬಾವಿಕಟ್ಟೆ



ದೇವಾಲಯ ಆವರಣದ ಪುಟ್ಟ ಗುಡಿ

ಮುಡುಕುತೊರೆ ಬುಡಕಟ್ಟು ಜನಪದ ಶಿಲ್ಪಕಲೆ

ಮೇಲ್ಕಂಡ ಸೋಮಶೈಲದ ಮಹಾತ್ಮ್ಯೆಯ ವಿಷಯವಾಗಿ ಎಷ್ಟು ಹೇಳಿದರೂ ಸಾಲದು. ಕಾರಣ ಈ ಸ್ಥಳದ ವೈಶಿಷ್ಟ್ಯವನ್ನು ಪ್ರತಿಬಿಂಬಿಸಲು ಸ್ಕಾಂದಮಹಾಪುರಾಣದ ಸನತ್ಕುಮಾರ ಸಂಹಿತೆಯಲ್ಲೂ, ಮಾರ್ಕಂಡೇಯ ಪುರಾಣದಲ್ಲೂ, ಲಿಂಗ ಪುರಾಣದಲ್ಲೂ ಮತ್ತು ಅಖಂಡ ಕಾವೇರಿ ಮಹಾತ್ಮೆಯಲ್ಲೂ ಸಾದರಪೂರ್ವಕವಾಗಿ ಸುಸ್ಪಷ್ಟವಾಗಿದೆ ಮತ್ತು ಐತಿಹಾಸಿಕವಾಗಿದೆ. ನಿದರ್ಶನ ಶಾಸನಗಳ ಆಧಾರಗಳಿಂದಲೂ, ಚಾರಿತ್ರಿಕ ಅಂಶಗಳಿಂದಲೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿದೆ.

ಅರಣ್ಯಗಳಲ್ಲಿ ದಂಡಕಾರಣ್ಯವು ಇತಿಹಾಸ ಪ್ರಸಿದ್ಧವಾಗಿದೆ. ಪಾಂಡವರು ಸ್ವಬಂಧುಗಳಿಂದ ದ್ಯೂತದಲ್ಲಿ ಸೋತು ನಿಗದಿಯಾದ ಅರಣ್ಯ ವಾಸವನ್ನು ಗೈಯುತ್ತಿರುವಾಗ ಅರ್ಜುನನು ತನ್ನ ಇಷ್ಟಾರ್ಥವನ್ನು ನೆರವೇರಿಸಲು ಈ ಸೋಮಗಿರಿಯಲ್ಲಿ ಲಿಂಗರೂಪಿಯಾದ ಪರಮೇ.ಶ್ಅರನನ್ನು ಮಲ್ಲಿಕಾಪುಷ್ಪಗಳಿಂದ ಪೂಜಿಸಿ ಮನೋಭಿಷ್ಟವನ್ನು ಪಡೆದನು. ಆದ್ದರಿಂದಲೇ ಈ ಮಹಾಲಿಂಗಕ್ಕೆ ಮಲ್ಲಿಕಾರ್ಜುನಸ್ವಾಮಿ ಎಂದು ಹೆಸರು ಅಂದಿನಿಂದ ಸುಪ್ರಸಿದ್ಧವಾಯಿತು.

ಲೋಕತ್ರಯಗಳಲ್ಲಿ ಅಸುರರು ನಾನಾ ರೂಪ ತಾಳಿ ಸಜ್ಜನರನ್ನು ಪೀಡಿಸಿ, ಅವರು ನೆರವೇರಿಸುವ ಸತ್ಕರ್ಮಗಳಿಗೆ ವಿಘ್ನವನ್ನುಂಟು ಮಾಡುತ್ತಿದ್ದರು. ಸತ್ಕರ್ಮಿಗಳ ಅರ್ತನಾದ ಮಹಾಶಕ್ತಿಗೆ ಅರಿವಾಗಿ ರಾಕ್ಷಸಾಧಮರಲ್ಲಿ ಅತಿ ದುಷ್ಟನಾದ ಅರುನನೆಂಬ ಮಹಾರಾಕ್ಷಸನನ್ನು ಲೆಕ್ಕವಿಲ್ಲದಷ್ಟು ದುಂಬಿಗಳ ರೂಪವನ್ನು ದಪ್ರಿಸಿ ಲೋಕತ್ರಯಗಳ ಹಿತಕ್ಕಾಗಿ ಆ ಮಹಾ ರಾಕ್ಷಸನನ್ನು ಕೊಲ್ಲುವೆನು. ಆಗ ನನ್ನನ್ನು ಎಲ್ಲೆಡೆಯಲ್ಲಿಯೂ ಭ್ರಾಮರೀ (ಭ್ರಮರಾಂಬಾ) ಎಂಬ ಅಭಿದಾನದಿಂದ ಸ್ತೋತ್ರ ಮಾಡುವರು.

ಕಪಿಲ ಋಷಿ ಪ್ರತಿಷ್ಠಿತೆ:

ಪ್ರಕೃತ ಈ ಸೋಮಗಿರಿ ಮಹಾಕ್ಷೇತ್ರದಲ್ಲಿ ಕಪಿಲಋಷಿಗಳು ಹಲವು ಶತಮಾನಗಳ ಹಿಂದೆ ಮಹಾಶಕ್ತಿಯ ಮೂರ್ತಿಯನ್ನು ಸ್ಥಾಪಿಸಿ ಅದಕ್ಕೆ 'ಭ್ರಮರಾಂಬಾ' ನಾಮಾಂಕಿತವನ್ನು ಇಟ್ಟು ಸಮಸ್ತ ಭಕ್ತ್ರ ಮನೋಭಿಲಾಷೆಗಳನ್ನು ಈಡೇರಿಸುವವಳಾಗಿ ಈ ಪ್ರದೇಶದಲ್ಲಿ ಏಕೈಕ ಮಹಾಶಕ್ತಿಯಾಗಿ ಭಕ್ತರ ಹೃತ್ಕಮಲಗಳಲ್ಲಿ ನೆಲೆಗೊಂಡಿದ್ದಾಳೆ.

ಕಾಮಧೇನು ಪಾದಗುರುತುಳ್ಳ ಮಲ್ಲಿಕಾರ್ಜುನ:

ಹಿಂದೆ ಸೋಮಗಿರಿಯ ತಪ್ಪಲಲ್ಲಿ ನಾಡಗೌಡ ಓರ್ವನು ಗೋವು ಮುಂದೆ ಇಟ್ಟುಕೊಂಡು ಅವುಗಳ ನೆರವಿನಿಂದ ತಾನು ತನ್ನ ಸಂಸಾರದ ಯಾತನೆಯನ್ನು ಕಳೆಯುತ್ತಿದ್ದ. ಸಾಕಿದ ಗೋವುಗಳಲ್ಲಿ 'ಕಪಿಲೆ'ಯೆಂಬ ಗೋವು ನಿತ್ಯದಲ್ಲೂ ತನ್ನ 'ಯಜಮಾನ'ನ ಮನೆಯಲ್ಲಿ ಹಾಲಿನ ಬದಲು ರಕ್ತವನ್ನು ಕರೆಯುತ್ತಿತ್ತು. ಏಕೆಂದರೆ ಅದು ಆಹಾರ ಹುಡುಕಲು ಕಾಡಿಗೆ ಹೋದಾಗ ಬಿದಿರು ಪೊದೆಗಳ ಮಧ್ಯೆ ಸ್ವಯಂ ವ್ಯಕ್ತವಾಗಿರುವ

ಶಿವಲಿಂಗದ ಮೇಲೆ ನಿತ್ಯ ಹಾಲನ್ನು ಅಭಿಷೇಕಿಸುತ್ತಾ ಪರಮಾತ್ಮನನ್ನು ತೃಪ್ತಿಪಡಿಸುತ್ತಿತ್ತು. ಕಪಿಲೆಯು ಒಡೆಯನ ಮನೆಯಲ್ಲಿ ಹಾಲನ್ನು ಕರೆಯದೆ ಇರುವ ಅಚ್ಚರಿ ಪತ್ತೆ ಹಚ್ಚಲು ದನಕಾಯುವ ಹುಡುಗನನ್ನು ಕೇಳಲೂ, ನನಗೂ ಸಹ ಅದೇ ವಿಷಯದಲ್ಲಿ ಸಂಶಯ ಎಂದು ಹೇಳಿದ್ದರಿಂದ ನಾವೀರ್ವರು ನಿಜಾಂಶವನ್ನು ನಾಳೆ ದಿವಸ ಪತ್ತೆ ಹಚ್ಚಬೇಕೆಂದು ತೀರ್ಮಾನಿಸಿದರು. ಮರು ದಿವಸ ನೈಜಾಂಶ ತಿಳಿಯಲು ಹುಡುಗ ಗಪಿಲೆ ಎಂಬ ಗೋವನ್ನು ಅನುಸರಿಸಿದನು. ಒಡೆಯನಾದರೋ ಮಚ್ಚುಗತ್ತಿ ಸಮೇತನಾಗಿ ಮರ್ಯೆಆಗಿ ಕಪಿಲೆಯನ್ನು ಅನುಸರಿಸಿದನು. ಪ್ರತಿ ನಿತ್ಯದ ಕರ್ತವ್ಯದಂತೆ ಪರ್ವದ ಮೇಲೆ ಹೋಗಿ ಪೊದಲು ಮಧ್ಯದಲ್ಲಿರುವ ಶಿವಲಿಂಗದ ಮೇಲೆ ತನ್ನ ಕೆಚ್ಚಲಿನಿಂದ ಹಾಲನ್ನು ಸುರಿಸಿ, ಕಾಡು ಹೂಗಳ ಹೊಂಚಲನ್ನು ಹಲ್ಲಿನಿಂದ ಕಚ್ಚಿ ತಂದು ಲಿಂಗದ ಮೇಲೆ ಹಾಕುತ್ತಿರುವ ಸಂದರ್ಭವನ್ನು ಕಂಡ ಗೌಡನು ಅತಿ ಕ್ರೋಧಾವಿಷ್ಟನಾಗಿ ಮಚ್ಚು ಕತ್ತಿಯಿಂದ ಅದರ ಕಾಲನ್ನು ಕಡಿದನು. ಆಗ ಆ ಗೋವಿನ ಪರಿಸ್ಥಿತಿ ಹೇಳತೀರದು. ವರ್ಣಿಸಲು ಅಸಾಧ್ಯ ಅರ್ತನಾದ ಗಿರೀಶನಿಗೆ ಮುಟ್ಟಿದೆಯೋ ಏನೋ! ಗೋವಿನ ಕಣ್ಣಿನಿಂದ ಹರಿದು ಹೋದ ನೀರು ಉತ್ತರ ದಿಕ್ಕಿಗೆ ಹರಿದು ನಿಂತಿತು. ಆ ಸ್ಥಳಕ್ಕೆ 'ಕಣ್ಣೀರು ಕಟ್ಟೆ' ಎಂತಲೂ ಇಂದಿಗೂ ಅದರ ಪ್ರತೀಕ ವ್ಯಕ್ತವಾಗುತ್ತಿದೆ ಮತ್ತು ಆ ಗೋವಿನ ಹಾಲು ಆ ಲಿಂಗದ ಮ್ಸ್ತಕದ ಮೇಲೆ ಬಿದ್ದು ಪೂರ್ವದಿಕ್ಕಿಗೆ ಹರಿದು ಕೆಲವು ಹಳ್ಳಿಗಳನ್ನು ತುಂಬಿಕೊಂಡು ಆ ಹಳ್ಳಿಗಳಿಗೆ 'ಹಾಲಗಟ್ಟೆ', 'ಹಾಲೇಶ್ರೀ' ಎಂದು ಇಂದಿಗೂ ಹಾಲಿನಂತೆ ಬೆಳ್ಳಗೆ ಇರುವುದು ಎಂತ ಬೇಸಿಗೆಯಲ್ಲಿ ಆ ಕಟ್ಟೆಯಲ್ಲಿ ನೀರಿರುವುದು ಸತ್ಯಾಂಶವಾಗಿದೆ. ಈ ಹಾಲುಕಟ್ಟೆಯ ಉತ್ತರಕ್ಕೆ ಇರುವ ವಿಶಾಲವಾದ ಪ್ರದೇಶಕ್ಕೆ 'ಕಪಿಲ ಗೋಮಾಳ' ಎಂದು ಪ್ರಸಿದ್ಧವಾಗಿದೆ. ವಿಶೇಷವಾಗಿ ಈ ಕಟ್ಟೆಯ ಸಮೀಪದಲ್ಲಿ ಕಪಿಲ ಮಹರ್ಷಿಗಳ ಆಶ್ರಮವಿತ್ತೆಂದು ಅವರು ಯಾಗ ಮಾಡುತ್ತಿದ್ದರೆಂದು ತಿಳಿದು ಬರುತ್ತದೆ. ಕಾರಣ ಇಂದಿಗೂ ಸಹ ಆ ಸ್ಥಳದ ಒಂದು ಮೈಲಿ ಸುತ್ತಳತೆಯಲ್ಲಿ ಬೂದಿ ಮಿಶ್ರವಾದ ಮರಳು ಇರುವುದು ಸಾಕ್ಷೀಭೂತವಾಗಿದೆ.

ಅಂಧತ್ವ ನಿವಾರಣೆ:

ಇತ್ತ ಆ ಗೌಡನು ಹಸುವಿನ ಕಾಲನ್ನು ಕಡಿದ ಕೂಡಲೇ ಅಂಧನಾಗಿ ಏನು ಮಾಡುವುದಕ್ಕೂ ತೋಚದೆ ಮೋಟು ಮರದಂತೆ ತಾನು ಮಾಡಿದ ಅಜ್ಞಾನ ಅಪರಾಧವನ್ನು ಚಿಂತಿಸುತ್ತಾ ನಿಂತಿರಲು, ಆ ದಯಾಮಯನಾದ ಮಲ್ಲಿಕಾರ್ಜುನನು ಅವರ ಕಣ್ಣುಗಳನ್ನು ಕಾಣುವಂತೆ ಮಾಡಿ 'ಅಯ್ಯಾ ನನ್ನ ಸೇವಿಸಿದ ಗೋವು ಇನ್ನು ಮುಂದೆ ನಿನ್ನಲ್ಲಿ ಹಾಲನ್ನು ಕರೆಯುತ್ತದೆ ನೀನು ದುಃಖಿಸಬೇಡ. ಈ ಸಿದ್ಧಾಶ್ರಮದಲ್ಲಿ ಲಿಂಗರೂಪವನ್ನು ಹೊಂದಿರುವ ನನಗೆ ಒಂದು ದೇವಮಂದಿರವನ್ನು ನಿರ್ಮಿಸಿ ನನ್ನ ಪೂಜೆಗೆ ಅನತಿದೂರದ 'ದೇವಪುರಿ'ಯಲ್ಲಿರುವ ಶಿವಾರ್ಚಾಕನನ್ನು ಪೂಜೆ ಮಾಡುವುದಕ್ಕೆ ನೇಮಿಸು. ಅವನಿಗೆ ಯಥಶಕ್ತಿ ಸಹಾಯಮಾಡು ಎಂದು ಹೇಳಿ ಅಂತರ್ದಾನನಾದನು'. ಇತ್ತ ಗೌಡನು ಶಿವನ ಅಪ್ಪಣೆಯಂತೆ ಆ ಲಿಂಗದ ಸುತ್ತಲೂ ಇರುವ ಗಿಡಪೊದರೆಗಳನ್ನೆಲ್ಲಾ ಕತ್ತರಿಸಿ ಆ ಸ್ವಾಮಿಗೂ ಪಕ್ಕದಲ್ಲೇ ಇರುವ ಕಪಿಲ ಮಹರ್ಷಿಯವರು

ಪ್ರತಿಷ್ಠಾಪಿತವಾದ ಭ್ರಮರಾಂಬೆಗೂ ಕೂಡ ಚಿಕ್ಕ ಚಿಕ್ಕ ದೇವಾಲಯವನ್ನು ನಿರ್ಮಿಸಿ, ಪ್ರತಿನಿತ್ಯದ ಪೂಜೆಗೆ ಅರ್ಚಕರನ್ನು ನೇಮಿಸಿದನು. ನಾಡಗೌಡನಿಂದ ತನ್ನ ಕಾಲನ್ನು ಕತ್ತರಿಸಿ ಕೊಂಡಂತಹ ಕಪಿಲೆ ಎಂಬ ಗೋವು ಸಂಕಟದ ಅತಿರೇಖದಿಂದ ಗಾಬರಿಯಿಂದ ಲಿಂಗ ಪಸ್ತಕದ ಮೇಲೆ ತನ್ನ ಕಾಲನ್ನು ಊರಿತು. ತನ್ನ ಕಾಲನ್ನು ಲಿಂಗದ ಮಸ್ತಕದ ಮೇಲೆ ಊರಿದನಲ್ಲಾ ಎಂಬ ಭಯವಿಹ್ವಲವಾಗಿ ತವಕ ಪಡುತ್ತಿರಲು ಶಿವನು ಅದರ ಭಕ್ತಿಗೆ ಮೆಚ್ಚಿ, ಎಲೈ ಕಪಿಲೆಯೇ ಗಾಬರಿಪಡದಿರು ನಿನ್ನ ಸೇವೆಯ ಗುರುತಾಗಿ ನಿನ್ನ ಪಾದದ ಗುರುತನ್ನು ನನ್ನ ಶಿರದೊಳು ಧರಿಸುವೆನು ಭಯಪಡಬೇಡ ಎಂದು ಹೇಳಿ ಅತಿ ಸಂತೋಷದಿಂದ ತನ್ನ ಒಡೆಯನ ಮನೆಗೆ ನಡೆಯಿತು.

ಮೇಲ್ಕಂಡ ವಿಷಯವು ಪುರಾಣಾಂತರ್ಗತ ವಿಷಯವಾದರೂ ಆನೆಗಳು ಈ ಅರಣ್ಯದಲ್ಲಿ ಅಲ್ಲಲ್ಲಿ ಸಂಚರಿಸುತ್ತಾ ಕಾಲಹರಣ ಮಾಡುತ್ತಿರುವ ಒಂದು ಮಾಘಮಾಸದ ರೋಹಿಣಿ ನಕ್ಷತ್ರದ ದಿವಸ ಈ ಸೋಮಗಿರಿಯ ಅಗ್ರಭಾಗಕ್ಕೆ ಕಾಮಧೇನುವು ಗಗನಮಾರ್ಗದಲ್ಲಿ ಸಂಚರಿಸುತ್ತಿರುವಾಗ ಪೊದರಿನೊಳಗೆ ಇರುವ ಶಿವಲಿಂಗವನ್ನು ದೂರದಲ್ಲೇ ಕಂಡು ಇಳಿದು ಬಂದು ಆ ಶಿವಲಿಂಗದ ಮೇಲೆ ತನ್ನ ಕೆಚ್ಚಲನ್ನು ಪ್ರಸರಿಸಿ ಹಾಲನ್ನು ಸುರಿಸಿ ಅಭಿಷೇಕಿಸಿ ತನ್ನ ಹಲ್ಲುಗಳಿಂದ ಕಡಿನಲ್ಲಿರುವ ಪುಷ್ಪಗಳನ್ನು ಕಿತ್ತು ತಂದು ಶಿವಲಿಂಗವನ್ನು ಪೂಜಿಸುತ್ತಿತ್ತು. ಹೀಗೆ ಪೂಜೆಗೈಯುತ್ತಿರಲಾಗಿ ಅಲ್ಲೇ ವಾಸ ಮಾಡುತ್ತಿದ್ದ ಒಬ್ಬ ರಾಕ್ಷಸನು ಭ್ರಮರರೂಪವನ್ನು ತಾಳಿ ಆ ಕಾಮಧೆನುವನ್ನು ಬಾಧಿಸತೊಡಗಿಸನು. ಆ ಕಾಮಧೇನುವು ಸಂಕಟಕ್ಕೆ ಒಳಗಾಗುತ್ತಿರುವುದನ್ನು ಅರಿತ ಮಹಾಶಕ್ತಿಯು ಭ್ರಮರ ರೂಪತಾಳಿ ಆ ರಾಕ್ಷಸನನ್ನು ಹಿಂಸಿಸಿ ಕೊಂದಳು. ಕಾಮಧೇನುವನ್ನು ದುಷ್ಟರಿಂದ ಕಾಪಾಡಿದಕ್ಕೆ ಪಕ್ಕದಲ್ಲಿರುವ ದೇವತೆಗೆ 'ಭ್ರಮರಾಂಬಾ' ಎಂದು ಹೆಸರಾಯಿತು. ಭಯದಿಂದ ಗಾಬರಿಗೊಂಡ ಕಾಮಧೇನು ಆ ಲಿಂಗಪಸ್ತಕದ ಮೇಲೆ ಪಾದವನ್ನು ಇರಿಸಲು, ಪಶುಬುದ್ಧಿಯಿಂದ ಆದ ಅಪರಾಧವನ್ನು ಪರಿಪರಿಯಾಗಿ ಪರಿತಪಿಸುತ್ತಿರಲೂ, ಪಶುಪತಿಯಾದ ಈಶ್ವರನು ಕಾಮಧೇನುವಿನಿಂದ ಆದ ಅಪರಾದವನ್ನು ಅತ್ಯಾಧರ, ಸಂತೋಷದಿಂದ ನಿನ್ನ ಭಕ್ತಿಗೆ ಮೆಚ್ಚಿ ಸಂತೋಷಕ್ಕಾಗಿ ನಿನ್ನ ಇಷ್ಟಾರ್ಥವು ನೇರವೇರಲೆಂದು ನಿನ್ನ ಪಾದಾಂಕಿತವನ್ನು ನಾನು ಧರಿಸುತ್ತೇನೆ ಎಂದು ಆಶ್ವಾಸನೆಯಿತ್ತು, ಆಕಾಶದಲ್ಲಿ ಲೀನವಾದನು. ಸುರಧೇನುವು ತನ್ನ ಹುಟ್ಟಿಗೆ ಸಾರ್ಥಕವಾಯಿತು ಎಂದು ತಿಳಿದು ಅತಿ ಸಂತೋಷದಿಂದ ಸುರಲೋಕಕ್ಕೆ ತೆರಳಿತು. ಕಾಮಧೇನುವಿಗೆ ಮಲ್ಲಿಕಾರ್ಜುನನು ಪ್ರತ್ಯಕ್ಷವಾಗಿ ಅನುಗ್ರಹ ಮಾಡಿದ ಕಾರ್ತೀಕ ಅಷ್ಟಮಿಯ ಶುಭದಿವಸವು 'ಗೋಷಾಷ್ಟಮಿ' ಎಂದು ಅನ್ವರ್ಥವಾಯಿತು. ಚರಾಚರವಸ್ತುಗಳಿಗೂ ಒಡೆಯನಾದ ಪರಮೇಶ್ವರನ ಪಶುಪತಿ ಎನಿಸುವುದರ ಅಂತರಾರ್ಥಕ್ಕೆ ಸೂಕ್ತ ಉದಾಹರಣೆಯಾಯಿತು.

ಬೃಂದಾವನ:

ಮುಡುಕುತೊರೆ: ಎಲೈ ಶೌನಕಾದಿಗಳಿರಾ ಕೇಳಿರಿ ನೂರಾರು ವರ್ಷಗಳ ಹಿಂದೆ ಇಷ್ವಾನು ವಂಶದಲ್ಲಿ ಧೀರನಾಗಿಯೂ, ತೀಕ್ಷ್ಣಮತಿಯಾಗಿದ್ದಿ ದಿಳಿಪನೆಂಬ ಚಕ್ರವರ್ತಿಯು ಈ ಮಂಡಲದಲ್ಲಿ ಆಳುತ್ತಿದ್ದನು. ಕಾಲಾನಂತರದಲ್ಲಿ ಧೀರರಾದ ಶತ್ರುಗಳು ಇವನನ್ನು ಜಯಿಸಿ, ಗರ್ಭಿಣಿಯಾಗಿದ್ದ ಆತನ ಪತ್ನಿಗೆ ಕ್ರೂರವಾದ ವಿಷವನ್ನು ಕುಡಿಸಿ ಅವರೀರ್ವರನ್ನು ರಾಜ್ಯದಿಮ್ದ ಓಡಿಸಿದರು. ಈ ರೀತಿ ಶತೃಗಲು ರಾಜಯ್ವನ್ನು ಆಕ್ರಮಿಸಲು ತನ್ನ ದೌರ್ಭಾಗ್ಯವನ್ನು ಎಣಿಸುತ್ತಾ ದಿಲೀಪನು ಪತ್ನಿಯೊಡನೆ ಪಾದಾಚಾರಿಯಾಗಿ ಅಲೆಯುತ್ತಾ ತನ್ನ ಜನ್ಮಾಂತರದ ಪುಣ್ಯದಿಂದ ಕಾವೇರಿಯ ಪಶ್ಚಿಮವಾಹಿನಿ ತೀರದಲ್ಲಿರುವ ಸೋಮಶೈಲ ಕ್ಷೇತ್ರವನ್ನು ಸೇರಿ ಕೆಲವು ದಿವಸಗಳನ್ನು ಕಳೆದನು. ತನಗೆ ಒದಗಿದ ದೈಹಿಕ ಮಾನಸಿಕ ಶ್ರಮಗಳನ್ನು ತಾಳಲಾರದೆ ದಿವಂಗತನಾದನು. ಪತಿಯು ಅಸುನೀಗಲು ಸಾಧ್ವೀಮಣಿಯಾದ ಪತ್ನಿಯು ದುಃಖಿತಳಾಗಿ ಅರಣ್ಯದಲ್ಲಿ ಚಿತೆಯೊಡ್ಡಿ ಅದರ ಮೇಲೆ ತನ್ನ ಗಂಡನ ಕಳೇಬರವನ್ನು ಇಟ್ಟು ಅಗ್ನಿ ಸ್ಪರ್ಶಿಸಿ ಚಿತಾರೋಹಣ ಮಾಡಲು ಉದ್ಯುಕ್ತಳಾದಳು.

'ಆಗ ಎಲೈ ಬಾಲೆಯೇ! ನೀನು ಗರ್ಭಿಣಿ ಸ್ತ್ರೀ, ನಿನ್ನ ಈ ಕೃತ್ಯದಿಂದ ಶಿಶುಹತ್ಯಾದೋಷ ಬರುವುದು. ನಿನ್ನ ಉದರದಲ್ಲಿ ಸಪ್ತದ್ವೀಪಾದಿ ಪತಿಯಾಗುವ ಧಾರ್ಮಿಕ ಪುತ್ರ ಓರ್ವನು ಇರುವನು ತಾಳಿ ಬಾಳು' ಎಂದು ಅಶರೀರವಾಣಿ ನುಡಿಯಲು ಆ ಪತಿವ್ರತಾಮಣಿಯು ಚಿತಾರೋಹಣ ವ್ಯಾಪಾರವನ್ನು ಬಿಟ್ಟು ಅನ್ಯಮಾರ್ಗವಿಲ್ಲದೆ ಅಲ್ಲಿನ ಅರಣ್ಯದಲ್ಲಿ ತಾನೊಬ್ಬಳೇ ವಾಸಮಾಡಿಕೊಂಡು ಪ್ರತಿದಿನವು ಪಶ್ಚಿಮ ವಾಹಿನಿಯಲ್ಲಿ ಸ್ನಾನ ಮಾಡಿ ಶಿಖರಾಗ್ರಹದಲ್ಲಿರುವ ಮಲ್ಲಿಕಾರ್ಜುನನ್ನು ಪೂಜಿಸುತ್ತಿದ್ದಳು. ಹೀಗೆ ನಡೆಯುತ್ತಿರಲು ಶುಭದಿನದಲ್ಲಿ ಬಾಲಚಂದ್ರನಂತೆ ಪ್ರಕಾಶ ಮಾನವಾದ ಪುತ್ರರತ್ನ ಒಂದರ ಜನನಕ್ಕೆ ಕಾರಣಳಾದಳು. ಆ ಮಗುವಾದರೋ ಮೂವತ್ತೆರಡು ರಾಜ ಲಕ್ಷಣಗಳಿಂದಲೂ ಕೂಡಿದ್ದೂ, ಅಲ್ಲದೆ ಶತ್ರುಗಳಿಂದ ತನ್ನ ತಾಯಿಗೆ ಕುಡಿಸಲ್ಪಟ್ಟಿದ ಆ ವಿಷದ ಚಿನ್ಹೆಯಿಂದಲೂ ಕೂಡಿತ್ತು. ಮಗುವಾದರೂ ಶುಕ್ಲಪಕ್ಷದ ಚಂದ್ರನಂತೆ ಅಭಿವೃದ್ಧಿಹೊಂದಿ ದೊಡ್ಡವನಾದ ಮೇಲೆ ತಾಯಿಯ ಮೂಲಕ ತಂದೆಯ ವೃತ್ತಾಂತವನ್ನೆಲ್ಲಾ ತಿಳಿದು ಅತ್ಯಂತ ಕಠಿಣವಾದ ತಪಸ್ಸುಮಾಡಿ ಈಶನನ್ನು ಮೆಚ್ಚಿಸಿಧನು.

ಆಗ ಪರಮೇಶ್ವರನು ಬಾಲಕನಿಗೆ ಪ್ರತ್ಯಕ್ಷನಾಗಿ 'ಪವಿತ್ರ ವಂಶದಲ್ಲಿ ಜನ್ಮವೆತ್ತಿದ ವೀರಾಗ್ರಣಿಯೇ ಇನ್ನು ನೀನು ನಿನ್ನ ರಾಜ್ಯವನ್ನು ಸೇರಿ ಕ್ರೂರರಾದ ಶತ್ರುಗಳನ್ನು ಯುದ್ಧದಲ್ಲಿ ಸಂಹರಿಸಿ ವಂಶಾನುಕ್ರಮವಾದ ರಾಜ್ಯವನ್ನು ಹೊಂದುವೇ. ಈ ಭೂಮಂಡಲಕ್ಕೆಲ್ಲಾ ನೀನೇ ರಾಜನಾಗಿ ಧರ್ಮದಿಂದ ರಾಜ್ಯವಾಳುವೆ, ನಿನ್ನ ತಾಯಿಗೆ ಕುಡಿಸಿದ ವಿಷಯದಿಂದ ನೀನು ಸಾಯದೇ, ನನ್ನ ಕೃಪಾಬಲದಿಂದ ಬೆಳೆದ ಕಾರಣ ಇಲ್ಲಿಂದ ಮುಂದೆ ನೀನು 'ಸಗರ'ನೆಂದು ಖ್ಯಾತಿವಂತನಾಗು. ನನ್ನ ಅನುಗ್ರಹದಿಂದ ನಿನಗೆ 60 ಸಾವಿರ ಮಂದಿ ಮಕ್ಕಳು ಹುಟ್ಟುತ್ತಾರೆ ಹೋಗಿ ಬಾ ಎಂಬುದಾಗಿ ಹರಸಿ ಅಂತರ್ಧಾನನಾದನು. ಇತ್ತ ಈ ದಿವ್ಯ ಕ್ಷೇತ್ರದಲ್ಲಿ

ಸಗರನ ತಂದೆಯಾದ ದಿಲೀಪನು ಪರಂಧಾಮವನ್ನು ಗೈಯ್ದ ಸ್ಥಳವಾದ ಕಾವೇರಿ ಪಶ್ಚಿಮ ವಾಹಿನಿಯ ತೀರದಲ್ಲಿ ಅಂತರೆ ತೆಪ್ಪೋತ್ಸವ ಮಂಟಪದ ಸಾಮೀಪ್ಯದಲ್ಲಿ ದಿಲೀಪನ ಸ್ಮಾರಕವಾಗಿ 'ಬೃಂದಾವನ'ವನ್ನು ನಿರ್ಮಿಸಿದರು. ಅದು ಇಂದಿಗೂ ಸಾಕ್ಷೀಭೂತವಾಗಿದೆ.

ಭ್ರಮರಾಂಭಿಕೆ ಮತ್ತು ಚಾಮುಂಡಾಂಬಿಕೆ:

ಎಲೈ ಶೌನಕಾದಿಗಳಿರಾ, ತ್ರಿಭುವನದಲ್ಲಿ ಶಿವನ ಅರ್ಧಾಂಗಿ ಎಂದು ಪ್ರಸಿದ್ಧಿಯಾದ ಉಮೆಯು ಚಾಮುಂಡಿ ಎಂಬ ಹೆಸರಿನಿಂದ ಈ ಸೋಮಶೈಲ ಕ್ಷೇತ್ರದಲ್ಲಿ ನೆಲೆಸಿರುವಳು. ಚಾಮುಂಡಿ ಎಂಬುದಕ್ಕೆ ಕಾರಣವಾಗಿ ಸಿಂಹಪೀಠ ಉಳ್ಳವಳಾಗಿದ್ದಾಳೆ. ಶಚೀದೇವಿಯು ಶಂಭು ಪತ್ನಿಯಾದ ಚಾಮುಂಡಾಂಬಿಕೆಯನ್ನು ಅನೇಕ ಕಾಲ ಪೂಜಿಸಿ ಅವಳ ಕೃಪಾಬಲದಿಂದ ಇಂದ್ರನ ಗೃಹಿಣಿಯಾದಳು. ಪುತ್ರ ಪೇಕ್ಷೆ ಉಳ್ಳವರಾಗಲಿ, ಅರ್ಥಾಪೇಕ್ಷೆಯುಳ್ಳವರಾಗಲಿ, ರಾಜ್ಯಭಿಲಾಷೆ ಉಳ್ಳವರಾಗಲಿ, ಈ ದೇವಿಯನ್ನು ಶಾಸ್ತ್ರೋಕ್ತವಾಗಿ ಬಾದ್ರಪದ ಶುಕ್ಲ ತದಿಗೆಯಲ್ಲಿ ಅಥವಾ ಆಶ್ವಯುಜ ಶುದ್ಧ ನವಮಿಯಲ್ಲಿ ಪೂಜಿಸಿದ್ದೇ ಆದರೆ ಇಷ್ಟಾರ್ಥವು ಲಭಿಸುವುದು.

ಗಂಗೆ ತಡೆದ ಬಸವೇಶ್ವರ:

ಈ ಕ್ಷೇತ್ರದಲ್ಲಿ ದ್ವಿತೀಯ ಶಂಭುವಾದ ವೃಷಭೇಶ್ವರನ ಒಂದು ಪವಾಡವು ನಡೆದಿದೆ ಅಂದರೆ ಅತಿಶಯೋಕ್ತಿಯಲ್ಲ. ಅರ್ಥಾತ್ ಕೆಲವು ಪ್ರಾಚೀನ ಅನುಭವಿಗಳ ಮತ್ತು ಸಾಕ್ಷಿಭೂತವಾಗಿರುವ ಕೆಲವು ಆಧಾರಗಳಿಂದ ವಿಮರ್ಶಿಸುವುದಾದರೆ ಕಾವೇರಿ ನದಿಯು ಈ ಕ್ಷೇತ್ರದಲ್ಲಿ ಪೂರ್ವಾಭಿಮುಖವಾಗಿ ಪರ್ವತ ಸಮೀಪದಲ್ಲಿ ಪ್ರವಹಿಸುತ್ತಿತ್ತೆಂದು ಪ್ರಸಿದ್ಧಿ. ಆದರೆ ಈ ಕ್ಷೇತ್ರದಲ್ಲಿ ಪ್ರಕೃತಿಯ ಸ್ವಾಭಾವಿಕತೆಗೆ ನ್ಯೂನ ಉಂಟಾಗುತ್ತದೆ ಎಂದು ಅರಿತು ವೃಷಭನಾದರೂ ಪೂರ್ವವಾಹಿನಿಯನ್ನು ತಡೆದು ಪಶ್ಚಿಮವಾಹಿನಿಯಾಗಿ ಪ್ರವಹಿಸುವಂತೆ ಗಂಗೆಯಲ್ಲಿ ಮೊರೆಯಿಟ್ಟನು. ಈ ವೃಷಭೇಶ್ವರನ ಪ್ರಾರ್ಥನೆಗೆ ಕಾವೇರಿಯು ಸಮ್ಮತಿಸಿದಳು. ಗಿರಿ, ವನ, ನದಿಗಳೂ ಈ ಕ್ಷೇತ್ರದ ಪ್ರಕೃತಿಯ ಸೊಬಗಿಗೆ ಕಾರಣಗಳಾಗಿವೆ. ಕಾವೇರಿ (ಗಂಗೆ ಗುಪ್ತಗಾಮಿನಿ) ಯನ್ನು ಪೂರ್ವಕ್ಕೆ ಹರಿಯುತ್ತಿದ್ದ ನದಿಯನ್ನು ತಡೆದು ಪಶ್ಚಿಮಕ್ಕೆ ಹರಿಯುವಂತೆ ಮಾಡಿದ್ದರಿಂದ ಗಂಗೆ ತಡೆದ ಬಸವೇಶ್ವರ ಎಂಬುದಾಗಿ ಈಗ ಸ್ನಾನ ಘಟ್ಟದ ಅನತಿ ದೂರದಲ್ಲಿರುವ ದೇವ ಮಂದಿರದಲ್ಲಿ ವೃಷಭೇಶ್ವರನು ವಿರಾಜಮಾನನಾಗಿದ್ದಾನೆ.

ದೇವಾಲಯದ ಪರಿಚಯ:

ಸೋಮಶೈಲ ಅಥವಾ ಮುಡುಕುತೊರೆ ಬೆಟ್ಟದ ಮೇಲಿರುವ ಶ್ರೀ ಭ್ರಮರಾಂಬಾ ಸಮೇತ ಶ್ರೀಮಲ್ಲಿಕಾರ್ಜುನಸ್ವಾಮಿಯ ದೇವಾಲಯಗಳು ಮನೋಹರವಾಗಿ ಚಿತ್ತಾಕರ್ಷಕವಾಗಿಯೂ ಪ್ರಕೃತಿಯಲ್ಲಿ ಪ್ರತಿಬಿಂಬಿಸುತ್ತಿವೆ. ಈ ಪರ್ವತವಾದರೂ, ತಲಕಾಡಿನಿಂದ ಉತ್ತರಕ್ಕೆ ಮೂರು ಮೈಲಿ ದೂರದಲ್ಲಿ ಕಾವೇರಿ ಪ್ರಾಗ್ ದಡದಲ್ಲಿ ವಿರಾಜಮಾನವಾಗಿದೆ. ಶ್ರೀ ಮಲ್ಲಿಕಾರ್ಜುನೇಶ್ವರ ದೇವಾಲಯವು ಪಶ್ಚಿಮಾಭಿಮುಖವಾಗಿದೆ. ಈ ಬೆಟ್ಟವು ಸುಮಾರು 3000 ಅಡಿಯಷ್ಟು ಎತ್ತರವಾಗಿದೆ. ಈ ಬೆಟ್ಟದ ಮೇಲಿನ ಮಲ್ಲಿಕಾರ್ಜುನೇಶ್ವರ

ದೇವಸ್ಥಾನವು ಗರ್ಭಗೃಹ, ಶುಕನಾಶಿ, ಅಂತರಾಳ, ನವರಂಗ ಮತ್ತು ಮುಖ ಮಂಟಪಗಳಿಂದ ಉಳ್ಳದ್ದಾಗಿದೆ. ಸ್ವಾಮಿಯ ದೇವಸ್ಥಾನದ ದಕ್ಷಿಣಕ್ಕೆ ಶ್ರೀ ಅಮ್ಮನವರ ದೇವಸ್ಥಾನವಿದೆ. ಮಹಾದ್ವಾರದ ಉಭಯ ಪಾರ್ಶ್ವಗಳಲ್ಲಿಯೂ ಇಟ್ಟಿಗೆಗಾರೆಯಿಂದ ಮಾಡಿದ ಎರಡು ದೊಡ್ಡ ಬಸವೇಶ್ವರರ ವಿಗ್ರಹಗಳು ಮೋಕ್ಷಾರ್ಥಿಗಳನ್ನು ಶಿವಸಾಮೀಪ್ಯಕ್ಕೆ ಕರೆದೊಯ್ಯಲು ಕಾದು ಕುಳಿತಿರುವವೋ ಎಂಬಂತೆ ಭಾಸವಾಗುತ್ತಿವೆ. ಮಹಾದ್ವಾರದ ಮೇಲೆ ಕಲಶತ್ರಯಗಳಿಂದ ಕೂಡಿದ ಕಲಾತ್ಮಕವಾದ ಗೋಪುರದಿಂದ ಕೂಡಿದೆ. ಇದರ ಪಕ್ಕದಲ್ಲಿ ಸುಮಾರು 40 ಅಡಿ ಎತ್ತರವುಳ್ಳ ಕಲ್ಲಿನ ದೀಪಸ್ಥಂಭವು ಇದೆ. ಇದರ ಬುಡದಲ್ಲಿ ವೃಷಭಮೂರ್ತಿಯೂ ಇದೆ. ಈ ಮಹಾದ್ವಾರವನ್ನು ತಲುಪಲು ಬಹು ಕಡಿದಾದ ಸ್ವರ್ಗಸೋಪಾನದಂತೆ ತೊಂಬತ್ತೊಂದು ಸೋಪಾನಗಳು ಇವೆ. ಈ ಸೋಪಾನಗಳ ಆದಿಯ ಬಲಭಾಗದಲ್ಲಿ ಕಾಲಭೈರವನ ಸಣ್ಣ ದೇವಾಲಯವು, ಎದುರಿಗೆ ಒಂದು ಚಿಕ್ಕ ಮಂಟಪವು ಇದೆ. ದೇವಸ್ಥಾನದ ವಾಯುವ್ಯ ಮೂಲೆಯಲ್ಲಿ ಚಿತ್ರಮಂಟಪವಿದೆ. ಚಿತ್ರಮಂಟಪವು ಆರು ಅಂಕಣಗಳಿಂದ ಕೂಡಿದೆ. ಇದರ ಒಳಗೋಡೆಗಳ ಮೇಲೆ ಶಿವಪುರಾಣ, ದೇವಿ ಭಾಗವತ ಮುಂತಾದ ಕಥಾ ದೃಶ್ಯಗಳನ್ನು ಬಣ್ಣಗಳಿಂದ ಚಿತ್ರಿಸಲ್ಪಟ್ಟಿದೆ. ಈ ಚಿತ್ರಮಂಟಪದಲ್ಲಿ ಗಿರಿಜಾ ಕಲ್ಯಾಣ, ನವರಾತ್ರಿ ಉತ್ಸವಗಳು, ಯಥಾವಿಧಿಯಾಗಿ ನಡೆಯುತ್ತಿವೆ. ಇದರ ಮುಂದೆ ದಕ್ಷಿಣ ದ್ವಾರವುಳ್ಳ 3 ಅಂಕಣ ಪಾಕಶಾಲೆಯು ಅದರ ಎಡಪಾರ್ಶ್ವದಲ್ಲಿ 6 ಅಂಕಣವಿರುವ ಯಾಗಶಾಲೆಯು, ಅದರ ಪಕ್ಕದಲ್ಲಿ 3 ಅಂಕಣವುಳ್ಳ ಹೊಸ ಅಡಿಗೆ ಮನೆಯು ಅಂಕಣದ ಕೈಸಾಲೆಯು ಕುದೇರು ನಿವಾಸಿಗಳಾದ ಯಜಮಾನ್ ನಂಜುಂಡಸ್ವಾಮಿಯವರ ಪೂರ್ವಜರಿಂದ ನಿರ್ಮಿತವಾಗಿದೆ ಎಂದು ತಿಳಿದು ಬಂದಿದೆ. ಇದರ ಮುಂದುಗಡೆ ಅಂದರೆ ದೇವಸ್ಥಾನದ ಈಶಾನ್ಯ ದಿಕ್ಕಿನಲ್ಲಿ ಮದ್ದೂರು ನಿವಾಸಿಗಳಾದ ದಿವಂಗತ ಚೆನ್ನಮಲ್ಲಪ್ಪನವರ ಪುತ್ರ ಮಹದೇವಪ್ಪನವರಿಂದ ನಿರ್ಮಿಸಲ್ಪಟ್ಟಿರುವ ಗಣಪತಿ ಮತ್ತು ನವಗ್ರಹ ದೇವಸ್ಥಾನವಿದೆ. ಇದರ ವಿಸ್ತೀರ್ಣ ನಾಲ್ಕು ಅಂಕಣವಿದೆ. ದೇವಸ್ಥಾನದ ಪೂರ್ವಭಾಗದಲ್ಲಿ 8 ಪುಟ್ಟ ದೇವಾಲಯಗಳಿವೆ. ಕ್ರಮವಾಗಿ ದುರ್ಗಾದೇವಿ, ದೊಡ್ಡ ಬಸವೇಶ್ವರ, ಕಾಶೀ ವಿಶ್ವನಾಥ, ಪಂಚಲಿಂಗಗಳು ಪ್ರತಿಷ್ಠಿತವಾಗಿವೆ. ಆಗ್ನೇಯ ದಿಕ್ಕಿನಲ್ಲಿ ವೃಷಭಮೂರ್ತಿ, ನಾಗರಮೂರ್ತಿಯು ಇರುತ್ತಿವೆ. ಪ್ರಕಾರದ ದಕ್ಷಿನದ್ವಾರದ ಬಾಗಿಲ ಹೊರಭಾಗದಲ್ಲಿ ನಿರಂಜನಮೂರ್ತಿ ಎಂದು ಸುಪ್ರಸಿದ್ಧವಾದ ಶರಣ ಮಾದೇಶ್ವರನ ಪಾದಪೀಠವು ಒಂದು ಅಂಕಣ ದೇವಮಂದಿರದಲ್ಲಿ ವಿರಾಜಮಾನವಾಗಿದೆ. ಅದರ ಪಕ್ಕದಲ್ಲಿ ಪೂರ್ವಾಭಿಮುಖವಾಗಿ ಮಾಂಬಳ್ಳಿ ಸಾಹುಕಾರ್ ಬಸವಣ್ಣ ದೇವರು ನಾಗರಮೂರ್ತಿಗಳನ್ನು ಪ್ರತಿಷ್ಠೆ ಮಾಡಿಸ್ರಿಉವರು. ಇದಕ್ಕೆ 2 ಅಂಕಣ ಆಲಯವನ್ನು 2 ಮಂಟಪವನ್ನು ಕಟ್ಟಿಸಿದ್ದಾರೆ. ಕೊರ ಬಾಳನ ಹುಂಡಿಯ ಗೆಜ್ಜೆಗಾರ ಬಸವಶೆಟ್ಟರು ಶ್ರೀಮಾದೇಶ್ವರ ಸ್ವಾಮಿಯ ಪಾದಗಳ ಮೇಲೆ 1 ಅಂಕಣ ಕಲ್ಲು ಮಂಟಪ ಕಟ್ಟಿಸಿರುತ್ತಾರೆ .ದೇವಾಲಯದ ನೈರುತ್ಯ ದಿಕ್ಕಿನಲ್ಲಿ 2 ಅಂಕಣವುಳ್ಳ ನಗಾರಿ ಮಂಟಪವು ಇದೆ.

ಪ್ರಾಕಾರದ ಪಶ್ಚಿಮದ್ವಾರದ ಒಳಗಡೆ ಶ್ರೀ ಬಲಿಪೀಠವು ಅದರ ಮುಂದೆ ತಗಡಿನಿಂದ 12 ಅಡಿ ಎತ್ತರವುಳ್ಳ ಧ್ವಜಸ್ಥಂಭವು, ಧ್ವಜಸ್ಥಂಭದ ಮುಂದೆ ಕಡಪದ ಕಲ್ಲು ಕಂಬದ ಮೇಲೆ ಪುಟ್ಟ ವೃಷಭೇಶ್ವರಮೂರ್ತಿಯು ಇರುತ್ತದೆ. ಅದರ ತಳಭಾಗದಲ್ಲಿ ಶ್ರೀಮಲ್ಲಿಕಾರ್ಜುನಸ್ವಾಮಿಯವರ ಪಾದದ್ವಯಗಳ ಪೀಠವಿದೆ. ಇವುಗಳ ಮುಂದೆ ಮಲ್ಲಿಕಾರ್ಜುನ ಸ್ವಾಮಿಯವರ ದೇವಸ್ಥಾನದಲ್ಲಿ ಪಶ್ಚಿಮಾಭಿಮುಖವಾಗಿಯೂ ದಕ್ಷಿಣಾಭಿಮುಖವಾಗಿಯೂ ಬಾಗಿಲುಗಳಿವೆ. ಶ್ರೀ ಸ್ವಾಮಿಯ ಆಲಯದ ಒಳಗಡೆ ನವರಂಗದಲ್ಲಿ ಮೂರು ವಿಘ್ನೇಶ್ವರಮೂರ್ತಿಗಳು, ಮೂರು ಸುಬ್ರಹ್ಮಣ್ಯೇಶ್ವರ ಮೂರ್ತಿಗಳು ಇವೆ. ನವರಂಗದ ಆಗ್ನೇಯ ದಿಕ್ಕಿನಲ್ಲಿ 2 ಶಿವಲಿಂಗಗಳು ಮತ್ತು ವಿಷ್ಣು ವಿಗ್ರಹವಿದೆ. ನವರಂಗದ ಉತ್ತರದ ಕಡೆ ದಕ್ಷಿಣಾಭಿಮುಖವಾಗಿರುವ ಒಂದು ದೇವಮಂದಿರವಿದೆ. ಇಲ್ಲಿ ಉತ್ಸವಮೂರ್ತಿ, ಕುಮಾರಸ್ವಾಮಿ, ನಟರಾಜ, ವಿಘ್ನೇಶ್ವರ, ಶಿವಕಾಮೇಶ್ವರಿ ಅಮ್ಮನವರ ವಿಗ್ರಹಗಳಿವೆ. ಶುಕನಾಸಿಯ ಅಂಕಣದ ಬಲಭಾಗದಲ್ಲಿ ವೃಷಭ ಮೂರ್ತಿಯು ಇದೆ. ಅಂತರಾಳ ಅಂಕಣದಲ್ಲಿ ಬಲ ಎಡಕ್ಕಾದ ಹಾಗೆ 2 ಉಗ್ರಾಣಗಳಿವೆ. ಗರ್ಭಾಲಯದಲ್ಲಿ 1 ಅಡಿ ಚದರಳತೆಯ ಬಾಣ ಪೀಠದ ಮೇಲೆ ಸುಮಾರು 5 ಅಂಗುಲ ಎತ್ತರದ ಕಾಮಧೇನು ಪಾದಾಂಕಿತವುಳ್ಳ ಸ್ವಯಂಭೂ ಆದ ಶ್ರೀ ಮಲ್ಲಿಕಾರ್ಜುನ ಲಿಂಗವು ಇದೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎಂಬ ಗಾದೆಗೆ ಈ ಶಿವಲಿಂಗ ಅನ್ವರ್ಥವಾಗಿದೆ. ಈ ಗರ್ಭಾಲಯದ ಮೇಲ್ಭಾಗದಲ್ಲಿ ಸುವರ್ಣ ಕಲಶದಿಂದ ಯುಕ್ತವಾದ ವಿಮಾನವೂ ರಾರಾಜಿಸುತ್ತಿದೆ. ಸ್ವಾಮಿ ದೇವಸ್ಥಾನದ ವಾಮಭಾಗದಲ್ಲಿ ಸುವರ್ಣ ಕಲಶ ಸಹಿತವಾದ ವಿಮಾನ ಹೊಂದಿರುವ ಶ್ರೀ ಭ್ರಮರಾಂಬಾ ದೇವಾಲಯವು ಇದೆ. ಇದೂ ಸಹ ಪಶ್ಚಿಮಾಭಿಮುಖವಾಗಿದೆ. ಈ ದೇವಾಲಯದ ಗರ್ಭಗೃಹ, ಶುಕನಾಸಿ, ನವರಂಗ ಮುಖಮಂಟಪಗಳಿಂದ ಯುಕ್ತವಾಗಿದೆ. ಈ ಭ್ರಮರಾಂಬಾ ದೇವಿಯು ಕಲಿಯುಗದಲ್ಲಿ ಭಕ್ತೋದ್ಧಾರಕ್ಕಾಗಿ ಆಸ್ತಿಕ ಮಹಾಜನರಿಂದ ಕೈಂಕರ್ಯವನ್ನು ಪಡೆದು ವರಪ್ರದಾಯಿನಿಯಾಗಿದ್ದಾರೆ. ಈ ದೇವಿಯ ವಿಗ್ರಹವು ಸುಮಾರು 5 ಅಡಿ ಎತ್ತರ ಉಳ್ಳದ್ದಾಗಿದೆ. ಅಭಯ ವರದ ಮುದ್ರೆಗಳಿಂದ, ಕಮಲ ಕುಮುದ ಹಸ್ತಗಳಿಂದಲೂ, ಮಂದಹಾಸ ಶೋಭಿತ ವದನವಿಂದಲೂ ಕೂಡಿ ಸಿಂಹಪೀಠದಲ್ಲಿ ನಿಂತಿರುವುದನ್ನು ನೋಡಿದರೆ ಭೂಮಂಡಲದ ಸಮಸ್ತ ಅಸ್ತಿಕರನ್ನು ಉದ್ಧರಿಸಲೋಸುಗ ಕಟ್ಟಿಬದ್ಧಳಾಗಿ ನಿಂತಿದ್ದಾಳೆಯೋ ಏನೋ ಎಂಬಂತೆ ಶೋಭಾಯಮಾನಳಾಗಿದ್ದಾಳೆ. ಸ್ವಾಮಿ ದೇವಸ್ಥಾನದ ಉತ್ತರ ಕಡೆ ಇರುವ ಸೋಮಸೂತ್ರದ (ಪಕ್ಕದಲ್ಲಿ) ಮುಂಭಾಗದಲ್ಲಿ ಗೋಪುರಯುಕ್ತವಾದ ಒಂದು ಅಂಕಣದಲ್ಲಿ ಚಂಡೀಕೇಶ್ವರ ಮೂರ್ತಿಯು ಪಶ್ಚಿಮಾಭಿಮುಖವಾಗಿ ಸುಖಾಸನಾರೂಢನಾಗಿದ್ದಾನೆ.

ಈ ಸೋಮಗಿರಿಯಲ್ಲಿ ಪಂಚಲಿಂಗಗಳಲ್ಲಿನ ಇತರ ಎಲ್ಲಾ ದೇವಾಲಯಗಳಿಗಿಂತಲೂ ಗಿರಿ, ವನ, ನದಿ ತ್ರಯವೂ ನಯನ ಮನೋಹರವಾಗಿಯೂ, ಪ್ರಕೃತಿಮಾತೆಯು ಇಲ್ಲಿ ನೆಲೆಗೊಂಡಿರುವಳೋ ಎಂಬಂತೆ ಭಾಸವಾಗುತ್ತದೆ. ಕಲಶ ಸಹಿತವಾದ ದೊಡ್ಡ ವಿಮಾನ, ಬಲಿಪೀಠ, ಧ್ವಜಸ್ಥಂಭ, ಚಿತ್ರರಥ, ತ್ರಿಶೂಲಾಸ್ತ್ರಗಳೆಂಬ

ಅಂಗ ಬೆರಯುಕ್ತವೂ, ಮೂಲಲಿಂಗ, ಸ್ವಸ್ತಿಕಲಿಂಗ (ವಿಮಾನ), ಭದ್ರಲಿಂಗ (ಬಲಿಪೀಠ)ಗಳೆಂಬ ಲಿಂಗತ್ರ್ಯವು, ಮೂಲಲಿಂಗದ ಬಳಿ ಇರುವ ಯೋಗಶಕ್ತಿ, ಉತ್ಸವ ವಿಗ್ರಹವಾಗಿರುವ ಭೋಗಶಕ್ತಿ ಮತ್ತು ವಾಮಭಾಗದಲ್ಲಿ ವಿರಾಜಮಾನವಾಗಿರುವ ವೀರಶಕ್ತಿಗಳೆಂಬ ಶಕ್ತಿತ್ರಯಾನ್ವಿತವೂ ಆಗಿ ಎಲ್ಲಾ ವಿಧಗಳಿಂದಲೂ ತನ್ನದೇ ಆದ ಪ್ರಾಧಾನ್ಯವನ್ನು ಹೊಂದಿದೆ.

ಈ ಕ್ಷೇತ್ರದ ದಕ್ಷಿಣ ದಿಕ್ಕಿನಲ್ಲಿ ಬೆಟ್ಟಹಳ್ಳಿ ಮಾರಮ್ಮ ಎಂಬ ಗ್ರಾಮ ದೇವತೆಯು ಇದೆ. ಈ ದೇವತೆಯಾದರೂ ದುಷ್ಟ ಶಿಕ್ಷಕಿ ಶಿಷ್ಟ ಪರಿಪಾಲುಕಳಾಗಿ ಈ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಕಾಸ್ಮಾತ್ ಸಂಭವಿಸುವ ಮಾನವರ, ಜಾನುವಾರುಗಳ ರೋಗರುಜಿನಗಳನ್ನು ನಿವಾರಣೆ ಮಾಡುವುದರಲ್ಲಿ ಸಮರ್ಥಳಾಗಿದ್ದಾಳೆ ಎಂಬ ವಿಷಯ ಜನಜನಿತವಾಗಿದೆ. ಈ ಕ್ಷೇತ್ರದಲ್ಲಿ ತಾಯೂರಿನ ಮಠಕ್ಕೆ ಸೇರಿದ ಹರಿಗದ್ದುಗೆ ಎಂಬುದು ಇದೆ. ಅದರ ಮೇಲೆ ಜೋಳವನ್ನು ಹಾಕಿದರೆ ಅರಳಾಗುತ್ತಿತ್ತೆಂದು ವೃದ್ಧರ ಮಾತಿನಿಂದ ತಿಳಿದು ಬಂದಿದೆ. ಈ ಮಠದ ಸ್ವಾಮಿಗಳು ಭಕ್ತಾದಿಗಳಿಂದ ಸೇವೆಯನ್ನು ಸ್ವೀಕರಿಸುತ್ತಾ ಹೊಸದಾಗಿ ಗುಡ್ಡರಾಗತಕ್ಕವರಿಗೆ ಸ್ವಾಮಿಗಳು ಸಂಸ್ಕಾರ ಮಾಡುವ ಅಧಿಕಾರ ಪಡೆದಿದ್ದಾರೆ.

ತ್ರಿಪುರ ಸಂಹಾರಕ್ಕಾಗಿ ಈಶ್ವರನು ಗೋರವನ (ಗುಡ್ಡನ) ವೇಷದಿಂದ ಹೋಗಿ ತ್ರಿಪುರವನ್ನು ನಾಶಮಾಡಾಲು ಸಾರಿ ಬಂದುದರ ಹೆಗ್ಗುರಿತ್ತಾಗಿ ಗೋರವಗಳನ್ನು ಬಿಡುವ ಸಂಪ್ರದಾಯವುಂಟು. ಬಹಳ ಪ್ರಾಚೀನತಮವಾಗಿದೆ ಎಂದು ಈ ಉದಾಹರಣೆಯಿಂದ ವ್ಯಕ್ತವಾಗುತ್ತದೆ.

ಈ ಮಹಾಕ್ಷೇತ್ರದಲ್ಲಿ ಪ್ರತಿ ಮಾಘ ಮಾಸದಲ್ಲೂ ನಡೆಯುವ ಜಾತ್ರಾ ಮಹೋತ್ಸವವು ಸುಪ್ರಸಿದ್ಧವಾದುದು. ಕಾಮಿಕ, ಕಾರಣಾಗಮಗಳ ಆಧಾರದಂತೆ ಮಾಘಮಾಸದ ಅರಿದ್ರಾ ನಕ್ಷತ್ರದ ದಿನ ಅವಭೃತ ತೀರ್ಥಸ್ನಾನವನ್ನು ಗುರಿಯಾಗಿಟ್ಟು ಪೂರ್ವೋತ್ತರ ದಿನಗಳ ಸಹಿತ ಶೈವಾಗಮೋಕ್ತ ವಿಧಿ ವಿಧಾನಗಳಂತೆ ನಡೆಯುವ ನವಾಹೋತ್ಸವ ಕ್ರಮದಲ್ಲಿ ಬ್ರಹ್ಮ ರಥೋತ್ಸವವು ಆಕರ್ಷಿಣೀಯವಾಗಿದೆ; ಪುಣ್ಯಪ್ರದವಾಗಿದೆ. ಈ ಜಾತ್ರೆಯು 15 ದಿವಸಗಳ ಕಾಲ ನಡೆಯುತ್ತದೆ. 1 ಅಂಕುರಾರ್ಪಣ, 2 ಧ್ವಜಾರೋಹಣ, 3 ಚಂದ್ರಮಂಡಲಾರೋಹಣ, 4 ಅನಂತ ಪೀಠಾರೋಹಣ. ಈ ನಾಲ್ಕು ಉತ್ಸವಗಳು ಸರ್ಕಾರದ ನೆರವಿನಿಂದ ನಡೆಯುತ್ತಿವೆ. ಐದನೆಯದಾದ ಪುಷ್ಪ ಮಂಟಪೋತ್ಸವವು, ಶಿವಾರ್ಚಕ ಮಚ್ಚೂರಯ್ಯನ ವಂಶಸ್ಥರಾದ ಶಿವಾರ್ಚಕ ಪರಶಿವಮೂರ್ತಿ ಮತ್ತು ದಕ್ಷಿಣಾಮೂರ್ತಿಯವರು ನೆರವೇರಿಸುತ್ತಾರೆ. ಆರನೆಯದಾದ ವೃಷಭಾರೋಹಣವು ಶಿವಾರ್ಚಕ ದೊಡ್ಡ ಮಲ್ಲಪ್ಪನವರ ಮಕ್ಕಳಾದ ಅರ್ಚಕ ನಾಗರಾಜಮೂರ್ತಿಯವರು ಮತ್ತು ನಟರಾಜಮೂರ್ತಿಗಳವರ ಸೇವಾರ್ಥ, ಏಳನೇಯದಾದ ಕಲ್ಯಾಣೋತ್ಸವವು ಸಿಂಗಾನಲ್ಲೂರು ಚನ್ನಬಸವಶೆಟ್ಟರ ವಂಶಸ್ಥರಾದ ಅಧಿಕಾರಪ್ಪನವ ಸೇವಾರ್ಥ, ಎಂಟಾನೆಯದಾದ ದಿವ್ಯ ಮಹಾರಥೋತ್ಸವವು ಸರಗೂರು ದೇವರಗುಡ್ಡರ ವಂಶಸ್ಥರ ಸೇವಾರ್ಥ, ಒಂಭತ್ತನೆಯ ಉತ್ಸವವಾದ ಚಿತ್ರರಥೋತ್ಸವವು ಮೈಸೂರು ಕೋಟೆ ಮನೆ ಶ್ರೀ ನಂಜುಂಡಪ್ಪನವರ

ಸೇವಾರ್ಥ. ಅದೇ ದಿವಸ ಸಾಯಂಕಾಲ ಶ್ರೀಯವರ ಶಯನೋತ್ಸವವು ಮತ್ತು ಮಾರನೇ ದಿವಸ ಬೆಳಿಗ್ಗೆ ಅವಭೃತ ತೀರ್ಥಸ್ನಾನವು ತಲಕಾಡು ಕದೀಮವಂಶಸ್ಥರ ಸೇವಾರ್ಥ ಹತ್ತನೇ ದಿವಸದ ಪುಷ್ಪಪಾಲಿಕೋತ್ಸವವು ನಯನಜಕ್ಷತ್ರಿಯರಿಂದ ಕೈಂಕರ್ಯ ನೆರವೇರುತ್ತದೆ.



← ದಾಸಯ್ಯನ ಭಾವಚಿತ್ರ



ಜನಪದ ಕುದುರೆ ಶಿಲ್ಪ →



← ಮುಡುಕು ತೊರೆ ದೇವಾಲಯ ಗುಡಿ



ಚೆನ್ನಮಲ್ಲಿಕಾರ್ಜುನ ರಥ →



← ಜನಪದ ರಥ ಶಿಲ್ಪ



ಜನಪದ ರಥ ಶಿಲ್ಪ →



← ಕಾವೇರಿ ದಡದ ತುಳಸಿ ಕಟ್ಟೆ



ಕಾವೇರಿ ದಡದ ದೇವರ ಗುಡಿ →

ರಾಮನಗರ ಜಿಲ್ಲೆಯ ಜಾನಪದಲೋಕದ ವಸ್ತುಸಂಗ್ರಾಲಯದ ಜನಪದ ಶಿಲ್ಪಕಲೆ

ರಾಮನಗರ ಜಿಲ್ಲೆಯ ಬೆಂಗಳೂರು – ಮೈಸೂರು ಹೆದ್ದಾರಿಯಲ್ಲಿ ಜಾನಪದಲೋಕ ಎಂಬ ವಸ್ತು ಸಂಗ್ರಾಲಯವಿದ್ದು ದಿನಾಂಕ 12–05–1994ರಲ್ಲಿ ಜಾನಪದ ಕಲೆ, ಜನಪದ ಉಪಕರಣಗಳು, ಜನಪದ ಸಂಗೀತ ವಾದ್ಯಗಳು, ಜನಪದ ಗ್ರಾಮೀಣ ಬದುಕಿನ ಚಿತ್ರಗಳನ್ನೊಳಗೊಂಡ ವಸ್ತು ಸಂಗ್ರಾಲಯವನ್ನು ಲೋಕಾರ್ಪಣೆ ಮಾಡಲಾಯಿತು. ಈ ವಸ್ತುಸಂಗ್ರಾಲಯದಲ್ಲಿ ನಮ್ಮ ನಾಡಿನ ಆದಿವಾಸಿ ಜನರ ಬದುಕಿನ ಆಯಾಮವನ್ನು ಸಾಕ್ಷಿಕರಿಸುವ ವಸ್ತುಗಳನ್ನು ಸಂಗ್ರಹಿಸಿ ತಲೆಮಾರಿನಿಂದ ತಲೆಮಾರಿಗೆ ಜೀವನಕ್ರಮವನ್ನು ಜೋಡಣೆ ಮಾಡುವ ಒಂದು ದೊಡ್ಡ ಪ್ರಮಾಣದ ಸಂಗ್ರಾಲಯವಾಗಿದೆ.

ಪ್ರೋ. ಎಚ್.ಎಲ್. ನಾಗೇಗೌಡರು ಯಾವುದು ಜನ್ಮದ ಪುಣ್ಯ ಮತ್ತು ಕನಸು ಕಂಡಿದರೋ ಗೊತ್ತಿಲ್ಲ ಆದರೆ ಅವರು ಸಂಗ್ರಾಲಯ ಕಟ್ಟಲು ಪೂರ್ವಜ್ಞಾನ, ದೈಹಿಕ ಪರಿಶ್ರಮ, ಅನೇಕ ವಿದ್ಯಾರ್ಥಿಗಳಿಗೆ ಇತಿಹಾಸ ತಿಳಿಯುವ ಭಂಡಾರ ನಿರ್ಮಾಣ ಮಾಡಿಕೊಟ್ಟಿದ್ದಾರೆ. ಈ ನಾಡಿನ ಎಲ್ಲರು ಇಂದು ನಾಗೇಗೌಡ ಸಾರ್‌ರವರಿಗೆ ಚಿರಋಣಿಗಳಾಗಿರಬೇಕು.

ಮುಖ್ಯ ದ್ವಾರದಲ್ಲಿ ಅಳವಡಿಸಿರುವ ಜಾನಪದ ಸಂಸ್ಕೃತಿಯನ್ನು ಬಿಂಬಿಸುವ ಶಿಲ್ಪ ಕಲಾಕೃತಿಗಳು ಹೆದ್ದಾರಿಯಿಂದಲೇ ಪ್ರವಾಸಿಗರನ್ನು ಬರಮಾಡಿಕೊಳ್ಳುತ್ತವೆ. ಒಳ ಹೋದ ನಮಗೆ ಲೋಕಾಮಾತಾ ಮಂದಿರ, ಚಿತ್ರಕುಟೀರ, ದೊಡ್ಡಮನೆ, ಶಿಲ್ಪಮಾಳ, ಅಗ್ರಿಮಾಳ ಎಂಬ ವಿಭಾಗಗಳಾಗಿ ವಿಂಗಡಿಸಿ ನೋಡುಗರಿಗೆ ಸರಳ ರೀತಿಯಲ್ಲಿ ತಿಳಿದುಕೊಳ್ಳಬಹುದಾಗಿದೆ. ಈ ಒಂದು ವಿಭಾಗಗಳು ಆಯಾಯ ವಿಷಯಗಳಿಗೆ ಸಂಬಂಧಿಸಿದ ವಸ್ತುಗಳನ್ನು ಶೇಖರಿಸಿಡಲಾಗಿದೆ. ಸುಮಾರು 5000 ಜನಪದ ಶಿಲ್ಪಕಲಾಕೃತಿಗಳನ್ನು ಕ್ರೂಢಿಕರಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದವರು 1999ರಲ್ಲಿ ಜನಪದ ಸಂಶೋಧನಾ ಅಧ್ಯಯನ ಪ್ರಾರಂಭಿಸಿದರು. ಈ ನಾಡಿನಲ್ಲಿ ಬದುಕಿ ಬಾಳಿದ ನಮ್ಮ ಹಿರಿಯರ ಕಲಾ ನೈಪುಣ್ಯತೆ, ಕೃಷಿ ಮಾಡುತ್ತಿದ್ದ ರೀತಿ ಮತ್ತು ಬಳಸುತ್ತಿದ್ದ ಉಪಕರಣಗಳು, ದವಸ ದಾನ್ಯಗಳನ್ನು ಶೇಖರಿಸಿ ಇಡುತ್ತಿದ್ದ ವೈಜ್ಞಾನಿಕ ಮನೋಭಾವವುಳ್ಳ ಕ್ರಮಗಳನ್ನು ನಮ್ಮ ವಿದ್ಯಾರ್ಥಿಗಳು ತಿಳಿಯಲೇಬೇಕು ಎಂಬ ದೊಡ್ಡ ಯೋಜನೆಯಿಂದ ವಿಶ್ವವಿದ್ಯಾಲಯವು ಸಂಶೋಧನಾ ಅಧ್ಯಯನ ಪ್ರಾರಂಭ ಮಾಡಲಾಗಿದೆ.

ಮೂಲ ಗ್ರಾಮೀಣ ಬದುಕು ಮತ್ತು ಬುಡಕಟ್ಟು ಜನಾಂಗದವರು ಬಳಸುತ್ತಿದ್ದ 5000 ವಸ್ತುಗಳನ್ನು ಸಂಗ್ರಹಿಸಲಾಗಿದೆ ಎನ್ನಬಹುದು. ಕೊಬ್ಬರಿ ಎಣ್ಣೆ ತೆಗೆಯುವ ಶಿಲ್ಪಕಲಾಕೃತಿ, ಬೇರೆ ಬೇರೆ ರಾಜ್ಯಗಳ ವಿವಿಧ ಮಾದರಿಯ ಸಂಗೀತವಾದ್ಯ, ಶಿಲ್ಪಕಲಾಕೃತಿಗಳು, ಚಾಮುಂಡಿ ಮಾತೆ ಜನಪದ ಶಿಲ್ಪಕಲಾಕೃತಿ, ವೀರಾಗಾಸೆ ಜನಪದ ಶಿಲ್ಪಕಲಾಕೃತಿ, ವಿವಿಧ ಬಗೆಯ ಮಣ್ಣಿನ ಜನಪದ ಶಿಲ್ಪಕಲಾಕೃತಿ ಕೃತಿ, ಬಿದಿರಮ್ಮ ಕಹಳೆ ಜನಪದ ಶಿಲ್ಪಕಲಾಕೃತಿ, ದಾಸಯ್ಯ, ಗೊರವಯ್ಯ, ಹಕ್ಕಿಪಿಕ್ಕಿ, ಬಡಗ ತಿಟ್ಟು ಮತ್ತು ತೆಂಕಣ ತಿಟ್ಟು ಯಕ್ಷಗಾನ ಶಿಲ್ಪಕಲಾಕೃತಿ ವಿವಿದ ಬಗೆಯ ಮುಖವಾಡಗಳು, ಮಕ್ಕಳು ಆಟವಾಡುವ ಆಟಿಕೆ ಶಿಲ್ಪಕಲಾಕೃತಿ, ತೊಗಲು

ಗೊಂಬೆ ಕಲಾಕೃತಿ, ವೀರಕಲ್ಲು, ಸತಿ ಕಲ್ಲು, ಗೋ ಕಲ್ಲು, ಬುಡಕಟ್ಟು ಜನರ ಕುಣಿತ, ವಿವಿಧ ಮಾದರಿ ವೀಣೆ ಶಿಲ್ಪಕಲಾಕೃತಿಗಳು, ಕುಂಬಾರಿಕೆ ಶಿಲ್ಪಕಲಾ ಕೃತಿ, ಮಹಿಳೆಯ ಗೋಡೆ ಮೇಲೆ ಚಿತ್ರಿಸಿರುವ ಚಿತ್ರಗಳು, ಮಡಿಕೆಗಳ ಕಲಾಕೃತಿ, ಕಾರ ಅರೆಯುವ ಕಲ್ಲು, ರಾಗಿ ಬೀಸುವ ಕಲ್ಲು ಕಲಾಕೃತಿ, ಬಾವಿಯಿಂದ ನೀರನ್ನು ಮೇಲೆತ್ತುವ ಕಲಾಕೃತಿ, ದವಸ ಧಾನ್ಯ ತುಂಬುವ ಕಲಾಕೃತಿ ಹೀಗೆ ಹೇಳುತ್ತಾ ಹೋದ ಅವರ ಬುಡಕಟ್ಟು ಮತ್ತು ಗ್ರಾಮೀಣ ಬದುಕಿನ ಚಿತ್ರಣ ನಮ್ಮ ಕಣ್ಣೆದುರೆ ಬಂದು ಬಿಡುತ್ತಿದೆ.

20ನೇ ಶತಮಾನದಲ್ಲಿ ಪ್ರಾರಂಭಗೊಂಡ ಈ ವಸ್ತುಸಂಗ್ರಾಲಯವು ನಾಡಿನ ಅನೇಕ ಸಾಂಸ್ಕೃತಿಕ ಮತ್ತು ಸಂಪ್ರದಾಯ ಕಲೆಗಳ ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದೆ. ಡೊಳ್ಳುಕುಣಿತ ಗೊರವರ ಕುಣಿತ, ಕೋಲಾಟ, ಪೂಜಾ ಕುಣಿತ ಇನ್ನು ಹಲವಾರು ಸಾಂಸ್ಕೃತಿಕ ಕಲೆಗಳನ್ನು ಯುವಕರಿಗೆ ಕಲಿಸುವುದು ಗೌರವಿಸುವುದು, ನಾಡಿನ ಹಿರಿಮೆಯ ಎತ್ತಿಹಿಡಿಯುವುದು ಮುಖ್ಯ ಉದ್ದೇಶವಾಗಿದೆ. ಹೀಗೆ ಬುಡಕಟ್ಟು ಜನರ ಜನಪದ ಶಿಲ್ಪಕಲೆ ವಿಷಯ ಮತ್ತು ಶಿಲ್ಪಕಲಾ ಕೃತಿಗಳನ್ನು ಹುಡುಕಿ ನನಗೆ ವಿಷಯ ಪೂರ್ಣವುಳ್ಳ ಹಿರಿಯರು ಬಳಸುತ್ತಿದ್ದ ವೈಜ್ಞಾನಿಕ ಮನೋಭಾವವುಳ್ಳ ಗ್ರಾಮೀನ ಸೊಗಡಿನ ಶಿಲ್ಪಕಲಾಕೃತಿಗಳು ಕಾಣಿಸಿದವು.


ಬುಡಕಟ್ಟು ಜನಪದ ಶಿಲ್ಪಕಲಾ ಅಧ್ಯಯನ ವಸ್ತುವಾಗಿ ಪಡೆದ ನಾನು ಮೈಸೂರು, ಕೊಡಗು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿ ಕೇಳಿರುವುದು ಮತ್ತು ಕಾಣಬಂದಿರುವ ವಿಚಾರಗಳು ಮತ್ತು ಜನಪದ ಶಿಲ್ಪಕಲಾ ಕೃತಿಗಳ ಗುರುತಿಸಿರುತ್ತೇನೆ. ಮುಡುಕುತೊರೆ ಮಲ್ಲಿಕಾರ್ಜುನ ದೇವಾಲಯದಲ್ಲಿ ಅನೇಕ ಜನಪದ ಶಿಲ್ಪಕಲಾಕೃತಿಗಳ ಭಾವ ಚಿತ್ರ ಸೆರೆಹಿಡಿಯಲಾಗಿದೆ. ತಲಕಾಡು ದೇವಾಲಯ ಜನಪರ ಶಿಲ್ಪಕಲಾಕೃತಿಗಳು ಶ್ರೀರಂಗಪಟ್ಟಣ ರಂಗನಾಥಸ್ವಾಮಿ ದೇವಸ್ಥಾನ ಹಬ್ಬ, ಉತ್ಸವಗಳಲ್ಲಿ ಬಳಸುವ ಜನಪದ ಶಿಲ್ಪಕೃತಿಗಳ ಭಾವಚಿತ್ರ ಸೆರೆಹಿಡಿಯಲಾಗಿದೆ. ತಿಮ್ಮಪ್ಪನ ಬೇರೆ ಸ್ಥಳಗಳ ಜನಪದ ಕಥೆ ಹೇಳುವಂತೆ ಕರಿಘಟ್ಟದ ದೇವಾಲಯದಲ್ಲಿ ಕೆಲವೊಂದಿಷ್ಟು ಜನಪದ ಶಿಲ್ಪಕಲಾಕೃತಿಗಳನ್ನು ಗುರುತಿಸಿರುತ್ತೇನೆ. ನನ್ನ ಅಧ್ಯಯನ ಭೌಗೋಳಿಕ ವ್ಯಾಪ್ತಿಯನ್ನು ದಾಟಿ ಬುಡಕಟ್ಟು ಜೀವನ ಕ್ರಮದ ಮತ್ತು ಅವರ ಶಿಲ್ಪಕಲೆ ಪ್ರೌಢಿಮೆಯ ಭಾವ ಚಿತ್ರಗಳನ್ನು ಪೋಟೊ ಗ್ಯಾಲರಿಯಿಂದ ಆಯ್ದು ಸಂಗ್ರಹಿಸಿರುತ್ತೇನೆ. ಈ ಶಿಲ್ಪಕಲಾಕೃತಿಗಳ ಬುಡಕಟ್ಟು ಜನರ ಬದುಕಿನ ಹಾಡುಪಾಡು ತಿಳಿಸಿದರೆ ಇವರು ತಯಾರುಮಾಡಿಕೊಂಡಿರುವ ಮನೆ, ಕೊಟ್ಟಿಗೆ, ದೇವಾಲಯ, ಗುಡಿಸಲು ಮತ್ತು ಬಾಗಿಲುಗಳು, ಆಹಾರ ಸಂಗ್ರಹಣೆ ತೊಂಬೆಗಳು, ದೇವಾಲಯದ ಮೆಟ್ಟಿಲುಗಳೂ, ತಂಗುದಾಣಗಳು, ಕೃಷಿಗೆಂದು ಬಳಸುವ ಉಪಕರಣಗಳು, ರಥ ತೆಪ್ಪಗಳು ಇನ್ನೂ ಹಲವು ಮಾದರಿಗಳು ಬುಡಕಟ್ಟು ಜನಾಂಗ ದಿನನಿತ್ಯ ಜೀವನದ ಕ್ರಿಯೆಗೆ ಹಂಚಿಕೊಂಡು ಇಂದು ನಮ್ಮಗೆ ಮೇಲ್ಕಂಡ ಎಲ್ಲಾವುಗಳು ಜನಪದ ಶಿಲ್ಪಕಲಾಕೃತಿಯಾಗಿ ವೈಭರಿಸಿಕೊಂಡಿವೆ. ಈ ಅಧ್ಯಯನ ಪಯಣ ನನ್ನನ್ನು ಪೂರ್ಣ ಪ್ರಮಾಣ ಶಿಲ್ಪಕಲಾವಿದನ್ನಾಗಿ ರೂಪುಗೊಳ್ಳಲು ಕಾರಣವಾಯಿತು.



ಜನಪದ ವಸ್ತುಗಳ ಸಂಗ್ರಹಾಲಯ ಚಿತ್ರ



ಜಾನಪದ ಶೈಲಿಯ ಗೋಡೆ ಚಿತ್ರ ಬಿಡಿಸುವವರು



←ಬಿದಿರಿನ ತಟಿಕೆ ಶಿಲ್ಪ



ತೊಗಲು ಗೊಂಬೆಗಳ ಶಿಲ್ಪ →



← ಹಲುಬೆ (ಕೃಷಿ ಉಪಕರಣ) ಶಿಲ್ಪ

ಎಣ್ಣೆ ತೆಗೆಯುವ ಸಾಧನ ಶಿಲ್ಪ →





← ವಿವಿಧ ಸಂಗೀತ ಸಾಧನಗಳು

ವೀಣಾ ವಾದ್ಯ ಶಿಲ್ಪ →





← ಬಾವಿ ಕಟ್ಟೆ ಮತ್ತು ಮಹಿಳೆ

ನಗಾರಿ →





← ನಾಣ್ಯಗಳ ಚಿತ್ರ

ಗ್ರಾಮೀಣ ಜನರ ಬಳಕೆ ಕಲ್ಲು ವಸ್ತುಗಳ ಶಿಲ್ಪಗಳು →





← ಹಾವಾಡಿಗ ಮತ್ತು ಹೆಂಡತಿ ಜನಪದ ಶಿಲ್ಪ

ಆನ್‌ಪದ್ ಮರದ ಕಾಲು ವಸ್ತುಗಳ ಶಿಲ್ಪ →





← ಜನಪದ ವಿವಿಧ ವಸ್ತುಗಳ ಸಂಗ್ರಹಾಲಯ

ಜನಪದ ವಸ್ತುಗಳ ಸಂಗ್ರಹಾಲಯ ಚಿತ್ರ →





← ಸಂಗೀತ ಸಾಧನಗಳ ಶಿಲ್ಪಗಳು

ಮಡಿಕೆ ರಚನೆಕಾರ →




ರಾಚಯ್ಯ ಗುಡ್ಡಪ್ಪರವರು ಅನೇಕ ದೇವರ ವಿಗ್ರಹಗಳನ್ನು ಪೂಜಿಸುತ್ತಿದ್ದರೆ ಅಕ್ಕಪಕ್ಕದ ಜನರು ಬಂದು ಪೂಜೆಮಾಡಿಸಿ ಹೋಗುತ್ತಾರೆ.

ಬೆಟ್ಟ ಕುರುಬರ ಕುರುಡು ಹಬ್ಬ (ಕುದುರೆ ಹಬ್ಬ) ಆಚರಿಸುವ ರೀತಿಯಿಂದ ಅನೇಕ ಸಂಪ್ರದಾಯಸ್ಥರು ದೂರ ಉಳಿಯುತ್ತಾರೆ. ಈ ಹಬ್ಬದ ಆಚರಣೆಯ ವಿಶೇಷವೆಂದರೆ ವಿವಿಧ ಬಣ್ಣಗಳಿಂದ ದೇಹ ಮತ್ತು ಮುಖವನ್ನು ಅಲಂಕರಿಸಿ ಹೆಜ್ಜೂರು ಜಾತ್ರೆಯಲ್ಲಿ ಕುಣಿಯುತ್ತಾರೆ. ಈ ಕುಣಿಯುವ ಸಮಯದಲ್ಲಿ ಯಾವ ವಯಸ್ಸಿನ ಗಂಡಸಿಗೆ ಯಾರ ಬೇಕಾದರೂ ಜೊತೆಗೂಡಿ ಹೋಗಬಹುದು. ಹಾಗೇ ಯಾವುದೇ ಹೆಂಗಸಿಗೂ ಯಾವ ವಯಸ್ಸಿನ ಗಂಡಸ್ಸಿನ ಜೊತೆ ಓಡಿ ಹೋಗಬಹುದು. ಈ ಕುಣಿಯುವ ಸಮಯದಲ್ಲಿ ಎಲ್ಲಾರು ಆಕರ್ಷಿತರಾಗಿ ಕಾಣುತ್ತಾರೆ. ಬೆತ್ತಲಾಗಿ ಕುಣಿಯುವುದು ರೂಢಿಯಲ್ಲಿದೆ. ಭದ್ರಕಾಳಿ ಮತ್ತು ಅಯ್ಯಪ್ಪಸ್ವಾಮಿ ದೇವರುಗಳಿಗೆ ಈ ಪರಿಯ ಜಾತ್ರೆ ಏರ್ಪಾಡು ಮಾಡುತ್ತಾರಂತೆ. ವರ್ಷದ ಮೇ ತಿಂಗಳ 2ನೇ ವಾರದಲ್ಲಿ ಮಂಗಳವಾರ ಪ್ರಾರಂಭವಾಗಿ ಬುಧವಾರ ರಾತ್ರಿ ಮುಗಿಯುತ್ತದೆಯಂತೆ. ತಿತಿಮತಿಯ ಸುತ್ತಮುತ್ತಾ ಜಂಗಲ್ ಹಾಡಿ ಮಜ್ಜಿಗೆ ಹಾಡಿ, ಘಾರಂಹಾಡಿ, ಕರಕಂಡಿ ಹಾಡಿ, ರೇಷ್ಮೆ ಹಾಡಿಗಳಿರುತ್ತವೆ.



← ಎರವರ ಪೂಜಾ ದೇವರ ಶಿಲ್ಪಗಳು



ಎರವರ ಅಯ್ಯಪ್ಪನ ಹದಿನೆಂಟು ಮೆಟ್ಟಿಲುಗಳು →



← ಎರವರ ಬಾವಿಕಟ್ಟೆ



ಎರವರ ಹಿಟ್ಟಿಗೆ →



← ಎರವರ ದೊಡ್ಡಮ್ಮ ತಾಯಿ ಗದ್ದುಗೆ

ಎರವರ ಚಪ್ಪರ ಚಿತ್ರ →





← ಜೇನುಕುರುಬರ ಮನೆ ಚಿತ್ರಣ

ಜೇನುಕುರುಬರ ಬಾಲಕ ಮತ್ತು
ಮರ ಆಟಿಕೆ ಶಿಲ್ಪ →





← ಜೇನುಕುರುಬರ ಮನೆ

ಜೇನುಕುರುಬರ ಬಿದಿರಿನ ತಟ್ಟಿಗೆ ಮನೆ →





← ಜೇನುಕುರುಬರ ಮಕ್ಕಳ ಚಪ್ಪರ ಚಿತ್ರ

ದೇವಾಲಯದ ಪ್ರಾಣಿ
ಶಿಲ್ಪಕಲಾಕೃತಿ →





← ಜೇನುಕುರುಬರ ಮಣ್ಣಿನ ಮನೆ

ಜೇನುಕುರುಬರ ಮಣ್ಣಿನ
ಗೋಡೆಯ ರಚನೆ ಚಿತ್ರ →





← ಹಕ್ಕಿಪಿಕ್ಕಿ ಜನಾಂಗದ ಮಹಿಳೆಯರು

ಜೇನುಕುರುಬ ಬಾಗಿಲು ತಟ್ಟಿಕೆ→





← ಜೇನುಕುರುಬರ ಮನೆ
ನಿರ್ಮಾಣದ ಕೆಲಸದ ಚಿತ್ರ

ಜೇನುಕುರುಬರ ಕೃಷಿಯ
ಬಿತ್ತನೆ ಕೆಲಸದ ಚಿತ್ರ →





← ಜೇನುಕುರುಬರ ಕಾರ
ಅರೆಯುವ ಕಲ್ಲು

ಜೇನುಕುರುಬರ ಮಣ್ಣಿನ ಗೋಡೆ
ನುಣುಪು ಮಾಡುವ ಚಿತ್ರ →




ಮೈಸೂರು ಜಿಲ್ಲೆ ಮೇದಾ ಬುಡಕಟ್ಟು ಜನಪದ ಶಿಲ್ಪಕಲೆ

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಸುತ್ತಮುತ್ತಾ ಹತ್ತಾರು ಮೇದಾ ಬುಡಕಟ್ಟು ಜನರ ಗ್ರಾಮಗಳಿಗೆ ಬೇಟಿ ನೀಡಿದಾಗ. ಅವರ ಬಿದಿರಿನ ಶಿಲ್ಪಕಲೆಯಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂತು. ಇವರ ಮನೆಗಳಿಗೆ ಭೇಟಿ ನೀಡಿದಾಗ ಜೀವನಕ್ಕೆ ಸರಿ ಎನಿಸುವ ಮಟ್ಟಕ್ಕೆ ಸರಿ ಇಲ್ಲದಿದ್ದರೂ ಆ ದಿನದ ದುಡಿಮೆ ಆದಿನ ಜೀವನಕ್ಕೆ ಸಮ ಎನ್ನವಾಗಿ ಜೀವನ ನಡೆಸುತ್ತಿದ್ದಾರೆ. ಸುಮಾರು 50-60 ಕುಟುಂಬಗಳು ಬಿದಿರಿನ ಶಿಲ್ಪಕಲೆಗಳ ತಯಾರಿಯಲ್ಲಿ ತೊಡಗಿಸಿರುತ್ತಾರೆ. ಇವರ ಆಚರಣೆಗಳೆಂದರೆ ಸಿದ್ದಪ್ಪಾಜಿ ಮನೆಯ ದೇವರು ಮಣಸಮ್ಮ ಕೋಟೆ ಮಾರಮ್ಮ, ತುಳಸಮ್ಮ, ಸೀತಮ್ಮ, ವೆಂಕಟೇಶ್ವರಸ್ವಾಮಿ, ಬಿಳಿಗಿರಿರಂಗನಾಥಸ್ವಾಮಿ, ರಾಮದೇವರುಗಳನ್ನು ಪೂಜಿಸುತ್ತಾರೆ.

ಹಲವಾರು ಜಾತ್ರ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ಇವರು ತಯಾರು ಮಾಡುವ ಬಿದಿರಿನ ಏಣಿ, ಕುಕ್ಕೆ, ಮೊರೆ, ಬುಟ್ಟಿ, ಹೂಬುಟ್ಟಿ, ಬಿಸಣಿಕೆ, ತಟ್ಟಿಕೆ, ಕೊಕ್ಕೆ, ಮದುವೆ ಶಾಸ್ತ್ರಕ್ಕೆ ಬಳಸುವ ಬುಟ್ಟಿಗಳು, ಪೂಜೆ ಬುಟ್ಟಿ, ಅಕ್ಕಿ ಶೋಷುವ ಜರಡಿ, ಕಾಳು ಕಡ್ಡಿ, ಒಣಹಾಕಲು ತಟ್ಟಿಗೆ, ಬಿದಿರಿನ ಪರದೆ ಇನ್ನು ಹತ್ತು ಹಲವು ಬಗೆಗೆಯ ಬಿದಿರಿನ ಶಿಲ್ಪಗಳನ್ನು ಮಾಡುತ್ತಿದ್ದರು.

ಸ್ಥಳೀಯರನ್ನು ಮಾತನಾಡಿಸಿದಾಗ ರಾಜಣ್ಣ ಮಹದೇವ, ರಾಜೆಶ್ವರಿ, ಮಂಜುನಾಥ, ಮಂಟೇಯ್ಯ, ದಾಸಕೋಟೆ, ನಾಗರಾಜ ಶೆಟ್ಟಿ, ಲೀಲಮ್ಮ ಮತ್ತಿಹರು ಮನೆಗಳಲ್ಲಿ ನಿರಂತರ ಬಿದಿರಿನ ಶಿಲ್ಪಿಕಲೆಯಲ್ಲಿ ಕಾರ್ಯನುಮುಖರಾಗಿದ್ದರು. ಪ್ರತಿಯೊಬ್ಬರ ಕೈಯಲ್ಲಿ ಅರಳುತ್ತಿದ್ದ ಬಿದಿರಿನ ಕಲೆಯನ್ನು ಭಾವಚಿತ್ರ ಸೆರೆಹಿಡಿಯಲಾಗಿದೆ.

ಕೊಡಗುಜಿಲ್ಲೆ ಕುಶಾಲನಗರದ ನಿವಾಸಿ ಮೀನಾಕ್ಷಿ ಯವರು ತುಂಬಾನೇ ಆಕರ್ಷಣೆ ಬಿದಿರಿನ ಶಿಲ್ಪಕಲೆ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಗಿರಿಜನ ಉತ್ಸವ, ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದು ಅನೇಕ ಸರ್ಕಾರಿ ವಸ್ತು ಪ್ರದರ್ಶನಗಳಲ್ಲಿ ಇವರ ಕಲಾ ನೈಪುಣ್ಯತೆಯನ್ನು ಮೆರೆದಿದ್ದಾರೆ.



← ಮೇಧಾ ಜನರ ಸಿದ್ದಾಪ್ಪಾಜಿ
ದೇವರ ಕಂಡಾಯ ಚಿತ್ರ



ಮೇಧಾ ಜನರ ಬಿದಿರಿನ ಶಿಲ್ಪಕಲೆ
ರಚನೆಯಲ್ಲಿ ತೊಡಗಿರುವ ಚಿತ್ರ →



← ಮೇಧಾ ಜನರ ಬಿದಿರಿನ ಶಿಲ್ಪಕಲಾ ಕೃತಿಗಳು



ನಾಯಕ ಜನರ
ಒಳಕಲ್ಲು ರಚನಾಕಾರ →



← ಮೇಧಾ ಜನಾಂಗ
ತಟ್ಟಿಕೆ ರಚನೆ ಚಿತ್ರ

ಮೇಧಾ ಜನಾಂಗ
ತಟ್ಟಿಕೆ ರಚನೆ ಚಿತ್ರ →





← ಮೇಧಾ ಜನಾಂಗದ ಮದುವೆಯ
ಪೂಜೆಯ ಚಿತ್ರ

ಮೇಧ ಜನಾಂಗದ ಮದುವೆಯ
ವಾದ್ಯವೃಂದ ಚಿತ್ರ →





← ಮೇಧಾ ಜನಾಂಗ ಬಿದಿರಿನ ಶಿಲ್ಪಕಲೆ ತಯಾರಿಕೆ ಚಿತ್ರ

ಮೇಧಾ ಜನಾಂಗ ಏಣಿಯ ಶಿಲ್ಪಗಳು →





← ಮೇಧಾ ಜನಾಂಗದ ಬಿದಿರಿನ ಬುಟ್ಟಿ ಮತ್ತು ಬಿಸಾಣಿಕೆ ಚಿತ್ರ

ಮೇಧಾ ಜನಾಂಗ
ಬಿದಿರಿನ ಶಿಲ್ಪಕಲಾ ರಚನೆ →



ಚಾಮರಾಜನಗರ ಜಿಲ್ಲೆ ನಾಯಕ ಬುಡಕಟ್ಟು ಜನಾಂಗದ ಮಹೇಶ್ ಶಿಲ್ಪ ಕಲಾವಿದ ಕುರಿತ ವಿಷಯ ಮತ್ತು ಶಿಲ್ಪಕಲೆ

ರಾಜ್ ಪರಿವಾರ್ ಜನಾಂಗದ ಮಹೇಶ್ ಎಂಬ ವ್ಯಕ್ತಿ ಸಂಪ್ರದಾಯ ಶಿಲ್ಪಕಲೆಯಲ್ಲಿ ತೊಡಗಿಸಿಕೊಂಡಿದ್ದು ಸುಮಾರು 16 ವರ್ಷಗಳಿಂದ ಶಿಲ್ಪಕಲಾ ಕೃತಿಗಳನ್ನು ರಚಿಸುತ್ತಿದ್ದಾರೆ. ಅಕ್ಷರ ಜ್ಞಾನವಿದೆ. ಕಡಿಮೆ ಇದ್ದರು ಜ್ಞಾನ ದಾಹದಿಂದ ಶಿಲ್ಪಕಲಾವಿದನಾಗಿದ್ದಾನೆ.

ಕೆ.ಪಿ.ಜೆ. ಪ್ರಭು ಕರಕುಶಲ ತರಬೇತಿ ಸಂಸ್ಥೆ (ಕೆನರ ಬ್ಯಾಂಕ್ ಪ್ರಯೋಜಿಸಿ)ಯಲ್ಲಿ ಅಡುಗೆ ಸಹಾಯಕ ಕೆಲಸ ಸೇರಿದ ಈತನ ನಿತ್ಯ ತರಬೇತಿ ಪಡೆಯುತ್ತಿದ್ದ ಬೇರೆ ಬೇರೆ ಊರಿನ ವಿದ್ಯಾರ್ಥಿಗಳನ್ನು ನೋಡಿ ನಾನು ಶಿಲ್ಪಕಲೆ ಕಲಿಯಬೇಕು ಎಂಬ ಆಸೆಯಿಂದ 2003ರಲ್ಲಿ ಸಂಪ್ರದಾಯ ಶಿಲ್ಪಕಲೆ ಕಲಿತು ಸ್ಥಳೀಯವಾಗಿ ಗುರುತಿಸಿಕೊಂಡಿದ್ದಾರೆ. ಇವರು ಲಕ್ಷ್ಮಿದೇವರು, ನಾಗರಕಲ್ಲು, ಗಣೇಶ, ಲಿಂಗ, ಈಶ್ವರ, ರಾಮ ಲಕ್ಷ್ಮಣ, ಹನುಮಂತ, ಉಗ್ರನರಸಿಂಹ, ನಂದಿ ಹೀಗೆ ಹಲವಾರು ಶಿಲ್ಪಕಲಾ ವಿಗ್ರಹಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಶಿಲ್ಪಕಲಾ ಅಕಾಡೆಮಿಯವರು ಆಯೋಜಿಸುವ ಶಿಲ್ಪಕಲಾ ಶಿಬಿರದಲ್ಲಿ ಭಾಗವಹಿಸಿರುತ್ತಾರೆ. ಬೆಂಗಳೂರು ವಿಶ್ವವಿದ್ಯಾಲಯ ವೆಂಕಟಪ್ಪ ಆರ್ಟ್ ಗ್ಯಾಲರಿ ಕ್ಯಾಂಪ್‌ಗಳಲ್ಲಿ ಭಾಗವಹಿಸಿರುತ್ತಾರೆ.

ಇವರ ಜನಾಂಗದಲ್ಲಿ ಸಿದ್ದಪ್ಪಾಜಿ, ಚಿಕ್ಕಮ್ಮ ದೇವಿ, ಹುಯ್ಯಬಳಿ ಮಾರಮ್ಮ ದೇವರುಗಳನ್ನು ಪೂಜಿಸುತ್ತಾರೆ. ಬಂಡಿ ಜಾತ್ರ, ಪಂಜಿನ ಮೆರವಣಿಗೆ, ತೆಂಗಿನ ಕಾಯಿ ಹೊಡೆಯುವ ಹಬ್ಬ, ಶನಿದೇವರ ಕಥೆ ಹೇಳಿಸುವ ಕಾರ್ಯಕ್ರಮ ಬಿಳಿಗಿರಿರಂಗ ಸ್ವಾಮಿ ಕಥೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ.

ಹಳ್ಳಿಯಾಟಗಳಾದ ಕಡಿಯಾಟ, ದೊಣ್ಣೆವರಸೆ, ಜನಪದ ಆಟಗಳನ್ನು ಆಡುತ್ತಾರೆ.

ಈತನ ಮನೆಯಲ್ಲಿ ಇನ್ನೋರ್ವ ಮಣ್ಣಿನ ಶಿಲ್ಪಕಲಾವಿರುತ್ತಾರೆ.

ಈಗ ಅಣ್ಣ ತಮ್ಮಂದಿರು ಈ ಶಿಲ್ಪಕಲೆ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದು ಮೇದ ಜನಾಂಗ ಜನಪದ ಶಿಲ್ಪ ಕಲೆಯಲ್ಲಿ ಗುರುತ್ತಿಸುವುದಾಗಿರುತ್ತದೆ.



ನಾಯಕ ಜನಾಂಗದ ಶಿಲ್ಪ ಕಲಾವಿದ



ಪ್ರವಾಸಿಗರು ಮತ್ತು ಆದಿವಾಸಿ ನಾಯಕ ಜನಾಂಗದ ಶಿಲ್ಪ ಕಲಾವಿದ

ಅಂತರ್ಜಾಲದಲ್ಲಿ ಸಂಗ್ರಹವಾಗಿರುವ ಬುಡಕಟ್ಟು ಜನಪದ ಶಿಲ್ಪಕಲಾ ಭಾವಚಿತ್ರಗಳು

ಬುಡಕಟ್ಟು ಜನಪದ ಶಿಲ್ಪಕಲೆ ಕುರಿತು ನನ್ನ ಅಧ್ಯಯನವನ್ನು 4 ಜಿಲ್ಲೆಗಳಿಗೆ ಸೀಮಿತಗೊಳಿಸದೇ ಭಾರತ ದೇಶದ ವಿವಿಧ ರಾಜ್ಯಗಳಲ್ಲಿರುವ ದಕ್ಷಿಣ ಆಫ್ರಿಕಾದ ಕೆಲವೊಂದು ಬುಡಕಟ್ಟು ಜನರ ಬದುಕು ಆಚರಣೆಗಳನ್ನು ನೋಡಿ ಸಂತಸಗೊಂಡಿರುತ್ತೇನೆ. ಈ ಆಯ್ದುಕೊಂಡಿರುವ ಭಾವಚಿತ್ರಗಳಲ್ಲಿರುವ ಬುಡಕಟ್ಟು ಜನರ ವಾಸದ ಮನೆ, ಸಂಗೀತವಾದ್ಯಗಳು, ಬೇಟೆಯಾಡುವ ಸಾಧನಗಳು, ಗೃಹ ಉಪಯೋಗಿ ವಸ್ತುಗಳು, ವೈಜ್ಞಾನಿಕ ನೆಲೆಯುಳ್ಳವುಗಳಾಗಿದ್ದು ತುಂಬಾನೇ ಅನುಕೂಲವು ಅನ್ನಿಸುತ್ತದೆ. ಆ ಕಾರಣಕ್ಕಾಗಿ ಈ ಭಾವಚಿತ್ರಗಳನ್ನು ಸಂಗ್ರಹಿಸಿ ಅವುಗಳಲ್ಲಿರುವ ಸೊಬಗನ್ನು ಹೆಚ್ಚು ಹೇಳಲಾಗದೆ ಭಾವಚಿತ್ರಗಳ ಮೂಲಕ ಹೇಳಿರುತ್ತೇನೆ.



← ಆದಿವಾಸಿ ಮತ್ತು ಮನೆ

ಆದಿವಾಸಿಯ ಮರದ ಶಿಲ್ಪ →





← ಆದಿವಾಸಿ ಹಾಡಿಯ ದ್ವಾರದ ಬಾಗಿಲು

ಆದಿವಾಸಿಯ ವಿಶೇಷ
ರೀತಿಯ ಮನೆ →





← ಆದಿವಾಸಿ ಪುಟ್ಟ ಮಂಟಪ ಶಿಲ್ಪಗಳು

ಆದಿವಾಸಿಗಳ ಕಾಲದ ಮನುಷ್ಯ ಮೂರ್ತಿ ಶಿಲ್ಪ →





← ಆದಿವಾಸಿ ಜನರು ಮರಕ್ಕೆ ಪೂಜೆ
ಮಾಡುತ್ತಿರುವ ದೃಷ್ಯ


ಆದಿವಾಸಿ ಕಲ್ಲು ಜೋಡಣೆ
ಮತ್ತು ಪೂಜೆ ಚಿತ್ರ →





← ಆದಿವಾಸಿ ಕಲ್ಲಿನ ಆರಾಧಾನ ಚಿತ್ರ

ಆದಿವಾಸಿಗಳ ಮುಖವಾಡ →





← ಆದಿವಾಸಿಗಳ ಗಣೇಶ ದೇವರ ಮೂರ್ತಿ

ಆದಿವಾಸಿಗಳ ದೋಣಿ ಶಿಲ್ಪ →





← ಆದಿವಾಸಿಗಳ ಬಿಲ್ಲು ಪ್ರಯೋಗ ಚಿತ್ರ

ಆದಿವಾಸಿ ಮತ್ತು ದಮ್ಮಿ →





← ಆದಿವಾಸಿಗಳ ತಬಲ ರಚನೆ ಚಿತ್ರ

ಆದಿವಾಸಿ ಮಡಿಕೆ ತಯಾರಿಕೆ ಚಿತ್ರ →





← ಮಡಿಕೆ ರಚನೆ ಮಾಡುವ ಚಕ್ರ



ಆದಿವಾಸಿ ಮಡಿಕೆ ಮಾರಾಟ ಚಿತ್ರ →



← ಮಹಿಳೆ ಮತ್ತು ಛತ್ರಿ ಮಾದರಿ ಶಿಲ್ಪ ಚಿತ್ರ



ಆದಿವಾಸಿ ರಚನೆಯ ಬುದ್ದ ಶಿಲ್ಪ →



← ಮಣ್ಣಿನ ಮತ್ತು ಮರಗಳ
ಮಿಶ್ರಿತ ಗೋಡೆ ಶಿಲ್ಪ

ಮಣ್ಣಿನಿಂದ ರಚನೆಗೊಂಡ ಕಣಜ ಶಿಲ್ಪಗಳು →





← ಸಿದ್ದಿ ಜನಗಳ ಹಬ್ಬಿ ದೇವರ ಮೂರ್ತಿ ಶಿಲ್ಪ

ಜನಪದ ಮನೆ ಬಳಕೆಯ ವಸ್ತುಗಳು →



ಬುಡಕಟ್ಟು ಜನಪದ ಸಂಗೀತ ವಾದ್ಯಗಳು ಮತ್ತು ಮನೆ ನಿರ್ಮಾಣ ಕುರಿತಾದ ವಿಷಯ

ಹಳ್ಳೀಮನೆ:

1603ರ ಕಾಲದ ಮೊಘಲ್ ಶೈಲಿಯ (ಆಗ್ರ) ಒಂದು ವರ್ಣ ಚಿತ್ರದಲ್ಲಿ 'ಕವಿಯ ಮನೆ'ಯನ್ನು ಚಿತ್ರಿಸಿದ್ದು, ಅದರಲ್ಲಿನ ಕೆಲ ವಿವರಗಳು ಗಮನಿಸುವಂತಿವೆ. ಅಂದೊಂದು ಮಣ್ಣೀನ ಮನೆ; ಗೋಡೆಯೂ ಮಣ್ಣಿನದೇ, ಮನೆ ಮುಂದೆ ಚಿಕ್ಕ ಜಗಲಿ, ಮೇಲೆ ವಪ್ಪಾರ, ಅದಕ್ಕೆ ಸಣ್ಣ ಕಂಬ; ಪಕ್ಕದಲ್ಲೊಂದು ಅಡ್ಡಗೋಡೆ, ಮನೆ ಮುಂಬಾಗಿಲ ಪಕ್ಕ ಸಣ್ಣಗೂಡುಗಳು, ಒಂದು ಗೂಟ ಅದಕ್ಕೆ ನೇತು ಹಾಕಿದ ಬಟ್ಟೆ...... ಇಷ್ಟಲ್ಲದೆ, ಅಂಗಳದಲ್ಲಿ ಕೋಳಿ ಮತ್ತು ಮರಿಗಳು, ಒಂದು ನಾಯಿ, ಮಾಳಿಗೆ ಮೇಲೆ ಪಾರಿವಾಳಗಳು, ಪಕ್ಕದಲ್ಲಿನ ಬಾವಿಯಿಂದ ನೀರು ತರುತ್ತಿರುವ ಮಹಿಳೆ...... ಇದೊಂದು ಯಥಾವತ್ ನಾನ್ನೂರು ವರ್ಷಗಳ ಹಿಂದಿನ ಜನಪದ ಗೃಹವೇ ಆಗಿದೆ. ಹೀಗಾಗಿ, ಈ ಚಿತ್ರವನ್ನು ನೋಡುತ್ತಿದ್ದರೆ, ನಮ್ಮ ನಾಡಿನ ಈಗಿನ ಕುಗ್ರಾಮವೊಂದರ ಜನಪದ ನಿವಾಸದ ಎದಿರೇ ನಿಂತಂತೆ ಭಾಸವಾಗುತ್ತದೆ.

ಕೋಟೆ – ಕಟ್ಟಡ:

ಮೊಘಲ್ ಶೈಲಿಯ ಒಂದು ವರ್ಣ ಚಿತ್ರ ಪೂರ್ಣವಾಗಿ ಕೋಟೆ ಕಟ್ಟಡ ನಿರ್ಮಾಣ ಪ್ರಸಂಗವನ್ನೇ ವಸ್ತುವಾಗಿ ಹೊಂದಿದೆ. ಕೋಟೆ ಗೋಡೆ ಸಮೀಪಕ್ಕೆ ದಪ್ಪ ದಪ್ಪ ಕಲ್ಲುಗಳನ್ನು ಸಾಗಿಸಲು ಸಣ್ಣ ದೋಣಿಗಳನ್ನು ಬಳಸಿದ್ದಾರೆ. ಮಣ್ಣು ಇತ್ಯಾದಿಯನ್ನು ಹಸುಬೆಚೀಲದಂತಹ ಚೀಲದಲ್ಲಿ ತುಂಬಿ, ಎತ್ತುಗಳ ಮೇಲೆ ಹೇರುಹಾಕಿಕೊಂಡು ತಂದು ಸುರಿಯುತ್ತಿದ್ದಾರೆ. ನಾಲ್ವರು ಗಟ್ಟಿಗ ಗಂಡಸರು (ವಡ್ಡರು?) ದೊಡ್ಡ 'ತೊಲೆ'ಯೊಂದನ್ನು ಅದರ ಎರಡು ತುದಿಗಳನ್ನು ಹಗ್ಗಗಳಿಗೆ ಕಟ್ಟಿ, ಬೊಂಬುಗಳ ಸಹಾಯದಿಂದ ಹೆಗಲುಗಳಲ್ಲಿ ಹೊತ್ತು ಕೋಟೆ ಗೋಡೆ ಮೇಲಕ್ಕೆ ಸಾಗಿಸುತ್ತಿದ್ದಾರೆ. ಅದಕ್ಕಾಗಿ ಕಟ್ಟಿರುವ ಇಳಿಜಾರು ಅಟ್ಟಣಿಗೆಯಲ್ಲಿ ಕಾಲು ಜಾರದಿರಲೆಂದು ಕೈಲಿ ಊರುಗೋಲು ಹಿಡಿದಿದ್ದಾರೆ. ಆ ಕಾಲದಲ್ಲಿ ತೊಲೆ, ಕಂಭ ಮೊದಲಾದವನ್ನು ಗೋಡೆ ಮೇಲಕ್ಕೆ ಸಾಗಿಸುತ್ತಿದ್ದ ಒಂದು ತಂತ್ರವನ್ನು ಇದು ದಾಖಲಿಸುತ್ತದೆ. ಈಗಲೂ ಗ್ರಾಮಾಂತರ ಭಾಗದಲ್ಲಿ ಮರದ ದಿಮ್ಮಿ ಮೊದಲಾದವನ್ನು ಸ್ವಲ್ಪ ದೂರಕ್ಕೆ ಸಾಗಿಸುವಾಗ ಇದೇ ಕ್ರಮ ಚಾಲ್ತಿಯಲ್ಲಿದೆ. ಇದಲ್ಲದೆ ಚಿತ್ರದಲ್ಲಿ ನಿರೂಪಿತವಾಗಿರುವ ಉಳಿ, ಚಮ್ಮಟಿಗೆ ಬಳಸಿ ಕಲ್ಲು ಸೀಳುತ್ತಿರುವ ಕೆಲಸಗಾರರು, ಗೋಡೆ ನಿರ್ಮಾಣ ಮಾಡುತ್ತಿರುವವರು, ಕೂಲಿಯವರು ಮೊದಲಾದವುಗಳ ಬಗೆಗೆ ಲೆಕ್ಕ ಬರೆದುಕೊಳ್ಳುತ್ತಿರುವ ಅಧಿಕಾರಿ ಮತ್ತಿತರ ಅಂಶಗಳ ಬಗೆಗೂ ಈ ಚಿತ್ರ ಬೆಳಕು ಚೆಲ್ಲುತ್ತದೆ.

ಕುಂಬಾರಿಕೆ:

ಮಡಕೆಯು ದಿನನಿತ್ಯದ ಬಳಕೆಯ ಜೀವನಾವಶ್ಯಕ ವಸ್ತುಗಳಲ್ಲಿ ಒಂದು ಮನುಷ್ಯ ಮಡಕೆ – ಕುಡಿಗೆ ಮಾಡುವುದನ್ನು ಯಾವಾಗ ಕಂಡಕೊಂಡ ಎಂಬುದೊಂದು ಕುತೂಹಲದ ಪ್ರಶ್ನೆ. ಏಕೆಂದರೆ ಅದೊಂದು ಜ್ಞಾನ, ಪ್ರೌಢ ತಂತ್ರಗಾರಿಕೆ, ಪ್ರಾಚ್ಯ ಸಂಶೋಧನೆಗಳನ್ನು ಆಧರಿಸಿ ಹೇಳಬಹುದಾದರೆ ಈವರೆಗೆ ದೊರೆತಿರುವ ಆಧಾರಗಳಿಂದ, ತಿಗರಿ ಮೇಲೆ ಮಣ್ಣು ಇಟ್ಟು ಮಡಕೆ ಮಾಡುವ ತಿಳಿವಳಿಕೆ ಇದ್ದದ್ದು ಮೊದಲು ಈಜಿಪ್ಟಿನಲ್ಲಿ, ನೈಲ್ ಕಣಿವೆಯ ಉತ್ಖನನದಲ್ಲಿ 13,000 ವರ್ಷಗಳ ಹಿಂದಿನ ಸುಟ್ಟ ಸೆರಾಮಿಕ್ ಪಾತ್ರೆಗಳು ದೊರೆತಿವೆ. ಕ್ರಿ.ಪೂ. 5 ಸಾವಿರದಿಂದ 3 ಸಾವಿರ ಕಾಲದಷ್ಟು ಹಿಂದಿನ ಕೆಲ ಮಣ್ಣಿನ ಪಾತ್ರೆ ಅವಶೇಷಗಳೂ ಈಜಿಪ್ಟಿನಲ್ಲಿ ದೂರೆತಿವೆ. ಭಾರದಲ್ಲಿ ಈ ತಿಗರಿ ಕುಂಬಾರಿಕೆ ಯಾವಾಗಿನಿಂದ ಪ್ರಾರಂಭವಾಯಿತು, ಯಾರಿಂದ ಆಯಿತು ಎಂಬುದು ತಿಳಿದುಬಂದಿಲ್ಲ. ಆದರೆ ಬಹುಶಃ ಇವರಿಗೆ ಈ ಕಲೆ ಆಸ್ಸಿರಿಯನ್ ಮತ್ತು ಛಲ್ದುವನ್‌ರಿಂದ ಪ್ರಾಪ್ತವಾಗಿರಬಹುದು. ಆದರೂ ಇತಿಹಾಸ ಪೂರ್ವ ಕಾಲದಲ್ಲಿ ಭಾರತೀಯರು ತಮ್ಮದೇ ವಿಧಾನದಿಂದ ಮಡಿಕೆ ಮಾಡುವ ಕ್ರಮ ಅರಿತಿದ್ದರು. ಕ್ರಿ.ಪೂ. 3 ನೇ ಸಹಸ್ರ ಮಾನದಷ್ಟು ಹಿಂದೆಯೇ ಭಾರತದ ಈ ಕುಂಬಾರಿಕೆ ಕಲೆ ಪ್ರೌಢಿಮೆ ಗಳಿಸಿತ್ತು (Krishnamurthy 1982:109) ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಗಾಡಿಗಳು:

ಮಾನವನ ರಾಕೆಟ್‌ಗಳು ಸೌರಮಂಡಲಕ್ಕೆ ಹಾರಿಹೋಗುವಷ್ಟು ವೈಜ್ಞಾನಿಕ ಅಭಿವೃದ್ಧಿ ಒಂದೆಡೆ ಆಗಿರುವ ಸಂದರ್ಭದಲ್ಲೇ ಎತ್ತಿನ ಗಾಡಿಗಳನ್ನು ಪೂರ್ಣ ಕೈ ಬಿಡಲಾಗದ ಪರಿಸ್ಥಿತಿಯಲ್ಲೂ ನಮ್ಮ ರೈತರಿದ್ದಾರೆ. ನಮ್ಮ ಕೃಷಿ ಜೀವನದ ಅನಿವಾರ್ಯ ಭಾಗವಾಗಿರುವ ಈ ಗಾಡಿಗಳೂ ಕಾಲಕ್ಕೆ ತಕ್ಕಂತೆ ಬದಲಾವಣೆ ಬಯಸಿರುವುದಂತೂ ನಿಜ. ಈ ನಡುವೆ ಕಬ್ಬಿಣದ ಪಟ್ಟಿಗಳಿದ್ದ ಚಕ್ರಗಳ ಗಾಡಿಗಳು ಮರೆಯಾಗಿ ಈಗ ಟೈರು ಚಕ್ರಗಳ ಗಾಡಿಗಳು ಹೆಚ್ಚಾಗಿವೆ. ಎತ್ತುಗಳಿಗೆ ಹೆಚ್ಚು 'ಹೊರೆ'ಯಾಗದಂತಿರಲು ಈ ಗಾಡಿಗಳಿಗೆ ಬೇರಿಂಗ್ ಮತ್ತು ಬ್ರೇಕುಗಳನ್ನು ಅಳವಡಿಸುವ ಪ್ರಯೋಗಗಳೂ ನಡೆಯುತ್ತಿವೆ.

ಹಾಗಿದ್ದರೆ, ಇಂತಹ ಗಾಡಿಗಳು ಕಾಲಕಾಲಕ್ಕೆ ಹೊಂದಿರಬಹುದಾದ ರೂಪ ಬದಲಾವಣೆಗಳೇನು? ವಾಸ್ತವವಾಗಿ ಇವುಗಳ ಮೂಲ ಸ್ವರೂಪ ಹೇಗಿದ್ದಿರಬಹುದು? ಗಾಡಿಯ ಕಲ್ಪನೆ ಎಷ್ಟು ಪ್ರಾಚೀನದ್ದಾಗಿರಬಹುದು? ಆಗ ಅವುಗಳನ್ನು ಎಳೆಯಲು ಕಟ್ಟುತ್ತಿದ್ದ ಪ್ರಾಣಿಗಳಾವುವು? ಅವುಗಳನ್ನು ಗಾಡಿಗೆ ಹೇಗೆ ಬಳಸುತ್ತಿದ್ದರು?........ ಇಂತಹ ಹಲವು ಪ್ರಶ್ನೆಗಳು ಸಹಜವಾಗಿ ನಮ್ಮ ಎದಿರು ನಿಲ್ಲುತ್ತವೆ. ಇದಕ್ಕೆ ಆದಷ್ಟೂ ತೃಪ್ತಿಕರವಾದ ಉತ್ತರಗಳನ್ನು ಕಂಡುಕೊಳ್ಳಬೇಕಾದರೆ ನಾವು ಪ್ರಾಚ್ಯ ಜಾನಪದ ಅಧ್ಯಯನ'ಕ್ಕೆ ಹೋಗಬೇಕಾಗುತ್ತದೆ.

ಗಾಡಿಯ ಕಲ್ಪನೆ ಎಷ್ಟು ಪ್ರಾಚೀನದ್ದೆಂದು ತಿಳಿವ ಮೊದಲು ಗಾಡಿಗೆ ಬಹು ಮುಖ್ಯ ಆಧಾರವಾದ ಚಕ್ರ/ಗಾಲಿಯ ಕಲ್ಪನೆ ಎಷ್ಟು ಪ್ರಾಚೀನ ಎಂಬುದನ್ನು ಮೊದಲು ಅರಿಯಬೇಕು.

ಪುರಾತತ್ವ ಶಾಸ್ತ್ರಜ್ಞರ ಪ್ರಕಾರ 'ಚಕ್ರದ ರಥಗಳು ಮೊದಲಿಗೆ ಕಮ್ಮುಬಂದದ್ದು ಮಧ್ಯ ಏಷ್ಯಭಾಗದಲ್ಲಿ ಇವು ಪಶ್ಚಿಮ ಯುರೋಪ್ ಹಾಗೂ ಪೂರ್ವ ಚೀನಾದಲ್ಲಿ ಕ್ರಿ.ಪೂ 1500 ರಿಂದ 1300ರ ಅವಧಿಯಲ್ಲಿ ಕ್ರಾಂತಿಕಾರಕ ಅವಸ್ಥಾಂತರಗಳನ್ನು ಹೊಂದಿದವು. ಕ್ರಿ.ಪೂ. 2000ನೇ ಇಸವಿ ಹೊತ್ತಿಗೆ ಚಕ್ರದ ರೂಪದಲ್ಲಿ ಹಲವು ಬದಲಾವಣೆಗಳಾಗಿದ್ದವು. ಚಕ್ರದ ಒಳಗೆ 'ಆಧಾರ ಕಡ್ಡಿ'ಗಳು (ಅರೆಕಾಲು) ಆ ಹೊತ್ತಿಗೆ ಸೇರಿದ್ದವು.

ಕ್ರಿ.ಪೂ. 3250ರಷ್ಟು ಹಳೆಯ ಮಣ್ಣಿನ ಗಾಲಿ ಮೆಸಪಟೋಮಿಯಾದಲ್ಲಿ ಮೊದಲು ಕಣ್ಣಿಗೆ ಬಿದ್ದಿತೆಂದು ಹೇಳಲಾಗಿದೆ. ಆ 'ಚಕ್ರ'ದ ಪರಿಧಿಯ ಸುತ್ತ ಪುಟ್ಟ ಪುಟ್ಟ ರಂಧ್ರಗಳಿರುವುದನ್ನು ಗುರುತಿಸಲಾಗಿದೆ. ಮೊದಲ ಚಕ್ರವುಳ್ಳ ವಾಹನ ಕಣ್ಣಿಗೆ ಬಿದ್ದದ್ದು ನಾಲ್ಕು ಚಕ್ರದ ಗಾಡಿಯ ರೂಪದಲ್ಲೇ – ಎಂಬ ವಾದವೂ ಇದೆ ಎನ್ನಲಾಗಿದೆ. ಇದು ದೊರೆತಿರುವುದೂ ಮೆಸಪಟೋಮಿಯಾ ಭಾಗದಲ್ಲೇ ಎಂದೂ ಹೇಳಲಾಗಿದೆ (ವಿವರಕ್ಕೆ : ಕೆ.ಪಿ.ಎಂ. 27–6–99).

ಜಗತ್ತಿನ ಅತಿ ಪುರಾತನ ನಾಗರೀಕತೆಗಳಲ್ಲಿ ಒಂದಾದ ಮಹೆಂಜೋದಾರೋದ ಉತ್ಖನನದಲ್ಲಿ ಒಂದು ಮಣ್ಣಿನ ಗಾಡಿಯ ಆಟಿಕೆ ಸಿಕ್ಕಿದೆ. ಇದು ಇಂದಿನ ಸಿಂಧ್ ಪ್ರದೇಶದ ಎತ್ತಿನ ಗಾಡಿಗಳನ್ನು ಹೋಲುವಂತಿರುವುದು ವಿಶೇಷ ಗಮನಾರ್ಹವಾಗಿದೆ. "ಈ ಆಟದ ಗಾಡಿ" ಕೇವಲ ಮಕ್ಕಳ ಆಟಿಕೆಯಾಗಿರದೆ ಅಂದು ಬಲಕೆಯಲ್ಲಿದ್ದ ದ್ವಿಚಕ್ರವಾಹನದ "ಮಿನಿ ಆಕೃತಿ" ಎಂಬುದೂ ಅಗತ್ಯ ಗಮನಿಸಬೇಕಾಗಿದೆ. ಈ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಿರುವ "ಸರ್ ಜಾನ್ ಮಾರ್ಷಲ್" ಅವರು ಈ ಮಣ್ಣಿನ ಗಾಡಿ ಇದುವರೆಗೆ ದೊರೆತಿರುವ ಅತ್ಯಂತ ಪ್ರಾಚೀನ (ಕ್ರಿ.ಪೂ. 3200) ಗಾಲಿವಾಹನದ ಪ್ರತಿಕೃತಿ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಅವರು ಮುಂದುವರೆದು "ದಪ್ಪ ಭುಜದ ಹೋರಿಗಳ ಚಿತ್ರಗಳುಳ್ಳ ಅವಶೇಷಗಳು ಅಪಾರ ಪ್ರಮಾಣದಲ್ಲಿ ದೊರೆತಿರುವುದನ್ನು ಪ್ರಸ್ತಾಪಿಸುತ್ತಾ ಆಗ ಈ ಬಗೆಯ ಹೋರಿಗಳು ಹೆಚ್ಚು ಜನಪ್ರಿಯವಾಗಿಯೂ ಅಪಾರ ಸಂಖ್ಯೆಯಲ್ಲೂ ಇದ್ದಿರಬೇಕೆಂದಿದ್ದಾರೆ".

'ಹರಪ್ಪ ನಿವೇಶನದಲ್ಲಿ...... ತಾಮ್ರದಿಂದ ಮಾಡಿರುವ ಆಟದ ಗಾಡಿಯೂ ಸಿಕ್ಕಿದ್ದು. ಅದು 'ಇಂದಿನ ಎತ್ತಿನ ಗಾಡಿಯನ್ನು ಬಹುಮಟ್ಟಿಗೆ ಹೋಲುತ್ತದೆ. ಎರಡು ಗಾಲಿಗಳ ಈ ಚಿಕ್ಕ ಆಟಾದ ಗಾಡಿಗೆ ಕಟ್ಟಿರಬಹುದಾದ 'ಪ್ರಾಣಿಗಳು' ಕಳೆದುಹೋಗಿದ್ದು, ಅವು ಕುದುರೆಗಳೋ, ಎತ್ತುಗಳೋ ಎಂಬ ಸಂದೇಹ ಬಂದರೂ ಅದು ಇಂದಿನ ಎತ್ತಿನ ಗಾಡಿಯನ್ನು ಹೋಲುತ್ತದೆ' ಎನ್ನಲಾಗಿದೆ.

ಮಹೆಂಜೊದಾರೋದ ಮಣ್ಣಿನ ಆಟದ ಗಾಡಿಗಳ ಮಾದರಿಯಲ್ಲಿನ ಗಾಲಿಗಳು ಅಚ್ಚಿನ ಸುತ್ತ ಸಾಕಷ್ಟು ದಪ್ಪವಿದ್ದು ಅಂಚಿನ ಬಳಿ ತೆಳ್ಳಗಿರುವುದು ಕಂಡುಬರುತ್ತದೆ. ಅರೆಗಳಿಲ್ಲದ ಈ ಬಗೆಯ ಅಖಂಡವಾದ ಗಾಲಿಗಳ ಪುಟ್ಟ ಗಾಡಿಗಳು "ಒಡ್ಡರ ಬಂಡಿ" ಎಂಬ ಹೆಸರಲ್ಲಿ ಈಗಲೂ ನಮ್ಮಲ್ಲಿ ಕೆಲವೆಡೆ

ಬಲಕೆಯಲ್ಲಿರುವುದನ್ನು ಇಲ್ಲಿ ಅಗತ್ಯ ಸ್ಮರಿಸಬೇಕು (ಉಳುಮೆಯಾದ ತೆಂಗಿನ ತೋಟಗಳಲ್ಲಿ ದೊಡ್ಡ ಗಾಡಿಗಳು ಓಡಾಡುವುದು ಪ್ರಯಾಸವೆನಿಸುವುದರಿಂದ ಇಂತಹ ಅತಿ ಚಿಕ್ಕ ಬಂಡಿಗಳಲ್ಲಿ ಕೇವಲ ಎರಡು – ಮೂರು ಮಂಕರಿಯಷ್ಟು ಗೊಬ್ಬರ ಅಥವಾ ಗೋಡು ಮಣ್ಣನ್ನು ತುಂಬಿಕೊಂಡು ಹೋಗಿ ತೆಂಗಿನ ಮರಗಳ ಬುಡಕ್ಕೆ ಸುರಿಯುತ್ತಿದ್ದ ದೃಶ್ಯವನ್ನು ನಾನು 1982ರ ಸುಮಾರಿನಲ್ಲಿ ಅರಸೀಕೆರೆ ಹತ್ತಿರದ ಬೆಳಗುಂಬದಲ್ಲಿ ಕಂಡಿದ್ದೇನೆ).

ತೀರಾ ಪ್ರಾಚೀನ ಕಾಲದ ಗಾಡಿಗಳ ಗಾಲಿಗಳು 'ಅರೆಕಾಲು'ಗಳಿಲ್ಲದೆ ಅಖಂಡವಾಗಿರುತ್ತಿದ್ದವು ಎಂಬುದನ್ನು ಕೇವಲ ಒಡ್ಡರ ಬಂಡಿಗಳಷ್ಟೇ ಅಲ್ಲದೆ ಈಗಲೂ ನಮ್ಮಲ್ಲಿ ಉಳಿದಿರುವ ಕೆಲವು ದೇವಸ್ಥಾನಗಳ ರಥಗಳ ಚಕ್ರಗಳೂ ಸಾಬೀತುಪಡಿಸುತ್ತವೆ. ಹಾಗೆಯೇ ಚಾಮರಾಜನಗರ ಜಿಲ್ಲೆ ಕಸ್ತೂರು ಮೊದಲಾದ ಗ್ರಾಮಗಳಲ್ಲಿ ವಾರ್ಷಿಕವಾಗಿ ನಡೆಯುವ "ಬಂಡಿಹಬ್ಬ"ಕ್ಕಾಗಿಯೇ ಮಾಡಿಸಿರುವ ಮರದ ಗಾಡಿಗಳಲ್ಲಿಯೂ ಚಕ್ರಗಳು ಅರೆಕಾಲು ರಹಿತವಾಗಿರುವುದಲ್ಲೆ ಸ್ವಲ್ಪಮಟ್ಟಿಗೆ ಮೊಹೆಂಜೊದಾರೋದ ಆಟಿಕೆ ಬಂಡಿಯ ಚಕ್ರದ ರೂಪವನ್ನೇ ಹೋಲುತ್ತದೆ ಎಂಬುದೂ ಗಮನಾರ್ಹ. ಅವುಗಳ ಆಧಾರದಿಂದಲೂ ಗಾಲಿಗಳು ಅಖಂಡವಾಗಿದ್ದರೂ "ಅಚ್ಚಿನಿಂದ ಅಂಚಿನವರೆಗೂ ಒಂದೇ ದಪ್ಪ ಇದ್ದಿರಬೇಕೆಂದು" ನಂಬಬಹುದಾಗಿದೆ. ಆದರೆ, ಗಾಲಿಗಳಿಗೆ 'ಅರೆ'ಗಳನ್ನು ಸೇರಿಸುವ ಬೆಳವಣಿಗೆ ಹರಪ್ಪ ಮಹೆಂಜೋದಾರೋ ನಾಗರೀಕತೆಯ ಆನಂತರದ ಋಗ್ವೇದ ಕಾಲಘಟ್ಟದ ಹೊತ್ತಿಗೇ ಆಗಿತ್ತು ಎಂಬುದಕ್ಕೆ ನಿದರ್ಶನಗಳಿವೆ. ಅಲ್ಲದೆ, ಆ ಕಾಲದ ಜೋಡೆತ್ತಿನ ಗಾಡಿಗಳ ಒಟ್ಟು ಸ್ವರೂಪವನ್ನು ದಾಖಲಿಸುವ ಋಕ್‌ಗಳೂ ಋಗ್ವೇದದಲ್ಲಿ ಬರುತ್ತವೆ. ಪ್ರಯಾಣಕ್ಕೆ ಮೊದಲು ಶುಭ್ರಯಾತ್ರೆಯನ್ನು ಆಶಿಸಿ ಮಾಡಿದ ಈ ಪ್ರಾರ್ಥನೆಯಲ್ಲಿನ ವಿವರಗಳನ್ನು ಗಮನಿಸಿ. "ಗಾಡಿಯ ಎತ್ತುಗಳು ಸ್ಥಿರವಾಗಿರಲಿ (ಅಂದರೆ, ಈಗಿನ ಕೆಲ ಎತ್ತುಗಳು ಮಾಡುವಂತೆ ಮಾರ್ಗಮಧ್ಯೆ ಕಣ್ಣಿಹಾಕಿಕೊಂಡು, ಹೆಗಲ ಮೇಲಿಂದ ನೊಗ ಎಸೆದು, ಗಾಡಿ ಮುಗ್ಗರಿಸುವಂತೆ ಆಗದಿರಲಿ), ಗಾಡಿಯ ಅಚ್ಚು ದೃಢವಾಗಿರಲಿ, ಗಾಡಿಯ ಮಧ್ಯಭಾಗದ ಮರದ ದಿಂಡು ತೊಲೆ ನಷ್ಟವಾಗದಿರಲಿ, ನೊಗವು ಸೀಳದಿರಲಿ, ಕೀಲುಗಳು ಮುರಿದುಬೀಳದಂತೆ ಇಂದ್ರನು ಹಿಡಿದಿರಲಿ ಯಾರಿಗೂ ಹಿಂಸೆ ಉಂಟು ಮಾಡದೆ ಚಕ್ರಗಳುಳ್ಳ ಎಲೈ ರಥವೆ ಹೊರಡುವುದಕ್ಕೆ ಸಿದ್ಧವಾಗು, "ಖದಿರ ಮರದಿಂದ ಮಾಡಿದ ಅಣಿಗಳಿಂದ ಚಕ್ರಗಳು ಕಳಚಿ ಹೋಗದಿರಲಿ, ಗಾಡಿಯ ವೇಗಕ್ಕೆ ಅದರ ಶಿಂಶುಪಾಮರದ ಹಾಸು ಹಲಗೆಗಳು ಮುರಿಯದೆ ಇರಲಿ, ನಮ್ಮಿಂದ ದೃಢವಾಗಿ ಸ್ಥಾಪಿತವಾಗಿರುವ ಅಚ್ಚಿನ ಮರವೂ ದೃಢವಾಗಿರಲಿ....." (ಶ್ರೀಧರಮೂರ್ತಿ, 29–9–1974).

ವೇದಗಲ ಕಾಲದ ಈ ಬಂದಿಗೆ ಎತ್ತುಗಳಿವೆ; ಅಚ್ಚು, ಮೂಕಿನ ಮರ, ನೊಗ, ಕೀಲು/ಕಡಾಣಿ, ಹಾಸು ಹಲಗೆ..... ಎಲ್ಲವೂ ಇವೆ! ಈವತ್ತಿನ ಗಾಡಿಗಳಿಗೂ ಇವು ಇವೆ. ಬಹುಶಃ ಶಿಂಶುಪಾಮರಕ್ಕೆ ಬದಲು ಈಗ ಜಾಲಿ, ಹಲಸು..... ಇಂತಹ ಮರದ ಹಲಗೆಗಳು ಬಳಕೆಯಾಗಬಹುದು ಅಷ್ಟೇ ಅಲ್ಲವೆ.

ಟಗರಿನ ಗಾಡಿ:

ಕೆಲವು ಪ್ರಾಚ್ಯ ದಾಖಲೆಗಳನ್ನು ನೋಡಿದರೆ ಗಾಡಿಗಳಿಗೆ ಎತ್ತುಗಳದೆ ಟಗರುಗಳನ್ನೂ ಕಟ್ಟುತ್ತಿದ್ದರೇ? ಎಂಬ ಸಂಶಯ ಬರುತ್ತದೆ. ಗಾಂಧಾರದ (7–4ನೇ ಶತಕ) ಒಂದು ಉಬ್ಬು ಶಿಲ್ಪದಲ್ಲಿ ಸಿದ್ಧಾರ್ಥನು ಸಾಲೆಗೆ ಹೋಗುತ್ತಿರುವ ಸನ್ನಿವೇಶ ಚಿತ್ರಿತವಾಗಿದೆ. ಆತ ಕುಳಿತಿರುವ ರಥಕ್ಕೆ ಎರಡು 'ಕೊಂಬುತಿರುಗಿದ' (ದಪ್ಪ ಪುಷ್ಟವಾದ) ಟಗರುಗಳನ್ನು ಕಟ್ಟಿ ಹೆಗಲ ಮೇಲೆ ನೊಗ ಇಟ್ಟಿದೆ. ನೊಗದ ಅಂಚುಗಳಲ್ಲಿ 'ಒಳ್ಳಂಗುಟ್ಟ'ಗಳನ್ನೂ ಸಿಗಿಸಿದೆ. ಮೂಕಿನ ಮರವೂ ಸ್ಪಷ್ಟವಾಗಿದೆ. ಟಗರುಗಳನ್ನು ಹಿಡಿಯಲು ಅವುಗಳ ಮುಖಕ್ಕೆ 'ಮಕೋಡ' ಹಗ್ಗಗಳನ್ನು ಹಾಕಿದೆ. ಈ 'ರಥ' ವಡ್ಡರ ಬಂಡಿಯನ್ನು ಹೋಲುತ್ತಿದ್ದು ಅದರ ಚಕ್ರಕ್ಕೆ 16 'ಆರೆಕಾಲ್'ಗಳಿವೆ. ಮಸಿ, ಕುಡಿಕೆ, ಬರಹದ ಹಲಗೆ ಹಿಡಿದವರು ಗಾಡಿಯ ಹಿಂಬದಿ ನಡೆದಿದ್ದಾರೆ. ಈಗಿನ ರಥಗಳ ಮೂಲ ರೂಪ' ಎತ್ತಿನ ಗಾಡಿಯಂತಹ 'ಕುರ್ಜುಗಳೇ ಇದ್ದಿರಬಹುದೇ? ಎಂಬುದಕ್ಕೂ ಈಗಲೂ ಕೆಲ ಹಳ್ಳಿಗಳ ಜಾತ್ರೆಗಳಲ್ಲಿ ಎತ್ತಿನ ಗಾಡಿಗಳನ್ನೇ ರಥದಂತೆ ಅಲಂಕರಿಸಿ, ದೇವರು ಇಟ್ಟು ಮೆರವಣಿಗೆ ಮಾಡುವುದನ್ನು ಗಮನಿಸಬಹುದು. ಇವುಗಳನ್ನು "ಕುರ್ಜು"ಗಳೆಂದು ಕರೆಯುತ್ತಾರೆ. ಅಕ್ಕಪಕ್ಕದ ಊರ ಒಕ್ಕಲುಗಳ ಹೀಗೆ "ಕುರ್ಜು" ಕಟ್ಟಿಕೊಂಡು ಜಾತ್ರೆಗೆ ಬರುತ್ತಾರೆ. (ನೆಲಮಂಗಲ ಸುತ್ತಿನ ಕೆಲ ಹಳ್ಳಿಗಳ ಜಾತ್ರೆಗಳಲ್ಲಿ ಈ ಅಭ್ಯಾಸ ಇದೆ).

ಜನಪದ ವಾದ್ಯಗಳು:

ಹರೆ, ತಮಟೆ, ಕೊಂಬು, ಭಾಂಕಿ ಮೊದಲಾದ ನಮ್ಮ ಜನಪದದ ವೈವಿಧ್ಯಮಯವಾದ ವಾದ್ಯಗಳು ಸಾವಿರಾರು ವರ್ಷಗಳ ಹಿಂದೆ ಯಾವ ಆಕಾರದಲ್ಲಿದ್ದವು? ಅವುಗಳನ್ನು ನುಡಿಸುತ್ತಿದ್ದ ಕ್ರಮ, ಸಂದರ್ಭ, ಸನ್ನಿವೇಶವೇನು?....... ಇಂತಹ ಹಲವಾರು ಕುತೂಹಲಕರ, 'ಕ್ಲಿಷ್ಟ' ಪ್ರಶ್ನೆಗಳಿಗೂ 'ಪ್ರಾಚ್ಯ ಜಾನಪದ ಅಧ್ಯಯನದಲ್ಲಿ ತೃಪ್ತಿಕರ ಉತ್ತರಗಳನ್ನು ಕಂಡುಕೊಳ್ಳಬಹುದಾಗಿದೆ.

ಪ್ರಾಚ್ಯ ಜಾನಪದ ಅಧ್ಯಯನ ಈಗ ಇರುವ ವಸ್ತು ವಿಷಯಗಳ ಬಗ್ಗೆ ತೌಲನಿಕ ಅಧ್ಯಯನಕ್ಕಷ್ಟೇ ನೆರವಾಗದೆ ಒಂದು ಕಾಲಕ್ಕೆ ಅಸ್ತಿತ್ವದಲ್ಲಿದ್ದು ಈಗ ಕಣ್ಮರೆಯಾಗಿರುವ ವಸ್ತು ವಿಚಾರಗಳ ಬಗೆಗೂ ಬೆಳಕು ಚೆಲ್ಲುತ್ತದೆ ಎಂಬುದು ವಿಶೇಷ ಉಲ್ಲೇಖನೀಯ ನಿದರ್ಶನಕ್ಕೆ.

ನಮ್ಮಲ್ಲಿ ಈಗಿನ ತಿಮ್ಮಪ್ಪನ ಭಕ್ತರಾದ 'ದಾಸಯ್ಯ'ಗಳು ಬಳಸುವ 'ಜಾಗಟೆ'ವಾದ್ಯ ಚಿರಪರಿಚಿತವಾಗಿದೆ. ದೇವಸ್ಥಾನ, ಕರಾವಳಿಯ ಯಕ್ಷಗಾನದಲ್ಲೂ ಇದರ ಬಳಕೆ ಇದೆ. ಇದೊಂದು ಚಿಕ್ಕ, ಕಂಚಿನ, ತಟ್ಟೆಯಂತಹ ಸಾಧನ. ಆದರೆ, ಇದು ಸು. 200–300 ವರ್ಷಗಳ ಹಿಂದೆಯೂ ಹೀಗೇ ಇತ್ತೇ? ಅಥವಾ ಇದರ ಪ್ರಭೇದವಾಗಿ ಇಂದು ರೂಢಿಯಲ್ಲಿರದಂತಹ ಬೇರೆಯ ರೂಪದ್ದೂ ಇದ್ದಿತೇ? ಇದಕ್ಕೆ ಉತ್ತರ ಸುಲಭವಲ್ಲ. ಆದರೆ ಈಚೆಗೆ ಗಮನಿಸಿದ ಕೆಲ ಮಾದರಿಗಳು ಈ ಬಗೆಗೆ ಹೆಚ್ಚಿನ ಶೋಧಕ್ಕೆ ಒತ್ತಾಯಿಸುತ್ತಿವೆ. ಶೃಂಗೇರಿಯ

ವಿದ್ಯಾಶಂಕರ ದೇವಾಲಯದ ಗೋಡೆಯ ಒಂದು ಪಕ್ಕದ ಅಡಿಪಟ್ಟಿಕೆ ಮೇಲೆ ಕೆತ್ತಿರುವ ಎರಡು ಉಬ್ಬುಶಿಲ್ಪಗಳಲ್ಲಿನ ವಿವರಗಳು ಹೀಗಿವೆ.

1) ಇದೊಂದು ದೊಡ್ಡ ಜಾಗಟೆ, ಇಬ್ಬರು ಅಡ್ಡೆಹಾಕಿ ಭುಜಗಳ ಮೇಲೆ ಹೊರುವಷ್ಟು ಅದು ದೊಡ್ಡದೂ, ಭಾರವಾದುದೂ ಆಗಿದೆ! ಅದನ್ನು ಕೋಲಿನಿಂದ ಬಾರಿಸುವುದಕ್ಕಾಗಿಯೇ ಇನ್ನೊಬ್ಬನಿದ್ದಾನೆ!!.

ನಮ್ಮಲ್ಲಿ ಅತಿ ಚಿಕ್ಕ 'ವಾದ್ಯ' ಇರುವಂತೆ ಅಸಾಮಾನ್ಯವೆನ್ನಬಹುದಾದ ದೊಡ್ಡ ಆಕಾರದ ವಾದ್ಯಗಳಿರುವುದೂ ಅಪರೂಪವೇನಲ್ಲ. ಜಗ್ಗಲಿಗೆ, ರಂಡೋಲು, ಡೊಳ್ಳಿನಂತಹ ವಾದ್ಯಗಳು ಈಗಲೂ ಬಳಕೆಯಲ್ಲಿವೆ. ಬಹುಶಃ ಆ ಶಿಲ್ಪದಲ್ಲಿ ಕೆತ್ತಿರುವ ಬೃಹತ್ ಜಾಗಟೆ ಒಂದು ಕಾಲಕ್ಕೆ ಇದ್ದು, ತದನಂತರ ರೂಢಿ ತಪ್ಪಿಹೋಗಿರಬಹುದೇ?

2) ಅದರ ಪಕ್ಕ ಇನ್ನೊಂದು ಉಬ್ಬು ಶಿಲ್ಪದಲ್ಲಿ ಡೋಲಿನಂತಹ ವಾದ್ಯವೊಂದನ್ನು ಇಬ್ಬರು ಅಡ್ಡೆಗೆ ನೇತುಹಾಕಿ, ಭುಜದ ಮೇಲೆ ಹೊತ್ತು ನಿಂತಿದ್ದಾರೆ. ಕೆಳಗೆ ಒಂದು ಪಕ್ಕ ಮಂಡಿಯೂರಿ ಕುಳಿತ ಇನ್ನೊಬ್ಬಾತ ಕೋಲಿನಿಂದ ಅದನ್ನು ಬಾರಿಸುತ್ತಿದ್ದಾನೆ!

ಇಷ್ಟೊಂದು ಭಾರೀ ಗಾತ್ರದ ಡೋಲು ಕೇವಲ ಉತ್ಪ್ರೇಕ್ಷಿತ ಚಿತ್ರಣವಿದ್ದಿರಬಹುದೇ? ಅನುಮಾನ ಬೇಕಿಲ್ಲ (ಈಗಿನ ಕೆಲ ಕಲಾವಿದರು ಹೆಗಲಿಗೆ ನೇತುಹಾಕಿದ ಡೊಳ್ಳಿನ ಮೇಲೆ ಇನ್ನೊಬ್ಬ ಕಲಾವಿದನನ್ನು ನಿಲ್ಲಿಸಿ ಕಸರತ್ತು ಮಾಡುವ ಸಾಹಸದ ಛಾಯಾಚಿತ್ರವನ್ನು ಇನ್ನು 50–100 ವರ್ಷಗಳ ನಂತರದವರು ನೋಡಿದಾಗಲೂ ಹೀಗೇ ಏನೋ ಕಲ್ಪನೆ – ಎಚಿದು ಅನುಮಾನ ಪಡಬಹುದಲ್ಲವೇ? ಡೊಳ್ಳಿಗಿಂತ ದೊಡ್ಡದಾದ ಈ ವಾದ್ಯ ಒಂದು ಕಾಲಕ್ಕೆ ಯುದ್ಧ ಬೇಟೆ ಮೊದಲಾದವುಗಳ ಮೆರವಣಿಗೆಯಲ್ಲಿ ಬಳಕೆಯಲ್ಲಿದ್ದಿರಬಹುದು. ಈಗ ಅಪರೂಪವಾಗುತ್ತಿರುವ 'ರಂಡೋಲಿ'ನಂತೆ ಅದೂ ಕ್ರಮೇಣ ಬಳಕೆ ತಪ್ಪಿರಬಹುದು. ಈ ಊಹೆಯನ್ನು ಸಮರ್ಥಿಸುವ ಒಂದು ಜೀವಂತ ಸಾಕ್ಷಿ ಈಚೆಗೆ ದೂರದರ್ಶನದಲ್ಲಿ ಕಂಡುಬಂದದ್ದು ಉಲ್ಲೇಖನೀಯ: 2001, ಏಪ್ರಿಲ್ ಮೊದಲ ವಾರದ ಒಂದು ದಿನ ಪ್ರಸಾರವಾದ ಹಿಂದಿ ಧಾರಾವಾಹಿಯೊಂದರಲ್ಲಿ (ಡಾ. ರಾಹಿ ಮಾಸೂಂ ರಾಜಾ ಅವರ 'ದಸ್ತೂರ್' ಹಿಂದು – ಮುಸ್ಲಿಮರ ಕತೆ) – ಮೊಹರಂ ಮೆರವಣಿಗೆ ಪ್ರಸಂಗ ಅದರಲ್ಲಿ ಇಬ್ಬರು ನಮ್ಮ ಡೊಳ್ಳಿನಂತಹ ದೊಡ್ಡ ವಾದ್ಯವನ್ನು ಅಡ್ಡೆಗೆ ನೇತು ಹಾಕಿ, ಹೆಗಲಲ್ಲಿ ಹೊತ್ತುಕೊಂಡಿದ್ದರು. ಅವರಲ್ಲೇ ಒಬ್ಬಾತ ಸಣ್ಣಕಡ್ಡಿಯಿಂದ ಆ ವಾದ್ಯದ ಒಂದು ಮುಖ ಬಡಿದು ನುಡಿಸುತ್ತಿದ್ದ. ಬಹುಶಃ ಉತ್ತರ ಭಾರತದ ಕೆಲ ಪ್ರಾಂತ್ಯಗಳಲ್ಲಿ ಇಂತಹ ವಾದ್ಯ ಈಗಲೂ ಬಳಕೆಯಲ್ಲಿರಬಹುದು. ನಮ್ಮ ಕುಗ್ರಾಮಗಳಲ್ಲಿಯೂ ನೆರೆ ರಾಜ್ಯಗಳಲ್ಲಿಯೂ ಇದ್ದಿರಬಹುದಾದ ಇಂತಹ ವಾದ್ಯಗಳೊಂದಿಗೆ ತೌಲನಿಕ ಅಧ್ಯಯನ ನಡೆಸಿ, ಮರೆಯಾದ ವಾದ್ಯಗಳ ಬಗೆಗೆ ಬೆಳಕು ಚೆಲ್ಲಬೇಕಾಗಿದೆ.

ಲಕ್ಷ್ಮಿ:

ಭಾರತೀಯ ದೇವಾನುದೇವತೆಗಳ ಬಗ್ಗೆ ಪ್ರಾಚೀನರ ಪರಿಕಲ್ಪನೆಗಳು ಹೇಗಿದ್ದವೆಂಬುದನ್ನು ಕೆಲ ಕಾವ್ಯ-ಪುರಾಣಗಳಲ್ಲಿ ಓದಿ ತಿಳಿಯಬಹುದಾದರೂ ಅವುಗಳ ಚಿತ್ರಣ ಕಣ್ಣಿಗೇ ಕಾಣುವ ರೂಪದಲ್ಲಿದ್ದರೆ ಗ್ರಹಿಕೆಗೆ ಹೆಚ್ಚು ಸ್ಪಷ್ಟ ಹಾಗೂ ಸುಲಭವಾಗುತ್ತದೆ. ಇಂತಹ ಅಭ್ಯಾಸಗಳಿಗೆ ಗುಪ್ತರ ಅನಣ್ಯಗಲ ಮೇಲಿನ ಲಕ್ಷ್ಮಿಯ ಚಿತ್ರವನ್ನು ಒಂದು ಉದಾಹರಣೆಯಾಗಿ ನೋಡಬಹುದು: ಒಂದನೇ ಚಂದ್ರಗುಪ್ತನ ಕಾಲದ ಒಂದು ನಾಣ್ಯದಲ್ಲಿ ದೊರೆಯು ತನ್ನ ರಾಣಿಯೊಂದಿಗೆ ಧೀಮಂತಿಕೆಯಿಂದ ನಿಂತಂತೆ ಚಿತ್ರಿಸಿದೆ. ಪ್ರಾಚೀನ ನಾಣ್ಯಗಳಲ್ಲಿ ರಾಜರ ಚಿತ್ರಣಕ್ಕೆ ಹೊರತಾಗಿ ರಾಣಿಯರ ಚಿತ್ರಗಳು ಇರುತ್ತಿರಲಿಲ್ಲ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಆತ ತನ್ನ ರಾಣಿಗೆ ನೀಡುತ್ತಿದ್ದ ಸ್ಥಾನ – ಗೌರವದ ದಾಖಲೆ ದೃಷ್ಟಿಯಿಂದ ಇಂತಹ ನಾಣ್ಯಗಳಿಗೆ ಹೆಚ್ಚಿನ ಮಹತ್ವ ಬರುತ್ತದೆ. ಇದೇ ನಾಣ್ಯದ ಹಿಂಭಾಗದಲ್ಲಿ ಸಿಂಹಾಸನಾರೂಢ ರಾಜ್ಯಲಕ್ಷ್ಮಿಯನ್ನು ಸೂಚಿಸುವಂತೆ, ಸಿಂಹದ ಮೇಲೆ ಕುಳಿತು, ಪಾದಗಳನ್ನು ಕಮಲದ ಮೇಲೆ ಇಟ್ಟು, ಕಿಲಿ ಸಮೃದ್ಧಿಯ ಸಂಕೇತವಾದ ಆಡಿನ ಕೊಂಬಿನಂತಹ ಅಕ್ಷಯಪಾತ್ರೆ ಹಿಡಿದ ಲಕ್ಷ್ಮಿಯ ಚಿತ್ರಣವಿದೆ. ಅವಳ ಬಲಗೈಲಿ ದಂಡಪಾಶ, ಎಡಗೈಲಿ ಅಕ್ಷಯ ಪಾತ್ರೆ ಇದೆ. ಕೆಲ ಚಿತ್ರಗಳಲ್ಲಿ ಲಕ್ಷ್ಮಿಯ ಬಲಹಸ್ತದಿಂದ ನಾಣ್ಯ ಉದುರುವಂತಹ ಚಿತ್ರಣವೂ ಇದೆ. ಲಕ್ಷ್ಮಿಯ ಚಿತ್ರ ಕಲ್ಪನೆ ಈಗ ಸಾಕಷ್ಟು ಬೆಳೆದಿದೆ. ಈಗ ಲಕ್ಷ್ಮಿಯ ಹಸ್ತದಿಂದ ನೋಟುಗಳು ಉದುರುವಂತೆ ಚಿತ್ರಿತವಾಗಿರುತ್ತದೆ. ಮುಂದೆ ಡಾಲರ್‌ಗಳೋ, ಯುರೋಗಳೂ ಬರಬಹುದು.

ಪ್ರಾಚೀನ ವಾದ್ಯಗಳು:

ಬಾಯಿಂದ ಬಾಯಿಗೆ ಹರಿದು ಹೋಗುವ ಜಾನಪದಕ್ಕೆ ದಾಖಲೆಗಳಿರುವುದಿಲ್ಲ ಎಂಬುದು ಬಹುಪಾಲು ವಿದ್ವಾಂಸರ ಸಾಮಾನ್ಯ ತಿಳಿವಳಿಕೆ, ಆದ್ದರಿಂದಲೇ, ನೂರಿನ್ನೂರು ವರ್ಷಗಳ ಹಿಂದೆ ಒಂದು ಜನಪದ ಕತೆ ಹೇಗಿತ್ತೆಂಬುದು ನಮಗೀಗ ಲಭ್ಯವಾಗುವುದಿಲ್ಲ. ಜಾನಪದದ ಈ ಮನೋಭಾವ ಪರಂಪರೆಯ ಇತಿಹಾಸದ ಅರಿವಿಗೆ ಭಾರೀ ಪೆಟ್ಟು ಕೊಟ್ಟಿದೆ.

ಆದರೆ, ಈ ಕೊರತೆ ಜಾನಪದದ ಎಲ್ಲಾ ಪ್ರಕಾರಗಳಿಗೂ ಅನ್ವಯವಾಗುತ್ತದೆಯೇ? 'ಬಹುಮಟ್ಟಿಗೆ ಹೌದು' ಎಂಬುದು ಹೆಚ್ಚು ಆತಂಕ ತಂದರೆ, 'ಕೊಂಚಮಟ್ಟಿಗೆ ಅಲ್ಲ' ಎಂಬುದು ಆಶಾಕಿರಣ ಬೆಳಗಿಸುತ್ತದೆ. ಭೌತಿಕ ಜಾನಪದದ ಕೆಲ ಅಂಶಗಳು ಸಾವಿರಾರು ವರ್ಷಗಳಿಂದ ದಾಖಲೆಗಳಲ್ಲಿ ಉಳಿದುಬಂದು ದಾಖಲೆಗಳಾಗಿರುವುದು ಬಹು ಆಶ್ಚರ್ಯವಾದರೂ ವಾಸ್ತವವಾಗಿದೆ. ಜನಪದ ವಾದ್ಯಗಳು ಇದಕ್ಕೊಂದು ಅತ್ಯುತ್ತಮ ನಿದರ್ಶನ. ಪಳೆಯುಳಿಕೆಗಳಿಂದ, ಪ್ರಾಚೀನ ಚಿತ್ರ, ಶಿಲ್ಪಗಳಿಂದ ನಮ್ಮ ಹಲವಾರು ವಾದ್ಯಗಳ ಇತಿಹಾಸವನ್ನು ಅರಿಯಬಹುದೆಂಬುದು ಬಹು ಕುತೂಹಲಕರ ಸಂಗತಿ.

ಪ್ರಾಚ್ಯ ವಾದ್ಯ ವಿಜ್ಞಾನ:

ಕುಣಿತ ಮಾನವನ ಆದಿಮ ಅಭಿವ್ಯಕ್ತಿಗಳಲ್ಲಿ ಒಂದು ಎಂಬುದನ್ನು ಅತಿ ಪ್ರಾಚೀನ ಕಾಲದ ಗುಹಾಚಿತ್ರಗಳೇ ಸಾಬೀತು ಪಡಿಸುತ್ತವೆ. ಕುಣಿತ ಇದ್ದ ಮೇಲೆ ಹಾಡೂ ಇದ್ದಿರಬಹುದು. ಹಾಡು (ಸಾಹಿತ್ಯ) ಇಲ್ಲವಾದರೂ 'ನಾದ' ಅದಕ್ಕೆ ಪೂರಕವಾಗಿ ವಾದ್ಯ ಪರಿಕರವಂತೂ ಇರಲೇಬೇಕು. ಹಾಗಿದ್ದರೆ, ಇತಿಹಾಸ ಪೂರ್ವಕಾಲದ ಮನುಷ್ಯ ಯಾವ ರೀತಿ ವಾದ್ಯ ಬಳಸುತ್ತಿದ್ದ? ಕಾಲಕಾಲಕ್ಕೆ ಅವುಗಳ ಆಕಾರ, ರಚನೆ, ನುಡಿಸುವ ಕ್ರಮ, ಸಂದರ್ಭಗಳಲ್ಲಿ ಆಗಿರುವ ಬದಲಾವಣೆಗಳೇನು? – ಈ ರೀತಿಯ ಪ್ರಶ್ನೆಗಳು ನಮಗೆ ಎದಿರಾಗುತ್ತವೆ. ಇದಕ್ಕೆ ಉತ್ತರ ಕಂಡುಕೊಳ್ಳಲು ನಾವು ಪುರಾತತ್ವ ಶೋಧಗಳ ನೆರವು ಪಡೆಯಬೇಕಾಗುತ್ತದೆ. ಪುರಾಣ ಕಾವ್ಯಗಳಲ್ಲಿ ಕೆಲವೊಮ್ಮೆ ವಾದ್ಯಗಳ ಉಲ್ಲೇಖವಿರುತ್ತದೆಯಾದರೂ ಅಲ್ಲಿ ಅವುಗಳ ಸ್ವರೂಪ, ನುಡಿಸುವ ಕ್ರಮ ಇತ್ಯಾದಿ ಗೊತ್ತಾಗುವುದಿಲ್ಲ. ಸಂಗೀತಶಾಸ್ತ್ರ ಕೃತಿಗಳಲ್ಲಿ ಕೆಲ ವಿವರಗಳಿದ್ದರೂ ವಾದ್ಯವನ್ನು ಕಣ್ಣಿನಿಂದ ನೊಡಿದಷ್ಟು ವಿವರ ಮನದಟ್ಟಾಗದಿರಬಹುದು. 'ಪಳೆಯುಳಿಕೆ'ಗಳಲ್ಲಿ ವಾದ್ಯ ಪೂರ್ಣರೂಪದಲ್ಲಿರಲಾರದು. ಜೊತೆಗೆ ಅದರ ನುಡಿಸುವ ಕ್ರಮವೂ ತಿಳಿಯಲಾರದು. ಆದ್ದರಿಂದ ಪ್ರಾಚೀನ ಶಿಲ್ಪ ಹಾಗೂ ಚಿತ್ರಗಳಲ್ಲಿನ ವಿವರಗಳು ಆಯಾ ಕಾಲದ, ಆಯಾ ವಾದ್ಯಗಳ, ಬಹುಮಟ್ಟಿಗೆ ಯದ್ವತ್ ಚಿತ್ರಣಗಳಾಗಿದ್ದು, ಅವುಗಳ ರಚನೆ, ನುಡಿಸುವ ಕ್ರಮ, ಸಂದರ್ಭ ಅಲ್ಲದೆ, ವಾದಕರ ಬಗೆಗೂ ಹಲವು ವಿಶ್ವಸನೀಯ ಮಾಹಿತಿ ದೊರಕಿಸಿ ಕೊಡುತ್ತವೆ. ಕಣ್ಣಿಗೆ ಸ್ಪಷ್ಟವಾಗಿ ಕಾಣುವ ಈ ಶಿಲ್ಪ–ಚಿತ್ರಗಳು ಹೆಸರೂ ಗೊತ್ತಿರದ ಎಷ್ಟೋ ಪಾಶ್ಚಾತ್ಯ–ಪ್ರಾಚೀನ ವಾದ್ಯಗಳನ್ನು ತೌಲನಿಕವಾಗಿ ಅಭ್ಯಸ ಮಾಡಲು ಉತ್ತಮ ಆಕಾರಗಳಾಗುತ್ತವೆ. ಹೀಗಿದ್ದೂ ಕನ್ನಡದಲ್ಲಿ ಈ ರೀತಿಯ ಅಭ್ಯಾಸಗಳು ವಿಶೇಷವಾಗಿ ಆಗಿಲ್ಲದಿರುವುದು ವಿಷಾದನೀಯ, ಪುರಾತತ್ವ ಶಾಸ್ತ್ರದ ಹಿನ್ನೆಲೆಯಲ್ಲಿ ವಾದ್ಯಗಳನ್ನು ಅಭ್ಯಸಿಸುವ ಪ್ರಯತ್ನ ಈಚೆಗೆ ಪಾಶ್ಚಾತ್ಯರಲ್ಲಿ ಪ್ರಾರಂಭವಾಗಿದ್ದು, ಆ ಶಾಖೆಯನ್ನು ಅವರು Archaeo organology ಎಂದು ಕರೆಯುತ್ತಾರೆ. ನಾವು ಕನ್ನಡದಲ್ಲಿ ಇದನ್ನು 'ಪ್ರಾಚ್ಯ ವಾದ್ಯ ವಿಜ್ಞಾನ' ಎಂದು ಹೆಸರಿಸಬಹುದಾಗಿದೆ.

ವಾದ್ಯಗಳ ಹುಟ್ಟಿಗೂ ಆದಿಮಾನವನ ಬದುಕಿಗೂ ನಿಕಟ ಸಂಬಂಧವಿದೆ. ಮುಖ್ಯವಾಗಿ ಇದು ಎರಡು ತೆರನಾದುದು: 1) ಅವನ ವೃತ್ತಿ 2) ಅವನ ನಂಬಿಕೆ.

ಅಧ್ಯಯನಕಾರರು ಊಹಿಸಿರುವಂತೆ, ಅಂದಿನ ಮಾನವ ತಾನು ಬೇಟೆಯಾಡಿದ ಪ್ರಾಣಿಗಳ ಮಾಂಸ ತಿಂದು ತೊಗಲನ್ನು ಹೊದ್ದು ಹಾಗೆ, ಹದಮಾಡಿದ ಚರ್ಮದಿಂದ ನಾದ ಹೊರಡಿಸಬಹುದೆಂಬುದನ್ನೂ ಕಂಡುಕೊಂಡ. ಚರ್ಮ ವಾದ್ಯಗಳ ಹುಟ್ಟಿಗೆ ಇದೇ ಮೂಲವಾಯಿತು. ಬೇಟೆಯಾಡಲು ಆತ ಬಳಸುತ್ತಿದ್ದ ಬಿಲ್ಲಿಗೆ ಕಟ್ಟಿದ್ದ ನಾರು ಅಥವಾ ಪ್ರಾಣಿಯ ಕರುಳನ್ನು ಎಳೆದು ಬಿಟ್ಟಾಗ ಉಂಟಾಗುತ್ತಿದ್ದ ನಾದ ಮುಂದೆ ತಂತೀ ವಾದ್ಯಗಳಿಗೆ ಪ್ರಚೋದನೆ ನೀಡಿತು. ಇನ್ನೆಷ್ಟೋ ಬಗೆಯ ವಾದ್ಯಗಳಿಗೆ ನಿಸರ್ಗವೇ ಸ್ಫೂರ್ತಿಯಾಯಿತು.

ಆದಿಮಾನವನಿಗೆ ದುಷ್ಟ ಶಕ್ತಿಗಳ ಬಗೆಗೆ ಬಹಳ ಭಯವಿತ್ತು. ವಿಚಿತ್ರ ಹಾಗೂ ಕರ್ಕಶಾವಾದ ಶಬ್ದಗಳಿಂದ ಆ ಪೀಡೆಗಳನ್ನು ದೂರ ಓಡಿಸಬಹುದೆಂಬ ನಂಬಿಕೆಯೂ ಆತನಿಗಿತ್ತು. ಪುರಾತತ್ವಶೋಧಗಳಲ್ಲಿ ಗಿಲಕಿ ಮತ್ತಿತರ ಕೆಲ ಅಲುಗಾಡಿಸುವ, ಬಡಿಯುವ ಸಾಧನಗಳು ದೊರೆತಿದ್ದು, ಇತಿಹಾಸ ಪೂರ್ವಕಾಲದ ಮಾನವ ರೋಗಿಯಿಂದ ದುಷ್ಟ ಶಕ್ತಿಗಳನ್ನು ದೂರವಿರಿಸಲು ಅಗತ್ಯವಾದ ಶಬ್ದ ಮಾಡಲು ಅವುಗಳನ್ನು ಬಳಸುತಿದ್ದಂತೆ ಕಾಣುತ್ತದೆ. ಮುಂದೆ ಅವುಗಳನ್ನು ಆತ ಮಕ್ಕಳ ಆಟಿಕೆಯಾಗಿಯೂ ಉಪಯೋಗಿಸಿದ್ದಿರಬೇಕು. ಏಕೆಂದರೆ ರಷ್ಯಾ, ಮಾಲ್ಡೀವಿಯಾ ಮುಂತಾದೆಡೆ ಕ್ರಿ.ಪೂ. 2ನೇ ಮಿಲಿನಿಯಂಗೆ (ಸಹಸ್ರಮಾನ) ಸೇರಿದ ಕೆಲ ಮಕ್ಕಳ ಗೋರಿಗಳಲ್ಲಿ ಬಣ್ಣ ಹಚ್ಚಿದ ಜೇಡಿ ಮಣ್ಣಿನ ಗಿಲಕಿಗಳು ಕಂಡುಬಂದಿದೆ. ಹಾಗೆಯೇ ಪೂರ್ವ ಶಿಲಾಯುಗದ ಮಾನವನಿಗೆ ನಾದದ ಬಗೆಗೆ ಸಾಕಷ್ಟು ಅರಿವಿತ್ತೆಂಬುದನ್ನು ಮೂಳೆಗಳಲ್ಲಿ ಮಾಡಿದ್ದ ಆ ಕಾಲದ ಕೆಲ ಪೀಪಿಗಳೂ, ಕೊಳಲುಗಳೂ ಸಾಕ್ಷಿ ಹೇಳುತ್ತವೆ.

ಭಾರತದ ಮಟ್ಟಿಗೇ ಹೆಳುವುದಾದರೂ ಕ್ರಿ.ಪೂ. 3ನೇ ಮಿಲಿನಿಯಂನಷ್ಟು ಹಿಂದೆಯೇ ಭಾರತೀಯರಿಗೆ ಸಂಗೀತ ವಾದ್ಯಗಳ ಪರಿಚಯವಿತ್ತು. ಆರ್ಯರು ಭಾರತಕ್ಕೆ ಬರುವ ಮೊದಲೇ (ಕ್ರಿ.ಪೂ. 1500–1200) ಭಾರತದಲ್ಲಿ ಕೊಳಲು ಇತ್ತೆಂಬುದನ್ನು ಪುರಾತತ್ವ ಶೋಧಗಳು ಸಾಬೀತು ಪಡಿಸಿವೆ. ದ್ರಾವಿಡರು ಬಹು ಹಿಂದೆಯೇ ಈಜಿಪ್ಟ್ ಮತ್ತು ಮೆಸಪಟೋಮಿಯಾ ಜತೆ ವ್ಯಾಪಾರ ಸಂಬಂಧ ಇಟ್ಟುಕೊಂಡಿದ್ದರು ಎಂಬುದನ್ನು ಗಮನಿಸಿದಾಗ ವಾದ್ಯಗಳ ಮೇಲೆ ಆಗಿರುವ ಪರಸ್ಪರ ಪ್ರಭಾವದ ಅರಿವೂ ಆಗುತ್ತದೆ. ಭಾರತದಲ್ಲಿನ ಕೆಲ ವಾದ್ಯಗಳನ್ನು ಹೋಲುವ ವಾದ್ಯಗಳು ಏಷ್ಯಾದ ಇತರ ದೇಶಗಳಲ್ಲೂ ಇವೆ (ಉದಾ. ಗೆ ನಮ್ಮಲ್ಲಿನ 'ಜಂಝಾ' (ದೊಡ್ಡತಾಳ) ಗಳನ್ನು ಆಕಾರ ಮತ್ತು ನಾದದಲ್ಲಿ ಹೋಲುವ ತಾಳಗಳು ಟರ್ಕಿಯಲ್ಲೂ ಇವೆ). ಗ್ರೀಕರ ಪ್ರಭಾವದಿಂದ ಕ್ರಿ.ಶ. 2ನೇ ಶತಮಾನದ ಹೊತ್ತಿಗೇ ಸ್ತೂಪ ಮೊದಲಾದೆಡೆ ಉಬ್ಬು ಶಿಲ್ಪಗಳಲ್ಲಿ ಆ ಕಾಲದ ನೃತ್ಯ, ವಾದ್ಯ – ವಾದಕರನ್ನು ಚಿತ್ರಿಸುವ ಹವ್ಯಾಸ ಭಾರತದಲ್ಲೂ ರೂಢಿಗೆ ಬಂತು ಮುಂದೆ ಭಾರತದ ವಿವಿದೆಡೆ ಬೇರೆ ಬೇರೆ ಪ್ರಸ್ಥಾನಗಳಲ್ಲಿ ಹುಟ್ಟಿಕೊಂಡ ಗುಡಿಗೋಪುರಗಳ ಶಿಲ್ಪಗಳಲ್ಲೂ ಕಲಾವಿದರ ಚಿಕಣಿ ಚಿತ್ರಗಳಲ್ಲೂ ಸಾಂದರ್ಭಿಕವಾಗಿ ವಾದ್ಯ–ವಾದಕರನ್ನು ದಾಖಲಿಸುವ ಪ್ರವೃತ್ತಿ ವಿಶೇಷವಾಗಿ ನಡೆದಿರುವುದಕ್ಕೆ ವಿಪುಲ ಸಾಕ್ಷ್ಯಗಳಿವೆ. ಈ ಎಲ್ಲದರ ಹಿನ್ನೆಲೆಯಲ್ಲಿ ಕೆಲ ವಾದ್ಯಗಳನ್ನು ಈ ಮುಂದೆ ಪ್ರಾತಿನಿಧಿಕವಾಗಿ ಪರಿಚಯಿಸಿದೆ:

ಕಿನ್ನರಿ:

ಅತಿ ಪ್ರಾಚೀನ ವಾದ್ಯಗಳಲ್ಲಿ ಒಂದು 'ಕರ್ನಾಟಕದ ಈ ವಾದ್ಯ ಬೈಬಲಿನಲ್ಲಿ ವರ್ಣಿತವಾಗಿರುವ ಕಿನ್ನೋರ್ ವಾದ್ಯವನ್ನು ಹೆಸರು ಹಾಗೂ ಸ್ವರೂಪದಲ್ಲಿ ಬಹಳಷ್ಟು ಹೋಲುವುದು' ಅದರ ಪ್ರಸರಣ ಗುಣವನ್ನು ಹೇಳುತ್ತದೆ. 'ಈ ಎರಡೂ ಒಂದೇ ಆರ್ಯ ಮೂಲದಿಂದ ಹುಟ್ಟಿರಬಹು'ದೆಂಬ ಅಭಿಪ್ರಾಯವೂ

ಇದೆ. ವೇದಗಳಲ್ಲಿ ಇದನ್ನು 'ಕಿನ್ನರಿ ವೀಣೆ' ಎಂದು ಕರೆದಿದೆ. ಕಿನ್ನರಿಗೂ ಪ್ರಾಚೀನ 'ಕಿನ್ನರಿ ವೀಣೆ'ಗೂ ಬಹಳಷ್ಟು ಹೋಲಿಕೆ ಇದೆ. ದೊಡ್ಡ ಗದ್ದವಳ್ಳಿಯ ಲಕ್ಷ್ಮೀದೇವಸ್ಥಾನದ ಭಾವಣಿಯಲ್ಲಿ ಕಿನ್ನರಿಯ ಚಿತ್ರವಿದ್ದು, ವಾದಕ ಎಡಭುಜದ ಕದೆಯಿಂದ ಬಲ ಪಕ್ಕೆಯವರೆಗೆ ಹಿಡಿದು, ಎರಡೂ ಕೈಗಳಿಂದ ನುಡಿಸುತ್ತಿರುವುದು; ದಂಡದ ಮೇಲುಭಾಗದಲ್ಲಿ ಹಿಂಬದಿಗೆ ಬಂದು 'ಬುರುಡೆ' ಇರುವುದು ಕಾಣುತ್ತದೆ. ಸೋಮನಾಥಪುರದ ಕೇಶವ ದೇವಾಲಯದಲ್ಲಿ ಕಾಣುವ ಕಿನ್ನರಿ ಚಿತ್ರಗಳಲ್ಲಿ ಒಂದಕ್ಕೆ ಸೋರೆ ಬುರುಡೆಗೆ ಬದಲು ಅಗಲವಾದ ತಟ್ಟೆಯಂತಹ ಸಾಧನವಿದೆ. ಕ್ರಿ.ಶ. 1670–80 ಕಾಲ್ದ ದಖ್ಖನಿ ಶೈಲಿಯ ಚಿಕಣಿ ಚಿತ್ರಗಳಲ್ಲೂ 'ಕಿನ್ನರಿ'ಗಳಿವೆ. ಒಂದು ಚಿತ್ರದಲ್ಲಿ ರಾಜಕುವರನೊಬ್ಬ ಉದ್ಯಾನದಲ್ಲಿ ಕುಳಿತಿದ್ದಾನೆ. ಸುತ್ತಲೂ ಹೆಂಗಳೆಯರು; ಹಿಂದೆ ನಿಂತವಳೊಬ್ಬಳು ಕಿನ್ನರಿ ನುಡಿಸುತ್ತಿರುವ ಕ್ರಮ ಈಗಿನಂತೆಯೇ ಇದೆ. ಅದಕ್ಕೂ ಎರಡು 'ಬುರುಡೆ'ಗಳೂ ಇವೆ! ಕ್ರಿ.ಶ. 750 ರ ಕಾಲದ ಉತ್ತರ ದಖ್ಖನಿ ಶೈಲಿಯ ವರ್ಣ ಚಿತ್ರಗಳಲ್ಲೂ ಇದೇ ರೀತಿ ದಂಡ, ತಂತಿ, ಮೆಟ್ಟಲುಗಳೂ, ಅಲಂಕೃತ ಬುಗುರಿಯಾಕಾರದ 'ಬುರುಡೆ'ಗಳೂ ಇರುವುದು ಸಾವಿರ ವರುಷಗಳಷ್ಟು ಹಿಂದಿನಿಂದಲೂ ಈ ವಾದ್ಯದ ರಚನೆ ಯಾವ ಸ್ವರೂಪ ಉಳಿಸಿಕೊಂಡಿದೆ ಎಂಬುದನ್ನು ಸೂಚಿಸುತ್ತದೆ. ಆದರೂ, ಕೆಲವರ ಪ್ರಕಾರ 'ಕಿನ್ನರಿ' ಮೊದಲು 'ಸಾರಿ' (ಮೆಟ್ಟಿಲು)ಗಳಿಲ್ಲದ 'ನಿಸ್ಸಾರಿ'ಯಾಗಿತ್ತು. ನಂತರ, 'ಸಾರಿ' ಪಡೆದು, ಪರಿಷ್ಕಾರಗೊಂಡು, ಸಂಗೀತ ಕಛೇರಿಗಳಲ್ಲಿ ಪಕ್ಕ ವಾದ್ಯವಾಗಿಯೂ ಬಳಕೆಯಾಗಿ ಕ್ರಮೇಣ ಆದ ಪ್ರಭಾವಗಳಿಂದ ಮತ್ತೆ ಸಾರಿ ಕಳೆದುಕೊಂಡು ಕೇವಲ ಜನಪದರ ವಾದ್ಯವಾಗಿ ಉಳಿದಿದೆ. ಅಂತೂ, ಹಿಂದಿದ್ದ ಕಿನ್ನರಿಗಳ ವರ್ಣ – ಬೆಡಗು ಈಗ ಕಡಿಮೆಯಾಗಿದೆ ಎಂಬುದೇನೋ ನಿಜ. ಆದರೂ ಸಾರಿ ಇರುವ ಕಿನ್ನರಿಗಳು ನಮ್ಮ ಕಿನ್ನರಿ ಜೋಗಿಗಳು ಕೆಲವರಲ್ಲಿ ಈಗಲೂ ಇವೆ.

ವೀಣೆ:

ಕಿನ್ನರಿಯ ಮುಂದುವರೆದ ರೂಪವೇ 'ವೀಣೆ', ಈ ಎರಡಕ್ಕೂ ಎಷ್ಟೊಂದು ಹೋಲಿಕೆ ಇದೆ ಎಂದರೆ, ಎಷ್ಟೋ ಸಂದರ್ಭಗಳಲ್ಲಿ ಅಧ್ಯಯನಕಾರರು ಕಿನ್ನರಿಯನ್ನು 'ವೀಣೆ' ಎಂದೇ ಕರೆದಂತೆ ಕಾಣುತ್ತದೆ. ಅಷ್ಟಲ್ಲದೆ, ಪ್ರಾಚೀನ ವೀಣೆ ಹಾಗೂ ಪಾಶ್ಚಾತ್ಯ ವಾದ್ಯಗಳಾದ 'ಹಾರ್ಪ್' ವಾದ್ಯಗಳಿಗೂ ಹೋಲಿಕೆ ಇದೆ. ಕ್ರಿ.ಪೂ. 4000ದಷ್ಟು ಹಳತಾದ ಈಜಿಪ್ಟಿನ ಬಿಲ್ಲಿನಾಕೃತಿಯ ಹಾರ್ಪ್‌ವಾದ್ಯ ಏಷ್ಯಾ ರಾಷ್ಟ್ರಗಳ ಬಿಲ್ಲಿನಾಕಾರದ ವೀಣೆಯನ್ನೇ ಹೋಲುತ್ತದೆ ಎಂಬುದು ಇದರ ಪ್ರಾಚೀನತೆ ಹಾಗೂ ಪ್ರಸರಣವನ್ನು ಹೇಳುತ್ತದೆ ಮೊದಲು ಪ್ರಾಣಿಯ ಕರುಳೇ ವೀಣೆಯ 'ತಂತಿ' ಆಗಿತ್ತು. ನಂತರ, ಮಾಧಮದ ಜೊತೆಗೆ ತಂತಿಗಳ ಸಂಖ್ಯೆಯೂ ಬದಲಾಗಿ ನಾದ ವೈವಿಧ್ಯಕ್ಕೂ ಕಾರಣವಾಯಿತು. 'ರಾಮಾಯಣ'ದಲ್ಲಿ (ಕ್ರಿ.ಪೂ.400) 'ಚಿತ್ರ' (ಏಳು ತಂತಿ) ಹಾಗೂ 'ವಿಪಂಚಿ' (9 ತಂತಿ) ವೀಣೆಗಳ ಪ್ರಸ್ತಾಪವಿದೆ.

'ವೀಣಾ' ಎಂಬುದು 'ವಾಣ' ಎಂಬ ಶಬ್ದದಿಂದ ಬಂದಿದ್ದು, ಅದಕ್ಕೆ 'ಶಬ್ದ ಮಾಡು' ಎಂಬ ಅರ್ಥವಿದೆ. ಆದಿಮಾನವ ಬೇಟೆಗೆ ಬಳಸುತ್ತಿದ್ದ ಬಿಲ್ಲಿನ ಹೆದೆಯನ್ನು ಎಳೆದು, ಬಾಣ ಬಿಟ್ಟಾಗ ಉಂಟಾಗುತ್ತಿದ್ದ ಹೆದೆಯ

ಕಂಪನ ನಾದ ಎದೆ ನಡುಗಿಸುವಂತಿದ್ದರೂ, ಬೆರಳುಗಳಿಂದ ಮೃದುವಾಗಿ ಮಿಡಿದಾಗ ಉಂಟಾಗುತ್ತಿದ್ದ ಹಿತವಾದ ನಾದದಿಂದ ಆಕರ್ಷಿತನಾದ ಮನುಷ್ಯ ಬಿಲ್ಲಿನ ಆಕಾರ, ರಚನೆಯನ್ನೇ ಹೋಲುವ ವಾದ್ಯವೊಂದನ್ನು ರೂಪಿಸಿಕೊಂಡ. ಅದು ಪಾಶ್ಚಾತ್ಯದಲ್ಲಿ ಈಗಲೂ ಇರುವ 'ಲೈರ್' ಅಥವಾ 'ಹಾರ್ಪ್' ವಾದ್ಯ ಹೋಲುತ್ತಿತ್ತು. ಭಾರತೀಯರ ವೀಣೆಯೂ ಇದೇ ಬಿಲ್ಲಿನ ಮೂಲದಿಂದಲೇ ಹುಟ್ಟಿಕೊಂಡದ್ದು.

ಪ್ರಾಚೀನ ಶಿಲ್ಪ, ಚಿತ್ರಗಳಲ್ಲಿ ವಿವಿಧ ಮಾದರಿ ವೀಣೆಗಳ ಚಿತ್ರಣವಿದೆ. ವಾದಕ ಬಲಗೈ ಬೆರಳುಗಳಿಂದ ಅಥವಾ 'ಕೋಣ'ದಿಂದ ತಂತಿ ಮೀಟುತ್ತಾ ಎದಗೈಯಿಂದ ತಂತಿಗಳ 'ಬಿರಡೆ' ಬಿಗಿ ಮಾಡುತ್ತಿರುವ ಚಿತ್ರಗಳೂ ಇವೆ. 'ದಂಡಿ' ಬಿಗಿ ಮಾಡುತ್ತಿರುವ ಚಿತ್ರಗಳೂ ಇವೆ. 'ದಂಡಿ' ಮರ ಅಥವಾ ಬಿದಿರಿನದ್ದಾಗಿದ್ದು, ಅದರ ಮೇಲಿನ ಮರ ಅಥವಾ ಕೊಂಬಿನ 'ಮೇರು' (ಸಾರಿ)ಗಳ ಮೇಲೆ ತಂತಿ ಹಾದು ಹೋಗುವಂತಿದ್ದವು. ನಾದ ವರ್ಧನಕ್ಕೆ ಸೋರೆ ಬುರುಡೆಗಳನ್ನು ಉಪಯೋಗಿಸುತ್ತಿದ್ದ ಅಂಶವನ್ನು ವೇದಗಳೂ ತಿಳಿಸುತ್ತವೆ. ಇಂದು ಅಸ್ತಿತ್ವದಲ್ಲಿರುವ ಕೆಲವು ವಿಶಿಷ್ಟವಾದ 'ವೀಣೆ'ಗಳ ಚಿತ್ರಣ ಬೇಲೂರಿನ ಶಿಲ್ಪಗಳಲ್ಲಿ ದಾಖಲಾಗಿದೆ. ಇಷ್ಟಲ್ಲದೆ ತಂಬೂರಿ, ಸಾರಂಗಿ, ಗೋಟು ವಾದ್ಯದಂತಹ ತಂತಿ ವಾದ್ಯಗಳೂ ನಮ್ಮ ಪ್ರಾಚೀನ ಶಿಲ್ಪ-ಚಿತ್ರಣಗಳಲ್ಲಿ ಕಾಣಬರುತ್ತವೆ.

ವೀಣೆಗಳಲ್ಲಿ

1) ಕಮಾನಾಕೃತಿ (bow-shaped) ಅಥವಾ ಹಾರ್ಪ್ ಮಾದರಿ ವೀಣೆ,

2) ಗಿಟಾರ್ ಮಾದರಿ ವೀಣೆ (lute),

3) ನೇರದಂಡ ಏಕಬುರುಡೆ ವೀಣೆ (Straight board Vina),

4) ಲೈರಾ

ಮೊದಲಾದ ಮಾದರಿಗಳು ನಮ್ಮ ಚಿತ್ತ-ಶಿಲ್ಪಗಳಲ್ಲಿ ಕಾಣಬರುತ್ತವೆ. ಹಾರ್ಪ್, ಗಿಟಾರ್ ಮಾದರಿಗಳ ಮೂಲಕ ಆ ಕಾಲಕ್ಕಾಗಲೇ ಭಾರತದೊಂದಿಗೆ ರೋಮ್‌ನ ಸಂಪರ್ಕ ಆಗಿದ್ದಿತ್ತೆಂಬುದು ಇದರಿಂದ ವೇದ್ಯವಾಗುತ್ತದೆ.

ಕಮಾನಾಕೃತಿ ವೀಣೆ:

ಸಾಂಚಿಯ ಶಿಲ್ಪದಲ್ಲಿ 'ಮಾರನ ದಂಡು' ಸನ್ನಿವೇಶದಲ್ಲಿ ನೃತ್ಯಕ್ಕೆ ಸಹವಾದ್ಯವಾಗಿ ಈ ವಾದ್ಯ ಬಳಕೆಯಾಗಿದೆ. ಪುರುಷ ಅಥವಾ ಸ್ತ್ರೀ ತಮ್ಮ ಎಡ ಇಲ್ಲವೇ ಬಲ ಕೈ ಬೆರಳುಗಳಿಂದ ತಂತಿಗಳನ್ನು ಎಳೆದು ಅಥವಾ ಸಣ್ಣ ಕಡ್ಡಿಯೊಂದರಿಂದ (ಕೋಣ) ತಂತಿಗಳನ್ನು ಮೀಟಿ ನುಡಿಸುತ್ತಿರುವಂತೆ ಚಿತ್ರಿತವಾಗಿದೆ. ತಂತಿಗಳ ಸಂಖ್ಯೆ ಕೆಲವೆಡೆ ಐದು ಇದ್ದರೆ ಕೆಲವೆಡೆ ಏಳು ಕಂಡುಬರುತ್ತವೆ.

ಗಿಟಾರ್ ವೀಣೆ:

ಸಾಂಚಿಯ ಸ್ಥೂಪದ 'ಬುದ್ಧನ ಪುನರಾಗಮನ' ಸನ್ನಿವೇಶದಲ್ಲಿ ಒಂದೆಡೆ ಈ ವಾದ್ಯ ಚಿತ್ರಿತವಾಗಿದೆ. ವಾದಕ ತನ್ನ ಬಲಗೈ ಬೆರಳುಗಳಿಂದ ತಂತಿಗಳನ್ನು ಮೀಟುತ್ತಿದ್ದರೆ. ಎಡಗೈ ಬೆರಳುಗಳಿಂದ ಶೃತಿ ಸರಿ ಹೊಂದಿಸುತ್ತಿರುವಂತೆ ಕಂಡು ಬರುತ್ತದೆ. ಈ ವಾದ್ಯದ 'ಕಂಠ' ನೇರವಾಗಿದೆ. ಪಿಯರ್ ಹಣ್ಣಿನ ಆಕಾರದ 'ಶೃತಿ ಬುರುಡೆ' (resonator) ಯೂ ಇದೆ. ಅಮರಾವತಿ, ಗಾಂಧಾರ ಹಾಗೂ ನಾಗಾರ್ಜುನ ಕೊಂಡದ ಶಿಲ್ಪಗಳಲ್ಲೂ ಈ ವಾದ್ಯದ ಚಿತ್ರಣವಿದೆ. ಆದರೆ, ತಂತಿ ಬಿಗಿಯಾಡುವ ಬಿರಡೆಗಳ ಸಂಖ್ಯೆಯಲ್ಲಿ ವೈವಿಧ್ಯವಿದೆ. ಅಜಂತಾದ ಭಿತ್ತಿ ಚಿತ್ರವೊಂದರಲ್ಲಿ ಇದೇ ಮಾದರಿ ವಾದ್ಯದ ಸ್ಪಷ್ಟ ಆಕೃತಿ ಇದೆ. ಒಂದರ ಪಕ್ಕದಲ್ಲೊಂದರಂತೆ ಹಲವು ತಂತಿಗಳು, ನೇರವಾದ ಕಂಠ ಹಾಗೂ ದುಂಡಾದ 'ಬುರುಡೆ'ಗಳು ಚೆನ್ನಾಗಿ ಕಂಡು ಬರುವುದಲ್ಲದೆ, ಅದನ್ನು ಬಹುಶಃ ಮರದಿಂದ ಮಾಡಿರಬಹುದೆಂಬುದನ್ನು ಗುರುತಿಸಬಹುದಾಗಿದೆ.

ಈ ಎರಡೂ ವಾದ್ಯಗಳು ಇಂದಿಗೂ ನಮ್ಮಲ್ಲಿ 'ಹೊರಗಿನವು' ಎಂಬ ಭಾವನೆಯಲ್ಲೇ ಇದ್ದರೂ, ಅವು ಬಹು ಹಿಂದೆಯೇ ಬಂದು ನಮ್ಮೊಡನೆ ಸೇರಿರುವುದನ್ನು ಅರಿಯಲು ಅವುಗಳ ಆಕಾರ ಹಾಗೂ ನುಡಿಸುವ ಕ್ರಮವನ್ನು ಇಂದಿನ ವಿವರಗಳೊಂದಿಗೆ ಹೋಲಿಸುವ ಸಲುವಾಗಿಯೂ ಈ ಎಲ್ಲಾ ವಿವರಗಳು ಅಗತ್ಯವಾಗುತ್ತವೆ.

ಪ್ರಾಚೀನ ಉಲ್ಲೇಖಗಳಿರುವ ಇತರ ಕೆಲವು ವೀಣೆಗಳು ನಾನಾ ರೂಪಗಳಲ್ಲಿ ಕಂಡುಬಂದರೂ ಅವು ಮುಖ್ಯವಾಗಿ ಬಿದಿರು ಇಲ್ಲವೆ ಮರದ ಉದ್ದವಾದ, ದಂಡಿಯ ಎರಡೂ ತುದಿಗಳಿಗೆ ಬಿಗಿದ ಮರದ ಅಥವಾ ಕೊಂಬಿನ 'ಮೇರು'ಗಳ ಮೇಲೆ ಹಾದು ಹೋಗುವ ತಂತ್ತಿಗಳನ್ನು ಹೊಂದಿದವು. ನಾದವರ್ಧನಕ್ಕೆ ಸೋರೆಬುರುಡೆಗಳನ್ನು ಉಪಯೋಗಿಸುತ್ತಿದ್ದ ಅಂಶವನ್ನೂ ವೇದಗಳು ತಿಳಿಸುತ್ತವೆ.

ಅಬುಲ್ ಫಜಲ್‌ನೆಂಬ ಪ್ರವಾಸಿ ವರ್ಣಿಸಿರುವ 'ಯಂತ್ರ' ಎಂಬ ಒಂದು ತಂತಿ ವಾದ್ಯ ಬಹುಮಟ್ಟಿಗೆ ಈ ಮೊದಲು ವಿವರಿಸಿದ 'ಕಿನ್ನರಿ ವೀಣೆ'ಯನ್ನೇ ಹೋಲುತ್ತದೆ.

ಬೇಲೂರು ಚೆನ್ನಕೇಶವ ದೇವಾಲಯದ ದಕ್ಷಿಣ ದ್ವಾರದ ಬಳಿ ಇರುವ ಶಿಲ್ಪದಲ್ಲಿ ಮದನಿಕೆಯೊಬ್ಬಳು ವೀಣೆಯೊಂದನ್ನು ಹಿಡಿದು ಶೃತಿ ಮಾಡುತ್ತಿರುವ ಭಾವದಲ್ಲಿದ್ದಾಳೆ. ಈ 'ವೀಣೆ'ಗೆ ಮೇಲು ಹಂತದಲ್ಲಿ ಸುಮಾರು 11 'ಮೆಟ್ಟಿಲು'ಗಳಿದ್ದು ಮೇಲಕ್ಕೆ ಹೋದಂತೆ ಅವುಗಳ ಅಗಲ ಕಿರಿದಾಗಿದೆ. ದಂಡದ ಕೊನೆ ತುದಿಯಲ್ಲಿ ಒಂದು ನಕ್ಷತ್ರಾಕಾರದ ರಚನೆ ಇದೆ. ದಂಡದ ಎರಡೂ ಕೊನೆಗೆ ಒಂದೊಂದು ಬುರುಡೆಗಳೂ ಇವೆ. ಎಡಗೈಲಿ ಆಕೆ ಅದನ್ನು ಲಂಬವಾಗಿ ಹಿಡಿದಿದ್ದಾಳೆ. ಈ ಹಿಡಿದ ಬೆರಳುಗಳ ಭಾಗ ಹಾಳಾಗಿದ್ದು ಉಳಿದ ವಿವರ ಅಸ್ಪಷ್ಟವಾಗಿದೆ.

ಬೇಲೂರಿನ ಇನ್ನೊಬ್ಬ ಶಿಲಾ ಬಾಲಿಕೆ ತನ್ನ ಎಡಗೈನಿಂದ ವಾದ್ಯ ಹಿಡಿದು ಬೆರಳುಗಳಿಂದ ತಂತಿ ಮೀಟುತ್ತಾ ಬಲಗೈನ 'ಕೋಣ' (ಕೋಲು)ದಿಂದ ತಂತಿಗಳನ್ನು ಬಡಿಯುತ್ತಾ ಒಂದು 'ವೀಣೆ'ಯಂತಹ

ವಾದ್ಯವನ್ನು ನುಡಿಸುತ್ತಿದ್ದಾಳೆ. ಇದನ್ನು ನಾಗವೀಣೆ ಎಂದು ಗುರುತಿಸಲಾಗಿದೆ. ಆಧುನಿಕ ಕಾಲದಲ್ಲಿ ಈ ವಾದ್ಯ ಬಳಕೆಯಲಿಲ್ಲ (ಆದರೆ, ಸಣ್ಣ ಸರಳಿನಿಂದ ತಂತಿ ಬಡಿದು ಏಕನಾದದಿಂದ ನಾದ ಹೊರಡಿಸುತ್ತಾ ಹಾಡುವ ಪರಿಪಾಠ ಈಗಲೂ ಕೆಲವರಲ್ಲಿದೆ). ಇಂತಹದ್ದೇ ಇನ್ನೊಂದು ಅಪರೂಪದ ವಾದ್ಯ ಹಳೇ ಬೀಡಿನ ಶಿಲ್ಪದಲ್ಲಿ ದಾಖಲಾಗಿದೆ. ಇದರ ದಂಡಿಯ ಕೆಳಭಾಗ ಅಗಲ ಹಾಗೂ ದಪ್ಪವಾಗಿದ್ದು, ಮೇಲಕ್ಕೆ ಹೋದಂತೆಲ್ಲಾ ಕಿರಿದಾಗಿ, ಕಂಠ (ತುದಿ) ಡೊಂಕಾಗಿ ಬಾಗಿದೆ. ಇದರ ಮೇಲೆ ಉದ್ದಕ್ಕೂ ಅಸಂಖ್ಯ ಗೆರೆಗಳಿದ್ದು ಅವು 'ವೀಣೆ'ಯ ಮೆಟ್ಟಲುಗಳನ್ನು ಸೂಚಿಸುತ್ತವೆ. ದಂಡಿಯ ತಳಭಾಗದಲ್ಲಿ ಒಂದು ಬಲವಾದ ಶ್ರುತಿ ವರ್ಧಕ ಸಾಧನ (resonator)ವಿದೆ. ಮತ್ತು ಈ ವಾದ್ಯವನ್ನು ಉದ್ದವಾದ ಕಮಾನಿನಿಂದ (bow) ನುಡಿಸುತ್ತಿರುವಂತಿದೆ. ಆದರೆ ಇದಕ್ಕೆ 'ಬಿರುಡೆ'ಗಳಿಲ್ಲ ಇಲ್ಲಿ ಬಿಟ್ಟು ಈ ವಾದ್ಯ ಬೇರೆಲ್ಲೂ ಕಂಡುಬರುವುದಿಲ್ಲ ಎಂಬುದು ಕುತೂಹಲದ ಅಂಶವಾಗಿದೆ.

ಸಾಮಾನ್ಯವಾಗಿ ವೀಣೆ ಎಂದರೆ ಸರಸ್ವತಿಯ ನೆನಪು ಅರುತ್ತದೆ. ಆದರೆ ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಿ ದೇವಾಲಯದ ಛಾವಣಿಯಲ್ಲಿನ ಶಿಲ್ಪದಲ್ಲಿ ಶಿವ ನೃತ್ಯ ಭಂಗಿಯಲ್ಲಿ ವೀಣೆ ಹಿಡಿದು ನುಡಿಸುತ್ತಿರುವುದು ಅಪರೂಪದ್ದಾಗಿದೆ.

ಕಿನ್ನರಿ ವೀಣೆಗಳೇ ಅಲ್ಲದೇ ತಂಬೂರಿ, ಸಾರಂಗಿ, ಗೋಟುವಾದ್ಯದಂತಹ ವಾದ್ಯಗಳೂ ವಿವಿಧ ಶಿಲ್ಪಗಳಲ್ಲಿ ಕಂಡುಬರುತ್ತವೆ. ತಂಬೂರಿ ಹೋಲುವ ವಾದ್ಯ ಪರ್ಷಿಯಾದಲ್ಲೂ ಉಂಟು.

ಕೊಳಲು:

ಮೂಳೆಗಳಲ್ಲಿ ರಂಧ್ರ ಕೊರೆದು ಮಾಡಿದ್ದ ಸರಳವಾದ ಪೀಪಿಗಳು (Whisties), ಕೊಳಲುಗಳು ದೊರೆತಿದ್ದು, ಅವು ಪೂರ್ವ ಶಿಲಾಯುಗದ ಮಾನವನಿಗೆ ನಾದದ ಬಗೆಗಿದ್ದ ಅರಿವನ್ನು ಸೂಚಿಸುತ್ತವೆ. ಪೂರ್ವ ಯೂರೋಪ್‌ನ ಹಲವು ಪುರಾತತ್ವ ಶೋಧಗಳಲ್ಲಿ ದೊರೆತ ಸಾಕ್ಷ್ಯಗಳಿಂದ ಆಗಿನ ಮನುಷ್ಯ ಕೊಳಲು ಪ್ರಿಯನಾಗಿದ್ದ ಎಂಬುದು ಸಾಬೀತಾಗುತ್ತದೆ.

ದಂತದ ಕೊಳಲು:

ಕೊಳಲನ್ನು ಪ್ರಾಣಿಯ ದಂತದಿಂದಲೂ ಮಾಡುತ್ತಿದ್ದರೆಂಬುದು ಹೊಸ ಸಂಶೋಧನೆಯಾಗಿದೆ. ಬೃಹತ್ ಗಾತ್ರದ ಪ್ರಾಣಿಯ ದಂತದಿಂದ ನಿರ್ಮಿಸಿದ ಕೊಳಲನ್ನು ಜರ್ಮನಿಯ ಪ್ರಾಚ್ಯವಸ್ತು ಸಂಶೋಧಕರು ಸಂಶೋಧನೆ ಮಾಡಿದ್ದು ಅದು ಸು 30,000 ವರ್ಷಗಳಷ್ಟು ಪುರಾತನದ್ದೆಂದು ಹೇಳಿದ್ದಾರೆ. ದಕ್ಷಿಣ ಜರ್ಮನಿಯ ಸ್ವಾಬಿಯನ್ ಪರ್ವತ ಶ್ರೇಣಿಯಲ್ಲಿ ದೊರೆತಿರುವ ಈ ಕೊಳಲು 18.7 ಸೆಂಟಿಮೀಟರ್ (7.4 ಇಂಚು) ಉದ್ದ ಇದ್ದು ಅದಕ್ಕೆ ಕೇವಲ ಮೂರು ರಂಧ್ರಗಳಿವೆ. ದಶಕದ ಹಿಂದೆ ಇದೇ ಪ್ರದೇಶದಲ್ಲಿ ಹಂಸದ ಎಲುಬಿನಿಂದ ಮಾಡಿದ ಕೊಳಲೂ ದೊರಕಿತ್ತಂತೆ. ಈ ಮಾದರಿಗಳನ್ನು ಗಮನಿಸಿದಾಗ ಆ ಕಾಲದ ಕುಸುರಿ ಕೆಲಸ ಎಷ್ಟು ಸೂಕ್ಷ್ಮವಾಗಿತ್ತೆಂಬುದು ವೇದ್ಯವಾಗುತ್ತದೆ. (ನೋಡಿ : ಕನ್ನಡ ಪ್ರಭ, 31-12-2004 ಪು. 10).

ಸು.ಕ್ರಿ. ಪೂ. 18,000 ದಷ್ಟು ಪ್ರಾಚೀನದ್ದಾದ ಮೂಳೆಯ ಇನ್ನೊಂದು ಕೊಳಲಿನ ಅವಶೇಷವೂ ದೊರೆತಿದೆ. ಹೀಗೆಯೇ ಬೇರೆ ಬೇರೆಡೆ ದೊರೆತ ಕೊಳಲುಗಳು ಸು. 11.5 ಸೆಂ.ಮೀ. ವರೆಗೂ ಉದ್ದವಿದ್ದು, 4 ರಿಂದ 8ರ ವರೆಗೂ ರಂಧ್ರ ಹೊಂದಿವೆ. ಪಿಳ್ಳಂಗೋವಿಗಳ ಚಿತ್ರಣಗಳು ಪಾಸ್ಚಾತ್ಯರಲ್ಲಿ ಬಹು ಪ್ರಾಚೀನತೆ ಹೊಂದಿದ್ದು, ಕ್ರಿ.ಪೂ. 460ರ ಒಂದು ಗ್ರೀಸ್ ಶಿಲ್ಪದಲ್ಲಿ ಕೋಮಲೆಯೊಬ್ಬಳು ಏಕಕಾಲಕ್ಕೆ ಎರಡು ಪಿಳ್ಳಂಗೋವಿಗಳನ್ನು ಎರಡೂ ಕೈಲಿ ಒಂದೊಂದು ಹಿಡಿದು ನುಡಿಸುತ್ತಿರುವುದು (ಪಾಶ್ಚಾತ್ಯರಲ್ಲಿ ಇಂಥಾ ಪದ್ಧತಿಗಳು ವಿಶೇಷವಾಗಿ ಕಾಣಬರುತ್ತವೆ) ದಾಖಲಾಗಿದೆ. ಕ್ರಿ.ಪೂ. 475ರಷ್ಟು ಹಳೆಯ ಒಂದು ರೋಂ ವರ್ಣ ಭಿತ್ತಿ ಚಿತ್ರದಲ್ಲೂ ಇಂತಹ ನಿದರ್ಶನವಿದೆ.

ನಮ್ಮಲ್ಲೂ, ಎಲ್ಲೋರಾ, ಅಜಂತಾ, ಸಾಂಚಿ ಮೊದಲಾದೆಡೆಯ ಶಿಲ್ಪ, ಭಿತ್ತಿಚಿತ್ರಗಳಲ್ಲಿ ಬಾಯಿಗೆ ಅಡ್ಡವಾಗಿಟ್ಟು ನುಡಿಸುವ ಕೊಳಲು ಹಾಗೂ ಬಾಯೊಳಗಿಟ್ಟು, ದೇಹಕ್ಕೆ ಲಂಬವಾಗಿ ಹಿಡಿದು ನುಡಿಸುವ ಪಿಳ್ಳಂಗೋವಿ ಈ ಎರಡೂ ವಾದ್ಯಗಳು ಚಿತ್ರಿತವಾಗಿವೆ. ಆದರೆ ಬಹುಮಟ್ಟಿಗೆ ಈ 'ಪಿಳ್ಳಂಗೋವಿ' ವಾದಕರ ವೇಷಭೂಷಣ, ಕೇಶಾಲಂಕಾರ, ಮುಖಚಹರೆಗಳು ಗ್ರೀಕರನ್ನು ಹೋಲುತ್ತವೆ. ಆ ಕಾರಣಕ್ಕೆ ಈ ವಾದ್ಯ ಭಾರತೀಯರಿಗೆ ಗ್ರೀಕರ ಸಂಪರ್ಕದಿಂದ ಬಂದದ್ದು ಎಂಬ ಅಭಿಪ್ರಾಯವಿದೆ.

ಪಿಟೀಲು ಕಮಾನು ಅಥವಾ ದಂಡ, ಅಡ್ಡಕೊಳಲು ಭಾರತದ ಕಾಣಿಕೆಗಳೆಂದು ಪಾಸ್ಚಾತ್ಯರು ಒಪ್ಪಿಕೊಂಡಿದ್ದಾರೆ ಎಂಬ ಅಂಶವನ್ನು ಇಲ್ಲಿ ಅಗತ್ಯವಾಗಿ ಸ್ಮರಿಸಬಹುದಾಗಿದೆ.

ಅಕ್ಬರನ ಆಸ್ಥಾನ ಕಲಾವಿದರ ವರ್ಣಚಿತ್ರಗಳಲ್ಲಿ ಸ್ತ್ರೀ/ಪುರುಷರು ಕೊಳಲು (ಬಾನ್ಸುರಿ) ಹಾಗೂ ಪಿಳ್ಳಂಗೋವಿಗಳನ್ನು ದಪ್ಪು ಮತ್ತಿತರ ಸಹ ವಾದ್ಯಗಳೊಂದಿಗೆ ನುಡಿಸುತ್ತಿರುವುದು ಕಂಡುಬರುತ್ತದೆ.

ಕರ್ನಾಟಕದ ಸಂದರ್ಭದಲ್ಲಿ 'ಪೂರ್ವ ಚಾಲುಕ್ಯರ ಕಾಲದ ಕೊಳಲು ಚಿಕ್ಕದಾಗಿಯೂ, ಗಟ್ಟಿಮುಟ್ಟಾಗಿಯೂ ಇದ್ದವು. ನಂತರದ ಚಾಲುಕ್ಯರ ಕಾಲದಲ್ಲಿ ಉದ್ದಕೊಳಲನ್ನು ವಾರೆಯಾಗಿ ಹಿಡಿದು ನುಡಿಸುವ ಪದ್ಧತಿ ಬಂತು' ಎನ್ನಲಾಗಿದೆ. ಬಾದಾಮಿಯ ಭಿತ್ತಿಚಿತ್ರಗಳಲ್ಲಿ ಅತಿ ಉದ್ಧವಾದ ಕೊಳಲು ನುಡಿಸುತ್ತಿರುವ ಮಹಿಳೆಯ ಚಿತ್ರಣವಿದೆ (ಈ ವಾದ್ಯ ಬಹುಮಟ್ಟಿಗೆ ಇಂದಿನ ಗೊಲ್ಲರ 'ಗಣೆ' ವಾದ್ಯ ಹೋಲುತ್ತದೆ). ಮುಂದೆ 'ರಾಷ್ಟ್ರಕೂಟರ ಕಾಲದ ಕೊಳಲು ತುಸು ತೆಳುವಾಗಿದ್ದಂತೆ ಚಿತ್ರಿತವಾಗಿವೆ. ಹೊಯ್ಸಳರ ಶಿಲ್ಪಗಳಲ್ಲಿ ಮಧ್ಯಮ ಗಾತ್ರದ, ಉದ್ದದ ಕೊಳಲುಗಳನ್ನು ಅಡ್ಡವಾಗಿ ಹಿಡಿದು ನುಡಿಸುವುದು ಕಂಡು ಬಂದರೆ, ಕೆಲವೆಡೆ ತೆಳುವಾದ, ಸ್ವಲ್ಪ ಉದ್ದವೆನ್ನಬಹುದಾದ ಕೊಳಲುಗಳು ಕಾಣಬರುತ್ತವೆ'.

ತುತ್ತೂರಿ:

ತುತ್ತೂರಿ, ಕೊಂಬು, ಕಹಳೆ, ಇವೆಲ್ಲಾ ಮೂಲತಃ ರಣ ವಾದ್ಯಗಳು ಇಂಗ್ಲಿಷ್‌ನಲ್ಲಿ ಈ ಜಾತಿಯ ವಾದ್ಯಗಳನ್ನೆಲ್ಲಾ ಸಾಮಾನ್ಯವಾಗಿ Trumpets ಎಂಬ ಒಂದೇ ಹೆಸರಿನಿಂದ ಬರೆದುಬಿಡುತ್ತಾರೆ. ಆದರೆ ಕನ್ನಡದಲ್ಲಿ ಪ್ರತ್ಯೇಕ ಹೆಸರುಗಳೇ ಇವೆ. ತುತ್ತೂರಿಗೂ ಪ್ರಾಚೀನ ಇತಿಹಾಸವಿದೆ. 'ರೋಮನ್ನರಿಗೆ ಮುನ್ನ ಇಟಲಿಯಲ್ಲಿದ್ದ ಎಟ್ರುಸ್ಕನ್ ಜನ ಈ ಕಾಳಗ ಕಹಳೆಗಳನ್ನು ಮೊದಲು ಬಳಸಿದರೆನ್ನುತ್ತಾರೆ. ಮೆಸಪಟೋಮಿಯಾದ ಒಂದು ಮುದ್ರೆಯಲ್ಲೂ ತುತ್ತೂರಿ ಹೋಲುವ ವಾದ್ಯವಿದೆ. ಈಜಿಪ್ಟ್‌ನಲ್ಲಿ ಕ್ರಿ.ಪೂ.ಸು. 1515ರ ವೇಳೆಗೆ ಯುದ್ಧದಲ್ಲಿ ತುತ್ತೂರಿ ಬಳಕೆಯಾಗುತ್ತಿದ್ದ ನಿದರ್ಶನಗಳಿವೆ. ಅವು ಸಾಕಷ್ಟು ಉದ್ದವಾದ ಕೊಳವೆಗಳಾಗಿದ್ದು ಊದುವ ಭಾಗ ಕಿರಿದಾಗಿದ್ದರೆ ಇನ್ನೊಂದು ತುದಿ ಆಲಿಕೆಯಂತೆ ಅಗಲವಾಗಿರುತ್ತದೆ.

ನಮ್ಮಲ್ಲೂ ಗಾಂಧಾರ, ಸಾಂಚಿಯ ಶಿಲ್ಪಗಳಲ್ಲಿ ತುತ್ತೀರಿಯ ಕೆಲ ಮಾದರಿಗಳಿವೆ. ಅಜಂತಾ ಗುಹೆಯಲ್ಲಿ ಮೊದಲ ಕಾಲ ಘಟ್ಟದಲ್ಲಿ ಬರೆದ ಭಿತ್ತಿ ಚಿತ್ರಗಳಲ್ಲಿನ ತುತ್ತೂರಿ ಸಾಕಷ್ಟು ಉದ್ದವಿರುವ ಒಂದು ಕೊಳವೆಯಾಗಿದ್ದು ಅದರ ಒಂದು ತುದಿ ಚೂಪಾಗಿದ್ದು ಊದಲು ಸಣ್ಣ ಬಟ್ಟಲಿನಂತಹ ಸಾಧನ ಅಳವಡಿಸಿದ್ದರೆ ಇನ್ನೊಂದು ತುದಿ ಅಗಲವಾಗಿದೆ. ಎರಡನೇ ಕಾಲಘಟ್ಟದಲ್ಲಿ ಬರೆದಿರುವ ಚಿತ್ರಗಳಲ್ಲಿನ ತುತ್ತೂರಿ ಚಿಕ್ಕದಾಗಿದ್ದರೂ ಮೊದಲಿನದಕ್ಕಿಂತ ಹೆಚ್ಚು ಅಲಂಕರಣದಿಂದ ಕೂಡಿದೆ. ಅಬುಲ್ ಫಜಲನ ವಿವರಣೆಗಳಿಂದ ಅಕ್ಬರ್‌ನಂತಹ ದೊರೆಗಳ ಆಸ್ಥಾನದ ವಾದಯ್ ತಂಡಾದಲ್ಲಿ ಮೈಮೇಲೆ ರಂಧ್ರಗಳಿರುವ ತುತ್ತೂರಿ ("ಸೂರ್ನಾ")ಗಳು ಪ್ರಮುಖ ಸ್ಥಾನ ಪಡೆದಿದ್ದು (ಮುಖವೀಣೆಯ ಹಾಗೆ ಉಸಿರು ಹಾಗೂ ಬೆರಳುಗಳ ನಿಯಂತ್ರಣದಿಂದ ಇವುಗಳಲ್ಲಿ ರಾಗ ವೈವಿದ್ಯ ಹೊರಡಿಸಬೇಕಾಗುತ್ತದೆ). ವಿಶೇಷ ಸಂದರ್ಭಗಳಲ್ಲಿ ಒಂಭತ್ತು ಸೂರ್ನಾಗಳು ಬಳಕೆಯಾಗುತ್ತಿದ್ದು ಅವುಗಳೊಡನೆ "ನಫೀರ್" ಎಂಬ (ಮೈಮೇಲೆ ರಂಧ್ರಗಳಿರದವು – ಕೇವಲ ಉಸಿರಿನ ಏರಿಳಿತದಿಂದಲೇ ಇವುಗಳಲ್ಲಿ ರಾಗ ಧಾಟಿ ವೈವಿಧ್ಯ ತರಬೇಕಾಗುತ್ತದೆ) ತುತ್ತೂರಿಗಳೂ ಸೇರುತ್ತಿದ್ದುದಾಗಿ ತಿಳಿದು ಬರುತ್ತದೆ.

ಕೊಂಬು :

ಪ್ರಾಣಿಗಳ ಕೊಂಬೇ ಈ 'ಕೊಂಬು' ವಾದ್ಯದ ಮೂಲ ಪ್ರೇರಣೆ. ಈಗಲೂ ಕೆಲ ಜೋಗಿಗಳು ಸಾರಂಗದ ಕೊಂಬನ್ನೇ 'ಸಿಂಗಿನಾದ'ವಾಗಿ ಊದುತ್ತಾರೆ. ದನಗಳ ಕೊಂಬನ್ನೇ ಹೋಲುವ ಹಲವು ವಾದ್ಯಗಳ ಚಿತ್ರಣ ನಮ್ಮ ಪ್ರಾಚೀನ ಶಿಲ್ಪಗಳಲ್ಲಿವೆ. ಕ್ರಿ.ಶ. 1ನೇ ಶತಮಾನಕ್ಕೆ ಸೇರಿದ ಒಂದು ಉಬ್ಬು ಶಿಲ್ಪದಲ್ಲಿ ಕೊಂಬುಗಳನ್ನು ಮೇಲೆತ್ತಿ ಊದುತ್ತಿರುವವರ ಚಿತ್ರಣವಿದೆ. ಡೆನ್‌ಮಾರ್ಕ್‌ನಲ್ಲಿ ದೊರೆತ ಒಂದು ಪ್ರಾಚೀನ ಬೆಳ್ಳಿ ಕೆಟಲ್ ಮೇಲೆ ಮೂವರು ಕೊಂಬುಗಳನ್ನು ಮೇಲೆತ್ತಿ ಊದುತ್ತಿರುವ ಚಿತ್ರವಿದ್ದು, ಆ ಕೊಂಬುಗಳ ಒಂದು ತುದಿ ಕಿರಿದಾಗಿದ್ದರೆ ಇನ್ನೊಂದು ತುದಿ ಅಗಲವಾಗಿದ್ದು, ಬಾಯಿತೆರೆದ ಕುದುರೆಮುಖದ ಅಲಂಕರಣ

ಹೊಂದಿದೆ. ಕೊಂಬಿನ ಉದ್ದಕ್ಕೆ ಇರುವ ಮೂರ್‍ನಾಲ್ಕು ಉಬ್ಬಿದ ಉಂಗುರಗಳು ಈಗಿನ ನಮ್ಮ 'ಕೊಂಬು'ಗಳಲ್ಲಿನ ಉಬ್ಬು ರಚನೆಯನ್ನೇ ಹೋಲುತ್ತವೆ.

ಮೊಗಲ್ ಕಾಲದ ಕೊಂಬು – ಕಹಳೆಗಳನ್ನು ಹಿತ್ತಾಳೆ, ಬೆಳ್ಳಿ, ಕೆಲವೊಮ್ಮೆ ಚಿನ್ನದಿಂದಲೂ ಮಾಡುತ್ತಿದ್ದರೆನ್ನಲಾಗಿದೆ. ಕೊಂಬು ವಾದ್ಯದ ಒಂದು ರೂಪ 'ರಜ್ಮನಾಮ' ಎಂಬ ಪರ್ಸಿಯಾದ ಸಚಿತ್ರ ಹಸ್ತ ಪ್ರತಿಯೊಂದಲ್ಲಿ ಚಿತ್ರಿತವಾಗಿದೆ. ಅದೊಂದು ಉದ್ದದ ಮರದ ಕೊಳವೆಯಾಗಿದ್ದು, ಕೊಂಬಿನಂತೆ ಅರೆ ಬಾಗಿದೆ. ಕಿರಿದಾದ ತುದಿಗೆ ಸಣ್ಣ ಆಲಿಕೆಯಂತಹ ಸಾಧನವಿದ್ದರೆ ಇನ್ನೊಂದು ತುದಿ ಅಗಲವಾಗಿದೆ.

ಡೊಂಕಾಗಿರುವ ಇಲ್ಲವೇ ಉದ್ದಕ್ಕೆ ನೇರವಾಗಿರುವ ಕೊಂಬುಗಳು ಶಿಲ್ಪಗಳಲ್ಲೂ, ಚಿಕಣಿ ಚಿತ್ರಗಳಲ್ಲೂ ಕಂಡುಬರುತ್ತವೆ. 'S' ಆಕಾರದ ಕೊಂಬುಗಳು ಈಚಿನ ಬೆಳವಣಿಗೆ ಎನ್ನಲಾಗಿದೆ.

ನಮ್ಮ ದಾಸಯ್ಯಗಳು ವಿಶೇಷವಾಗಿ ಬಳಸುವ 'ಭಾಂಕಿ'ಗಳು ಕೊಂಬು ವಾದ್ಯಗಳಲ್ಲೆ ಇನ್ನೊಂದು ಜಾತಿಯವು. ಇವು ಪಾಶ್ಚಾತ್ಯರಲ್ಲೂ ಬಹು ಹಿಂದಿನಿಂದಲೂ ಇವೆ ಎಂಬುದಕ್ಕೆ ಸ್ಪಷ್ಟ ನಿದರ್ಶನಗಳಿವೆ.

ತಾಳಗಳು:

ಸು.ಕ್ರಿ.ಪೂ. 1200 ರಷ್ಟು ಹಿಂದೆಯೆ ತಾಳಗಳಿದ್ದವೆಂಬುದು ಕೆಲ ಸಂಗ್ರಹಗಳಿಂದ ತಿಳಿದುಬರುತ್ತದೆ. ಬ್ಯಾಬಿಲೋನಿಯಾದಲ್ಲಿ ಮಂದವಾದ ಚಿಕ್ಕತಾಳಗಳಿದ್ದವು. ಗ್ರೀಕೋ ರೋಮನ್ ಕಲೆಯಲ್ಲೂ ಈ ಮಾದರಿಗಳು ಉಳಿದು ಬಂದಿದ್ದು ಅವುಗಳನ್ನು ಪರಸ್ಪರ ಸಮಾನಾಂತರ ಚಲನೆಯಲ್ಲಿ ತಾಡಿಸಿ ಶಬ್ದ ಉಂಟುಮಾಡುತ್ತಿದ್ದರೆಂದು ಕಾಣುತ್ತದೆ. ಆದರೆ, ಆಸೀರಿಯ ಹಾಗೂ ಹಿಟ್ಟಿಟೆ ನಾಗರೀಕತೆಗಳ ಉಬ್ಬುಶಿಲ್ಪಗಳಲ್ಲಿನ ತಾಳಗಳು ಶಂಖಾಕೃತಿಯಲ್ಲಿದ್ದು, ಅವುಗಳನ್ನು ಲಂಬವಾಗಿ ಒಂದಕ್ಕೊಂದು ತಾಟಿಸುತ್ತಿರಬಹುದೆನಿಸುತ್ತದೆ. ಗ್ರೀಕರ ಕಾಲದಲ್ಲಿ 150 ಮಿ.ಮೀ. ವ್ಯಾಸದಷ್ಟು ದೊಡ್ಡ ಆಕಾರದ ತಾಳಗಳಿದ್ದವೆಂಬುದು ಈಜಿಪ್ಟ್‌ನಲ್ಲಿ ದೊರ್ತ ಜೇಡಿಮಣ್ಣಿನ ಮುದ್ರೆಗಳಲ್ಲಿ ಕಂಡುಬಂದಿದೆ. ಕ್ರಿ.ಶ. 1ನೇ ಶತಮಾನದ ಇಟಲಿಯ ಒಂದು ಉಬ್ಬುಶಿಲ್ಪದಲ್ಲಿ ಕಾಣುವ ತಾಳಗಳು ಸಣ್ಣ ಬಟ್ಟಲಿನಂತಿದ್ದು ಹೊರ ನಡು ಉಬ್ಬಿದೆ ಹಾಗೂ ಅಲ್ಲಿ ತಾಳ ಹಿಡಿಯಲು ಅಗತ್ಯ ಸಾಧನವಿದ್ದಂತಿದೆ. ಆದರೆ ಕ್ರಿ.ಪೂ. 2ನೇ ಶತಮಾನದ ಅಂತ್ಯಭಾಗಕ್ಕೆ ಸೇರಿದ ಇಟಾಲಿಯ ಮೊಸಾಯಿಕ್ ಚಿತ್ರದಲ್ಲಿನ ತಳಗಳು ಚಿಕ್ಕ ಆಕಾರದಲ್ಲಿದ್ದು, ಡಪ್ಪಿನಂತಹ ವಾದ್ಯ ಹಿಡಿದು ಸಾಭಿನಯ ಪೂರ್ವಕ ನುಡಿಸುತ್ತಿರುವವನಿಗೆ ಈ ತಾಳ ಹಾಕುತ್ತಿರುವುದು ಇಂದಿನ ಲಾವಣಿ/ಕಥನ ಪ್ರದರ್ಶನವನ್ನೇ ಹೋಲುತ್ತದೆ.

ಅಜಂತಾದ 17ನೇ ಗುಹೆಯ ಭಿತ್ತಿಚಿತ್ರದಲ್ಲಿ ದೊಡ್ಡ ಲೋಟದಂತಹ ತಾಳಗಳಿದ್ದು ಅವುಗಳಿಗೆ ಹಿಡಿಕೆಗಳೂ ಇವೆ. ಅವು ಇಂದಿನ ನಮ್ಮ ಭಾಗವತರ ತಾಳಗಳನ್ನೇ ಹೋಲುತ್ತಿವೆ. ಅರಳುಗುಪ್ಪೆಯ ಕಲ್ಲೇಶ್ವರ ದೇವಸ್ಥಾನದ (ಸು. 9ನೇ ಶತಕ) ನಟರಾಜ ಶಿಲ್ಪದ ಜೊತೆಗೆ ಇರುವ ತಾಳಧಾರಿಯ ತಾಳಗಳು ಸಣ್ಣ ಬಟ್ಟಲಿನಂತಿದ್ದು, ಅವುಗಳನ್ನು ಹಿಂಬದಿಯಲ್ಲಿನ ಹಿಡಿಕೆಯಲ್ಲಿ ಬೆರಳು ತೂರಿಸಿ ಹಿಡಿದಿರುವಂತೆ ಚಿತ್ರಿಸಿದೆ.

ಹಳೇಬೀಡಿನ ಶಿಲ್ಪವೊಂದರ (ಕ್ರಿ.ಶ. 1121) ವಾದ್ಯಗಾತಿಯೊಬ್ಬಳ ಕೈನಲ್ಲಿನ ತಾಳಗಳು ಚಿಕ್ಕಗಂಟೆಗಳಂತಿದ್ದು ಹಿಡಿಯಲು ಉದ್ದವೂ ಸುಂದರವೂ ಆದ ಗೊಂಡೆಗಳಿವೆ. ಮೇವಾಡ (ರಾಜಸ್ಥಾನ) ಕಲಾವಿದ ಬರೆದ (ಕ್ರಿ.ಶ. 1650) 'ರಾಗಿಣಿವಸಂತ' ಚಿತ್ರದಲ್ಲಿ ಲಲನೆಯೊಬ್ಬಳು ಹಿಡಿದಿರುವ ತಾಳಗಳು ಮೊಟ್ಟೆಯ ಎರಡು ಹೋಳುಗಳಂತಿವೆ. ಸುಂದರ ಗೊಂಡೆಗಳೂ ಇವೆ. ಬಾದಾಮಿಯ (6ನೇ ಶತ) ನಂದಿಯ ಭೋಗ ನಂದೀಶ್ವರ ದೇವಾಲಯ (ಸು.ಕ್ರಿ.ಶ. 810) ಹರಿಹರದ ಹರಿಹರೇಶ್ವರ ದೇವಾಲಯಗಳ ಶಿಲ್ಪಗಳಲ್ಲಿ ದೊಡ್ಡ ಆಕಾರದ ತಾಳ 'ಜಾಲರಿ'ಗಳು ಕಂಡುಬರುತ್ತವೆ.

ಅಧ್ಯಯನಕಾರರೊಬ್ಬರ ಪ್ರಕಾರ 'ಕ್ರಿಸ್ತ ಶಕಕ್ಕೆ ಮೊದಲು ಚಿಕ್ಕ ಬಟ್ಟಲಿನಂತಹ ಕರತಾಳ'ಗಳೇ ಹೆಚ್ಚು ಜನಪ್ರಿಯವಾಗಿದ್ದಂತೆ ಕಾಣುತ್ತದೆ. ಆದರೆ ಇನ್ನೊಬ್ಬರ ಪ್ರಕಾರ ಮೊದಲಿಗೆ ಈ ತಾಳಗಳು ಹೆಚ್ಚು ಅಗಲವಾಗಿಯೂ, ಸಮತಲವಾಗಿಯೂ ಇದ್ದವು ('ಕಾಂಸ್ಯತಾಳ' ಅಥವಾ 'ಜಾಲರಿ'ಗಳು) 8ನೇ ಶತಮಾನದ ನಂತರ ಚಿಕ್ಕ ಬಟ್ಟಲಿನಂತಹ ತಾಳಗಳು ಬಳಕೆಗೆ ಬಂದವು. 2ನೇ ಚಾಲುಕ್ಯರ ಕಾಲದಲ್ಲಿ ಈ ತಾಳಗಳ ಒಳಭಾಗದ ಗುಣಿ ಇನ್ನೂ ಆಳವಾಗಿ ಘಂಟೆ ಹೋಲುವ ತಾಳ ರೂಪುಗೊಂಡವು. ತಾಳ ಹಿಡಿಯಲು ಸಾಧಾರಣ ದಾರಕ್ಕೆ ಬದಲು ಸುಂದರ ಗೊಂಡೆಗಳೂ ಬಂದವು.

ಹೀಗೆ, ತಾಳಗಳಷ್ಟೇ ಅಲ್ಲದೆ, ಚಿಟಕೆಗಳು, ಕಿರಿಕಿಟ್ಟಕ್ಕಗಳು, ಜಾಗಟೆ, ಗೆಜ್ಜೆಗಳೂ ಶಿಲ್ಪ ಚಿತ್ರಗಳಲ್ಲಿ ಚಿತ್ರಿತವಾಗಿವೆ. ಮಕ್ಕಳ ಆಟಿಕೆಯಾಗಿರುವ ಗಿಲಕೆಗಳಿಗೂ ಪ್ರಾಚೀನ ಇತಿಹಾಸವಿದ್ದು ಅಮರಾವತಿ, ನಾಗಾರ್ಜುನ ಕೊಂಡಗಳ ಉತ್ಖನನಗಳಲ್ಲಿ ಮಣ್ಣಿನಲ್ಲಿ ಮಾಡಿದ ಪ್ರಾಣಿ, ಪಕ್ಷಿ ರೂಪದ ಕೆಲ ಗಿಲಕೆಗಳು ದೊರೆತಿವೆ. ಮಣ್ಣಿನಿಂದ ಮಾಡಿದ ಕೆಲವು ಹಕ್ಕಿ ಗೊಂಬೆಗಳ ಒಳಗೆ ಹರಳುಗಳನ್ನು ತುಂಬಿರುವುದನ್ನು ನೋಡಿದರೆ, ಆ ಗೊಂಬೆಯನ್ನು ಗಿಲಕಿಯಂತೆ ಬಳಸಲಾಗುತ್ತಿತ್ತೆಂದು ನಂಬಬಹುದಾಗಿದೆ. ಮೆಸಪಟೋಮಿಯ, ಬ್ಯಾಬಿಲೋನಿಯ, ಈಜಿಪ್ಟ್ ಮೊದಲಾದ ಪುರಾತನ ಸಂಸ್ಕೃತಿಗಳಲ್ಲಿಯೂ ಕ್ರಿ.ಪೂ. 2 ಸಾವಿರ ವರ್ಷಗಳಿಗೂ ಮೊದಲೂ ಈ ರೀತಿಯ ಗಿಲಕೆ ಆಟಿಕೆಗಳಿದ್ದವೆಂಬುದು ಪಳೆಯುಳಿಕೆಗಳಿಂದ ತಿಳಿದು ಬರುತ್ತದೆ.

ಕೋಲಾಟ:

ಜನ ಸಾಮಾನ್ಯರ ಅಚ್ಚುಮೆಚ್ಚಿನ ಕೋಲಾಟವನ್ನು ಶಿಲ್ಪಿಗಳು ಮರೆತಿಲ್ಲ. ಕೈವಾರದ ಭೀಮೇಶ್ವರ ದೇವಸ್ಥಾನ (ಸು. 13ನೇ ಶತ.) ಪಾಳ್ಯದ ಜನಾರ್ಧನ ದೇವಾಲಯ (14ನೇ ಶಾತ.) ಅಲ್ಲದೆ, ಹಂಪಿಯ ಶಿಲ್ಪಗಳಲ್ಲೂ (16ನೇ ಶತ.) ಕೋಲಾಟಾದ ಚಿತ್ರಣಗಳಿವೆ. ಇದಕ್ಕೂ ಹಿಂದಿನ ಸಾಂಚಿಕ್ ನಾಗಾರ್ಜುನ ಕೊಂಡದ ಶಿಲ್ಪಗಳಲ್ಲೂ ಕೋಲಾಟ ಕಾಣಬರುತ್ತದೆ. ಮೆಸಪಟೋಮಿಯಾ ಸಂಸ್ಕೃತಿಯಲ್ಲೂ ಕೋಲಾಟವಿದ್ದ ಕುರುಹುಗಳಿವೆ. ಆ ಕೋಲುಗಳು ಕೆಲವೊಮ್ಮೆ ನೇರವಾಗಿದ್ದರೆ ಹಲವೊಮ್ಮೆ ವಕ್ರವಾಗಿರುತ್ತಿದ್ದವು ಎನ್ನಲಾಗಿದೆ. ಕ್ರಿ.ಪೂ. 260ರ ಕಾಲದ ಸುಮೇರಿಯನ್ನರಲ್ಲಿ ಈ ರೀತಿ ಕೋಲುಗಳಿದ್ದವೆಂಬುದನ್ನು ಉರ್ ಪ್ರದೇಶದಲ್ಲಿ

ದೊರೆತಿರುವ ವ್ಯಕ್ತಿಯೊಬ್ಬ ಬಾಗಿದ ಕೋಲುಗಳನ್ನು ಪರಸ್ಪರ ಬಡಿಯುತ್ತಿರುವ ಚಿತ್ರ ಸಾಬೀತು ಪಡಿಸುತ್ತದೆ.

ಚರ್ಮ ವಾದ್ಯಗಳು:

ಕೊಂಬು ತುತ್ತೂರಿಗಳ ಹಾಗೆ ತಮಟೆ, ಭೇರಿಯಂತಹ ಚರ್ಮ ವಾದ್ಯಗಳೂ ಸುದ್ದಿ ಸಂಕೇತವನ್ನು ಹೆಚ್ಚು ದೂರಕ್ಕೆ ರವಾನಿಸುವ ಉದ್ದೇಶಾಕ್ಕೆ ಹುಟ್ಟಿಕೊಂಡಂಥವು. ಇವುಗಳ ಶಬ್ದ ಹೆಚ್ಚು ದೂರ ಕ್ರಮಿಸಿದರೂ ತನ್ನ ಸಾಂಧ್ರತೆಯನ್ನು ಅಷ್ಟಾಗಿ ಕಳೆದುಕೊಳ್ಳದ ವಿಶೇಷ ಗುಣ ಇವಕ್ಕಿದೆ. ಬಹಳಷ್ಟು ಚರ್ಮವಾದ್ಯಗಳಿಗೆ ಶಬ್ದವರ್ಧಕ ವ್ಯವಸ್ಥೆ ಇರುತ್ತದೆ ಎಂಬ ಅಂಶವನ್ನು ವಿದ್ವಾಂಸರು ಗಮನಿಸಿದ್ದಾರೆ. ಚರ್ಮವಾದ್ಯಗಳಲ್ಲಿ ಅತಿಚಿಕ್ಕ ಗಾತ್ರದ ಬುಡುಬುಡಿಕೆಯಿಂದ ಹಿಡಿದು ದೊಡ್ಡ ಗಾತ್ರದ ಜಗ್ಗಲಗೆವರೆಗೂ ವಿವಿಧ ಗಾತ್ರ, ಆಕಾರ, ಶಬ್ದ ವೈವಿಧ್ಯ ಪಡೆದ ಮಾದರಿಗಳಿವೆ. ಈ ವಾದ್ಯಗಳ ವಿಕಾಸ ಗುರುತಿಸಲು ಎಲ್ಲಾ ಪ್ರಾಚೀನ ನಾಗರೀಕತೆಗಳಲ್ಲೂ ತಕ್ಕ ನಿದರ್ಶನಗಳಿವೆ.

ಮೆಸಪಟೋಮಿಯಾದಲ್ಲಿ ದೊರೆತ ಕೆಲ ವಸ್ತುಗಳಿಂದ ಹಾಗೂ ಆದಬ್‌ನಲ್ಲಿ (ಕ್ರಿ.ಪೂ. 3000) ದೊರೆತ ಒಂದು ಕರಂದಾಕದಿಂದ ಆಗ ತಮಟೆಯಂತಹ ಹಾಗೂ ಸಿಲಿಂಡರಿನಾಕಾರದ (ಡ್ರಂ) ವಾದ್ಯಗಳಿದ್ದು ಅವುಗಳನ್ನು ಅಡ್ಡವಾಗಿ ಇಲ್ಲವೇ ಲಂಬವಾಗಿ ಇಟ್ಟು ನುಡಿಸುತ್ತಿದ್ದರೆಂದು ತಿಳಿಯಬರುತ್ತದೆ. ಪ್ರಾಚೀನ ಈಜಿಪ್ಟ್‌ನ ಒಂದು ವಾದ್ಯಕ್ಕೆ ಚರ್ಮವನ್ನು ಬಾರುಗಳಿಂದ ಬಿಗಿದಿದ್ದು ಅದರ ಎರಡೂ ಮುಖಗಳನ್ನು ನುಡಿಸಲು ಬಡಿಯುವ ಹಾಗೂ ಉಜ್ಜುವ ಕಡ್ಡಿಗಳನ್ನು ಬಳಸುತ್ತಿದ್ದರೆಂಬ ಅಭಿಪ್ರಾಯವಿದೆ. ಆದರೆ, ಇನ್ನೊಂದು ಅಭಿಪ್ರಾಯದ ಪ್ರಕಾರ 'ಚರ್ಮವಾದ್ಯ ನುಡಿಸಲು ಬಳಸುವ ಕೋಣ ಅಥವಾ ಗುಣಿ (ಕೋಲು) ಪೂರ್ಣವಾಗಿ ಭಾರತೀಯ ಮೂಲದ್ದು. ಮೆಸಪಟೋಮಿಯ ಅಥವಾ ಈಜಿಫ್ಟ್‌ಗಳಲ್ಲಿ ಭಾರೀ ಚರ್ಮವಾದ್ಯಗಳಿದ್ದರೂ ಅವುಗಳನ್ನು ಕೋಲಿನಿಂದ ಬಡಿಯುತ್ತಿರಲಿಲ್ಲ. ಕ್ರಿ.ಶ. 3ನೇ ಶತಮಾನದ ನಂತರ ಪಾಶ್ಚಾತ್ಯರಲ್ಲೂ ಇದು ರೂಢಿಗೆ ಬಂತು.

ಪ್ರಾಚೀನ ಶಿಲ್ಪ, ಚಿತ್ರಗಳಲ್ಲಿ ಮೃದಂಗ, ಮುರಜ, ತಮಟೆ, ನಗಾರಿ, ಮೊದಲಾದ ಹಲವಾರು ವಾದ್ಯಗಳ ಆಕಾರವನ್ನೂ ನುಡಿಸುವ ಕ್ರಮವನ್ನು ಚಿತ್ರಿಸಿದೆ. ಇಲ್ಲಿ ಕೆಲವು ನಿದರ್ಶನಗಳನ್ನು ಗಮನಿಸಬಹುದಾಗಿದೆ.

ಮೃದಂಗ/ಮದ್ದಲೆ:

ಸಾಂಚಿಯಿಂದ ಹೊಯ್ಸಳರವರೆಗಿನ ವಿವಿಧ ಕಾಲದ ನಮ್ಮ ಶಿಲ್ಪಗಳಲ್ಲಿ ಮೃದಂಗ ವಾದನದ ಬೇರ್ ಬೇರೆ ಕ್ರಮಗಳನ್ನು ಕಲಾವಿದರು ನಿರೂಪಿಸಿದ್ದಾರೆ. ವಾದ್ಯವನ್ನು ಎಡ ಕೈಯಿಂದ ಒತ್ತಿ ಹಿಡಿದು, ಬಲ ಕೈಯಿಂದ ನುಡಿಸುವ ಕ್ರಮದ 'ಅಂಕ್ಯ – ಮೃದಂಗ', ತಬಲದಂತೆ ಎಡಗೈಯಿಂದ 'ಅಂಕ್ಯ', ಬಲಗೈಯಿಂದ 'ಊರ್ಧ್ವ'ಗಳನ್ನು ನುಡಿಸುವ 'ಅಂಕ್ಯ – ಊರ್ಧ್ವ ಮೃದಂಗ', ನೆಲದ ಮೇಲೆ ಲಂಬವಾಗಿ ನಿಲ್ಲಿಸಿ ನುಡಿಸುವ

ಊರ್ಧ್ವ ಮೃದಂಗ ಹೀಗೆ ಮೃದಂಗದ ನಾನಾ ಬಗೆಗಳು ಶಿಲ್ಪಗಳಲ್ಲಿ ಪಡಿ ಮೂಡಿವೆ. ವಾದ್ಯಗಳ ರಚನೆಗೆ ಸಂಬಂಧಿಸಿಯೂ ವಾದ್ಯದ ಎರಡೂ ಮುಖಗಳ ಚರ್ಮವನ್ನು 'ಬಾರು'ಗಳಿಂದ ಎಳೆದು ಕಟ್ಟಿರುವುದು ಕೆಲವೊಮ್ಮೆ ಒಂದು ಮುಖದ ಮೇಲೆ 'ಕರಣೆ' ಅಂಟಿಸಿರುವುದು (ಅಜಂತಾದ ಚಿತ್ರ)..... ಈ ಅಂಶಗಳೂ ಸ್ಪಷ್ಟವಾಗಿ ಕಾಣಬರುತ್ತವೆ. ಆದರೆ ಈಗಿನಂತೆ ಶೃತಿ ನಿಯಂತ್ರಣಕ್ಕಾಗಿ 'ಬಾರು'ಗಳ ನಡುವೆ ಬೆಣೆಗಳನ್ನು ಇರಿಸುವ ಪದ್ಧತಿ ಹಿಂದೆಯೂ ಇದ್ದದಕ್ಕೆ ಶಿಲ್ಪಿಗಳಲ್ಲಾಗಲೀ ಚಿತ್ರಗಳಲ್ಲಾಗಲೀ ನಿದರ್ಶನಗಳಿಲ್ಲ. ಬದಲಿಗೆ ಬಾರುಗಳ ನಡುವೆ ಎಡ ಹಸ್ತ ತೂರಿಸಿ ವಾದ್ಯ ಒತ್ತಿಹಿಡಿದು, ಹಿಡಿತವನ್ನು ಬಿಗಿ–ಸಡಿಲ ಮಾಡುವ ಮೂಲಕ ಶೃತಿ ನಿಯಂತ್ರಣ ಮಾಡುವುದೇ ಆಗಿನ ಪದ್ಧತಿಯಾಗಿದ್ದಿರಬಹುದೆಂಬುದಕ್ಕೆ ಉದ್ದಕ್ಕೂ ಹಲವಾರು ನಿದರ್ಶನಗಳಿವೆ. ಕೊನಾರ್ಕದ ಈ ಜಾತಿಯ ಒಂದು ವಾದ್ಯದ ಎರಡೂ ಅಂಚುಗಳ ತುದಿ ಸುತ್ತಲೂ 'ಸ್ಕ್ರೂ'ಗಳಂತಹ ಸಾಧನಗಳಿರುವುದು ಕುತೂಹಲಕರವಾಗಿದೆ. ಕೆಲವು ಸಂದರ್ಭಗಳಲ್ಲಿ ಇವುಗಳನ್ನು ಕೋಲಿನಿಂದ (ಡೋಲಿನಂತೆ) ನುಡಿಸುತ್ತಿರುವುದೂ ಇದೆ.

ಈ ವಾದ್ಯಗಳ ಅಧ್ಯಯನಕ್ಕೆ ಸಂಬಂಧಿಸಿದ ಒಂದು ತಾಂತ್ರಿಕ ತೊಡಕು ಏನೆಂದರೆ ಬಹುಮಟ್ಟಿಗೆ ಎಲ್ಲ ಅಧ್ಯಯನಕಾರರೂ ಮೃದಂಗ ಜಾತಿಯ ವಾದ್ಯಗಳನ್ನೂ, ಡೋಲು ಜಾತಿಯ ವಾದ್ಯಗಳನ್ನೂ ಈ ಯಾವುದೇ ಕಂಡಾಗಲೂ 'ಡ್ರಂ' ವಾದ್ಯವೆಂದೇ ಹೆಸರಿಸಿಬಿಡುತ್ತಾರೆ. ಇದು ಸರಿಯಾದ ಕ್ರಮ ಅಲ್ಲವಾದ್ದರಿಂದ, ನಾವು ಅವುಗಳನ್ನು ಎಚ್ಚರಿಕೆಯಿಂದ ಹೆಸರಿಸಿ ಅಧ್ಯಯನ ಮಾಡಬೇಕಾಗುತ್ತದೆ.

ನಗಾರಿ:

ಬ್ಯಾಬಿಲೋನಿಯನ್ನರಲ್ಲಿ 'ರಣಭೇರಿ (ನಗಾರಿ) ಇದ್ದ ನಿದರ್ಶನವಿದೆ. ಸಾಂಚಿಯ ಉಬ್ಬುಶಿಲ್ಪವೊಂದರಲ್ಲೂ ನಗಾರಿಯಂತಹ ವಾದ್ಯವನ್ನು ವಾದಕರು ಹೆಗಲಿಗೆ ನೇತುಹಾಕಿಕೊಂಡು ಕೋಲುಗಳಿಂದ ಬಡಿಯುತ್ತಿರುವ ಚಿತ್ರಣವಿದೆ. ವಾದ್ಯ ಗೋಷ್ಠಿಗಳಲ್ಲಿ ಸಹವಾದ್ಯವಾಗಿಯೂ ನಗಾರಿ ಬಳಕೆಯಾಗುತ್ತಿದ್ದುದನ್ನು ಹಲವಾರು ಚಿಕಣಿ ಚಿತ್ರಗಳಲ್ಲಿ ಕಾಣಬಹುದು. ಈ ಸಂದರ್ಭದ ನಗಾರಿಗಳು ಸ್ವಲ್ಪ ಚಿಕ್ಕ ಆಕಾರದವುಗಳಾಗಿದ್ದರೆ, ಬೇಟೆ, ಮೆರವಣಿಗೆ ಮೊದಲಾದ ಸಂದರ್ಭದ ನಗಾರಿಗಳು ತುಸು ದೊಡ್ಡ ಆಕಾರದಲ್ಲಿರುವುದು ಕಂಡುಬರುತ್ತದೆ. ನಗಾರಿಗಳನ್ನು ಒಂಟೆ ಮೇಲೆ ನೇತು ಹಾಕಿ ಬಡಿಯುವ ದೃಶ್ಯ ಮೊಘಲರ ಕಾಲದ ವರ್ಣಚಿತ್ರಗಳಲ್ಲೂ, ಕರ್ನಾಟಕದ ಶಿಲ್ಪಕಲೆಗಳಲ್ಲೂ ಸಾಮಾನ್ಯವಾಗಿ ಕಾಣಬರುತ್ತದೆ. ಆ ನಗಾರಿಗಳ ಆಕಾರ, ಚರ್ಮವನ್ನು ಬಾರುಗಳಿಂದ ಬಿಗಿವ ರೀತಿ, ಬಡಿವ ಕೋಲುಗಳ ಹಿಡಿಕೆ ದಪ್ಪವಾಗಿದ್ದು, ತುದಿ ಕಿರಿದಾಗಿ ಬಾಗಿರುವುದು – ಈ ಎಲ್ಲವೂ ಇಂದೂ ಕಂಡುಬರುವ ಅಂಶಗಳೇ ಆಗಿವೆ. ಹಂಪಿಯ ವಿರೂಪಾಕ್ಷ ದೇವಾಲಯದ ಭಿತ್ತಿ ಚಿತ್ರದಲ್ಲಿ ವ್ಯಕ್ತಿಯೊಬ್ಬ ನೆಲದ ಮೇಲೆ ನಗಾರಿ ಇಟ್ಟು ಎರಡು ಕೋಲುಗಳಿಂದ ಬಡಿಯುತ್ತಿರುವಂತೆ ಚಿತ್ರಿಸಲಾಗಿದೆ. ನಗಾರಿಗೆ ಹಿಂದೆ ದುಂದುಬಿ, ಭೇರಿ ಎಂಬ ಹೆಸರುಗಳಿದ್ದವು.

ಗಾಂಧಾರದ ಶಿಲ್ಪವೊಂದರಲ್ಲಿ ವ್ಯಕ್ತಿಯೊಬ್ಬ ನಡುಬಾಗಿ ನಿಂತು, ತನ್ನ ಎರಡು ತೊಡೆಗಳ ನಡುವೆ ವಾದ್ಯವೊಂದನ್ನು ಒತ್ತಿ ಹಿಡಿದು, ಎರಡೂ ಹಸ್ತಗಳಿಂದ ಬಡಿಯುತ್ತಿರುವಂತೆ ಚಿತ್ರಿಸಿದೆ. ಇದು ಇಂದಿನ ನಗಾರಿ ಅಥವಾ 'ಡಂಕಣ'ವನ್ನು ಹೋಲುತ್ತದೆ ಎಂದು ಅಧ್ಯಯನಕಾರ ಕೃಷಮೂರ್ತಿ ಅವರು ಅಭಿಪ್ರಾಯ ಪಟ್ಟಿದ್ದಾರೆ. ಬಹುಶಃ ಈ ಬಗೆಯ ವಾದ್ಯ ನಮ್ಮಲ್ಲಿನ 'ಕುಣಿಮಿಣಿ' ಆಗಿದ್ದಿರಬಹುದೇ?

ದಪ್ಪು:

ಸು.ಕ್ರಿ.ಪೂ. 6ನೇ ಶತಮಾನದಷ್ಟು ಪ್ರಾಚೀನವಾದ ಈ ವಾದ್ಯದ ಅಂದಿನ ಆಕಾರ, ನುಡಿಸುವ ಕ್ರಮ ಇಂದಿಗೂ ಅದೇ ರೀತಿ ಉಳಿದುಬಂದಿರುವುದು ಆಶ್ಚರ್ಯವೆನಿಸುತ್ತದೆಯೇ? ಒಂದು ಅಸ್ಸೀರಿಯನ್ ಉಬ್ಬು ಶಿಲ್ಪದಲ್ಲಿ (ಸು. ಕ್ರಿ.ಪೂ. 626) ಒಂದೆಡೆ ವಿವಿಧ ವಾದ್ಯಗಾರರ ಚಿತ್ರಣವಿದೆ. ಅದರಲ್ಲಿ ಒಬ್ಬ 'ದಪ್ಪು' ವಿನಂತಹ ವಾದ್ಯ ಹಿಡಿದಿದ್ದಾನೆ, ಅದರ ಆಕಾರ, ಎಡಹಸ್ತದಲ್ಲಿ ಹಿಡಿದು ಬಲಗೈ ಬೆರಳುಗಳಿಂದ ಅದರ ನಡುಭಾಗವನ್ನು ನುಡಿಸುತ್ತಿರುವ ರೀತಿ ಇಂದಿನ ನಮ್ಮ ಫಕೀರರ/ಲಾವಣಿಕಾರರ ದಪ್ಪುವಾದನ ಕ್ರಮವನ್ನೇ ಹೋಲುತ್ತದೆ. ಸಾಂಚಿಯ ಒಂದು ಉಬ್ಬು ಶಿಲ್ಪದಲ್ಲೂ ಇದೇ ವಾದನ ಕ್ರಮವಿದೆ. ಗಾಂಧಾರದ ಒಂದು ಅಲಂಕರಣ ಶಿಲ್ಪದಲ್ಲಿ ಕಾಣುವ ಇಂತಹ ವಾದ್ಯ ಗ್ರೀಕರ ಟಿಂಪನ್ (Tympann) ಹೋಲುವುದಲ್ಲದೆ, ಆ ವಾದಕನ ವೇಷಭೂಷಣ, ಕೇಶವಿನ್ಯಾಸವೂ ಗ್ರೀಕ್ ನಾಗರಿಕನನ್ನೇ ಹೋಲುತ್ತದೆ.

ಇಷ್ಟಾಗಿಯೂ ಈ ವಾದ್ಯವನ್ನು ನಮ್ಮಲ್ಲಿ ಮುಸ್ಲಿಂ ಫಕೀರರೇ ಹೆಚ್ಚಾಗಿ ಬಳಸುವುದರಿಂದ ಇದು ಹೊರದೇಶದಿಂದಲೇ ನಮಗೆ ಬಂದಿದ್ದಿರಬಹುದೆಂಬ ಅಭಿಪ್ರಾಯವಿದೆ.

ತಮಟೆ:

ಪ್ರಾಚೀನ ಶಿಲ್ಪಗಳಲ್ಲಿ ತಮಟೆಯೂ ಇದೆ ಎಂಬುದು ಅದರ ಜನಪ್ರಿಯತೆಯ ಧ್ಯೋತಕವೇ ಆದೀತು. ಕ್ರಿ.ಪೂ. 3-4 ಸಹಸ್ರ ವರ್ಷಗಳಷ್ಟು ಹಳೆಯದಾದ ಬ್ಯಾಬಿಲೋನಿಯಾದ ಬಿಸ್ಮೈ ದೇವಸ್ಥಾನದಲ್ಲಿ ದೊರೆತ ಒಂದು ಪಾತ್ರೆಯ ಮೇಲಿನ ಚಿತ್ರದಲ್ಲಿ ಮೂವರು ವಾದ್ಯಗಾರರಿದ್ದು ಅವರಲ್ಲಿ ಒಬ್ಬ ಮೆರವಣಿಗೆಯ ಮುಂದೆ, ತನ್ನ ಎಡಗೈಲಿ ತಮಟೆಯಂತಹ (Frame Drum) ವಾದ್ಯ ಹಿಡಿದು ನುಡಿಸುತ್ತಾ ಹೋಗುತ್ತಿರುವುದು ಕಂಡುಬರುತ್ತದೆ.

ಸಾಂಚಿಯ ಉಬ್ಬುಶಿಲ್ಪದಲ್ಲಿ 'ಸಾಂಬೋಧಿಯ ಮಹಾದ್ಭುತ' ಸನ್ನಿವೇಶ ದೃಶ್ಯದಲ್ಲಿ ಒಬ್ಬಾತ ನುಡಿಸುತ್ತಿರುವ ಒಂದು ವಾದ್ಯದ ರೂಪುರೇಷೆ, ಅದನ್ನು ಎದೆಯ ಮೇಲೆ ಎತ್ತಿ ಹಿಡಿದು (ಹೆಗಲಿಗೆ ಪಟ್ಟಿ ಸಹಾಯದಿಂದ ನೇತುಹಾಕಿಕೊಂಡು) ನುಡಿಸುತ್ತಿರುವ ರೀತಿ ಇಂದಿನ ತಮಟೆ ವಾದನವನ್ನೇ ಸ್ಪಷ್ಟವಾಗಿ ಹೋಲುತ್ತದೆ. ಒಂದು ಸಣ್ಣ ವ್ಯತ್ಯಾಸವೆಂದರೆ, ಬಲಗೈಲಿ ತಮಟೆ ನುಡಿಸಲು ಹಿಡಿದಿರುವ ಕೋಲಿನ ತುದಿ ಕೊಕ್ಕೆಯಂತೆ ಬಾಗಿದೆ. ಎಡ ತೋಳು ತಮಟೆಯ ಮೇಲುಭಾಗವನ್ನು ಬಳಸಿ ಹಿಡಿದಿದ್ದು, ಎಡಗೈಯ ಬರೀ ಬೆರಳುಗಳಿಂದಲೆ ನುಡಿಸುತ್ತಿರುವಂತಿದೆ.

ಅಮರಾವತಿಯ ಒಂದು ಶಿಲ್ಪದಲ್ಲಂತೂ ಈ ವಾದ್ಯದ ಅತಿ ಸ್ಪಷ್ಟ ಹಾಗೂ ಸುಂದರ ಚಿತ್ರಣವಿದೆ. ಅಲ್ಲಿ ಒಬ್ಬ ಗುಜ್ಜಾರಿ ವ್ಯಕ್ತಿ ಈ ವಾದ್ಯ ನುಡಿಸುತ್ತಿದ್ದು, ಅದಕ್ಕಾಗಿ ಆತ ಬಲಗೈಲಿ ಹಿಡಿದಿರುವ ಕೋಲಿನ ತುದಿ ಕೊಕ್ಕೆಯಂತೆ ಬಾಗಿದ್ದರೆ, ಮೇಲೆ ಎಡಗೈಲಿ ಹಿಡಿದಿರುವ ಕೋಲಿನ ತುದಿ ಬುಗುಟಿನಂತೆ ದಪ್ಪಗಿದೆ. ವಾದ್ಯ ಸುಮಾರು ದೊಡ್ಡದಿದ್ದು, ದುಂಡಗಿನ ಚೌಲಟ್ಟಿನ ಒಂದು ಪಕ್ಕ ಚರ್ಮ ಹೊದಿಸಿದಂತಿದ್ದು, ಅದನ್ನು ಒತ್ತಿ ಬಡಿಯುತ್ತಿರುವುದು ಸಹಜ ಚಿತ್ರಣವಾಗಿದೆ. ಅಂದಿಗೂ ಇಂದಿಗೂ ಆಗಿರುವ ವ್ಯತ್ಯಾಸ ತಮಟೆ ಬಡಿಯುವ ಕೋಲುಗಳಲ್ಲಿನ ಆಕಾರದಲ್ಲಿ ಮಾತ್ರ.

ಹರೆ (ಪರೆ):

ವಿವಿಧ ರೀತಿಯ ಹರೆ(ಪರೆ)ಗಳ ಉಲ್ಲೇಖ ವಿವಿಧ ಪ್ರಾಚೀನ ಕಾವ್ಯಗಳಲ್ಲಿ ಬರುತ್ತದೆಯಾದ್ದರಿಂದ ಅದೊಂದು ಜನಪ್ರಿಯ ವಾದ್ಯವಾಗಿದ್ದಿತೆಂದು ಭಾವಿಸಬಹುದಾಗಿದೆ. ಪಂಪ ಅದನ್ನೊಂದು ಮಂಗಳ ವಾದ್ಯ ಎಂಬಂತೆ ಪ್ರಸ್ಥಾಪಿಸಿದ್ದಾನೆ. ಆದರೆ, ಅದರ ಆಕಾರ – ಸ್ವರೂಪದ ಬಗೆಗೆ ಅಸ್ಪಷ್ಟತೆ ಇದೆ. ಇಂದು 'ಹರೆ'ಯ ಬಳಕೆ ಧಾರ್ಮಿಕ ವಾತಾವರಣಕ್ಕೆ ಸೀಮಿತಗೊಂಡಿದೆ.

ಇವಲ್ಲದೆ ಜನಪದರ ವಾದ್ಯಗಳಾದ ರಂಡೋಲು, ತಾಸ, ಮುರಜ, ಚಕ್ರಾದಿ ಬಳೆಯಂತಹ ವಾದ್ಯಗಳೂ ಶಿಲ್ಪ–ಚಿತ್ರಗಳಲ್ಲಿ ಸ್ಥಾನ ಪಡೆದಿದ್ದು, ಅಧ್ಯಯನಕ್ಕೆ ಉತ್ತಮ ಆಕರಗಳಾಗಿವೆ.

ಹೀಗೆ, ವಾದ್ಯಗಳ ಚಾರಿತ್ರಿಕ ಅಧ್ಯಯನ ನಮಗೆ ಹಲವು ಕುತೂಹಲದ ಸಂಗತಿಗಳನ್ನು ತಿಳಿಸಿಕೊಡುತ್ತದೆ. ಕಿನ್ನರಿಯಂತಹ ಜನಪದರ ಸಾಮಾನ್ಯ ವಾದ್ಯ ವೀಣೆಯಂತಹ ಪ್ರಬುದ್ಧ ವಾದ್ಯಕ್ಕೆ ಜನ್ಮ ಕೊಟ್ಟಿದೆ. ಹೊಯ್ಸಳರ ಕಾಲದಲ್ಲೂ ಪ್ರಚಲಿತವಿದ್ದಿರಬಹುದಾದ ಕೆಲ ವಾದ್ಯಗಳು ಇಂದು ಕಾಲಗರ್ಭದಲ್ಲಿ ಸೇರಿಹೋಗಿದ್ದು, ಕೇವಲ ಶಿಲ್ಪಗಳಲ್ಲಿ ಮಾತ್ರ ಅವುಗಳ ಪ್ರತಿಕೃತಿ ಇವೆ. ಪ್ರಾಚ್ಯವಾದ್ಯಗಳ ಅಧ್ಯಯನದ ಮೂಲಕ ಪ್ರಪಂಚದ ನಾಗರೀಕತೆಗಳ ಮೂಲವನ್ನೋ ಅವರ ಪ್ರಸರಣವನ್ನೋ ಪರಸ್ಪರ ಪ್ರಭಾವವನ್ನೋ ಗುರುತಿಸಬಹುದಾಗಿದೆ. ಭಾರತಕ್ಕೆ ಕೆಲ ವಾದ್ಯಗಳು ವಿದೇಶಿಯರ ಸಂಪರ್ಕದಿಮ್ದಲೇ ಬಂದಿವೆ. ಇವುಗಳಲ್ಲಿ 'ಬಿಲ್ಲುವೀಣೆ' (Bow Shaped Veena), ಗಿಟಾರ್ ಮಾದರಿ ವೀಣೆಗಳು ಬಹು ಹಿಂದೆಯೇ ನಮಗೆ ಬಂದರೂ ಇಲ್ಲಿನ ಜನಜೀವನದಲ್ಲಿ ಪೂರ್ಣವಾಗಿ ಬೇರೆಯದೇ 'ಪರಕೀಯ'ವಾಗಿಯೇ ಉಳಿದಿವೆ. ಆದರೆ 'ಡಪ್ಪು'ವಿನಂತಹ ವಾದ್ಯ ಜನಸಾಮಾನ್ಯರಲ್ಲಿ ಬೆರೆತು ನಮ್ಮ ಜನಪದ ಕಲಾವಿದರ ಬಹುಮುಖ್ಯ ವಾದ್ಯಗಳಲ್ಲಿ ಒಂದಾಗಿಹೋಗಿದೆ! ಕುತೂಹಲಕರವಾದ ಇನ್ನೊಂದು ಅಂಶವೆಂದರೆ, ಈವರೆಗೆ ನೋಡಿದ ಬಹುಪಾಲು ವಾದ್ಯಗಳು ನೂರಾರು (ಕೆಲವೊಮ್ಮೆ ಸಾವಿರ) ವರ್ಷಗಳಿಂದಲೂ ತಮ್ಮ ಸ್ವರೂಪ, ವಾದನ ಕ್ರಮದಲ್ಲಿ ಹೆಚ್ಚಿನ ಬದಲಾವಣೆಗೆ ಒಳಗಾಗದಿರುವುದು ಮತ್ತು ಅಷ್ಟು ಹಿಂದೆಯೇ ಈ ಬಗೆ ಬಗೆಯ ವಾದ್ಯಗಳ ನಿರ್ಮಾಣ ಕೌಶಲವನ್ನು ಅವರು ತೋರಿರುವುದು. ವಾದ್ಯಗಳ ಬೆಳವಣಿಗೆಯಲ್ಲಿ ಆಗಿರುವ ತೀರಾ ಕೆಲವೇ ವ್ಯತ್ಯಾಸಗಳೆಂದರೆ, ಪ್ರಾರಂಭಿಕ ಹಂತದ ವಾದ್ಯಗಳು ತುಸು ಒರಟು ಹಾಗೂ ಭಾರವಾಗಿದ್ದರೆ ಕ್ರಮೇಣ ಅವು

ನಾಜೂಕು ಹಾಗೂ ಹಗುರವಾಗಿ ಮಾರ್ಪಟ್ಟಿವೆ. ಅಂತೆಯೇ ಪ್ರಾರಂಭದ ಶಿಲ್ಪಗಳಲ್ಲಿ ಚರ್ಮವಾದ್ಯಗಾರರು ನೆಲದ ಮೇಲೆ ಕುಳಿತೇ ವಾದ್ಯ ನುಡಿಸುತ್ತಿದ್ದರೆ ಮಧ್ಯಕಾಲದ ಶಿಲ್ಪಗಳಲ್ಲಿ ಅವರು ವಾದ್ಯಗಳನ್ನು ಎತ್ತಿಹಿಡಿದು, ನುಡಿಸುತ್ತಾ ನರ್ತಿಸುತ್ತಿರುವುದು ಕಂಡುಬರುತ್ತದೆ. ವಾದನದಲ್ಲಿ ಅವರು ಸಾಧಿಸಿದ ಪರಿಣತಿಯೂ ಅಲ್ಲಿ ವ್ಯಕ್ತವಾಗುತ್ತದೆ. ಕಾಲ ಬದಲಾದಂತೆ ವಾದ್ಯಗಳಲ್ಲಿ ವೈವಿಧ್ಯಗಳೂ ತಲೆದೋರೊವೆ. ನಮ್ಮ ಜನಪ್ರಿಯ ತಮಟೆಗಳು ಇಂದು ನವೀಕರಣಗೊಂಡಿವೆ. ಈಚೆಗಂತೂ ವಿಜ್ಞಾನ-ತಂತ್ರಜ್ಞಾನಗಳ ಪ್ರಗತಿಯಿಂದಾಗಿ ಚಿತ್ರ-ವಿಚಿತ್ರವೂ, ಸಂಕೀರ್ಣವೂ ಆದ ವಾದ್ಯಗಳು ಜನ್ಮ ತಳೆದು ಹೊಸ ತಲೆಮಾರಿನವರನ್ನು ತೀವ್ರವಾಗಿ ಆಕರ್ಷಿಸಿದ್ದರೂ ಜನಪದರ ವಾದ್ಯಗಳು ಜನಪದ ಬದುಕಿನೆಲ್ಲಿ ತಮ್ಮ ಹಿಡಿತವನ್ನು ಇನ್ನೂ ಉಳಿಸಿಕೊಂಡೇ ಬದುಕಿವೆ.

ಜಗತ್ತಿನ ಸಂಗೀತ ಸಾಮ್ರಾಜ್ಯದಲ್ಲಿ ಭಾರತೀಯ ಸಂಗೀತಕ್ಕೆ ತನ್ನದೇ ಆದ ವಿಶೇಷ ಗುಣಲಕ್ಷಣಗಳಿವೆ. ಮಣ್ಣು, ಕರುಳು, ಚರ್ಮದಂತಹ ವಸ್ತುಗಳನ್ನೂ ಬಳಸಿ ಭಾರತವು ಐನೂರಕ್ಕೂ ಹೆಚ್ಚಿನ ವಾದ್ಯಗಳನ್ನು ಸೃಷ್ಟಿಸಿದೆ ಎಂಬ ಅಭಿಪ್ರಾಯವೂ ಇದೆ. ಆ ದೃಷ್ಟಿಯಿಂದಲೂ ವಾದ್ಯಗಳ ಕುರಿತ ಅಧ್ಯಯನಕ್ಕೆ ಹೆಚ್ಚಿನ ಅವಕಾಶವಿದೆ.

ಅಧ್ಯಯನ ಸೌಲಭ್ಯಕ್ಕಾಗಿ ವಿದ್ವಾಂಸರು ಎಲ್ಲಾ ಬಗೆಯ ವಾದ್ಯಗಳನ್ನು ಬಡಿಯುವ ವಾದ್ಯ (ಚರ್ಮವಾದ್ಯ), ಮೀಟುವ ವಾದ್ಯ (ತಂತಿವಾದ್ಯ), ತಟ್ಟುವ ವಾದ್ಯ (ಲೋಹವಾದ್ಯ) ಹಾಗೂ ಊದುವ ವಾದ್ಯ (ಗಾಳಿವಾದ್ಯ) ಗಳೆಂದು ವಿಭಾಗಿಸುವುದುಂಟು. ಇವುಗಳ ಜೊತೆಗೆ ಗೆಜ್ಜೆಗಳು, ಗಿಲಕಿಗಳಂತಹ ಪರಿಕರಗಳನ್ನು ಕುಲುಕಿಸಿ, ಬೇಕಾದ ಲಯ-ನಾದ ಹೊರಡಿಸುವುದರಿಂದ ಇವುಗಳಿಗಾಗಿ ಕುಲುಕು ವಾದ್ಯಗಳೆಂಬ ಪ್ರತ್ಯೇಕ ವಿಭಾಗವನ್ನು ಮಾಡಬಹುದೆನಿಸುತ್ತದೆ. ಈ ಬಗ್ಗೆ ವಿದ್ವಾಂಸರು ಪರಿಶೀಲಿಸಬಹುದು ಎಂಬುದನ್ನು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಒಟ್ಟಿನಲ್ಲಿ ಜಾನಪದ ದಾಖಲೆಗಳನ್ನುಳಿಸುವಲ್ಲಿ 'ಅಕ್ಷರ' ಮಾಡದ ಕಾರ್ಯವನ್ನು ಬಹು ಪರಿಣಾಮಕಾರಿಯಾಗಿ ಪ್ರಾಚೀನ ಶಿಲ್ಪ-ಚಿತ್ರಗಳು ಮಾಡಿವೆ. ಆದ್ದರಿಂದ ಇಂಥಾ ಎಷ್ಟೋ ಪ್ರಾಚೀನ ಸಂಸ್ಕೃತಿಕ ಬದುಕಿನ ವಿವಿಧ ಸಂಗತಿಗಳನ್ನು ತಮ್ಮ ಒಡಲಲ್ಲಿ ಹುದುಗಿಸಿಟ್ಟುಕೊಂಡಿರುವ ಈ ಎಲ್ಲಾ ಪ್ರಾಚ್ಯ ಸ್ಮಾರಕಗಳನ್ನೂ ಪ್ರತಿಯೊಬ್ಬ ಪ್ರಜೆಯೂ ಎಚ್ಚರಿಕೆಯಿಂದ ಉಳಿಸಿಕೊಳ್ಳುವ ಜವಬ್ದಾರಿ ಹೊರಬೇಕಾಗಿದೆ.

ಫಲಿತಗಳು (ಸಮಾರೋಪ)

ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಬುಡಕಟ್ಟು ಜನಪದ ಚಿತ್ರಕಲೆ ಎಂಬ ಪ್ರಬಂಧವನ್ನು ಸಿದ್ಧಪಡಿಸಲು ಅಣಿಗೊಳಿಸಲು ಪ್ರೇರೇಪಿಸಿದಾಗ ನನ್ನ ಬಾಲ್ಯದಲ್ಲಿ ಮಹದೇಶ್ವರ ದೇವಾಲಯಕ್ಕೆ ಭೇಟಿ ನೀಡಿದಾಗ ಅಲ್ಲಿನ ಜನಪದ, ಶಿಲ್ಪಕಲಾಕೃತಿಗಳನ್ನು ನೋಡಿ ಅವುಗಳನ್ನು ಸ್ಪರ್ಶಿಸಿ ನೋಡುತ್ತಿದ್ದೆ. ಆದರೆ ಈ ಅಧ್ಯಯನದಿಂದ ಅವುಗಳ ಹುಟ್ಟನ್ನು, ಇತಿಹಾಸವನ್ನು ಅಂದ-ಚಂದಗಳನ್ನು ಮನಸ್ಸಿನಿಂದ, ಆಲೋಚನೆಯಿಂದ ಮುಟ್ಟಿ ಮನಸ್ಸಿಗೆ ಸಂತೋಷವಾಯಿತು.

ಬುಡಕಟ್ಟು ಜನರ ಬಾಳು, ಬದುಕು, ದೇವರ ಆಚರಣೆಗಳನ್ನು ಬೆನ್ನು ಬಿದ್ದಿರುವ ನಾಡಿನ ಜನರು, ಈ ಬುಡಕಟ್ಟು ಜನರ ಶಿಲ್ಪಕಲೆ ಆಚರಣೆಯಲ್ಲಿ ವೈಜ್ಞಾನಿಕ ಸತ್ಯ ಅಡಕವಾಗಿರುತ್ತದೆ. ಕೆಲವು ನಾಡಿನ ಜನರು ಅವುಗಳನ್ನು ತಿರುಚಿ ಸುಳ್ಳು ಮತ್ತು ಮೂಡನಂಬಿಕೆ ಎಂಬ ಬಣ್ಣಗಳನ್ನು ಹಚ್ಚಿ ಶೃಂಗಾರಗೊಳಿಸಿ ಇವುಗಳ ಅಂದವಾಗಿ ಕಾಣುವಂತೆ ಮಾಡಿ ಕೆಲವು ಕೆಟ್ಟ ನಂಬಿಕೆ ಹುಟ್ಟುಹಾಕಿದ್ದಾರೆ. ಮಾನವನಿಗೆ ಅಕ್ಷರ ಜ್ಞಾನಕ್ಕಿಂತಲೂ ಅವನಲ್ಲಿ ಶಿಲ್ಪಕಲೆ ಜ್ಞಾನ ಮೊದಲು ಅರಳಿರುವುದು ಕಂಡು ಬರುವುದು ಈ ಬುಡಕಟ್ಟು ಜನಪದ ಶಿಲ್ಪಕಲೆಯಿಂದ.

ಹಿರಿಯರ ಸಲಹೆಯಂತೆ ನನ್ನ ಸಮಕಾಲಿನವರು ಮತು ಕಿರಿಯರಿಗೆ ಬುಡಕಟ್ಟು ಜನಪದ ಶಿಲ್ಪಕಲೆ ಈ ಅಧ್ಯಯನದ ವರದಿಯಿಂದ ಆಚರಣೆಗಳಲ್ಲಿ ಅಡಗಿರುವ ಸತ್ಯ ಸಂಗತಿಗಳನ್ನು ಕೇಳಿ ಹೇಳಿರುತ್ತೇನೆ. ಮೂಡನಂಬಿಕೆಯ ಶಿಲ್ಪಕಲೆಯಿಂದ ದೂರವಿದ್ದು ಸೃಜನಶೀಲಾತ್ಮಕ ಹೊಸ ಆಯಾಮವನ್ನುಂಟು ಮಾಡುವ ಶಿಲ್ಪಕಲೆ ಬರಲಿ. ಪದೇ ಪದೇ ಬೇರೆ ಬೇರೆ ಮೂಡನಂಬಿಕೆ ಹಿನ್ನೆಲೆಗಳನ್ನು ತಿಳಿದು ಶಿಲ್ಪಕಲಾ ರಚನೆಮಾಡಬೇಡಿ. ನಿಮ್ಮ ಶಿಲ್ಪಕಲೆಯಲ್ಲಿ ವಾದ ವಿಷಯವಿರಲಿ.

ಶಿಲ್ಪಕಲೆ ಎನ್ನುವುದು ಭಾಷೆ, ಧರ್ಮ, ಆಚರಣೆ, ಮೂಡನಂಬಿಕೆ ಇನ್ನು ಕೆಲವು ವಿಚಾರಗಳನ್ನು ಗಡಿದಾಟಿದ ವಿಚಾರ. ಈ ಜನಪದ ಶಿಲ್ಪಕಲೆಗೆ ಅಷ್ಟೊಂದು ಶ್ರೀಮಂತಿಕೆ ಇದೆ. ಬೇರೆ ಯಾವುದೇ ನಿರ್ಬಂಧಗಳನ್ನು ಹಾಕಿ ಶಿಲ್ಪಕಲೆಯ ಸೊಬಗನ್ನು ಹಾಳು ಮಾಡುವುದು ಬೇಡ.

ಇತ್ತೀಚಿನ ದಿನಗಳಲ್ಲಿ ಶಿಲ್ಪಕಲಾ ಅಧ್ಯಯನಕ್ಕೆ ಯುವ ವಿದ್ಯಾರ್ಥಿಗಳು ಹಿಂದೇಟು ಹಾಕುತ್ತಿದ್ದಾರೆ. ಆದರೆ ನನ್ನ ಅಧ್ಯಯನ ಸಮಯದಲ್ಲಿ ಕರ್ನಾಟಕದ ಜನಪದ ಶಿಲ್ಪಕಲೆ ವಿಚಾರ ಮತ್ತು ಸೌಂದರ್ಯ ತಿಳಿಯಲು ಬೇರೆ ದೇಶಗಳಿಂದ ಬಂದು ಇವುಗಳ ಸೊಬಗನ್ನು ಸವಿಸುತ್ತಿದ್ದಾರೆ. ಯುವ ವಿದ್ಯಾರ್ಥಿಗಳಿಗೆ ನೀವು ತಿಳಿದುಕೊಂಡಷ್ಟು ಚಿಕ್ಕ ಪ್ರಪಂಚ ಇದಲ್ಲಾ. ಶಿಲ್ಪಕಲೆ ಎನ್ನುವುದು ಇದು ಹಿಡಿ ಭೂಮಂಡಲಕ್ಕೆ ಬೇಕಾಗಿರುವ ಉಪಯುಕ್ತವಾದ ವಿಷಯ ಶಿಲ್ಪಕಲಾವಿದನಾದವನಿಗೆ ಯಾವುದೇ ರಾಜ್ಯ ದೇಶ, ಪ್ರದೇಶಗಳ ವ್ಯಾಪ್ತಿ ಇರುವುದಿಲ್ಲ. ಶಿಲ್ಪಕಲಾವಿದನಿಗೆ ವಿಶ್ವವೇ ಕಲಾ ಭೂಮಿಯಾಗಿ ಕಾಣಬೇಕು. ಇದರಿಂದ ವಿದ್ಯಾವಂತ

ನಿರುದ್ಯೋಗದ ಸಮಸ್ಯೆಯನ್ನು ಹತ್ತಿಕ್ಕಬಹುದು. ಗುಡಿಕೈಗಾರಿಕೆಯಾಗಿ ಮಾಡಿಕೊಳ್ಳಬಹುದು. ಅನೇಕ ಪ್ರಶಸ್ತಿ ಮತ್ತು ಪುರಸ್ಕಾರಗಳಿಗೆ ಪಾತ್ರರಾಗಿ ಸಮಾಜದ ಉತ್ತಮ ವ್ಯಕ್ತಿಗಳಾಗಿ ರೂಪಿಸುವ ಮಾಂತ್ರಿಕ ಶಕ್ತಿ ಶಿಲ್ಪಕಲೆಗಿದೆ. ಹಾಗಾಗಿ ನನ್ನ ಬುಡಕಟ್ಟು ಜನಪದ ಶಿಲ್ಪಕಲೆ ಅಧ್ಯಯನ ಪ್ರಬಂಧವು ನಿಮ್ಮೆಲ್ಲರಿಗೂ ಉಪಯೋಗವಾಗುತ್ತದೆಯೆಂದು ನಂಬಿರುತ್ತೇನೆ.



